# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಮೂರನೆಯ ಅಧಿವೇಶನ

18ನೇ ಜುಲೈ 2024
ಗುರುವಾರ

## ವಿಷಯಾನುಕ್ರಮಣಿಕೆ (INDEX)

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

2. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳ ಕುರಿತು.

- ಶ್ರೀ ಸುನಿಲ್ ವಲ್ಯಾಪುರ್
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)

3. ಮುಂದುವರೆದ ಪ್ರಶ್ನೋತ್ತರಗಳು

337 – ಕಂಬಳ ಕ್ರೀಡೆಯ ಸಂಘಟಕರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

- ಶ್ರೀ ಪ್ರತಾಪಸಿಂಹ ನಾಯಕ್ ಕೆ.
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

289 – ಹಿಂದಿನ ಸರ್ಕಾರದ ಅವಧಿಯಲ್ಲಿ ಯಾವ ಯಾವ ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಕುರಿತು.

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

295 – ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನೇಮಕಾತಿ ಪ್ರಕ್ರಿಯೆ ವಿಳಂಬ ಕುರಿತು.

- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**334– ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗುತ್ತಿರುವ ಬಗ್ಗೆ.**

– ಡಾ: ಧನಂಜಯ ಸರ್ಜಿ
– ಡಾ: ಜಿ.ಪರಮೇಶ್ವರ (ಗೃಹ ಸಚಿವರು)

**343– ಜಾರಿ ವಿಭಾಗದ ಅಧಿಕಾರಿಗಳು ನಾನ್ ಫೈಲರ್ಸ್‌ಗಳಿಂದ ವಸೂಲಿ ಮಾಡಿದ ತೆರಿಗೆಗಳ ಸಂಗ್ರಹಣದ ಕ್ರಮದ ಬಗ್ಗೆ.**

– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**340 – ಮದ್ಯದಂಗಡಿಗಳಿಗೆ ಪರವಾನಗಿ ನೀಡುವ ಕುರಿತು.**

– ಶ್ರೀ ಎಂ.ಎಲ್.ಅನಿಲ್ ಕುಮಾರ್
– ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು)

**338 – ಕಳೆದ 3 ವರ್ಷಗಳಿಂದ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳ ಬಗ್ಗೆ.**

– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**356+357+294+409+277 – ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗ ಜಾರಿ ಮಾಡುವ ಕುರಿತು.**

– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಸುನೀಲ್ ವಲ್ಯಾಪುರ್
– ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**404 – ರಾಜ್ಯದಲ್ಲಿ ಹೆಚ್ಚುತ್ತಿರುವ ಆನ್‌ಲೈನ್ ವಂಚನೆ ಪ್ರಕರಣಗಳ ಬಗ್ಗೆ.**

– ಶ್ರೀಮತಿ ಉಮಾಶ್ರೀ
– ಡಾ: ಜಿ.ಪರಮೇಶ್ವರ (ಗೃಹ ಸಚಿವರು)

**413 – ರಾಜ್ಯ ಸರ್ಕಾರದ ಅಡಳತ ಇಲಾಖೆಗಳಲ್ಲಿರುವ ಆಸ್ತಿ ನಗದೀಕರಣದ ಬಗ್ಗೆ.**

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

**ಅ) ಮುಖ್ಯ ಶಿಕ್ಷಕರ ಬಡ್ತಿ, ಪ್ರೌಢಶಾಲಾ ಶಿಕ್ಷಕರ ಬಡ್ತಿ, ಸೇವಾ ಜೇಷ್ಠತೆಯಂತಹ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವ ಕುರಿತು.**

- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ನಗರ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಹಿತದೃಷ್ಟಿಯಿಂದ ಕಾನೂನು ತೊಡಕುಗಳನ್ನು ನಿವಾರಿಸಿ ಮೀಸಲಾತಿ ಪ್ರಕಟಿಸುವ ಕುರಿತು.**

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) ರಾಜ್ಯದಲ್ಲಿ ಭೀಕರ ಬರದಿಂದ ತತ್ತರಿಸಿರುವ ರೈತರ ನೆರವಿಗೆ ಬರ ಪರಿಹಾರ ಅನುದಾನ ನೀಡುವಲ್ಲಿ ಕೇಂದ್ರ ಸರ್ಕಾರದ ತಾರತಮ್ಯ ನೀತಿ ಕುರಿತು.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಗುಡ್ಡ ಕುಸಿತ ಸಂಭವಿಸಿ ಮೃತರಾದ ಕುಟುಂಬಗಳಿಗೆ ಗರಿಷ್ಠ ಪರಿಹಾರ ಘೋಷಣೆ ಮಾಡುವ ಬಗ್ಗೆ.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಅಂಕೋಲಾದಿಂದ ಕಾರವಾರದವರೆಗಿನ 1500 ಎಕರೆ ಪ್ರದೇಶದಲ್ಲಿ ಹಸಿರು ನಿರ್ಮಾಣಕ್ಕೆ ಪ್ರಸ್ತಾವನೆಯ ಯೋಜನೆಯನ್ನು ಕರಾವಳಿ ಭಾಗದಲ್ಲಿ ಜಾರಿಗೆ ತರುವ ಕುರಿತು.**

- ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಊ) ಜವಳಿ ಉದ್ಯಮದ ಕುಸಿತದಿಂದಾಗಿ ನೇಕಾರರ ಕುಟುಂಬಗಳು ಸಂಕಷ್ಟದಲ್ಲಿದ್ದು, ಅವರುಗಳಿಗೆ ಪರಿಹಾರಧನ ಹಾಗೂ ಅಗತ್ಯ ನೆರವು, ಸೌಲಭ್ಯಗಳನ್ನು ಒದಗಿಸುವ ಬಗ್ಗೆ.**

- ಶ್ರೀಮತಿ ಉಮಾಶ್ರೀ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಋ) ಯಾದಗಿರಿ ನಗರ ವ್ಯಾಪ್ತಿಯ ಶ್ರೀ ರಾಚೋಟಿ ವೀರಣ್ಣ ದೇವಾಲಯದ ಅಭಿವೃದ್ಧಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅನುದಾನ ಬಿಡುಗಡೆ ಮಾಡುವ ಕುರಿತು.**

- ಶ್ರೀ ಶಶೀಲ್ ಜಿ. ನಮೋಶಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಎ) ಬಾಗಲಕೋಟೆ ಜಿಲ್ಲೆಯಲ್ಲಿ ರಾಜ್ಯದ ಏಕಮಾತ್ರ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ದುರ್ಬಲಗೊಳಸುವ ಯತ್ನಗಳ ವರದಿಗಳನ್ನು ಮಾರ್ಪಡಿಸಿ, ಪುನರ್‌ಪರಿಶೀಲಿಸುವ ಬಗ್ಗೆ.**

- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಏ) ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹಾನಬಾಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ, ವೈದ್ಯಾಧಿಕಾರಿಯನ್ನು ನೇಮಿಸುವ ಬಗ್ಗೆ.**

- ಶ್ರೀ ಗೋವಿಂದ ರಾಜು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಫ್ಲೆಕ್ಸ್/ಬ್ಯಾನರ್ ಹಾವಳಿ ಕುರಿತು.**

- ಶ್ರೀ ಹೆಚ್.ಎಸ್.ಗೋಪಿನಾಥ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

## 5. ವರದಿಯನ್ನೊಪ್ಪಿಸುವುದು

## 6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.

**"ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು."**

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)
- ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

## 7. ಪ್ರಕಟಣೆ

**"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 222 ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಪುನರ್ ರಚಿಸಲಾಗಿರುವ ಕುರಿತು."**

## 8. ಸದನದಲ್ಲಿ ಸಂಬಂಧಪಟ್ಟ ಸಚಿವರು ಹಾಜರಿಲ್ಲದಿರುವ ಕುರಿತು.

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)

**9. "ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು ನಿಯಮ 68ಕ್ಕೆ ಪರಿವರ್ತಿಸಲಾದ ವಿಷಯದ ಮೇಲೆ ಆಡಳಿತ ಪಕ್ಷದ ಸದಸ್ಯರಿಗೂ ಚರ್ಚೆಗೆ ಅವಕಾಶ ನೀಡಬೇಕೆನ್ನುವ ಕುರಿತು.**

- ಶ್ರೀ ಐವನ್ ಡಿ'ಸೋಜಾ

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ. "ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು."**

- ಶ್ರೀ ಕೆ.ಎಸ್.ನವೀನ್
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಡಿ.ಎಸ್.ಅರುಣ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಯು.ಬಿ.ವೆಂಕಟೇಶ್
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಗೋವಿಂದ ರಾಜು
- ಶ್ರೀ ನಸೀರ್ ಅಹ್ಮದ್
- ಶ್ರೀ ಪ್ರತಾಪ ಸಿಂಹ ನಾಯಕ್ ಕೆ.
- ಶ್ರೀ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ
- ಶ್ರೀ ಪುಟ್ಟಣ್ಣ

**11. ಪ್ರಕಟಣೆ**

**"ದಿನಾಂಕ: 18.07.2024ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಕೈಗೊಂಡಿರುವ ತೀರ್ಮಾನಗಳ ಕುರಿತು."**

~ * ~ * ~

(508) 18-07-2024 10-30 KH/BNS

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 18ನೇ ಜುಲೈ 2024**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 10 ಗಂಟೆ 39 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

01. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 413**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಉತ್ತರ ಬಂದಿದ್ದರೆ ಅವರಿಗೆ ಕೊಡಿ. ತಮಗೆ ಉತ್ತರ ಬಂದಿಲ್ಲ ಎಂದು ಏನು ಮಾಹಿತಿಯನ್ನು ಕೊಟ್ಟಿಲ್ಲವೇ? ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ಒಂದು ನಿಮಿಷ. ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಎಂ.ಪಿ. ಕುಶಾಲಪ್ಪ ಸುಜಾರವರು ಕೇಳಬೇಕು. ಮಾನ್ಯ ಸಭಾನಾಯಕರೇ, ನೋಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. 45 ಪ್ರಶ್ನೆಗಳನ್ನು ಕಳುಹಿಸಲಾಗಿತ್ತು. ಅದರಲ್ಲಿ ಒಂದೋ-ಎರಡೋ Starred Question ಆಗುತ್ತವೆ. ಆದರೆ, ಅದಕ್ಕೂ ಉತ್ತರ ಬರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ನನಗೆ ಇದರ ಬಗ್ಗೆ ಮಾಹಿತಿ ಇಲ್ಲ. ಮಾನ್ಯ ಸಭಾನಾಯಕರಿಗೆ ಮಾಹಿತಿ ಇಲ್ಲ. ಅದನ್ನು ನೋಡೋಣ. ಅವರಿಗೆ 5 ನಿಮಿಷ ಸಮಯ ಕೊಡೋಣ.

(ಮುಂದು)

(509) 18.7.2024 10.40 ಪಿಕೆ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 331**

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) ರವರು
ಸದನದಲ್ಲಿ ಉಪಸ್ಥಿತರಿರಲಿಲ್ಲ)

**2. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳ ಕುರಿತು.**

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಗಳೆ, ಸದನದಲ್ಲಿರಬೇಕಾದ ಐಎಎಸ್ ಅಧಿಕಾರಿಗಳಿಲ್ಲ, ಮಂತ್ರಿಗಳಿಲ್ಲ. ಹೀಗಾದರೆ ಸದನವನ್ನು ಹೇಗೆ ನಡೆಸಬೇಕು?

**ಸಭಾಪತಿಯವರು:-** ಸಭಾನಾಯಕರೇ, ಸದನದಲ್ಲಿರಬೇಕಾದ ಮಂತ್ರಿಗಳು ಮತ್ತು ಅಧಿಕಾರಿಗಳು ಇಲ್ಲದೇ ಹೋದರೆ ಸದನವನ್ನು ಹೇಗೆ ನಡೆಸುವುದಕ್ಕೆ ಆಗುತ್ತದೆ? ಎಷ್ಟು ಸಲ ಹೇಳಬೇಕು?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, 5 ನಿಮಿಷದಲ್ಲಿ ಬರುತ್ತಾರೆ.

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳು**

**ಸಭಾಪತಿಯವರು:-** ಇವತ್ತು ಸದನದಲ್ಲಿ ಮಾನ್ಯ ಸಚಿವರಾದ ಎಂ.ಬಿ.ಪಾಟೀಲ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು), ಡಾ: ಹೆಚ್.ಸಿ.ಮಹದೇವಪ್ಪ(ಸಮಾಜ ಕಲ್ಯಾಣ ಸಚಿವರು), ಮಾನ್ಯ ಜಮೀರ್ ಅಹ್ಮದ್ ಖಾನ್(ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು), ಮಾನ್ಯ ಶರಣಬಸಪ್ಪ ದರ್ಶನಾಪೂರ(ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಉದ್ಯಮಗಳ ಸಚಿವರು), ಮಾನ್ಯ ತಂಗಡಗಿ ಶಿವರಾಜ್ ಸಂಗಪ್ಪ(ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು) ಮತ್ತು ಶ್ರೀ ಡಿ.ಸುಧಾಕರ್ (ಯೋಜನೆ ಮತ್ತು ಸಾಂಖ್ಯಿಕ ಸಚಿವರು) ರವರು ಇರಬೇಕಾಗಿತ್ತು. ಅದೇರೀತಿ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಅಧಿಕಾರಿಗಳು, ಶ್ರೀ ಪ್ರಕಾಶ್ ಜಿ.ನಿಟ್ಟಾಲಿ, ಶ್ರೀಮತಿ ರತ್ನ ವಿ.ಮಹೇಶನ್, ಶ್ರೀ ಶರತ್ ಬಿ. ಮತ್ತು ಶ್ರೀಮತಿ ಸರೀನಾ ಈ ಅಧಿಕಾರಿಗಳು ಸದನದಲ್ಲಿ ಇವತ್ತು ಉಪಸ್ಥಿತರಿರಬೇಕು. ಮಾನ್ಯ ಸಭಾನಾಯಕರೇ, ಸದನದಲ್ಲಿ ಯಾರು ಇರಬೇಕೆಂದು ಪದೇ ಪದೇ ಹೇಳುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಸದನದ ಪ್ರಾರಂಭದ ದಿನವೂ ತಾವು ಇದೇ ಮಾತುಗಳನ್ನು ಹೇಳಿದಿರಿ. ಇನ್ನು ಮುಂದೆ ಇಂಥದ್ದು ಪುನರಾವರ್ತನೆ ಆಗದ ರೀತಿಯಲ್ಲಿ ಎಚ್ಚರ ವಹಿಸುವುದಕ್ಕೆ ಅವರಿಗೆ ಹೇಳಿದ್ದೇನೆ; ಎಚ್ಚರಿಕೆ ಕೊಟ್ಟಿದ್ದೇನೆ ಎಂದು ಹೇಳಿದ್ದೀರಿ. ಎಚ್ಚರಿಕೆ ಕೊಟ್ಟ ಮೇಲೂ ಪುನಃ ಇದೇರೀತಿ ಆಗುತ್ತಿದೆಲ್ಲಾ; ಇದಕ್ಕೆ ಏನು ಮಾಡಬೇಕು?

**ಸಭಾಪತಿಯವರು:-** ಏನು ಮಾಡಬೇಕೆಂದು ನೀವೇ ಹೇಳಿಬಿಡಿ. ನಾನು ಆ ರೀತಿ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ತಾವು ಈ ನಿಟ್ಟಿನಲ್ಲಿ ಗಂಭೀರ ಕ್ರಮ ತೆಗೆದುಕೊಳ್ಳಿ. ಪೀಠದಿಂದ ತಮಗೆ ಆ ಅಧಿಕಾರ ಉಂಟು. ಇಂತಹ ಪರಿಸ್ಥಿತಿ ಬಂದಾಗ ಪೀಠ ಏನು ಮಾಡಬೇಕು ಎಂದು ನಾವು ನಿಮಗೆ ಹೇಳಿಕೊಡಬೇಕೇ? ನಿಮಗೆ ಅಗಾಧವಾದ ಜ್ಞಾನ ಇದೆ, ಅನುಭವ ಇದೆ.

**ಸಭಾಪತಿಯವರು:-** ನೀವು ನನಗಿಂತ ಶ್ಯಾಣೆ ಇದ್ದೀರಿ; ಅದಕ್ಕೆ ನಿಮ್ಮನ್ನು ಕೇಳಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ನಾನು ಶ್ಯಾಣೆ ಇಲ್ಲ. ಮಾನ್ಯ ಸಭಾಪತಿಗಳೆ, ಇದು ಬಹಳ ಗಂಭೀರವಾದ ವಿಷಯವಾಗಿದೆ. ತಾವೇ, ಇನ್ನು ಮುಂದೆ ಈ ರೀತಿ ಆಗದ ಹಾಗೆ ವ್ಯವಸ್ಥೆ ಮಾಡಬೇಕೆಂದು ಅವರಿಗೆ ಎಚ್ಚರಿಕೆ ಕೊಟ್ಟಿದ್ದೇನೆ ಎಂದು ಹೇಳಿದಿರಿ. ತಮ್ಮ ಮಾತಿಗೆ ಗೌರವ ಇಲ್ಲವೇ?

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಪದೇ ಪದೇ ನನ್ನ ಕಡೆಯಿಂದ ಹೇಳಿಸಿಕೊಳ್ಳಬೇಡಿ. ಅದು ನನಗೆ ಸರಿಯೆನಿಸುವುದಿಲ್ಲ. ಮಂತ್ರಿಗಳು ನಿಗದಿಪಡಿಸಿದ ದಿನಗಳಂದು ಕಡ್ಡಾಯವಾಗಿ ಇರಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಇದನ್ನೇ ಅಭ್ಯಾಸವಾಗಿ ಮಾಡಿಕೊಂಡಿದ್ದಾರೆ. ಮುಂದೆ ಹೀಗಾಗಬಾರದು. ಆ ಕಡೆಯವರು ಎಲ್ಲರೂ ಹಿರಿಯರಿದ್ದಾರೆ; ಸದನಕ್ಕೆ ಹೊಸದಾಗಿ ಬಂದಿರುವ ನಮಗೆ ಅವರು ಬುದ್ಧಿ ಕಲಿಸಬೇಕು.

**ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಗಳೆ, ಅಧಿಕಾರಿಗಳೂ ಕೂಡ ಸರಿಯಾದ ಸಮಯಕ್ಕೆ ಸದನದಲ್ಲಿ ಇರುವ ವ್ಯವಸ್ಥೆ ಮಾಡಬೇಕು ಎಂದು ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದಿದ್ದೇವೆ. ಅವರೂ ಸಹ ಈ ನಿಟ್ಟಿನಲ್ಲಿ ಸೂಚನೆ ಕೊಟ್ಟಿದ್ದಾರೆ. ಇವತ್ತು ಟ್ರಾಫಿಕ್ ಇರುವುದರಿಂದ ಸದನಕ್ಕೆ ಬರುವುದು ಸ್ವಲ್ಪ ತಡವಾಗಿರಬೇಕು.

**ಸಭಾಪತಿಯವರು:-** ಇನ್ನೊಂದು ಸಲ ಇದು ರಿಪೀಟ್ ಆಗಬಾರದು.

**೩. ಮುಂದುವರೆದ ಪ್ರಶ್ನೋತ್ತರಗಳು**

**ಪ್ರಶ್ನೆ ಸಂಖ್ಯೆ: 337**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಪ್ರತಾಪ ಸಿಂಹ ನಾಯಕ್:-** ಮಾನ್ಯ ಸಭಾಪತಿಗಳೆ, ತುಳುನಾಡಿನ ಪ್ರಸಿದ್ಧ ಜಾನಪದ ಕ್ರೀಡೆ "ಕಂಬಳ"ದ ಸಂಘಟಕರಿಗೆ ಪೂರ್ಣ ಅನುದಾನವನ್ನು ಇದುವರೆಗೆ ಬಿಡುಗಡೆ ಮಾಡದಿರುವುದರಿಂದ ಅನುದಾನದ ನಿರೀಕ್ಷೆಯಲ್ಲಿರುವ ಸಂಘಟಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರ್ಕಾರ, ಬಂದಿದೆ ಎಂದು ಉತ್ತರ ಕೊಟ್ಟಿದೆ. ಆದರೆ ಅದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. 2023-24ನೇ ಆರ್ಥಿಕ ವರ್ಷದಲ್ಲಿ "ಕಂಬಳ"ದ ಸಂಘಟಕರಿಗೆ ಎಷ್ಟು ಮೊತ್ತದ ಅನುದಾನವನ್ನು ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದ್ದೆ. ಸರ್ಕಾರ ತನ್ನ ಉತ್ತರದಲ್ಲಿ, ಇಬ್ಬರಿಗೆ ಕೊಟ್ಟಿದ್ದೇವೆ ಎಂದು ಹೇಳಿದೆ. ಸುಮಾರು 20 ಕಡೆ ಕಂಬಳದ ಕ್ರೀಡೆ ನಡೆಯುತ್ತದೆ. ಮಾನ್ಯ ಡಿ.ವಿ.ಸದಾನಂದಗೌಡರವರು ಮುಖ್ಯ ಮಂತ್ರಿಗಳಾಗಿದ್ದಾಗ, ಪ್ರತಿ ಕಂಬಳಕ್ಕೆ ರೂ. 5,00,000ದಂತೆ 20 ಕಂಬಳಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ಆ ನಂತರ, ಮಾನ್ಯ ಯೋಗೇಶ್ವರ್‌ರವರು ಪ್ರವಾಸೋದ್ಯಮ ಸಚಿವರಾಗಿದ್ದಾಗ, 2021-22, 2022-23ರ ಸಾಲಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ಈ ಸರ್ಕಾರ ಬಂದಮೇಲೆ ಒಂದು ಕೋಟಿ ಮೊತ್ತ ಏಕೆ ಬಿಡುಗಡೆ ಆಗಲಿಲ್ಲ? ಮತ್ತೆ ಮತ್ತೆ ನಮಗೆ ಸಂಶಯ ಬರುವ ಹಾಗೆ, ಪ್ರಶ್ನೆ ಕೇಳುವ ರೀತಿಯಲ್ಲಿ ಆಗಬಾರದು ಎನ್ನವುದು ನಮ್ಮ ಕಳಕಳಿಯಾಗಿದೆ. ಲಕ್ಷಾಂತರ ಜನ ಈ ಕ್ರೀಡೆಯ ಬಗ್ಗೆ ಅಭಿಮಾನ ಹೊಂದಿದ್ದಾರೆ. ಅಲ್ಲದೇ ಉಪ ಮುಖ್ಯಮಂತ್ರಿಗಳಾದಿಯಾಗಿ ಎಲ್ಲರೂ ಈ ಕಂಬಳ ಕ್ರೀಡೆಯಲ್ಲಿ ಭಾಗವಹಿಸಿ, ಅಲ್ಲೇ ನೇರವಾಗಿ, ನಾವು ಅನುದಾನ ಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಘೋಷಣೆ ಕೇವಲ ಘೋಷಣೆಯಾಗಿಯೇ ಉಳಿದಿದೆ. ಬಜೆಟ್‌ನಲ್ಲೂ ಈ ಕ್ರೀಡೆಗೆ ಪ್ರಾಶಸ್ತ್ಯ ಕೊಟ್ಟು ಹಣವನ್ನು ಮೀಸಲಿಡಬೇಕು. ಬಜೆಟ್‌ನಲ್ಲೂ ಇಡಲಿಲ್ಲ. ಇವತ್ತಿನವರೆಗೂ ಕಳೆದ ವರ್ಷ ಆಗಿ ಹೋದ ಕಂಬಳಕ್ಕೆ ಸಂಬಂಧಪಟ್ಟಂತೆ ಅನುದಾನ ಬಿಡುಗಡೆ ಮಾಡಿಲ್ಲ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕ್ರೀಡಾಳುಗಳು ಅನುದಾನ ಯಾವಾಗ ಬಿಡುಗಡೆ ಮಾಡುತ್ತಾರೆ ಎನ್ನುವ ನಿರೀಕ್ಷೆಯಲ್ಲಿದ್ದಾರೆ. ಸಕಾರಾತ್ಮಕವಾಗಿ, ತಕ್ಷಣ ಅನುದಾನ ಬಿಡುಗಡೆ ಮಾಡುತ್ತೇವೆ ಎಂದು ಉತ್ತರ ಕೊಡುತ್ತೀರಿ ಎನ್ನುವ ನಿರೀಕ್ಷೆಯಲ್ಲಿದ್ದೇವೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ."ಪುತ್ತೂರು ಕೋಟಿ-ಚನ್ನಯ ಜೋಡುಕೆರೆ ಕಂಬಳ"ಕ್ಕೆ ಮತ್ತು "ಉಪ್ಪಿನಂಗಡಿ ವಿಜಯ-ವಿಕ್ರಮ

ಜೋಡುಕೆರೆ ಕಂಬಳ"ಕ್ಕೆ ನಾವು ಕ್ರಮವಾಗಿ ಐದು ಲಕ್ಷ ರೂಪಾಯಿಗಳು ಮತ್ತು ಹತ್ತು ಲಕ್ಷ ರೂಪಾಯಿಗಳ ಅನುದಾನ ಕೊಟ್ಟಿದ್ದೇವೆ. ಆದರೆ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು, ಬಿಲ್ಲುಗಳನ್ನು ತಯಾರಿಸಿ ದಿನಾಂಕ 20ರ ಮಾರ್ಚ್ ತಿಂಗಳ ಒಳಗೆ ಕಳುಹಿಸಬೇಕಾಗಿತ್ತು. ಆಗ ನಮ್ಮವರು ಕ್ಲೋಸ್ ಮಾಡಿದರು. ಇವರು 23ನೇ ದಿನಾಂಕದಂದು ಕಳುಹಿಸಿದ್ದಾರೆ. ಬಿಲ್ ತಡವಾಗಿ ಬಂತು ಎಂದು ಅವರಿಗೆ ಕೊಡವುದಕ್ಕೆ ಆಗಿರಲಿಲ್ಲ. ಇದನ್ನು ತಕ್ಷಣ ಬಿಡುಗಡೆ ಮಾಡುತ್ತೇವೆ. ನಮ್ಮ ಇಲಾಖೆಯ ಕಾರ್ಯದರ್ಶಿಗಳು ಇಲ್ಲೇ ಇದ್ದಾರೆ; ಅವರಿಗೆ ಸೂಚನೆ ಕೊಡುತ್ತೇನೆ. ಒಂದು ವೇಳೆ ಇನ್ನೂ ಬಿಡುಗಡೆ ಆಗದೇ ಇದ್ದರೆ, ಈ ಸದನ ಮುಗಿಯುವುದರೊಳಗಾಗಿ ಹಣ ಬಿಡುಗಡೆ ಮಾಡುತ್ತೇವೆ. ಮಾನ್ಯ ಸದಸ್ಯರ ಕಳಕಳಿಯಂತೆ ಕಂಬಳ ಕ್ರೀಡೆಗಾಗಿ 5 ಕಡೆಗಾದರೂ 2024-25ರಲ್ಲಿ ಅನುದಾನವನ್ನು ಕೊಡುತ್ತೇವೆ. ಇದು ನಮ್ಮ ಸರ್ಕಾರದ ಭರವಸೆಯಾಗಿದೆ

**ಶ್ರೀ ಪ್ರತಾಪಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಗಳೆ, ನಿಶ್ಚಿತವಾಗಿ 20 ಕಡೆ ಕಂಬಳ ಆಗುತ್ತದೆ. ಈಗ ಹೆಚ್ಚುವರಿಯಾಗಿ ಅದು ರಾಜಧಾನಿಗೆ ಬಂದಿದೆ. ರಾಜಧಾನಿಯ ಜನ ಕಂಬಳದ ಸವಿಯನ್ನು ಅನುಭವಿಸುತ್ತಿದ್ದಾರೆ. ಹಾಗಾಗಿ, 20 ಕಂಬಳದ ಪೈಕಿ 5 ಕಡೆ ನಡೆಯುವ ಕಂಬಳ ಕ್ರೀಡೆಗೆ ಮಾತ್ರ ಕೊಡುತ್ತೇವೆ ಎಂದರೆ ಉಳಿದ 15 ಜನರಿಗೆ ತಾರತಮ್ಯ ಮಾಡಿದ ಹಾಗೆ ಆಗುತ್ತದೆ. ಈಗ ನೀವು ನಿಮ್ಮದೇ ಪಕ್ಷದ ಶಾಸಕರ ಕ್ಷೇತ್ರಕ್ಕೆ ಅನುದಾನ ಕೊಟ್ಟಂತೆ ಆಗುತ್ತದೆಯೇ ಹೊರತು, ಉಳಿದ ಕಡೆ ತಾವು ತಾರತಮ್ಯ ಮಾಡಿದ ಹಾಗೆ ಆಗುತ್ತದೆ. ಎಲ್ಲರಿಗೂ ಕೊಡಬೇಕು. 3 ವರ್ಷಗಳಿಂದ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈ ವರ್ಷ ಅದನ್ನು ಮುಂದುವರೆಸಬೇಕೆಂದು ನಮ್ರನಾಗಿ ಕೋರುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಕ್ರೀಡೆಯೊಳಗೆ ರಾಜಕಾರಣ ಇಲ್ಲ. ರಾಜಕಾರಣದಲ್ಲಿ ಬೇಕಾದರೆ ಕ್ರೀಡೆ ಇರಬಹುದು.

**ಶ್ರೀ ಪ್ರತಾಪಸಿಂಹ ನಾಯಕ್ ಕೆ.:-** ಒಬ್ಬರಿಗೆ ಮಾತ್ರ ಕೊಟ್ಟಾಗ ಅದು ಹಾಗೆಯೇ ತೋರಿಸುತ್ತದೆ ಎನ್ನುವ ಉದ್ದೇಶದಿಂದ ಹೇಳಿದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಾವು ಅನುದಾನವನ್ನು ಮಂಜೂರು ಮಾಡಿದಾಗ ಇವರು ಯಾವ ಪಕ್ಷದ ಶಾಸಕರಾಗಿದ್ದಾರೆ ಎನ್ನುವುದನ್ನು ಗಮನಿಸಿಲ್ಲ. ಕಂಬಳದ ಕ್ರೀಡೆಗೆಂದೇ ಕೊಡಲಾಗಿದೆ ಅಷ್ಟೆ. ಇದರಲ್ಲಿ ರಾಜಕೀಯ ಬೆರೆಸದ ಹಾಗೆ ಅನುದಾನವನ್ನು ಹೆಚ್ಚಿಗೆ ಕೊಡಬೇಕು ಎಂದು ಹೇಳುತ್ತಿದ್ದೀರಿ. ನಾನು ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡುತ್ತೇನೆ. ಇನ್ನೂ ಹೆಚ್ಚು ಹಣವನ್ನು ಕೊಡಿಸುವ ಪ್ರಯತ್ನ ಮಾಡಿ ಕಂಬಳಕ್ಕೆ ಪ್ರೋತ್ಸಾಹ ಸಿಗುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ.

(ಮುಂದು)

(510) 18-7-2024 10.50 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 289**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಾಗ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಲಿಖಿತ ಉತ್ತರ ಕೊಟ್ಟಿದ್ದಾರೆ. ಈಗ ಅವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ. ಇದು ಪ್ರಶ್ನೋತ್ತರವಾಗಿರುವುದರಿಂದ ಮುಂದಿನ ವಾರ ಇದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸದನಕ್ಕೆ ಬರುವುದಿಲ್ಲವೇ?

**ಸಭಾಪತಿಯವರು:-** ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರದಿರುವ ಕಾರಣಕ್ಕಾಗಿಯೇ ಅವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದ ಅವಧಿಯಲ್ಲಿ ಯಾವ ಯಾವ ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ದರವನ್ನು ಏರಿಕೆ ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಉತ್ತರ ಕೊಟ್ಟಿದ್ದಾರೆ. ಅದೇರೀತಿ ಬೇರೆ ಬೇರೆ ರಾಜ್ಯಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಎಷ್ಟಿವೆ ಎಂಬುದರ ಬಗ್ಗೆ ಉತ್ತರದಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ದರ ಏರಿಕೆಯಿಂದ ರಾಜ್ಯ ಸರ್ಕಾರಕ್ಕೆ ಮುಂಬರುವ 9 ತಿಂಗಳುಗಳಲ್ಲಿ ರೂ.3,107 ಕೋಟಿಗಳಷ್ಟು ಹೆಚ್ಚಿನ ಆದಾಯ ಸಂಗ್ರಹವಾಗುವುದನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಹಿಂದೆ ಯು.ಪಿ.ಎ. ಸರ್ಕಾರ ಇದ್ದಾಗ 140 ಡಾಲರ್‌ವರೆಗೆ import ಮಾಡಿದ್ದು, 60 ರೂಪಾಯಿಗಳಿಗೆ ಪೆಟ್ರೋಲ್, ಡೀಸೆಲ್ ಸಿಗುತ್ತಿತ್ತು. ಸ್ವಲ್ಪ ಕಾಲದ ಹಿಂದೆ 45 ಡಾಲರ್ ಇತ್ತು, ಈಗ 60-70 ಡಾಲರ್ ಇದೆ, ಏಕೆ ಇಷ್ಟು ತಾರತಮ್ಯವೆಂದು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ವಿಚಾರ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದೆ. ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಹೆಚ್ಚು

ಮಾಡುವುದು, ಕಡಿಮೆ ಮಾಡುವುದು, ದರ ನಿಗದಿಯನ್ನು ಕೇಂದ್ರ ಸರ್ಕಾರ ಮಾಡುತ್ತದೆ. ಈಗಿರುವಂತಹ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿರುವಂತಹ ದರದಲ್ಲಿ ನಮ್ಮ ನಮ್ಮ ರಾಜ್ಯಗಳಲ್ಲಿ transportation charges ಹಾಗೂ Cess ಎಲ್ಲವನ್ನು ಸೇರಿಸಿ ಈ ರೀತಿ ಕೊಡುತ್ತಿದ್ದಾರೆ. ದಿನಾಂಕ 05-01-2019 ರಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಸಲ ಇದೇ ರೀತಿಯಾದಂತಹ ದರವನ್ನು ನಿಗದಿ ಮಾಡಿದ್ದರು. ಬೆಂಗಳೂರು, ಹೊಸೂರು, ಕಾಸರಗೋಡು, ಅನಂತಪುರ, ಹೈದರಾಬಾದ್, ಮಹಾರಾಷ್ಟ್ರದಲ್ಲಿ ಯಾವ ರೀತಿ ದರವನ್ನು ಹೆಚ್ಚು ಮಾಡಿರುವುದರಿಂದ ದರಗಳು ವ್ಯತ್ಯಾಸವಾಗಿರುವುದು ನಮ್ಮ ಹತ್ತಿರ ಮಾಹಿತಿ ಇದೆ. ಡಾಲರ್ ಬಗ್ಗೆ ಮಾತನಾಡಬೇಕೆಂದರೆ ಕೇಂದ್ರ ಸರ್ಕಾರದವರು ನಿರ್ಧಾರ ತೆಗೆದುಕೊಳ್ಳುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ನಿರ್ಧಾರವಲ್ಲ. ಕೇಂದ್ರ ಸರ್ಕಾರದಲ್ಲಿ ನಮ್ಮ ಸರ್ಕಾರಗಳದ್ದಾಗ 8.50 ರೂಪಾಯಿಗಳದ್ದಂತಹ ಸೆಸ್ ಈಗ 34 ರೂಪಾಯಿಗಳಾಗಿವೆ. 28 ರಿಂದ 29 ರೂಪಾಯಿಗಳಷ್ಟು ಜಾಸ್ತಿ ಮಾಡಿದ್ದಾರೆ. ಈ ರಾಜ್ಯ ಸರ್ಕಾರಗಳು ಅವರನ್ನು ಏಕೆ ಕೇಳುವುದಿಲ್ಲ? ಒಂದು ಲೀಟರ್‌ಗೆ 30 ರೂಪಾಯಿ ಜಾಸ್ತಿ ಮಾಡಿದಾಗ ಯಾರು ಮಾತನಾಡುವುದಿಲ್ಲ. 3 ರೂಪಾಯಿಗಳು ಜಾಸ್ತಿಯಾದರೆ ಕೇಳುವುದಕ್ಕೆ ಜನ ಬರುತ್ತಾರೆ. 30 ರೂಪಾಯಿಗಳು ಜಾಸ್ತಿಯಾದಾಗ ಏಕೆ ಕೇಂದ್ರ ಸರ್ಕಾರದ ಹತ್ತಿರ ನಮಗೂ 15 ರೂಪಾಯಿಗಳಗೆ ಕೊಡಿ ಎಂದು ಕೇಳುವುದಿಲ್ಲ? ಇಲ್ಲೇನಾದರೂ ದರ ಜಾಸ್ತಿಯಾಗಿ ಅದರ ಪ್ರಮಾಣ ಜಾಸ್ತಿ ಮಾಡಿದರೆ ಪರವಾಗಿಲ್ಲ. ಅದರ ಪ್ರಮಾಣ ಕಡಿಮೆ ಇದ್ದಾಗ ಜಾಸ್ತಿ ದರ ತೆಗೆದುಕೊಳ್ಳುವುದು ಯಾವ ಧರ್ಮ? Federal system ನಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕೇಳಬಾರದು ಎಂದೇನೂ ಇಲ್ಲವಲ್ಲಾ? ಎಲ್ಲಾ ರಾಜ್ಯ ಸರ್ಕಾರಗಳು ಸೇರಿಕೊಂಡು ಕೇಂದ್ರ ಸರ್ಕಾರಕ್ಕೆ ಹೋಗಿ ದರ ಇಳಿಸಿ ಎಂದು ಕೇಳಬೇಕಲ್ಲವೇ? ಸರ್ಕಾರ ದರ ಕಡಿಮೆ ಮಾಡಬೇಕು. ಈ ರೀತಿ ಜನರ ಮೇಲೆ ಬರೆ ಹಾಕುತ್ತಿದ್ದರೆ ಹೇಗೆ? ಇದರಿಂದಲೇ ಬೆಲೆ ಏರಿಕೆಯಾಗುತ್ತಿದೆ. ನಾವು 3 ರೂಪಾಯಿಗಳನ್ನು ಜಾಸ್ತಿ ಮಾಡಿದರೆ ಊರೆಲ್ಲಾ ತಿರುಗುತ್ತಾರೆ. 30 ರೂಪಾಯಿಗಳನ್ನು ಜಾಸ್ತಿ ಮಾಡಿರುವುದನ್ನು ಸರ್ಕಾರ ಕೇಳುವುದೇ ಇಲ್ಲ. ಸರ್ವಪಕ್ಷ ಸಭೆಯನ್ನು ಕರೆದು ನಿಯೋಗವನ್ನು ಕರೆದುಕೊಂಡು ಕೇಂದ್ರ ಸರ್ಕಾರದ ಹತ್ತಿರ ಹೋಗಬಹುದಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ನಾನು ಅನೇಕ ಬಾರಿ ಮಾಧ್ಯಮಗಳಲ್ಲಿ ನೋಡಿದ್ದೇನೆ. ಸರ್ಕಾರ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದೆ. ಪಾರ್ಲಿಮೆಂಟ್‌ನಲ್ಲೂ ಈ ವಿಷಯಗಳು ಚರ್ಚೆಯಾಗಿವೆ. ಕೇಂದ್ರ ಸರ್ಕಾರ ಇಲ್ಲಿಯವರೆಗೆ ಸ್ಪಂದಿಸಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ರಾಜ್ಯದ ಸೆಸ್ ಎಷ್ಟು, ಕೇಂದ್ರದ ಸೆಸ್ ಎಷ್ಟು? ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದು ಎಷ್ಟು ಸರಿ?

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಸುವುದು ದೇಶದಲ್ಲಿ ಅಲ್ಲ, ಇಡೀ ಜಗತ್ತಿನ ಡಾಲರ್ಸ್ ಮೇಲೆ ಬೆಲೆ ನಿಗದಿಯಾಗುತ್ತದೆ. ಅದು ಬಿಟ್ಟು ಕೇಂದ್ರ ಸರ್ಕಾರ 30 ರೂಪಾಯಿ ಏರಿಸಿದೆ, ನಾವು ಎರಡು ರೂಪಾಯಿ ಏರಿಸಿದ್ದೇವೆ ಎಂದು ಈ ರೀತಿ ಮಾತನಾಡಿದರೆ ಏನರ್ಥ?

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಡಾ॥ ಮನಮೋಹನ್‌ಸಿಂಗ್‌ರವರು ಇದ್ದಾಗ 145 ಡಾಲರ್‌ಗಳಿಗೆ ತಂದು ಅವರಿಗೆ 65 ರೂಪಾಯಿಗಳಿಗೆ ಕೊಡುತ್ತಿದ್ದೆವು. ಒಂದು ಲೀಟರ್‌ಗೆ 30 ರೂಪಾಯಿ ಏಕೆ ಜಾಸ್ತಿ ಮಾಡಿದ್ದಾರೆ? ನಮಗೆ ಏನು ಪರಿಸ್ಥಿತಿ ಬಂದಿದೆ? **(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈ ಡಾಲರ್ಸ್ ವಿಷಯದಲ್ಲಿ ದರ ಹೆಚ್ಚು ಕಡಿಮೆಯಾಗುವಂಥದ್ದು, ಸೆಸ್ ಹಾಕುವಂಥದ್ದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರುವಂಥದ್ದು. ಏನಿದೆ, ಏನಿಲ್ಲ ಎಂಬುದು ಈಗಾಗಲೇ ಚರ್ಚೆಯಾಗುತ್ತಿದೆ. ಅನೇಕ ರಾಜ್ಯಗಳು ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿದೆ. ಈ ವಿಷಯದ ಬಗ್ಗೆ ಅನೇಕ ಬಾರಿ ನಮ್ಮ ಮುಖ್ಯಮಂತ್ರಿಗಳು ಚರ್ಚೆ ಮಾಡಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಬಹಳ ಸಮಯೋಜಿತವಾಗಿದೆ. ಸಾರ್ವಜನಿಕವಾಗಿದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ಇದು ಪ್ರಶ್ನೋತ್ತರವಾಗಿದೆ. ಮಧ್ಯ ಮಧ್ಯ ಮಾತನಾಡಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸಾರ್ವಜನಿಕವಾಗಿ ಮಾನ್ಯ ಯು.ಬಿ.ವೆಂಕಟೇಶ್‌ರವರು ಬಹಳ ಕಾಳಜಿ ವಹಿಸಿ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಅವರಿಗೆ ಸರಿಯಾಗಿ ಉತ್ತರ ಕೊಡಬೇಕಾಗುತ್ತದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಉತ್ತರ ಸರಿಯಾಗಿ ಕೊಟ್ಟಿದ್ದೇವೆ.

**ಪ್ರಶ್ನೆ ಸಂಖ್ಯೆ: 295**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಉತ್ತರ ಹೇಗಿದೆ ಎಂದರೆ, ಪದೇಪದೇ ಏಕೆ ಮುಂದೂಡುತ್ತೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಹಲವಾರು ಪರೀಕ್ಷೆಗಳು ನಡೆಸಲಾಗುತ್ತಿದ್ದು, ಈ ದಿನಾಂಕಗಳಲ್ಲದೆ, ಹಬ್ಬಗಳು, ಜಯಂತಿಗಳು, ರಾಷ್ಟ್ರೀಯ ದಿನಾಚರಣೆಗಳ ದಿನಾಂಕಗಳನ್ನು ಹೊರತುಪಡಿಸಿ ಪರೀಕ್ಷೆಗೆ ದಿನಾಂಕವನ್ನು ನಿಗದಿಪಡಿಸಬೇಕಾಗುತ್ತದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಪರೀಕ್ಷೆ ನಡೆಸಬೇಕೆಂದರೆ ಮಧ್ಯದಲ್ಲಿ ನ್ಯಾಯಾಲಯಕ್ಕೆ ಹೋಗುತ್ತಾರೆ. ನಾನು ಇವರಿಗೆ ಕೇಳುವುದೇನೆಂದರೆ, ಪಾರದರ್ಶಕ ವ್ಯವಸ್ಥೆಯನ್ನು ಅಳವಡಿಸಿಕೊಂಡರೆ, ಪ್ರಾಮಾಣಿಕ ವ್ಯವಸ್ಥೆಯನ್ನು ಅಳವಡಿಸಿಕೊಂಡರೆ ನ್ಯಾಯಾಲಯಕ್ಕೆ ಏಕೆ ಹೋಗುತ್ತಾರೆ? ಪಾರದರ್ಶಕ ವ್ಯವಸ್ಥೆ ಅಳವಡಿಸಿಕೊಳ್ಳದಿರುವುದರಿಂದ ನ್ಯಾಯಾಲಯಕ್ಕೆ ಹೋಗುತ್ತಾರೆ. ನೇಮಕಾತಿಯಲ್ಲಿ cash ಮತ್ತು caste ಎರಡೂ ಶಿಫಾರಸ್ಸು ಮಾಡುತ್ತದೆ. ಇದರ ಜೊತೆಗೆ 'ಶಾದಿ ಭಾಗ್ಯ ಯೋಜನೆ'ಯೂ ಇತ್ತು. ಯಾರು ಮದುವೆ ಮಾಡಿಕೊಳ್ಳುತ್ತಾರೆ ಅವರಿಗೆ ನೇಮಕಾತಿ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಕೆ.ಪಿ.ಎಸ್.ಸಿ. ನೇಮಕಾತಿಯ ಬಗ್ಗೆ ಪ್ರಶ್ನೆ ಇರುವಂಥದ್ದು.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಕೆ.ಪಿ.ಎಸ್.ಸಿ. ನೇಮಕಾತಿಯಲ್ಲಿಯೇ ಶಾದಿ ಭಾಗ್ಯಕ್ಕೆ ಯಾರು ಒಪ್ಪಿಕೊಳ್ಳುತ್ತಾರೆ ಅವರಿಗೆ ನೇಮಕಾತಿ ಆಗುತ್ತಿತ್ತು. 'ಬಿತ್ತಿದಂತೆ ಬೆಳೆ' ಎನ್ನುವ ಗಾದೆ ಮಾತು ಇದೆ. 'ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳದ ಹಾಲನ್ನು ಎರೆದು ಜೇನು ತುಪ್ಪವ ಹೊಯ್ದರೆ ಸಿಹಿಯಾಗಬಲ್ಲದೆ, ಕಹಿಯಾಗುವುದಲ್ಲವೆ,' ಇದು ಆ ಪರಿಸ್ಥಿತಿಯಾಗಿದೆ. ಕೆ.ಪಿ.ಎಸ್.ಸಿ. ಸದಸ್ಯರುಗಳನ್ನು, ಅಧ್ಯಕ್ಷರನ್ನು ನೇಮಕ ಮಾಡಬೇಕಾದರೆ ಜಾತಿ ಪ್ರಭಾವಕ್ಕೆ ಮತ್ತು ಹಣದ ಪ್ರಭಾವಕ್ಕೆ ಒಳಗಾಗಿ ನೇಮಕ ಮಾಡುವ ಪ್ರಕ್ರಿಯೆ ಇರುವುದರಿಂದ ಅದರ ಪರಿಣಾಮ ಬೇರೆ ಇರುತ್ತದೆ. ಅಲ್ಲಿಯೂ ಜಾತಿ, ಹಣ ಬರುತ್ತದೆ. ಅದನ್ನು ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಲೋಕಸೇವಾ ಆಯೋಗ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಪ್ರಕಟಿಸಿರುವ ಅಧಿಸೂಚನೆಗಳೆಷ್ಟು ಎಂದು ಪ್ರಶ್ನೆ ಕೇಳಿದ್ದಾರೆ. ಒಟ್ಟು 2243 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ

19 ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಹುದ್ದೆಗಳ ವಿವರವನ್ನು ಅನುಬಂಧದಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದೇವೆ. ಎರಡನೆಯ ಪ್ರಶ್ನೆ ಮೌಖಿಕ ಸಂದರ್ಶನಕ್ಕೆ ಬಾಕಿ ಇರುವ ಮತ್ತು ಲಿಖಿತ ಪರೀಕ್ಷೆ ಇನ್ನೂ ನಡೆಯದಿರುವ ಹುದ್ದೆಗಳ ವಿವರ ನೀಡುವುದು ಎಂದು ಕೇಳಿದ್ದಾರೆ. ಲಿಖಿತ ಪರೀಕ್ಷೆಗೆ ದಿನಾಂಕವನ್ನು ನಿಗದಿಪಡಿಸಲಾಗಿರುವ ಒಟ್ಟು ಹುದ್ದೆಗಳು 1070, ಲಿಖಿತ ಪರೀಕ್ಷೆಗೆ ದಿನಾಂಕವನ್ನು ನಿಗದಿಗೊಳಿಸಬೇಕಾದ ಒಟ್ಟು ಹುದ್ದೆಗಳು 928, ಈಗಾಲೇ ಲಿಖಿತ ಪರೀಕ್ಷೆ ನಡೆದಿರುವ ಹುದ್ದೆಗಳು 245 ಎಂದು ಉತ್ತರದಲ್ಲಿ ಕೊಟ್ಟಿದ್ದೇವೆ. ಮೂರನೆಯ ಪ್ರಶ್ನೆ, ನೇಮಕಾತಿ ಪ್ರಕ್ರಿಯೆಯಲ್ಲಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದಾರೆ. ವಿಳಂಬವಾಗುವುದಕ್ಕೆ ಕಾರಣವೇನೆಂದರೆ, ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನ್ಯೂನತೆಗಳಿದ್ದಲ್ಲಿ ಅವುಗಳ ಬಗ್ಗೆ ಸ್ಪಷ್ಟೀಕರಣ, ಅಗತ್ಯ ಮಾಹಿತಿ ಹಾಗೂ ದಾಖಲೆಗಳನ್ನು ಆಯೋಗವು ಕೋರಿದ ಸಂದರ್ಭದಲ್ಲಿ ಅವುಗಳನ್ನು ನೀಡಲು ನೇಮಕಾತಿ ಪ್ರಾಧಿಕಾರಗಳು ಕಾಲಾವಕಾಶ ತೆಗೆದುಕೊಳ್ಳುತ್ತಿರುವುದು. ಈ ರೀತಿಯ ಅನೇಕ ಕಾರಣಗಳ ವಿವರಗಳನ್ನು ಉತ್ತರದಲ್ಲಿ ಕೊಟ್ಟಿದ್ದೇವೆ. ವಿವಿಧ ಇಲಾಖೆಗಳ ಆಯ್ಕೆ ಪ್ರಾಧಿಕಾರಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ವಿಶ್ವವಿದ್ಯಾಲಯಗಳಿಂದ ದಾಖಲೆಗಳು ಬರುವುದು ತಡವಾಗುತ್ತಿದೆ. ಮಾನ್ಯ ಸದಸ್ಯರು ಶಾದಿ ಭಾಗ್ಯದ ಬಗ್ಗೆ ಪ್ರಶ್ನೆ ಕೇಳಿಲ್ಲ. ನೇಮಕಾತಿ ವಿಳಂಬ ಏಕೆ ಆಗುತ್ತಿದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ನೇಮಕಾತಿ ವಿಳಂಬವಾಗುವುದಕ್ಕೆ ಅನೇಕ ಕಾರಣಗಳಿವೆ. ಪ್ರತಿ ನೇಮಕಾತಿ ಪ್ರಕ್ರಿಯೆಗಳಲ್ಲಿಯೂ ಅಭ್ಯರ್ಥಿಗಳು ಕಾನೂನು ಪ್ರಕರಣಗಳನ್ನು ದಾಖಲಿಸುತ್ತಿರುವುದು. ಆಯೋಗಕ್ಕೆ ಖಾಯಂ, ಗುತ್ತಿಗೆ, ಹೊರಗುತ್ತಿಗೆ, ಎಲ್ಲಾ ವೃಂದದ ಹುದ್ದೆಗಳನ್ನು ಸೇರಿಸಿ ಒಟ್ಟು 380 ಹುದ್ದೆಗಳು ಮಂಜೂರಾಗಿದ್ದು, ಹಲವಾರು ಅಧಿಕಾರಿ, ನೌಕರರು ವಯೋನಿವೃತ್ತಿ, ನಿಧನ, ಸ್ವಯಂ ನಿವೃತ್ತಿ ಸೇವೆಯಿಂದ ಬಿಡುಗಡೆ ಮತ್ತಿತರ ಕಾರಣಗಳಿಂದಾಗಿ 210 ಹುದ್ದೆಗಳು ತೆರವಾಗಿದ್ದು, ಅದರಲ್ಲಿ ಹೊರಗುತ್ತಿಗೆ 88 ನೌಕರರನ್ನು ಭರ್ತಿ ಮಾಡಿಕೊಂಡಿದ್ದರೂ ಸಹ 122 ಹುದ್ದೆಗಳು ಖಾಲಿ ಇರುತ್ತವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, 210 ಹುದ್ದೆಗಳು ಕೆ.ಪಿ.ಎಸ್.ಸಿ. ಯಲ್ಲೇ ಖಾಲಿ ಇವೆ. ಹೊರಗುತ್ತಿಗೆಯಿಂದ 88 ನೌಕರರನ್ನು ಭರ್ತಿ ಮಾಡಿಕೊಂಡಿದ್ದರೂ ಕೂಡ 122 ಹುದ್ದೆಗಳು ಕೆ.ಪಿ.ಎಸ್.ಸಿ. ಯಲ್ಲಿ ಖಾಲಿ ಇರುತ್ತವೆ. ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕಾಗಿಯೇ ಕೆ.ಪಿ.ಎಸ್.ಸಿ., ಯನ್ನು ನೇಮಕ ಮಾಡಿರುವಂಥದ್ದು. ಕೆ.ಪಿ.ಎಸ್.ಸಿ. ಯಲ್ಲೇ ಖಾಲಿ ಇಟ್ಟುಕೊಂಡು ನೇಮಕ ಹೇಗೆ ಮಾಡಿಕೊಳ್ಳುತ್ತಾರೆ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, 122 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಕ್ರಿಯೆ ನಡೆಯುತ್ತಿದೆ. ಕೆಲಸ ಮುಂದುವರೆಯುತ್ತಿದೆ. ಹಿಂದಿನ ವರ್ಷಗಳದ್ದು ಹಾಗೂ ಈ ವರ್ಷದ್ದನ್ನು ಹೋಲಿಕೆ ಮಾಡಿ ನೋಡಿ....

**ಸಭಾಪತಿಯವರು:-** ಯಾವಾಗ ನೇಮಕಾತಿ ಮಡುತ್ತೀರಿ ಎಂಬುದನ್ನು ಹೇಳಿ.

(ಮುಂದು)

(511) 18/07/2024 11:00/ಎಸ್‌ಪಿಆರ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸರ್ಕಾರವು ಆದಷ್ಟು ಶೀಘ್ರದಲ್ಲಿ ನೇಮಕಾತಿಯನ್ನು ಮಾಡುತ್ತಿದೆ. 2021-22 ನೇ ಸಾಲಿನಲ್ಲಿ 879 ನೇಮಕಾತಿಗಳಾಗಿವೆ. ಅದೇ ರೀತಿಯಾಗಿ 2022-23 ರಲ್ಲಿ 1,025; 2023-24 ರಲ್ಲಿ 2,243 ನೇಮಕಾತಿಗಳಾಗಿವೆ. ಈ ರೀತಿಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿಗಳಾಗುತ್ತಿವೆ. ಆದಷ್ಟು ತೀವ್ರದಲ್ಲಿ ಮುಂದಿನ ಪ್ರಕ್ರಿಯೆಯನ್ನು ಸರ್ಕಾರವು ಪೂರೈಸುತ್ತದೆ. ಸದಸ್ಯರು ಕೇಳಿದ ಪ್ರಶ್ನೆಗೆ ಪರಿಪೂರ್ಣವಾದ ಹಾಗೂ ವಿಸ್ತೃತವಾದ ಉತ್ತರವನ್ನು ನೀಡಲಾಗಿದೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನೇಮಕಾತಿ ಮಾಹಿತಿಯನ್ನು ಆಯೋಗದ ಅಂತರ್ಜಾಲದಲ್ಲಿ ಏಕೆ ಹಂಚಿಕೊಳ್ಳುತ್ತಿಲ್ಲ; ಇದಕ್ಕೆ ಕಾರಣವೇನೆಂದು ನಾನು ಕೇಳಬಯಸುತ್ತೇನೆ. ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿರುವ ನೇಮಕಾತಿ ಸಂಬಂಧಿತ ಪ್ರಕರಣಗಳು ಎಷ್ಟು ಇವೆ ಎನ್ನುವುದರ ಮಾಹಿತಿಯನ್ನು ನೀಡಬೇಕು.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಸದಸ್ಯರು ಈ ಬಗ್ಗೆ ಪ್ರಶ್ನೆಯನ್ನು ಕೇಳಿರುವುದಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನ್ಯಾಯಾಲಯದ ಮುಂದೆ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳೆಷ್ಟು ಎಂಬ ಉಪಪ್ರಶ್ನೆಯನ್ನು ನಾನು ಈಗ ಕೇಳುತ್ತಿದ್ದೇನೆ. ಆಯೋಗದ ನೇಮಕಾತಿ ಪ್ರಕ್ರಿಯೆಯ ಮಾಹಿತಿಯನ್ನು ಆಯೋಗದ ಅಂತರ್ಜಾಲ ತಾಣದಲ್ಲಿ ಏಕೆ ಹಂಚಿಕೊಳ್ಳುತ್ತಿಲ್ಲ? ಆಯೋಗದ ಕಛೇರಿಯ ಮುಂದೆ ಉದ್ಯೋಗಾಕಾಂಕ್ಷಿಗಳು ಅಂದರೆ, ಅಭ್ಯರ್ಥಿಗಳು ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಆಯೋಗವು ಪ್ರತಿಭಟನೆಕಾರರ ಅನೇಕ ಸಮಸ್ಯೆಗಳನ್ನು ಬಗೆಹರಿಸಿರುವ ಮಾಹಿತಿಯು ಈಗಾಗಲೇ ತಮಗೆ ಇದೆ. ಈಗಾಗಲೇ ಆಯೋಗದ ಅಂತರ್ಜಾಲ ತಾಣದಲ್ಲಿ ಪ್ರಕಟಣೆಗಳನ್ನು ಮಾಡಲಾಗುತ್ತಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಆಡಳಿತ ವ್ಯವಸ್ಥೆಯ ಬಗ್ಗೆ ಮಾತನಾಡುವ ಸರ್ಕಾರವು ಯಾವ ಕಾರಣಕ್ಕಾಗಿ ಅಭ್ಯರ್ಥಿಗಳ ನೇಮಕಾತಿ ಸಂಬಂಧಿತ ಮಾಹಿತಿಯನ್ನು ಆಯೋಗದ ಅಂತರ್ಜಾಲ ತಾಣದಲ್ಲಿ ಏಕೆ ಹಂಚಿಕೊಳ್ಳುತ್ತಿಲ್ಲ. ಈ ಪ್ರಕ್ರಿಯೆಯು ಗಪ್‌ಚುಪ್ ಆಗಿ ಏಕೆ ನಡೆಯುತ್ತಿದೆ ಎಂದು ನಾನು ಪ್ರಶ್ನಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಈಗ ನೇಮಕಾತಿಯ ಮಾಹಿತಿಯನ್ನು ಆಯೋಗದ ಅಂತರ್ಜಾಲ ತಾಣದಲ್ಲಿ ಬಿತ್ತರಿಸಲಾಗುತ್ತಿದೆ. ಸದಸ್ಯರು ಹೇಳಿರುವ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಲೋಕಸೇವಾ ಆಯೋಗದ ಸಂಬಂಧಪಟ್ಟವರಿಗೆ ಸೂಚನೆಯನ್ನು ಕೊಡುತ್ತೇವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಈ ಬಗ್ಗೆ ಮನವಿಯನ್ನು ಸಲ್ಲಿಸಿ. ಶ್ರೀ ವೈ.ಎಂ.ಸತೀಶ್‌ರವರೇ, ಪ್ರಶ್ನೆ ಸಂಖ್ಯೆ: 6, 9, 10 ಮತ್ತು 13 ಗಳಿಗೆ ಸಂಬಂಧಪಟ್ಟಂತೆ ಉಪ ಮುಖ್ಯಮಂತ್ರಿಗಳು ಇಂದು ಸದನಕ್ಕೆ ಆಗಮಿಸುವುದಿಲ್ಲ; ಈ ಬಗ್ಗೆ ಪತ್ರವನ್ನು ನೀಡಿದ್ದಾರೆ. ಹೀಗಾಗಿ ಇವುಗಳನ್ನು ಮುಂದಿನ ವಾರದಲ್ಲಿ ತೆಗೆದುಕೊಳ್ಳಲಾಗುವುದು.

**ಪ್ರಶ್ನೆ ಸಂಖ್ಯೆ: 334**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ|| ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದುಶ್ಚಟಗಳ ಪೈಕಿ ಸಿಗರೇಟು ಮತ್ತು ಬೀಡಿಗಳು ಮನುಷ್ಯನನ್ನು ಬಲಿ ತೆಗೆದುಕೊಳ್ಳುತ್ತವೆ. ಅದೇ ರೀತಿಯಾಗಿ ಮದ್ಯಪಾನ ಕುಟುಂಬವನ್ನು ಬಲಿ ತೆಗೆದುಕೊಳ್ಳುತ್ತದೆ. ಆದರೆ, ಮಾದಕ ವಸ್ತುಗಳು ಮನುಷ್ಯನೊಂದಿಗೆ ಆತನ ಕುಟುಂಬ ಹಾಗೂ ಸಮಾಜವನ್ನು ಬಲಿ ತೆಗೆದುಕೊಳ್ಳುತ್ತವೆ. ನಮ್ಮ ದೇಶದಲ್ಲಿ Cannabis ಮತ್ತು Opioid ಸುಮಾರು 3 ಕೋಟಿಯಷ್ಟು ವ್ಯಸನಿಗಳಿದ್ದಾರೆ ಎಂಬ ಬಗ್ಗೆ ಉಲ್ಲೇಖವಿದೆ. ಬಹಳ ಆಶ್ಚರ್ಯಕರ ಸಂಗತಿ ಏನೆಂದರೆ, death due to drug overdose ರಲ್ಲಿ ಸುಮಾರು 8,000 ಜನರು ಮರಣ ಹೊಂದಿದ್ದಾರೆ. 2017 ನೇ ಸಾಲಿನಲ್ಲಿ ನಮ್ಮ ಇಡೀ ದೇಶದಲ್ಲಿ 738 ಜನರು ಅಸುನೀಗಿದ್ದು, ಆ ಪೈಕಿ 81 ಜನರು ನಮ್ಮ ರಾಜ್ಯದವರೇ ಆಗಿದ್ದಾರೆ. ಅದೇ ರೀತಿಯಾಗಿ 2020 ನೇ ಸಾಲಿನಲ್ಲಿ ಇಡೀ ದೇಶದಲ್ಲಿ 864 ಜನರು ಅಸುನೀಗಿದ್ದರೆ, ಆ ಪೈಕಿ 91 ಜನರು ನಮ್ಮ ರಾಜ್ಯದವರಾಗಿದ್ದಾರೆ. ಅದೇ ರೀತಿಯಾಗಿ 2019 ನೇ ಸಾಲಿನಲ್ಲಿ ದೇಶದಲ್ಲಿ 684 ಜನರು ಅಸುನೀಗಿದ್ದರೆ, ಆ ಪೈಕಿ 67 ಜನರು ನಮ್ಮ ರಾಜ್ಯದವರಾಗಿದ್ದಾರೆ. ಈ ಅಂಕಿ-ಅಂಶಗಳನ್ನು ನೋಡಿದಾಗ, ಇಡೀ ದೇಶದಲ್ಲಿ drug overdose ನಿಂದಾಗಿ ಮೃತರಾದವರ ಪೈಕಿ ನಮ್ಮ ರಾಜ್ಯವು ಎರಡನೇ ಸ್ಥಾನದಲ್ಲಿದೆ. 2020 ರಿಂದ 2022 ರ ವರೆಗಿನ ಈ ಮಾಹಿತಿಯು ಇನ್ನೂ ದೊರೆತಿಲ್ಲ. ಈ ರೀತಿಯ ಘಟನೆಗಳನ್ನು ತಡೆಗಟ್ಟಲು ಗೃಹ ಇಲಾಖೆಯು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ನಾನು ಪ್ರಶ್ನಿಸಬಯಸುತ್ತೇನೆ.

**ಡಾ|| ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ನಮ್ಮ ದೇಶದಲ್ಲಿ ಮಾದಕ ವ್ಯಸನಿಗಳಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಸಹ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಮಾದಕ ವ್ಯಸನಿಗಳಿದ್ದಾರೆ. ಅನೇಕ ಸಂದರ್ಭಗಳಲ್ಲಿ ನಾನು ಈ ವಿಚಾರವಾಗಿ ಮಾತನಾಡಿದ್ದೇನೆ. ರಾಜ್ಯದಲ್ಲಿ ನಮ್ಮ ಪಕ್ಷದ ನೇತೃತ್ವದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ, ಮಾನ್ಯ ಮುಖ್ಯಮಂತ್ರಿಗಳೇ ಮಾದಕ ವ್ಯಸನಿಗಳ ಮತ್ತು ಡ್ರಗ್ಸ್ ವಿರೋಧವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ; ನಮ್ಮ ರಾಜ್ಯವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆ ಎಂಬ ಘೋಷಣೆ ಮಾಡಿದ್ದರು. ಸದಸ್ಯರು ಕಾಲೇಜು ವಿದ್ಯಾರ್ಥಿಗಳ ಬಗ್ಗೆ ವಿಶೇಷವಾಗಿ ಪ್ರಶ್ನೆಗಳನ್ನು ಕೇಳಿದ್ದಾರೆ. ರಾಜ್ಯದಲ್ಲಿ ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ದಾಖಲಾಗಿರುವ ಪ್ರಕರಣಗಳೆಷ್ಟು ಮತ್ತು ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಆಗಿದೆ; ಇವುಗಳ ಸಂಪೂರ್ಣ ವಿವರಗಳನ್ನು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಪೂರ್ಣ ಎರಡು ವರ್ಷಗಳ ಹಾಗೂ ಪ್ರಸಕ್ತ ಸಾಲಿನಲ್ಲಿನ ಇಲ್ಲಿಯವರೆಗಿನ ಮಾಹಿತಿಯನ್ನು ನೀಡಲಾಗಿದೆ. 2022 ನೇ ಸಾಲಿನಲ್ಲಿ 6,406 ಪ್ರಕರಣಗಳು; 2023 ನೇ ಸಾಲಿನಲ್ಲಿ 6,764 ಪ್ರಕರಣಗಳು ಮತ್ತು ಪ್ರಸಕ್ತ ವರ್ಷದಲ್ಲಿ ಜುಲೈ 10 ನೇ ತಾರೀಖಿನವರೆಗೆ 1,791 ಪ್ರಕರಣಗಳು ದಾಖಲಾಗಿವೆ. ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳ ಬಗ್ಗೆ ಹೇಳುವುದಾದರೆ, 2022 ನೇ ಸಾಲಿನಲ್ಲಿ 3,881; 2023

ನೇ ಸಾಲಿನಲ್ಲಿ 4,187 ಮತ್ತು 2024 ನೇ ಸಾಲಿನಲ್ಲಿ ಜುಲೈ 10 ನೇ ತಾರೀಖಿನವರೆಗೆ 884 ಪ್ರಕರಣಗಳು ವಿಚಾರಣೆಯಲ್ಲಿವೆ. ಶಿಕ್ಷೆಯಾಗಿರುವ ಪ್ರಕರಣಗಳ ಬಗ್ಗೆ ಹೇಳುವುದಾದರೆ, 2022 ನೇ ಸಾಲಿನಲ್ಲಿ 2,365; 2023 ನೇ ಸಾಲಿನಲ್ಲಿ 2,280 ಮತ್ತು 2024 ನೇ ಸಾಲಿನಲ್ಲಿ ಇಲ್ಲಿಯವರೆಗೆ 189 ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ. ಮುಂದುವರೆದು, ಎನ್.ಡಿ.ಪಿ.ಎಸ್. ಕಾಯ್ದೆ 1985 ರಡಿ ಬಂಧಿಸಲಾಗಿರುವ ಆರೋಪಿಗಳ ಸಂಖ್ಯೆಯ ಬಗ್ಗೆ ಮಾಹಿತಿ ನೀಡುವುದಾದರೆ, 2022 ನೇ ಸಾಲಿನಲ್ಲಿ 6,164, 2023 ನೇ ಸಾಲಿನಲ್ಲಿ 6,267 ಮತ್ತು 10 ನೇ ಜುಲೈ 2024 ರ ವರೆಗೆ 1,179 ಆರೋಪಿತರುಗಳನ್ನು ಬಂಧಿಸಲಾಗಿದೆ. ಸರ್ಕಾರವು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ವಿದ್ಯಾರ್ಥಿಗಳಿಗೆ ಇದರ ಬಗ್ಗೆ ಜಾಗೃತಿಯನ್ನು ಮೂಡಿಸಬೇಕು. ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳನ್ನು ಸರಬರಾಜು ಮಾಡುವ ಪೆಡ್ಲರ್‌ಗಳನ್ನು ದಸ್ತಗಿರಿ ಮಾಡಿ, ಅವರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಇದರ ಜೊತೆಗೆ, ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳಿಗೆ ಶಾಲಾ-ಕಾಲೇಜುಗಳಲ್ಲಿ ಜಾಗೃತಿಯನ್ನು ಮೂಡಿಸಬೇಕೆಂದು ನಾವು ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಪೈಕಿ 2,409 ಶಾಲಾ-ಕಾಲೇಜುಗಳಲ್ಲಿ ಸುಮಾರು 3,95,253 ವಿದ್ಯಾರ್ಥಿಗಳಿಗೆ ಕಳೆದ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ಕಾರ್ಯಕ್ರಮ ಮಾಡಿ, ಬೋಧನೆ ನೀಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ, ಸುಮಾರು 3,602 ಶಾಲಾ ಕಾಲೇಜುಗಳಲ್ಲಿ 5.5 ಲಕ್ಷ ವಿದ್ಯಾರ್ಥಿಗಳಿಗೆ ನಾವು ಜಾಗೃತಿಯನ್ನು ಮೂಡಿಸಿದ್ದೇವೆ. ಕಳೆದ ತಿಂಗಳಿನಲ್ಲಿ ಅಂದರೆ, 26 ನೇ ಜೂನ್ 2024 ರಂದು ಸುಮಾರು 4,000 ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಬೆಂಗಳೂರು ನಗರದಲ್ಲಿ ಕಾರ್ಯಕ್ರಮ ಮಾಡಿ ಬೋಧನೆ ನೀಡಲಾಗಿದೆ. ಇಡೀ ರಾಜ್ಯದಲ್ಲಿಯೇ ಸುಮಾರು 5 ಲಕ್ಷ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಯಾವುದೇ ಕಾರಣಕ್ಕೂ ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳಿಗೆ ಡ್ರಗ್ಸ್ ದೊರೆಯಬಾರದು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಮತ್ತೊಂದೆಡೆ, ಅವರುಗಳಿಗೆ ಈ ಬಗ್ಗೆ ಜಾಗೃತಿಯನ್ನು ಮೂಡಿಸಿದರೆ, ಅವರುಗಳು ಡ್ರಗ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಾರೆ ಅಥವಾ ತೆಗೆದುಕೊಳ್ಳುವುದನ್ನು ನಿಲ್ಲಿಸುತ್ತಾರೆ. ಈ ಉದ್ದೇಶದಿಂದಲೇ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಆಶ್ಚರ್ಯದ ಸಂಗತಿ ಏನೆಂದರೆ, ವರ್ಷಕ್ಕೆ ಸುಮಾರು 10 ಟನ್ ಗಾಂಜಾವನ್ನು ಸುಟ್ಟು ಹಾಕಲಾಗುತ್ತದೆ. 250-400 ಕೆ.ಜಿ.ಯಷ್ಟು MDMA (Methylenedioxy-Methamphetamine) ಎಂಬ synthetic drugs ಬರುತ್ತದೆ. ಇದನ್ನೂ ಸಹ ಸುಟ್ಟು ಹಾಕಿದ್ದೇವೆ. ಮೊನ್ನೆಯ ದಿನ ನಾನೇ ಕಾರ್ಯಕ್ರಮವೊಂದರಲ್ಲಿ ಸುಟ್ಟು ಹಾಕಿದ್ದೇನೆ. ಡಾಬಸ್‌ಪೇಟೆಯ ಹತ್ತಿರ incinerator ಇದೆ. ಅಲ್ಲಿ ನನ್ನ ಕೈಯಿಂದಲೇ ಆ ಡ್ರಗ್ಸ್‌ನ ಮೂಟೆಗಳನ್ನು ಬೆಂಕಿಗೆ ಹಾಕಿಸಿದರು. ಸುಮಾರು 150 ಕೋಟಿ ರೂಪಾಯಿ ಮೌಲ್ಯದ ಡ್ರಗ್ಸ್‌ನ್ನು ಇತ್ತೀಚೆಗೆ ಸುಟ್ಟು ಹಾಕಲಾಯಿತು. ಇದು ನಿರಂತರವಾದ ಹೋರಾಟವಾಗಿದೆ. ಏಕೆಂದರೆ, ನಮ್ಮ ಬಹಳಷ್ಟು ಯುವಕರು ಇದರಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿದ್ದಾರೆ. ವಿದೇಶಗಳಿಂದ ಬರುವ ಅನೇಕ ವಿದ್ಯಾರ್ಥಿಗಳು ಇದರಲ್ಲಿ

ಭಾಗಿಯಾಗಿದ್ದಾರೆ. ಏಕೆಂದರೆ, ಅವರುಗಳು Student Visa ಮೂಲಕ ನಮ್ಮ ದೇಶಕ್ಕೆ ಅಧ್ಯಯನಕ್ಕೆಂದು ಬರುತ್ತಾರೆ. ಹೀಗೆ ನಮ್ಮ ದೇಶಕ್ಕೆ ಬಂದವರ Student Visa ಅವಧಿ ಪೂರ್ಣಗೊಂಡಿದ್ದರೂ ಸಹ ನಮ್ಮಲ್ಲಿಯೇ ಉಳಿದುಕೊಳ್ಳುತ್ತಾರೆ. ಅವರಿಗೆ ಅಧ್ಯಯನ, ಪದವಿ ಯಾವುದೂ ಬೇಕಾಗಿಲ್ಲ; ಅವರುಗಳು ಈ ರೀತಿಯ ದಂಧೆಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇಂತಹವರ ಪೈಕಿ ಸುಮಾರು 150 ವಿದೇಶಿ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿ, ಅವರುಗಳ ದೇಶಕ್ಕೆ ವಾಪಸ್ಸು ಕಳುಹಿಸುವ ಕೆಲಸವನ್ನು ಮಾಡಿದ್ದೇವೆ. ಈ ಕೆಲಸವೂ ಸಹ ನಿರಂತರವಾಗಿ ಆಗುತ್ತಿದೆ. ಏಕೆಂದರೆ, ಅವರುಗಳೆಲ್ಲರೂ ಈ ದುಷ್ಕೃತ್ಯದಲ್ಲಿ ಭಾಗಿಯಾದರೆ, ಅವರುಗಳೇ ಡ್ರಗ್ಸ್ ಪೆಡ್ಲರ್‌ಗಳಾಗಿ, ಡ್ರಗ್ಸ್‌ನ್ನು ಸರಬರಾಜು ಮಾಡುತ್ತಾರೆ. ಹೀಗಾಗಿ ಇವರುಗಳ ಮೇಲೆಯೂ ಸಹ ನಿಗಾ ವಹಿಸಲಾಗಿದೆ. ಯಾರು ಇಂತಹ ಕೃತ್ಯಗಳಲ್ಲಿ ಭಾಗಿಯಾಗುತ್ತಾರೋ, ಅವರುಗಳ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ, ಇಲಾಖೆಯಲ್ಲಿ ಅಪರ ಪೊಲೀಸ್ ಮಹಾ ನಿರೀಕ್ಷಕರ ಹುದ್ದೆಯ ಒಂದು vertical ಅನ್ನು ಸೃಜಿಸಿ, ಈ ವಿಚಾರದಲ್ಲಿ ಬಹಳ ಗಂಭೀರವಾದ ಕ್ರಮವನ್ನು ವಹಿಸಲಾಗುತ್ತದೆ. ನಾನು ಈಗಾಗಲೇ 43 CEN (Cybercrime, Economic offences, Narcotics) Police Station ಗಳನ್ನು ಸ್ಥಾಪಿಸಿದ್ದೇವೆ. ಈ ಮೊದಲು ಕೇವಲ ಒಂದೇ ಒಂದು CEN ಪೊಲೀಸ್ ಠಾಣೆ ಬೆಂಗಳೂರು ನಗರದಲ್ಲಿ ಮಾತ್ರವೇ ಕಾರ್ಯನಿರ್ವಹಿಸುತ್ತಿತ್ತು. ಆದರೆ, ಈಗ ಜಿಲ್ಲೆಗೊಂದರಂತೆ ಪೊಲೀಸ್ ಠಾಣೆಗಳನ್ನು ಇದಕ್ಕಾಗಿಯೇ ಮಾಡಿದ್ದೇವೆ.

(ಮುಂದು)

(512) 18-07-2024/11-10/BKP-VK (ಸಭಾಪತಿಯವರು ಉಪಸ್ಥಿತಿ)

**ಡಾ॥ ಧನಂಜಯ ಸರ್ಜಿ(ಮುಂದು):**

ಪಿಎಚ್‌ಸಿಗಳಲ್ಲಿ ಮತ್ತು CHC ಗಳಲ್ಲಿ testing kits ಅನ್ನು ಇಡಬೇಕೆಂದು ಮಾನ್ಯ ಸಚಿವರಿಗೆ ನಾನು ವಿನಂತಿಯನ್ನು ಮಾಡುತ್ತೇನೆ. ಜೊತೆಗೆ ಇನ್ನೊಂದು ವಿಶೇಷವೆಂದರೆ ಕೊರಿಯರ್ ಮೂಲಕವೂ ಕೂಡ ಡ್ರಗ್ಸ್ ಬರುತ್ತಿದೆ. Dark web ಎಂದು ಹೇಳಿ ಬರುತ್ತಿದೆ. ಅಲ್ಲಿಂದ ಅದು ಹೇಗೆ ಹೇಗೆ ಬರುತ್ತದೋ, ಅದು ಹೇಗೆ connect ಆಗುತ್ತದೋ ಗೊತ್ತಿಲ್ಲ. ಪ್ಲಾಸ್ಟಿಕ್ ಉಪಯೋಗ ಮಾಡಬಾರದು, ಅದನ್ನು ಬ್ಯಾನ್ ಮಾಡಬೇಕೆಂದು ಎಂದು ನಾವೆಲ್ಲರೂ ಹೇಳುತ್ತೇವೆ. ಆದರೆ, ಪ್ಲಾಸ್ಟಿಕ್ ಅನ್ನು ಬ್ಯಾನ್ ಮಾಡದೆ, plastic utilization ಕಡಿಮೆ ಆಗುವುದಿಲ್ಲ. ಇದನ್ನು ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕು. ಮತ್ತೆ dark web ಬಗ್ಗೆ ನನಗೆ ಮಾಹಿತಿ ಬೇಕಾಗುತ್ತದೆ. 3ನೇ ಪ್ರಶ್ನೆಗೆ ಮಾನ್ಯ ಸಚಿವರು ಹೇಳಿದ್ದಾರೆ, ಎಷ್ಟೊಂದು ಕಾಲೇಜುಗಳಲ್ಲಿ videos ಗಳು ವೈರಲ್ ಆಗಿವೆ, ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡು ಅಮಲಿನಲ್ಲಿ ಓಡಾಡುವಂತಹದ್ದು ಇದೆ. ಅದು ಫೇಸ್ ಬುಕ್‌ನಲ್ಲಿ ಯೂಟ್ಯೂಬ್‌ನಲ್ಲಿ ಎಲ್ಲವೂ ವೈರಲ್ ಆಗಿದೆ. ಆದರೆ ಈ ನಶಾ ಮುಕ್ತ ಭಾರತ ಅಭಿಯಾನದಲ್ಲಿ 8 ಸಾವಿರ Master Volunteer ಅನ್ನು preparation ಮಾಡಲಾಗಿದೆ. ಇನ್ನು 272 ಜಿಲ್ಲೆಗಳಲ್ಲಿ ಈ ಅಭಿಯಾನ ಆಗಿದೆ ಎಂದು ಉಲ್ಲೇಖವಾಗಿದೆ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಜಿಲ್ಲೆಗಳನ್ನು

ಮಾಡಿಕೊಳ್ಳಲಾಗಿದೆ? ಕೊನೆಯದಾಗಿ, De-addiction Center ಇದೆ ಎಂದು ನನಗೆ ಮಾಹಿತಿಯನ್ನು ಕೊಟ್ಟರು. Ladies de-addiction center ಎಷ್ಟಿದೆ ಎನ್ನುವುದರ ಬಗ್ಗೆ ಕೊಟ್ಟರು. ಅವರಿಗೆ ಪ್ರತ್ಯೇಕವಾಗಿ De-addiction Center ಅನ್ನು ಮಾಡುವುದು ಉಚಿತವೆಂದು ನನ್ನ ಸಲಹೆಯಾಗಿದೆ.

**ಶ್ರೀ ಜಿ. ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ನಾವು 268 rehabilitation centers ಅನ್ನು ಇಡೀ ರಾಜ್ಯದಲ್ಲಿ ಮಾಡಿದ್ದೇವೆ. ಅದರಲ್ಲಿ ಮಹಿಳೆಯರಿಗೆ ಪ್ರತ್ಯೇಕವಾಗಿ ಸೌಲಭ್ಯಗಳನ್ನು ಮಾಡಿದ್ದೇವೆ. ಪ್ರತ್ಯೇಕವಾಗಿ ಮಹಿಳೆಯರಿಗೆಂದು separate rehabilitation centers ಇರುವುದಿಲ್ಲ. ಇರುವಂತಹ rehabilitation centers ಗಳಲ್ಲಿಯೇ ಮಹಿಳೆಯರಿಗೂ ಕೂಡ ಅವರಿಗೆ ಚಿಕಿತ್ಸೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಜೊತೆಗೆ ಈ ಎನ್‌ಜಿಓ.ಗಳು, private players, ಸರ್ಕಾರದ ಜೊತೆಗೆ ಅವರೂ ಕೂಡ ಬೇಕಾದಷ್ಟು ಕೈಜೋಡಿಸುತ್ತಿದ್ದಾರೆ. ತಾವು ಹೇಳಿದ ಹಾಗೆ ನಮ್ಮ ಪೋಸ್ಟಲ್‌ನಲ್ಲಿ, ಪಾರ್ಸಲ್‌ನಲ್ಲಿ ಇವುಗಳಲ್ಲಿ ಎಲ್ಲಾ ಕಳುಹಿಸುತ್ತಿದ್ದಾರೆ. ಅದಕ್ಕೆಲ್ಲಾ ನಾವು ಕಣ್ಣು ಇಟ್ಟಿದ್ದೇವೆ. ಅದನ್ನು ಏನೂ ignore ಮಾಡಿಲ್ಲ. ಅಮೇಲೆ Drugs-Free Karnataka ಎಂದು ಹೇಳಿ application ಮಾಡಿದ್ದೇವೆ. ಯಾರಾದರೂ ಕೂಡ ಮಾಹಿತಿ ಸಿಕ್ಕಿದರೆ ಅದರಲ್ಲಿ ಮಾಹಿತಿಯನ್ನು ಪೋಲೀಸ್‌ನವರಿಗೆ ತತಕ್ಷಣ ಕೊಡತಕ್ಕಂತಹ ವ್ಯವಸ್ಥೆ ಕೂಡ ಇದೆ. ಅಮೇಲೆ ಇದೆಲ್ಲವನ್ನೂ ಕೂಡ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಇದನ್ನು ನಾವು ಸುಲಭವಾಗಿ ಬಿಡುವುದಿಲ್ಲ. ಹಿಂದೆಯೂ ಕೂಡ ಈ ಬಗ್ಗೆ ಅನೇಕ ಬಾರಿ ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ. ಯಾರೋ ಒಬ್ಬರು ಹೇಳಿದ್ದರೂ 'Udta Bangalore' ಆಗುತ್ತಿದೆ ಎಂದು ಹೇಳಿದ್ದರು. ಅದು ಆಗುವುದಕ್ಕೆ ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಕರ್ನಾಟಕವನ್ನು 'Udta Karnataka' ಆಗುವುದಕ್ಕೆ ಬಿಡುವುದಿಲ್ಲ ಎನ್ನತಕ್ಕಂತಹ ಕಠಿಣವಾದ ಹೇಳಿಕೆಯನ್ನು ನಾನು ಕೊಟ್ಟಿದ್ದೇನೆ. ಅದನ್ನು ನಾನು ಪುನಃ ಉಚ್ಚರಿಸುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:-** ನೀವು ಸರ್ಕಾರಿ ಮುಖ್ಯ ಸಚೇತಕರಿದ್ದು, ಪ್ರತಿಯೊಂದಕ್ಕೂ ಎದ್ದು ನಿಂತು ಮಾತನಾಡಿದರೆ ಹೇಗೆ? ನೀವು ತಿಳಿದುಕೊಳ್ಳಬೇಕು.

**ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇದರಲ್ಲಿ ಪೋಲೀಸ್ ಇಲಾಖೆಯವರು ಭಾಗಿಯಾಗಿರುತ್ತಾರೆ, ಅವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಅವರ ಮೂಗಿನ ಮೇಲೆಯೇ ಅವರ ಸ್ಟೇಷನ್‌ಗಳಲ್ಲಿ .....

**ಡಾ|| ಜಿ. ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಇಷ್ಟೊಂದು ಸಂಖ್ಯೆಯಲ್ಲಿ ಮತ್ತು ಇಷ್ಟೊಂದು ಪ್ರಮಾಣದಲ್ಲಿ ನಾವು ಈ ಡ್ರಗ್ಸ್ ಅನ್ನು ಹಿಡಿದಿದ್ದೇವೆ. ಅದನ್ನು ಸುಟ್ಟು ಹಾಕಿದ್ದೇವೆ. ಸಾವಿರಾರು

ಪ್ರಕರಣಗಳನ್ನು ಬುಕ್ ಮಾಡಿ, ಅವರನ್ನು ಅರೆಸ್ಟ್ ಮಾಡಿ, ಅವರ ಮೇಲೆ ಕಠಿಣವಾದಂತಹ ಕ್ರಮಗಳನ್ನೂ ಸಹ ತೆಗೆದುಕೊಳ್ಳುತ್ತಿದ್ದೇವೆ. ಒಂದು ವೇಳೆ ಯಾರಾದರೂ ಪೊಲೀಸ್ ಇಲಾಖೆಯಲ್ಲಿ ಒಬ್ಬರು ಇಬ್ಬರು ಪೊಲೀಸ್‌ನವರು ಇದರಲ್ಲಿ ಭಾಗಿಯಾಗಿದ್ದರೆ ಅವರನ್ನು ಮುಲಾಜಿಲ್ಲದೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 343**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ನಮಗೆ ಆದಾಯ ಮೂಲ ಇರತಕ್ಕಂತಹ ಜಿಎಸ್‌ಟಿ ಒಳಗಡೆ ಅವರು ಉತ್ತರ ಕೊಟ್ಟಿರುವಂತಹದ್ದು 2023-24 ಮತ್ತು 2024-25ನೇ ಸಾಲಿಗೆ ಸಂಬಂಧಿಸಿದಂತೆ ಕೇಳಿರುವಂತಹ ಪ್ರಶ್ನೆಗೆ CTD (Commercial Tax Department) ಎಲ್ಲಾ ಜಾರಿ ವಿಭಾಗಗಳಿಂದ 2022-23, 2023-24 ಜೂನ್ 30 ರವರೆಗೆ ಸಂಗ್ರಹಿಸಿದ ಆದಾಯ ಮೊತ್ತ ಎಷ್ಟು ಎಂದು ಕೇಳಲಾಗಿತ್ತು. 2023-24 ಕ್ಕೆ ರೂ. 4774 ಕೋಟಿಗಳು ಮತ್ತು 2024-25 ಜೂನ್ 30 ರವರೆಗೆ ರೂ. 1557 ಕೋಟಿಗಳು. Year end ಯಾವಾಗ? ಮತ್ತೆ 2022-23 ರಲ್ಲಿ ರೂ. 3194 ಕೋಟಿಗಳು. 2023-24ಕ್ಕೆ ಡಬಲ್‌ಗಿಂತ ಜಾಸ್ತಿಯಾಗಿದ್ದು, ನಿಮ್ಮನ್ನು ಶ್ಲಾಘನೆ ಮಾಡುತ್ತೇನೆ. 2024-25 ಕ್ಕೆ 2538 ಕೋಟಿ ರೂಪಾಯಿಗಳು, ಅದು ಜೂನ್‌ವರೆಗೆ ಅನ್ವಯಿಸುತ್ತದೆ. ಮತ್ತೆ ಸಂಗ್ರಹಿಸಲಾದ ವಂಚಿಸಿದ ತೆರಿಗೆ ಮೊತ್ತ 2023-24 ಮತ್ತು 2024-25ರವರೆಗೆ ಸುಮಾರು ರೂ. 5 ಕೋಟಿಗೂ ಸ್ವಲ್ಪ ಹೆಚ್ಚು ಕಡಿಮೆ ಇದೆ. ಇದನ್ನು ಯಾವಾಗ ವಸೂಲಿ ಮಾಡುತ್ತೀರಿ? ರೂ. 4774 ಕೋಟಿ ಮತ್ತು ವಂಚಿಸಿದ ತೆರಿಗೆ ಎಂದು ಹೇಳಿದರೆ ನಿಮ್ಮಲ್ಲಿ 13 ಡಿವಿಷನ್‌ಗಳಿವೆ. 13 ಡಿವಿಷನ್‌ಗಳಲ್ಲಿ ಬೆಂಗಳೂರು ಒಂದು ವಿಭಾಗದಲ್ಲಿ 6 ಜಾರಿ ವಿಭಾಗಗಳಿವೆ. ಇನ್ನುಳಿದ 7 ವಿಭಾಗಗಳು ಇಡೀ ರಾಜ್ಯದಲ್ಲಿ ಬರತಕ್ಕಂತಹ ಮೈಸೂರು, ಶಿವಮೊಗ್ಗ, ಬಳ್ಳಾರಿ, ಮಂಗಳೂರು, ಗುಲ್ಬರ್ಗ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇವೆ. ಇದರಲ್ಲಿ 13 ವಿಭಾಗಗಳು ಬೆಂಗಳೂರು ಒಂದರಲ್ಲಿಯೇ 6 ವಿಭಾಗಗಳಿವೆ. ಈ 6 ವಿಭಾಗಕ್ಕೆ ಒಬ್ಬರೇ ಐಎಎಸ್ ಅಧಿಕಾರಿ ಇರುತ್ತಾರೆ. ಬೇರೆ ಜಿಲ್ಲೆಗಳಲ್ಲಿನ ವಿಭಾಗಗಳಲ್ಲಿ ಮಾಡಿದ ರೀತ್ಯಾ ಒಂದೊಂದನ್ನು ಪ್ರತ್ಯೇಕ ಮಾಡಿದರೆ ಈ 6 ವಿಭಾಗಕ್ಕೆ ಒಬ್ಬರೆ ಐಎಎಸ್ ಅಧಿಕಾರಿಗಳನ್ನು ಹಾಕುತ್ತಿದ್ದೀರಿ. ಅದರಲ್ಲೂ ಎಂತಹ ಐಎಎಸ್ ಅಧಿಕಾರಿಯನ್ನು ಹಾಕುತ್ತೀರಿ ಎಂದರೆ ಹೊಸದಾಗಿ ಬಂದವರಿಗೆ ಈ ವಿಚಾರದಲ್ಲಿ ಎ,ಬಿ,ಸಿ,ಡಿ ಜ್ಞಾನಶಕ್ತಿ ಇರುವುದಿಲ್ಲ. ಅವರಿಗೆ ಬೇರೆ ಜ್ಞಾನ ಎಲ್ಲವೂ ಇದೆ. ಅದರ ಬಗ್ಗೆ I am not going to comment. ಅವರು ದೊಡ್ಡ ಶಕ್ತಿಯಿಂದ ಐಎಎಸ್ ಮಾಡಿಕೊಂಡು ಬಂದಿರುತ್ತಾರೆ.

**ಸಭಾಪತಿಯವರು:-** ಭಾಷಣ ಮಾಡಬೇಡಿ, ನೀವು ಪ್ರಶ್ನೆಯನ್ನು ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಂತಹವರನ್ನು rehabilitation center ರೀತ್ಯಾ 3 ತಿಂಗಳಿಗೊಮ್ಮೆ ಮಾಡಿಕೊಂಡು ನೀವು ಇಲ್ಲಿ ಮಾಡಿಕೊಂಡು ಬೆಂಗಳೂರಿಗೆ ಅವರುಗಳನ್ನು ತೆಗೆದುಕೊಂಡು ಬಂದು ಇಟ್ಟು ಮತ್ತೆ ಇನ್ನು 3 ತಿಂಗಳು, 6 ತಿಂಗಳಾದ ನಂತರ

ಇನ್ನೊಂದು ಜಿಲ್ಲೆಗೆ ಐ.ಎ.ಎಸ್. ಅಧಿಕಾರಿಗಳನ್ನು ಕಳುಹಿಸಲಿಕ್ಕೋಸ್ಕರ rehabilitation center ಮಾಡಿರುತ್ತಾರೆ. ದಯವಿಟ್ಟು ಸೆಂಟರ್ ಮಾಡಬೇಡಿ. ವಸೂಲಿ ಮಾಡತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ. ನಾನು ಒಬ್ಬ ಪ್ರಮುಖ ಅಡಿಕೆ ಬೆಳೆಗಾರ ಬೀರೂರು ಮಾರುಕಟ್ಟೆ ಇಲ್ಲವೆಂದು ಸಾಗರ ಮಾರುಕಟ್ಟೆಯಿಂದ ಶಿವಮೊಗ್ಗ ಮಾರುಕಟ್ಟೆಯಲ್ಲಿ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಯುತ್ತದೆ. ರೈತರಿಂದ ಏನೂ ತೊಂದರೆಯಾಗುವುದಿಲ್ಲ. ಆದರೆ ನೀವು ಜಿಎಸ್‌ಟಿ ಸಂಗ್ರಹ ಮಾಡಬೇಕಾದರೆ ಅಡಿಕೆ-ಗುಡ್ಕಾ ವಿಚಾರದಲ್ಲಿ ? ಒಬ್ಬೊಬ್ಬ ವ್ಯಾಪಾರಿಗೆ 4-4 chartered flights ಇವೆ. 5-5 helicopters ಗಳವೆ. ಅವರಿಗೆ ಅದೆಲ್ಲಾ ಹೇಗೆ ಬಂತು? ಒಬ್ಬೊಬ್ಬ ಗುಟ್ಕಾ ವ್ಯಾಪಾರಿ ದೊಡ್ಡ ದೊಡ್ಡ ಶ್ರೀಮಂತರಾಗುವುದಕ್ಕೆ ಕಾರಣ ಯಾರು? ಹಾಗಾದರೆ ಗುಟ್ಕಾದಿಂದ ಎಷ್ಟು ಲಾಭ ಇದೆ? ನೀವು ಎಷ್ಟು ತೆರಿಗೆಯನ್ನು ವಸೂಲಿ ಮಾಡಿದ್ದೀರಿ? ಮತ್ತೆ ನಿಮ್ಮಲ್ಲಿ ಸ್ಥಳೀಯವಾಗಿ ಜಿಎಸ್‌ಟಿ ಅಧಿಕಾರಿಗಳಿದ್ದಾರೆ. ಆತ ಅಲ್ಲಿಗೆ ನೇಮಕವಾಗಿ 14 ವರ್ಷಗಳು ಆಗಿವೆ. 12 ವರ್ಷಗಳ ಕಾಲ ಅಬಕಾರಿ ಇಲಾಖೆಯಲ್ಲಿ ಜಿಲ್ಲಾ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಆ ಲೋಕಲ್ ಜಿಎಸ್‌ಟಿ ಅಧಿಕಾರಿಗಳಿಗೆ ಇಲ್ಲಿಂದ ಸಂಬಳ ಕೊಟ್ಟು ಇಟ್ಟ ಮೇಲೆ ಮತ್ತೆ ಏತಕ್ಕೆ ಹುಡುಕುವುದಕ್ಕೆ ಅವನ ಹಿಂದುಗಡೆ ಮತ್ತೊಬ್ಬ ಇರುತ್ತಾನೆ? ಆ ಲೋಕಲ್‌ನಲ್ಲಿ ಯಾರು ಮಾಡಿದ್ದಾನೆ, ಅವನ ಕೆಲಸ ಏನು? ಇದುವರೆಗೂ ಒಬ್ಬ ಅಧಿಕಾರಿಗೂ ಶಿಕ್ಷೆಯಾಗಿಲ್ಲ. ತೆರಿಗೆ ವಂಚನೆ ಮಾಡಿದವರನ್ನು ಅಲ್ಲಿಯೇ ಇಟ್ಟಿದ್ದೀರಿ. 6,000 ಕೋಟಿಗೂ ಹೆಚ್ಚು ಹಣವನ್ನು ಸಂಗ್ರಹ ಮಾಡಿದ್ದೀರಿ. ತೆರಿಗೆ ಹಣವನ್ನು ಸಂಗ್ರಹವನ್ನು ಮಾಡುವಲ್ಲಿ ಏತಕ್ಕೆ ವಿಳಂಬ ಆಯಿತು ಎನ್ನುವ ಬಗ್ಗೆ ಯಾವ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ಅವರು ಕೇಳಿರುವಂತಹ ರೀತಿಯಲ್ಲಿ ವಿವರವಾದ ರೀತಿಯಲ್ಲಿಯೇ ಉತ್ತರವನ್ನು ಕೊಟ್ಟಿದ್ದೇವೆ. ಈಗ 2024-25 ರಲ್ಲಿ ಜೂನ್‌ವರೆಗೂ ಮಾಹಿತಿ ಇದೆ. 2025ಕ್ಕೆ ಇನ್ನೂ 6 ತಿಂಗಳು ಸಮಯ ಇದೆ. ರೂ. 1,557 ಕೋಟಿಗಳು ಏನಿದೆ, ಅದಕ್ಕೆ ಇನ್ನೂ 6 ತಿಂಗಳ ಸಮಯ ಇದೆ. 2023-24ನೇ ಸಾಲಿಗೆ ನೀವು comparison ಮಾಡಿದರಲ್ಲಾ, ಅದಕ್ಕೆ ಹೇಳಿದೆ. ಈಗ ಜೂನ್‌ವರೆಗೆ ಆದಂತಹ ಮಾಹಿತಿಯನ್ನು ಕೊಡಲಾಗಿತ್ತು . ಹೀಗಾಗಿ, ಇದಕ್ಕೆ ಇನ್ನು 6 ತಿಂಗಳ ಸಮಯ ಇದೆ. ಉಳಿದಂತಹವುಗಳಿಗೆ ತಾವು ಹೇಳಿರುವಂತಹ ಪ್ರಶ್ನೆಗಳಲ್ಲಿ ಎಲ್ಲಕ್ಕೂ ಉತ್ತರವನ್ನು ಕೊಟ್ಟಿದ್ದೇವೆ. ಈ ಸಂಬಂಧ ತಾವು ಕೆಲವು ವಿಷಯಗಳನ್ನು ಹೇಳಿದ್ದೀರಿ. ಶಿವಮೊಗ್ಗ ವಿಷಯದಲ್ಲಿ ಅಡಿಕೆ ಬಗ್ಗೆ ಹೇಳಿದ್ದೀರಿ. ತಾವು ಹೇಳಿರುವಂತಹ ವಿಷಯಗಳ ಬಗ್ಗೆ ನಮ್ಮ ಎಲ್ಲಾ ಅಧಿಕಾರಿಗಳ ಗಮನಕ್ಕೆ ತಂದು ಅವರು ಏನೇನು ಕ್ರಮ ತೆಗೆದುಕೊಂಡಿದ್ದಾರೆ, ಏನೇನು ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ತಮ್ಮ ಸಲಹೆಗಳೊಂದಿಗೆ ಅವರಿಗೆ ಮಾಹಿತಿಯನ್ನು ಕೊಟ್ಟು, ಆ

ದಿಸೆಯಲ್ಲಿ ತೆರಿಗೆ ಸಂಗ್ರಹಿಸುವಂತಹ ಒಂದು ಪ್ರಯತ್ನವನ್ನು ಮಾಡೋಣ. ಇವತ್ತು ಇಡೀ ದೇಶದ growth rate 12 percent ಇದೆ. ಕರ್ನಾಟಕದಲ್ಲಿ 18 percent ಇದೆ. ಹೀಗಾಗಿ ನಮ್ಮವರು ಬಹಳ ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

(ಮುಂದು)

(513) 18.07.2024 11.20 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ:-** ಸಂಗ್ರಹಿಸದ ತೆರಿಗೆ ವಂಚಕರ, ಕಳ್ಳತನ ಮಾಡದವರ, ಆ ರೀತಿ ವಸೂಲಿ ಮಾಡದಂತಹ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಇದು ಕೇವಲ ನಾನು ಹೇಳುವುದಿಲ್ಲ, ಬೇಕಾದರೆ ನೀವು ಅಧಿಕಾರಿಗಳನ್ನು ಕೇಳಿ. ಹಿಂದೂಪುರಕ್ಕೆ ಒಂದು ದಿನಕ್ಕೆ ಸುಮಾರು 500 ಟ್ರಕ್ ಲೋಡ್ scrap ಹೋಗುತ್ತದೆ. ಅಲ್ಲಿಂದ ಮಹಾರಾಷ್ಟ್ರಕ್ಕೆ ಹೋಗಿ, ಪುನಃ ಅಲ್ಲಿಂದ 300 ಲೋಡ್ ಟಿ.ಎಂ.ಟಿ. ಸ್ಟೀಲ್ ನಮ್ಮ ಬೆಂಗಳೂರಿಗೆ ವ್ಯಾಪಾರಕ್ಕಾಗಿ ಬರುತ್ತದೆ. ಹೋಗುವುದಕ್ಕೆ ಎಷ್ಟು ವಸೂಲು ಮಾಡಿದ್ದೀರಿ. ಬರುವುದಕ್ಕೆ ಎಷ್ಟು ವಸೂಲು ಮಾಡಿದ್ದೀರಿ ಈ ಅಂಶಗಳು ಬಹಳ ಗಂಭೀರವಾದವು. ನಮ್ಮ ಅಧಿಕಾರಿಗಳು ಈ ಕೆಲಸವನ್ನು ಸರಿಯಾಗಿ ಮಾಡದಿರುವುದರಿಂದ ಪ್ರತಿದಿನ ಕನಿಷ್ಠ ರೂ. 8-10 ಕೋಟಿಗಳ ನಷ್ಟ ಸರ್ಕಾರಕ್ಕೆ ಆಗುತ್ತಿದೆ.

**ಸಭಾಪತಿಯವರು:-** ಸರಿ, ಇದು ಪ್ರಶ್ನೋತ್ತರ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಸರಿ ಎನ್ನುವುದಲ್ಲ, ಸರ್ಕಾರ ಕ್ರಮ ಕೈಗೊಳ್ಳಬೇಕಲ್ಲವೆ?

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ನೀವು ಕುಳಿತುಕೊಳ್ಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಅನುಭವದಿಂದ practical ಆಗಿ ಹೇಳುತ್ತಿದ್ದಾರೆ. ನಮ್ಮ ಜವಾಬ್ದಾರಿಯುತ ಅಧಿಕಾರಿಗಳು ಇಲ್ಲಿಯೇ ಇದ್ದು, ಅವರೂ ಸಹ ಗಮನಿಸಿದ್ದಾರೆ. ಆ ರೀತಿಯಾಗಿರತಕ್ಕಂತಹ loopholes ಗಳೇನೇ ಇದ್ದರೂ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾನಾಯಕರೇ, ಒಳ್ಳೆಯ ಅಧಿಕಾರಿಗಳು ಮೇಲೆ ಇದ್ದಾರೆ. ಕೆಳಹಂತದ ಅಧಿಕಾರಿಗಳ ಮೇಲೆ ಕ್ರಮ ವಹಿಸುವಂತಹ ಕೆಲಸ ಆಗಬೇಕಲ್ಲವೆ?

**ಪ್ರಶ್ನೆ ಸಂಖ್ಯೆ 340**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎಲ್.ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ತಮ್ಮ ಇಲಾಖೆಯಿಂದ ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ ಅಬಕಾರಿ ಲೈಸೆನ್ಸ್‌ಗಳನ್ನು ಎಷ್ಟು ವಿಧದಲ್ಲಿ ಕೊಡುತ್ತಾರೆ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆನು. 13 ವಿಧದಲ್ಲಿ ಕೊಡಲಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ನಾನು 13 ವಿಧಗಳಲ್ಲಿ 3 ವಿಧಗಳ ಬಗ್ಗೆ ಉಪ ಪ್ರಶ್ನೆಯನ್ನು ಕೇಳಿದ್ದೆನು. ಸಿಎಲ್ - 2 ಮತ್ತು ಸಿಎಲ್-9 ಗಳನ್ನು ಯಾವ ವರ್ಷದವರೆಗೂ ಕೊಡುತ್ತಿದ್ದರು ಎಂದು ನಾನು ಕೇಳಿದ್ದೆನು. ಸಿಎಲ್-2 ಮತ್ತು ಸಿಎಲ್-9 ಅನ್ನು 1992ರವರೆಗೂ ಕೊಡಲಾಗುತ್ತಿತ್ತು, ನಂತರ ಸರ್ಕಾರ ನಿರ್ಬಂಧಿಸಿದೆ ಎಂದು ಹೇಳಿದ್ದಾರೆ. ನಂತರ ಸಿಎಲ್ - 2 ಮತ್ತು ಸಿಎಲ್-9 ಏನು ಕೊಡುತ್ತಿದ್ದರೋ ಅದು ನಿರ್ಬಂಧವಾದ ಮೇಲೆ ಸಿಎಲ್ - 7 ಹೆಸರಿನಲ್ಲಿ ಲೈಸೆನ್ಸ್ ಅನ್ನು ರಾಜ್ಯದಲ್ಲಿ ಜಿಲ್ಲಾವಾರು ನೀಡಲಾಗಿದೆ. 2021-23ರವರೆಗೆ ಎಷ್ಟು ಲೈಸೆನ್ಸ್ ಗಳನ್ನು ಕೊಡಲಾಗಿದೆ ಎಂದು ಜಿಲ್ಲಾವಾರು ಮಾಹಿತಿ ಕೇಳಿದ್ದೆನು. ಇಡೀ ರಾಜ್ಯದ ಮಾಹಿತಿಯ ಜೊತೆಗೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಎಷ್ಟು ಸಿಎಲ್ - 7 ಲೈಸೆನ್ಸ್ ಕೊಡಲಾಗಿತ್ತು ಎಂದು ಕೇಳಬೇಕಾಗಿತ್ತು ಮತ್ತು ಅದನ್ನು ಬೇರೆ ಬೇರೆ ಜಿಲ್ಲೆಗಳೊಂದಿಗೆ ಹೋಲಿಕೆ ಮಾಡಬೇಕಾಗಿದ್ದುದರಿಂದ ನಾನು ಈ ಮಾಹಿತಿಯನ್ನು ಕೇಳಿದ್ದೆನು. 2021ರವರೆಗೆ ಕೋಲಾರ ಜಿಲ್ಲೆಯಲ್ಲಿ ಸಿಎಲ್ - 7 ಲೈಸೆನ್ಸ್ ಕೇವಲ 41 ಇವೆ. 2021 ರಿಂದ 2023 ಅವಧಿಗೆ 64, ಸಿಎಲ್ - 7 ಲೈಸೆನ್ಸ್ ಕೊಟ್ಟಿದ್ದಾರೆ. ಪರೋಕ್ಷವಾಗಿ ಒಂದು ಸದುದ್ದೇಶದಿಂದ ಸರ್ಕಾರ ಸಿಎಲ್ - 2 ಹಾಗೂ ಸಿಎಲ್-9 ಅನ್ನು ನಿರ್ಬಂಧ ಮಾಡಿರುವಾಗ ಹಿಂಬಾಗಿಲಿನಿಂದ ಸಿಎಲ್ - 7 ಕೊಡುವುದಕ್ಕೆ ಅವಕಾಶ ಇದ್ದುದರಿಂದ 1992ರಿಂದ 2021 ಅಂದರೆ 19 ವರ್ಷಗಳ ಅವಧಿಯಲ್ಲಿ ಕೇವಲ 41 ಅಂಗಡಿಗಳಿಗೆ ಅನುಮತಿ ಕೊಟ್ಟಿದ್ದಾರೆ. 2021 ರಿಂದ 2023ರವರೆಗೆ 64 ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಇದರ ಹಿಂದೆ ಏನಿದೆಯೆಂದರೆ ಒಂದು ಸಿಎಲ್-7 ಕೊಡಬೇಕಾದರೆ ಅಲ್ಲಿ ರೂ.80-85 ಲಕ್ಷ ನಿಗದಿ ಪಡಿಸಿದ್ದಾರೆ. ಗ್ರಾಮೀಣ ಭಾಗದಲ್ಲಿ ಸರ್ಕಾರಕ್ಕೆ ಕೊಡುವಂತಹ ಫೀಸ್ ರೂ.4,60,000/-, ನಗರ ಭಾಗವಾದರೆ ರೂ.5,70,000/-. ಅಲ್ಲದೆ ಅಧಿಕಾರಿಗಳಿಗೆ ಯಾರು ರೂ.80-85 ಲಕ್ಷ ಪ್ಯಾಕೇಜ್ ಕೊಡಲಿಕ್ಕೆ ಸಿದ್ಧರಿರುತ್ತಾರೆಯೋ ಅವರಿಗೆ ಸಿಎಲ್ - 7 ಸಿಗುತ್ತದೆ. ಅಲ್ಲಿ ಕೆಲವು norms ಇವೆ. 10 ಅಂಗಡಿಗಳಿರಬೇಕು; ಕೌಂಟರ್ ಒಳಗಿರಬೇಕು; ಡೈನಿಂಗ್ ಹಾಲ್ ಇರಬೇಕು, ಅಡುಗೆ ಮನೆ ಇರಬೇಕು ಮತ್ತು ಪಾರ್ಕಿಂಗ್ ವ್ಯವಸ್ಥೆ ಇರಬೇಕು. ಇದ್ಯಾವುದೇ norms ಅನ್ನು follow ಮಾಡುತ್ತಿಲ್ಲ. ಸಂಪೂರ್ಣವಾಗಿ ಹಣದ ಆಧಾರದ ಮೇಲೆ

ಸಿಎಲ್ - 7 ಕೊಟ್ಟು ನಮ್ಮ ಜಿಲ್ಲೆಯ ವಾತಾವರಣವನ್ನು ಕುಲಗೆಡಿಸಿದ್ದಾರೆ. ವಿಧಾನ ಸಭೆಯಲ್ಲಿ ಕೂಡ ಇದು ಬಹಳಷ್ಟು ಸಲ ಪ್ರಸ್ತಾಪವಾಗಿದೆ. ನಮ್ಮ ಶಾಸಕರು ಕೂಡ ಸ್ಥಳೀಯವಾಗಿ ಏನು ಪ್ರಶ್ನೆ ಮಾಡಿದರೂ ಕೂಡ ಇದರ ಬಗ್ಗೆ ಅವರು ಯಾವುದೇ ರೀತಿಯಾದ ಕ್ರಮವನ್ನು ಕೈಗೊಳ್ಳುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಸಿಎಲ್ - 2, ಸಿಎಲ್-9 ಮತ್ತು ಎಂಎಸ್ಐಎಲ್ ಎಲ್ಲವೂ ಸೇರಿ 216 ಇದೆ. ಸಿಎಲ್ - 7 ಒಂದೇನೆ 104 ಇವೆ. ಈಗಾಗಲೇ ಇನ್ನೂ 5 ಮಳಿಗೆ ತೆರೆಯಲು ಅನುಮತಿ ನೀಡಿದ್ದಾರೆ.

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೆ, ಸಿಎಲ್ - 7 ಲೈಸನ್ಸ್ ಕೊಡಬೇಕೆಂದರೆ ನಮಗೆ ನಮ್ಮದೇ ಆದ ಕೆಲವು ನಿಯಮಗಳಿವೆ. ಆ ನಿಯಮಗಳನ್ನು ಯಾರಾದರೂ ಅಳವಡಿಸಿಕೊಳ್ಳದೆ ಲೈಸನ್ಸ್ ಕೊಟ್ಟಿದ್ದರೆ ಅಂತಹವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದ್ದಾರೆ. ಆ ವರದಿಯನ್ನು ಸಹ ಕೊಟ್ಟಿದ್ದೇವೆ. ಹಲವಾರು ವಿಷಯಗಳಲ್ಲಿ ಅಲ್ಲಿ ಹಣ ನಡೆಯುತ್ತಿದೆ ಎಂದು ಹೇಳಿದರು. ಅದು ನನ್ನ ಗಮನಕ್ಕೂ ಬಂದಿದೆ. ಇಲ್ಲ ಎಂದು ಹೇಳುವುದಿಲ್ಲ. ಅಂಥವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದು, ನಾನು ವರದಿಯನ್ನು ತರಿಸಿಕೊಂಡು ಕ್ರಮವನ್ನು ಕೈಗೊಳ್ಳುತ್ತೇನೆ.

**ಶ್ರೀ ಎಂ.ಎಲ್.ಅನಿಲ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅವರ ಗಮನಕ್ಕೆ ಬಂದಿದೆ ಎಂದು ಹೇಳಿ ಉತ್ತರದಲ್ಲಿಯೂ ಕೊಟ್ಟಿದ್ದಾರೆ, ಅನುಬಂಧದಲ್ಲಿಯೂ ಕೊಟ್ಟಿದ್ದಾರೆ. ಅಲ್ಲಿ ನಮ್ಮ ಜಿಲ್ಲೆಯವರದ್ದು ಯಾರದೂ ಇಲ್ಲ. ಇವತ್ತು ನಮ್ಮ ಜಿಲ್ಲೆಯಲ್ಲಿ ರಾಜಾರೋಷವಾಗಿ ಹಗಲು ದರೋಡೆಯ ರೀತಿಯಲ್ಲಿ ನಡೆಯುತ್ತಿದೆ. ಲೈಸನ್ಸ್ ಪಡೆದಿರುವ ಕಳ್ಳರ ಥರ ಆಗಿದೆ. ಕಳ್ಳ ಆದರೆ ಕಳ್ಳತನ ಮಾಡಿದ್ದಕ್ಕೆ ಅವನ ಮೇಲೆ ಯಾರಾದರೂ ದೂರು ನೀಡಿ ಕ್ರಮ ಆಗುತ್ತದೆ. ಇವರಿಗೆಲ್ಲಾ ಲೈಸನ್ಸ್ ಕೊಟ್ಟುಬಿಟ್ಟಿದ್ದಾರೆ. ಲೈಸನ್ಸ್ ಪಡೆದುಕೊಂಡು ಕಳ್ಳರ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಹಳ್ಳಿಗಳಲ್ಲಿ 10 ಕಿರಾಣಿ ಅಂಗಡಿಯಿದ್ದರೆ 10 ಅಂಗಡಿಯಲ್ಲೂ ಮದ್ಯ ದೊರೆಯುತ್ತದೆ. ಇವರನ್ನು ಯಾರೂ ಕೇಳುವವರಿಲ್ಲ. ಇದರಿಂದಾಗಿ ಸಾಕಷ್ಟು ಯುವಕರು ಮದ್ಯವ್ಯಸನಕ್ಕೆ ಒಳಗಾಗಿ ಬಹಳಷ್ಟು ಅಪರಾಧಗಳು ಆಗುತ್ತಿವೆ. ಇದರ ಮೇಲೆ ಏನೂ ಕ್ರಮ ಇಲ್ಲ. ಸಿಎಲ್ - 7 ಲೈಸನ್ಸ್ ಕೊಡುವುದಕ್ಕೆ ಇಷ್ಟು ಹಣ ನಿಗದಿ ಮಾಡುವುದರ ಜೊತೆಗೆ ಜೂನ್ ತಿಂಗಳಿನಲ್ಲಿ licence renewal ಮಾಡುತ್ತಾರೆ. ಅದಕ್ಕೆ ಒಂದೊಂದು ಲೈಸನ್ಸ್‌ಗೆ ಒಂದೊಂದು ಲಕ್ಷ ನಿಗದಿ ಮಾಡಿರುತ್ತಾರೆ. ನಾನು ಕೆಲವು ಮಾಹಿತಿಗಳನ್ನು ಪಡೆದಿದ್ದೇನೆ. ತಾಲ್ಲೂಕುವಾರು ಪ್ರತಿ ತಿಂಗಳಿಗೆ ಇಷ್ಟು ಹಣ ಎಂದು ನಿಗದಿ ಮಾಡಿದ್ದಾರೆ.

| | |
|---|---|
| ಕೋಲಾರ | ರೂ.15,000/- |
| ಶ್ರೀನಿವಾಸಪುರ | ರೂ.18,000/- |
| ಮುಳಬಾಗಿಲು | ರೂ.22,000/- |
| ಮಾಲೂರು | ರೂ.28,000/- |
| ಬಂಗಾರಪೇಟೆ/ಕೆಜಿಎಫ್ | ರೂ.30,000/- |

ಇವರಿಗೆ ಯಾರೂ ಹೇಳುವವರು, ಕೇಳುವವರೇ ಇಲ್ಲ. ಈ ಸರ್ಕಾರ ಆ ಸರ್ಕಾರ ಎಂದಲ್ಲ, ಯಾವುದೇ ಸರ್ಕಾರ ಇದ್ದರೂ ಅಧಿಕಾರಿಗಳು ಅವರೇ ಇರುತ್ತಾರೆ. ಆದರೆ ಅಧಿಕಾರಿಗಳು ಈ ಮಟ್ಟಕ್ಕೆ ಹೋದರೆ ಇದನ್ನು ನಿಗ್ರಹ ಮಾಡುವವರು ಯಾರು?

**(ಗೊಂದಲ)**

**ಸಭಾಪತಿಯವರು:-** ಇದು ಪ್ರಶ್ನೋತ್ತರ ಅವಧಿ. ಮಾನ್ಯ ಸುನಿಲ್ ವಲ್ಯಾಪುರೆ ಅವರು ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ:-** ಮಾನ್ಯ ಸಭಾಪತಿಯವರೇ, particular ಆಗಿ ಯಾವುದಾದರೂ ಪ್ರಕರಣಗಳಿದ್ದರೆ ನನ್ನ ಗಮನಕ್ಕೆ ತಂದರೆ ತಕ್ಷಣ ಕ್ರಮ ಕೈಗೊಳ್ಳುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಸುಮ್ಮನೆ ಅಲ್ಲಿಷ್ಟು ಹೋಗಿದೆ, ಇಲ್ಲಿ ಇಷ್ಟು ಬಂದಿದೆ ಎಂದರೆ ನನಗೆ ಉತ್ತರ ಕೊಡುವುದಕ್ಕಾಗುವುದಿಲ್ಲ. Specific ಆಗಿ ಏನಾದರೂ ಇದ್ದರೆ ಹೇಳಲಿ, ನಾನು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಂ.ಎಲ್.ಅನಿಲ್‌ಕುಮಾರ್:-** ಮಾನ್ಯ ಸಭಾಪತಿಯವರೆ, ನಾನು ಸ್ಥಳೀಯ ಸಂಸ್ಥೆಗಳಿಂದ ಚುನಾಯಿತನಾಗಿರುವ ಈ ಸದನದ ಜವಾಬ್ದಾರಿಯುತ ಸದಸ್ಯ. ನಾನು ಹೇಳುತ್ತಿರುವುದು ಗಂಭೀರವಾದ ಆರೋಪ. ನಾನೇನು ಗಾಳಿಯಲ್ಲಿ ಗುಂಡು ಹೊಡೆಯುವ ಕೆಲಸ ಮಾಡುತ್ತಿಲ್ಲ. ಈ ಎಲ್ಲಾ ಸ್ಪಷ್ಟವಾದ ಮಾಹಿತಿಯನ್ನು ತೆಗೆದುಕೊಂಡೇ ನಾನು ಕೇಳುತ್ತಿದ್ದೇನೆ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಗೋಪಿ ಎನ್ನುವಂತಹ ಒಬ್ಬ

ಪ್ರಥಮ ದರ್ಜೆ ಸಹಾಯಕ ಇದ್ದಾನೆ. ಅವನು recruit ಆಗಿ 14 ವರ್ಷಗಳಾಗಿವೆ. 12 ವರ್ಷಗಳಿಂದ ಜಿಲ್ಲಾ ಅಬಕಾರಿ ಕಛೇರಿಯಲ್ಲಿಯೇ ಕೆಲಸ ಮಾಡುತ್ತಿದ್ದಾನೆ. Lean ಇರುವುದು ಬಂಗಾರಪೇಟೆಯಲ್ಲಿ.

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ:-** ಮಾನ್ಯ ಸಭಾಪತಿಯವರೇ, ಆ ರೀತಿಯಾಗಿ ಏನಾದರೂ ಇದ್ದರೆ ತಕ್ಷಣವೇ ವರದಿಯನ್ನು ತರಿಸಿಕೊಂಡು ಕ್ರಮ ಕೈಗೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ 338**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದೇವೆ. ಆದರೆ ಉತ್ತರದಿಂದ ನನಗೆ ಸಮಾಧಾನವಿಲ್ಲ.

(ಮುಂದು)

(514) 18-07-2024 (11.30) ಕೆಜಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):**

ಅವರು ಕೇಳಿರುವಂತಹ ಪ್ರಶ್ನೆಯಲ್ಲಿ ಒಟ್ಟು ಮೂರು ಭಾಗ ಇದೆ. ಅದರಲ್ಲಿ 2ನೆಯ ಮತ್ತು 3ನೆಯ ಭಾಗ ಬಹಳ ಮಹತ್ವದ್ದಾಗಿರುತ್ತದೆ. ಈಗ ನಾವು ಕೊಟ್ಟಿರುವಂತಹ ಮಾಹಿತಿ ಆ ಉತ್ತರದಲ್ಲಿ ಇಲ್ಲ. ಆದ್ದರಿಂದ, ತಾವು ಅನುಮತಿ ಕೊಡುವುದಾದರೆ, withhold ಮಾಡಿ ನಾನು ಮಂಗಳವಾರ ಉತ್ತರ ಹೇಳುತ್ತೇನೆ.

**ಸಭಾಪತಿಯವರು:-** ಆಯಿತು. ಆಗಬಹುದು.

**ಪ್ರಶ್ನೆ ಸಂಖ್ಯೆ: 356+357+294+409+277**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಯವರು ಸದನದಲ್ಲಿ ಇರಬೇಕಾಗಿತ್ತು. ನಾವು ಈ ವಿಷಯವನ್ನು ಅವರ ಜೊತೆಗೆ ಚರ್ಚೆ ಮಾಡಿದ್ದರೆ ಬಹಳ ಚೆನ್ನಾಗಿ ಇತ್ತು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಹಾಗಾದರೆ, ತಾವು ಮುಂದಿನ ವಾರ ಪ್ರಶ್ನೆ ಕೇಳಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಹಾಗಾದರೆ, ಸುಮ್ಮನೆ ಪ್ರಶ್ನೆ ಕೇಳಿ. ನಾನು ಮೊದಲೇ ಮಾನ್ಯ ಮುಖ್ಯಮಂತ್ರಿಯವರು ಇಲ್ಲ. ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆಂದು ಹೇಳಿದ್ದೇನೆ ಅಲ್ಲವೇ; ಈಗ ಮಾನ್ಯ ಮುಖ್ಯಮಂತ್ರಿಯವರು ಇರಬೇಕೆಂದರೆ, writing ನಲ್ಲಿ ಕೊಡಿ. ನಾನು next ಹೇಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಅವರೆಲ್ಲರೂ ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಬೇಕು.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ರಾಜ್ಯ ಸರ್ಕಾರಿ ನೌಕರರ ಮೂರು ಪ್ರಮುಖ ಬೇಡಿಕೆಗಳ ಬಗ್ಗೆ ಪ್ರಶ್ನೆ ಮಾಡಿದ್ದೆ. ಅದರಲ್ಲಿ ಮುಖ್ಯವಾಗಿ 7ನೇ ವೇತನ ಆಯೋಗದ ವರದಿಯನ್ನು ಜಾರಿ ಮಾಡಬೇಕೆಂಬ ಬೇಡಿಕೆ ಇತ್ತು. ಅದನ್ನು ಯಥಾವತ್ತಾಗಿ ಜಾರಿಗೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿರುವ 34 ಇಲಾಖೆಗಳಲ್ಲಿ ಸುಮಾರು 7 ಲಕ್ಷ ನೌಕರರು ಇದ್ದಾರೆ. ನೌಕರರ ಪರವಾಗಿ ಹಾಗೂ ನಾವು ವೈಯಕ್ತಿಕವಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿತ್ತು. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದಯವಿಟ್ಟು ಅಭಿನಂದನೆಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ convey ಮಾಡಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಮಾನ್ಯ ಸಭಾಪತಿಯವರೇ, ಇನ್ನೂ ರಾಜ್ಯ ಸರ್ಕಾರಿ ನೌಕರರ ಎರಡು ಪ್ರಮುಖ ಬೇಡಿಕೆಗಳು ಇವೆ. ಈ ಎರಡು ಬೇಡಿಕೆಗಳು ಬಹಳ ಜ್ವಲಂತ ಸಮಸ್ಯೆಗಳು ಆಗಿವೆ. NPS (New Pension Scheme) ನಿಂದ OPS (Old Pension Scheme) ಮಾಡುವುದು ಅವರ ಬೇಡಿಕೆ ಇತ್ತು. ಏಕೆಂದರೆ, ನೌಕರರಿಗೆ NPS ನಿಂದ ಬಹಳ

ತೊಂದರೆಯಾಗುತ್ತಿದೆ. ಇದು ಒಂದು ವರ್ಷದಿಂದ ಆಥವಾ ಎರಡು ವರ್ಷದಿಂದ ಇರುವಂತಹ ಸಮಸ್ಯೆ ಅಲ್ಲ. ಇದು ಸುಮಾರು 18 ವರ್ಷಗಳಿಂದ ಇರುವ ಸಮಸ್ಯೆಯಾಗಿದೆ. ಇದರ ಜೊತೆಗೆ 'ಕರ್ನಾಟಕ ಆರೋಗ್ಯ ಸಂಜೀವಿನಿ' ಯೋಜನೆಯದ್ದು ಈ ಎರಡು ಬಹಳ ಪ್ರಮುಖವಾದಂತಹ ಬೇಡಿಕೆಗಳಾಗಿವೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಇದಿದ್ದರೆ ಬಹಳ ಚೆನ್ನಾಗಿತ್ತು ಎನ್ನುವುದು ನನ್ನ ಭಾವನೆ. ಈಗ ಇದಕ್ಕೆ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆಂದರೆ, ಅವರನ್ನೇ ಕೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಎನ್‌ಪಿಎಸ್ ನಿಂದ ಓಪಿಎಸ್ ಮಾಡುವುದಕ್ಕೆ ನಮ್ಮ ದೇಶದ ಯಾವ ಯಾವ ರಾಜ್ಯದೊಳಗೆ ಎನ್‌ಪಿಎಸ್ ನಿಂದ ಓಪಿಎಸ್ ಮಾಡಿದ್ದಾರೆ, ಆ ರಾಜ್ಯಗಳಿಗೆ ಹೋಗಿ ಅಧ್ಯಯನ ಮಾಡಿಕೊಂಡು ಆ ಬಗ್ಗೆ ವರದಿ ಸಲ್ಲಿಸುವುದಕ್ಕೆ ದಿನಾಂಕ 01-03-2024 ರಂದು ಸಮಿತಿ ರಚನೆಯಾಗಿದೆ. ಈ ಸಮಿತಿ ರಚನೆಯಾಗಿ ಒಂದು ವರ್ಷ ಐದು ತಿಂಗಳು ಆಗಿದೆ. ನನಗೆ ಗೊತ್ತಿರುವಂತಹ ಮಾಹಿತಿ ಪ್ರಕಾರ, ಆ ಸಮಿತಿ ಇದುವರೆಗೆ ಒಂದು ಸಭೆಯನ್ನೂ ಮಾಡಿರುವುದಿಲ್ಲ. ಒಂದು ವೇಳೆ ಆ ಸಮಿತಿ ಸಭೆಯನ್ನು ಮಾಡಿದ್ದರೆ, ಸಭೆ ಮಾಡಿದ್ದ ದಿನಾಂಕವನ್ನು ಕೊಡಲಿ. ಈ ಬಗ್ಗೆ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಅಧ್ಯಯನ ಮಾಡಿ ಬರಬೇಕಾಗಿತ್ತು. ನನಗೆ ಇರುವ ಮಾಹಿತಿ ಪ್ರಕಾರ, ಆ ಸಮಿತಿಯು ಯಾವ ರಾಜ್ಯಕ್ಕೂ ಹೋಗಿಲ್ಲ. ಒಂದು ವೇಳೆ ಬೇರೆ ಬೇರೆ ರಾಜ್ಯಗಳಿಗೆ ಹೋಗಿದ್ದರೆ, ಹೋಗಿದ್ದ ದಿವಸದ ದಿನಾಂಕ ಮತ್ತು ಆ ರಾಜ್ಯದ ಹೆಸರನ್ನು ಕೊಡಲಿ. ಈ ವಿಷಯವನ್ನು ಕಾಂಗ್ರೆಸ್ ಪಕ್ಷ ತನ್ನ ಚುನಾವಣೆಯ ಪ್ರಣಾಳಿಕೆಯಲ್ಲಿ ಹಾಕಿತ್ತು. ವಿಧಾನಸಭೆ ಚುನಾವಣೆ ನಡೆಯುವಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ, ನಾವು ಎನ್‌ಪಿಎಸ್ ಅನ್ನು ರದ್ದುಗೊಳಿಸಿ ಓಪಿಎಸ್ ಅನ್ನು ಜಾರಿಗೆ ಕೊಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿದ್ದರು. ಈಗ 1.5 ವರ್ಷ ಕಳೆದರೂ ಸಹ, ಆ ಸಮಿತಿ ಸಭೆ ನಡೆಸಿಲ್ಲ. ಬೇರೆ ರಾಜ್ಯಕ್ಕೂ ಹೋಗಿಲ್ಲ. ಹಾಗಾದರೆ, ಸರ್ಕಾರಕ್ಕೆ ಬದ್ಧತೆ ಇಲ್ಲವೆ? ಇದನ್ನು ಅವರು ಅವರ ಪ್ರಣಾಳಿಕೆಯಲ್ಲಿ ನಮೂದಿಸಿದ್ದರು. ಇದಕ್ಕೆ ಸರ್ಕಾರ ಉತ್ತರ ಕೊಡಲಿ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ 7ನೇ ವೇತನ ಆಯೋಗವನ್ನು ಸರ್ಕಾರ ಜಾರಿಗೆ ತಂದಿದೆ. ಆದರೆ, ಅದನ್ನು ಬಹಳ ತಡವಾಗಿ ತಂದಿದ್ದಾರೆ. ಘೋಷಣೆ ಮಾಡಿ ಜಾರಿಗೆ ತರುತ್ತಿದ್ದಾರೆ. ಅದನ್ನು 1st August 2024 ನಿಂದ implement ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಆದರೆ, there has been a considerable delay. ಒಂದು ವರ್ಷ ತಡವಾಗಿದೆ. ಕೇಂದ್ರ ಸರ್ಕಾರ 7ನೇ ವೇತನ ಆಯೋಗ ಜಾರಿಗೆ ತಂದಾಗ, ಅವರು arrears ಕೊಟ್ಟಿದ್ದರು. ಆದರೆ, ಈ ಸರ್ಕಾರ ಏಕೆ arrears ಕೊಡುತ್ತಿಲ್ಲ? ಮೊದಲು ಸರ್ಕಾರ ಕೊಟ್ಟಿದೆ. ನಾನು ಇದನ್ನು ಹೊಸದಾಗಿ ಹೇಳುತ್ತಿಲ್ಲ. ಇದಕ್ಕಿಂತ ಮೊದಲು ವೇತನ ಆಯೋಗ ಜಾರಿಗೆ ತಂದಾಗ arrears ಕೂಡ ಕೊಟ್ಟಿದ್ದಾರೆ. UGC arrears ನಲ್ಲೂ ಸಹ ಕೇಂದ್ರ ಸರ್ಕಾರ ಕೊಟ್ಟಿದ್ದು, ಅದರಲ್ಲಿ ಸರ್ಕಾರದ ಪಾಲನ್ನು ಸೇರಿಸಿ ಕೊಟ್ಟಿದ್ದಾರೆ. ಆದರೆ, ಈಗ ಏಕೆ ಕೊಡುತ್ತಿಲ್ಲ. ಇಲ್ಲಿ delay ಆಗಿದ್ದರಿಂದ ಸರ್ಕಾರ arrears ಅನ್ನು ಕೊಡಬೇಕು, ಈಗ ಸರ್ಕಾರ arrears ಅನ್ನು ಕೊಡಲು ಒಪ್ಪಿಲ್ಲವೆಂದರೆ,

ಸರ್ಕಾರ ಕೊಡಲು ಒಪ್ಪಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. Cashless health insurance ಆಗಿರುವ "ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ'ಯನ್ನು ಜಾರಿಗೆ ತರಬೇಕೆಂದು 2021-22 ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿದೆ. ಆದರೆ, ಅದು ಇವತ್ತಿನವರೆಗೂ ಜಾರಿಗೆ ಬಂದಿಲ್ಲ. ಇದನ್ನು ಜಾರಿಗೆ ತರಬೇಕು.

ಮಾನ್ಯ ಸಭಾಪತಿಯವರೇ, ಸುಮಾರು 2.50 ಲಕ್ಷ ಹುದ್ದೆಗಳು ಖಾಲಿ ಇವೆ. ಈಗ ಇರುವಂತಹ ಸರ್ಕಾರಿ ನೌಕರರು ಎಲ್ಲ ಕೆಲಸವನ್ನು ಮಾಡುತ್ತಾರೆ ಅಲ್ಲವೇ; extra time ಅನ್ನು ಕೊಡುವುದಿಲ್ಲ. ಈಗ ಖಾಲಿ ಇರುವಂತಹ 2.50 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿದ್ದರೆ, ಆ ಜವಾಬ್ದಾರಿಯನ್ನು ಹಂಚಿಕೊಳ್ಳುತ್ತಿದ್ದರು. ಸರ್ಕಾರ ಖಾಲಿ ಇರುವಂತಹ ಹುದ್ದೆಗಳನ್ನು ತುಂಬಿಕೊಳ್ಳುವಂತಹ ಪ್ರಯತ್ನವನ್ನು ಏಕೆ ಮಾಡುತ್ತಿಲ್ಲ? ಇದೊಂದು ಬಹಳ ಪ್ರಮುಖವಾದಂತಹ ಬೇಡಿಕೆ. ಸರ್ಕಾರಿ ನೌಕರರ ಸಂಘದವರು ಇಟ್ಟಂತಹ ಬೇಡಿಕೆ ಇದು. ಇದರ ಬಗ್ಗೆ ಸರ್ಕಾರ ಗಮನಹರಿಸುತ್ತಿಲ್ಲ. ಸರ್ಕಾರ ತಕ್ಷಣ ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವಂತಹ ಕ್ರಮಗಳನ್ನು ಕೈಗೊಳ್ಳಬೇಕು. ಬರೀ ಗ್ಯಾರಂಟಿಗಳನ್ನು ಕೊಟ್ಟರೆ, ಮುಗಿಯಿತೇ?

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. 7ನೇ ವೇತನ ಆಯೋಗದ ವಿಷಯ ಕಳೆದ ಸುಮಾರು 19 ತಿಂಗಳಿನಿಂದ ಚರ್ಚೆಯಲ್ಲಿತ್ತು. ದಿನಾಂಕ 15-07-2024 ರಂದು ನಡೆದ ಕ್ಯಾಬಿನೆಟ್ ಸಭೆಯಲ್ಲಿ ಇದನ್ನು ಜಾರಿಗೊಳಿಸಿದ್ದಾರೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಘೋಷಣೆಯಾಗಿ 3-4 ದಿವಸಗಳು ಕಳೆದರೂ ಸಹ, ಇನ್ನೂ ಅಧಿಕೃತವಾದ ಆದೇಶ ಬಂದಿಲ್ಲ. ಸರ್ಕಾರ ಯಾವಾಗ ಆದೇಶವನ್ನು ಹೊರಡಿಸುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆಯನ್ನು ಮಾಡಬೇಕು. ಇದರ ಜೊತೆಗೆ, ವೇತನ ಪರಿಷ್ಕೃತ ದಿನಾಂಕ 01-08-2024 ರಿಂದ ಜಾರಿಗೆ ಬರುತ್ತದೆ ಎಂದು ತಿಳಿಸಿದೆ. ಜುಲೈ ತಿಂಗಳಿನಲ್ಲಿ ಸಾಕಷ್ಟು ಜನ ನೌಕರರು ನಿವೃತ್ತಿ ಹೊಂದುತ್ತಿದ್ದಾರೆ. ಜುಲೈ ತಿಂಗಳಿನಲ್ಲಿ ನಿವೃತ್ತಿಯಾದವರು ವೇತನ ಆಯೋಗದ ಸಾಕಷ್ಟು benefit ಗಳಿಂದ ವಂಚಿತರಾಗುತ್ತಿದ್ದಾರೆ. ಇದನ್ನು ಜುಲೈ 01ನೇ ದಿನಾಂಕದಿಂದಲೇ ಜಾರಿಗೊಳಿಸಿದರೆ ಇನ್ನಷ್ಟು ಉತ್ತಮವಾಗುತ್ತದೆ ಎನ್ನುವುದು ರಾಜ್ಯ ಸರ್ಕಾರಿ ನೌಕರರ ಬೇಡಿಕೆಯಾಗಿದೆ. ಆದ್ದರಿಂದ, ದಯಮಾಡಿ ಇದನ್ನು ದಿನಾಂಕ 01-07-2024 ರಿಂದ ಜಾರಿ ಮಾಡಿದರೆ ಬಹಳಷ್ಟು ಸೂಕ್ತ. ಇದರ ಜೊತೆಗೆ DCRG ಬಗ್ಗೆ ಸ್ಪಷ್ಟವಾಗಿರುವಂತಹ ಆದೇಶವನ್ನು ಮಾಡಬೇಕು. ಜುಲೈ ತಿಂಗಳಿನಲ್ಲಿ ನಿವೃತ್ತಿ ಹೊಂದುವವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ದಿನಾಂಕವನ್ನು ಬದಲಾವಣೆ ಮಾಡಿಕೊಳ್ಳಬೇಕು. ಈ ಆದೇಶವನ್ನು ಆದಷ್ಟು ಬೇಗ ಜಾರಿಗೊಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಎನ್‌ಪಿಎಸ್ ಮತ್ತು ಓಪಿಎಸ್ ಬಗ್ಗೆ ಈಗಾಗಲೇ ಸದಸ್ಯರು ಮಾತನಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದರ ಬಗ್ಗೆ ಹೇಳಿದ್ದಾರೆ, ಅದು ಮತ್ತೆ repeat ಆಗುವುದು ಬೇಡ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆ ವಿಷಯದ ಬಗ್ಗೆ ಮತ್ತೆ repeat ಮಾಡುವುದಕ್ಕೆ ಬಯಸುವುದಿಲ್ಲ. ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಿದ್ದೇನೆ. ಜೊತೆಗೆ 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಸರ್ಕಾರದ ಮೇಲೆ ಒತ್ತಡವನ್ನು ತರುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರಾದ ನಿರಾಣಿಯವರು ಮಾತನಾಡಿದ್ದು ತಪ್ಪಾಗಿ ಅದು record ಗೆ ಹೋಗಬಾರದು. ನಾವು ಇದರ ಬಗ್ಗೆ 15ನೇ ತಾರೀಖಿನಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಮಂಗಳವಾರದಂದು ಅದನ್ನು ಸದನದಲ್ಲಿ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ. ನಿನ್ನೆ holiday ಆಗಿತ್ತು. ಮಾನ್ಯ ಸದಸ್ಯರು 3 ದಿವಸ ಆಯಿತು, ಆದೇಶ ಹೊರಡಿಸುವುದು ತಡವಾಯಿತು ಎಂದು ಹೇಳಿದ್ದಾರೆ. ಅದು ತಪ್ಪಾಗಿ ದಾಖಲೆಗಳಿಗೆ ಹೋಗಬಾರದು, ಅದನ್ನು ಸರಿಪಡಿಸುವುದಕ್ಕೆ ಎದ್ದುನಿಂತೆ ಅಷ್ಟೇ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಇವತ್ತು ಈ ಚುಕ್ಕೆ ಗುರುತಿನ ಪ್ರಶ್ನೆಯನ್ನು ಐದು ಜನ ಸದಸ್ಯರು ಕೇಳಿದ್ದೇವೆ. Same subject repeat ಆಗುವುದು ಬೇಡ ಎಂದು ತಾವು ಪದೇ ಪದೇ ಹೇಳುತ್ತಿದ್ದೀರಿ. 7ನೇ ವೇತನ ಆಯೋಗ ಜಾರಿ ಮಾಡಿರುವುದಕ್ಕೆ ಇವತ್ತಿನ ದಿವಸ ರಾಜ್ಯ ಸರ್ಕಾರಿ ನೌಕರರು ಸ್ವಾಗತ ಮಾಡಿದ್ದಾರೆ. ಅದೇರೀತಿ ನಾವು ಸಹ ಸ್ವಾಗತ ಮಾಡುತ್ತೇವೆ. ಇವತ್ತು ಅದರಲ್ಲಿ ಮುಖ್ಯವಾಗಿರುವಂತಹದ್ದು ಎನ್‌ಪಿಎಸ್ ಮತ್ತು ಓಪಿಎಸ್. NPS ನಲ್ಲಿ ನೌಕರರು ನಿವೃತ್ತಿಯಾಗುವ ವೇಳೆಯಲ್ಲಿ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಸರ್ಕಾರ ಸ್ವಲ್ಪ ಗಮನಹರಿಸಬೇಕು. ಈ ಹಿಂದಿನ ಸರ್ಕಾರ ಸುಮಾರು 17% ರಷ್ಟು ಮಧ್ಯಂತರ ಪರಿಹಾರವನ್ನು ಕೊಟ್ಟಿದೆ. ಇವತ್ತು ಮಧ್ಯಂತರ ಪರಿಹಾರವನ್ನು ಕೊಟ್ಟಿರುವ ದಿನಾಂಕದಿಂದಲೇ ಈ ಪರಿಷ್ಕೃತ ವೇತನವನ್ನು ಜಾರಿಗೆ ಕೊಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಪ್ರತಾಪ್ ಸಿಂಹ್ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಪ್ರಶ್ನೆ ಕೇಳುವಾಗ ವೇತನ ಆಯೋಗದ ವರದಿಯನ್ನು ಜಾರಿ ಮಾಡಿರಲಿಲ್ಲ. ನಾವು ಪ್ರಶ್ನೆ ಕೇಳಿದ ಮೇಲೆ ಸರ್ಕಾರ ಘೋಷಣೆ ಮಾಡಿದೆ ಎಂದು ನಾನು ಹೇಳುವುದಿಲ್ಲ. ಆದರೆ, ಖಂಡಿತವಾಗಿಯೂ ಸರ್ಕಾರ ತೆಗೆದುಕೊಂಡಂತಹ ನಿರ್ಣಯಕ್ಕೆ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ. ನಾವು ವೈಯಕ್ತಿಕವಾಗಿಯೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

(ಮುಂದು)

(515) 18-07-2024 (11.40) ಎಂವಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಮುಂದು):-**

ಆದರೆ ಪೂರ್ತಿ ಅಭಿನಂದನೆಯನ್ನು ಅವರೇ ಇಟ್ಟುಕೊಳ್ಳುವುದು ಬೇಡ. ಏಕೆಂದರೆ, ಮಧ್ಯಂತರ ಅವಧಿಯ ಆದೇಶದ ಸಂದರ್ಭದಲ್ಲಿ ಶೇಕಡಾ 17ರಷ್ಟು ಏರಿಕೆಯನ್ನು ನಮ್ಮ ಸರ್ಕಾರ ಇರುವಾಗ ಮಾಡಿದೆ. ಉಳಿದ ಶೇಕಡಾ 10ರಷ್ಟನ್ನು ಅವರು ಕೊಟ್ಟಿದ್ದಾರೆ. ಹಾಗಾಗಿ, ಅಭಿನಂದನೆಯಲ್ಲಿ ನಮಗೂ ಪಾಲು ಇರಲಿ ಎಂದು ಹೇಳುತ್ತಾ ಮತ್ತೆ ಇದಕ್ಕೆ ಸ್ವಲ್ಪ ಧಾರಾಳತನವಿರಲಿ. ಎಲ್ಲದಕ್ಕೂ ಕೇಂದ್ರ ಸರ್ಕಾರವನ್ನು ತೋರಿಸುವಂಥದ್ದನ್ನು ಮಾಡಬಾರದು ಎಂದು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೆ, ಇದು ಸದನ, ನೀವು ಏನು ಸಣ್ಣ ಹುಡುಗರು ಮಾಡಿದ ಹಾಗೆ ಮಾಡುತ್ತಿದ್ದೀರಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೂರು ಮತ್ತು ನಾಲ್ಕನೆ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಈಗಾಗಲೇ ಅವರ ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿ, ಜನರ ವಿಶ್ವಾಸವನ್ನು ತೆಗೆದುಕೊಂಡು ಆಡಳಿತದಲ್ಲಿದ್ದಾರೆ. ಇನ್ನು ಉಳಿದಿರುವ ಎರಡನ್ನು ಯಾವಾಗ ಮಾಡುತ್ತಾರೆ ಎಂಬುದನ್ನು ದಯವಿಟ್ಟು ಘೋಷಣೆ ಮಾಡಬೇಕು ಎನ್ನುವಂತಹ ಆಗ್ರಹವನ್ನು ತಮ್ಮ ಮೂಲಕ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ತಾವು ಈ ಪ್ರಶ್ನೆಗೆ ಉತ್ತರ ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ,....

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆಯಲ್ಲಿ ಬೇರೆ ಯಾರೂ ಮಾತನಾಡುವಂತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಎಲ್ಲಾ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ ಹಾಗೆ ನಾನೂ ಸಹ ಪ್ರಶ್ನೆಯನ್ನು ಕೇಳಿದ್ದೇನೆ. ಅವರೆಲ್ಲರನ್ನು ಸಹ include ಮಾಡಿದ್ದೀರಿ. ಆದರೆ, ನನ್ನನ್ನು ಬಿಟ್ಟಿದ್ದೀರಿ. ಆ ರೀತಿ ಬಿಟ್ಟಿರುವುದಕ್ಕೋಸ್ಕರ ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಇದು ಯಾವುದೂ ಸಹ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ತಾವು ನನ್ನನ್ನು ಏಕೆ ಬಿಟ್ಟಿದ್ದೀರಿ?

**ಸಭಾಪತಿಯವರು:-** ಅದು ನನಗೆ ಗೊತ್ತಿಲ್ಲ. ಈಗ ನನಗೆ ಏನು ಮಾಹಿತಿ ಬಂದಿದೆ ಅಷ್ಟನ್ನು ಮಾತ್ರ ಮಾಡಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಅದು ತಮ್ಮ ಕಛೇರಿಯಲ್ಲಿ ಆಗಿರುವಂತಹ ಸಮಸ್ಯೆ.

**ಸಭಾಪತಿಯವರು:-** ಆಯಿತು, ನಾನು ಅದನ್ನು ನೋಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಇದರಿಂದ ನಾನು ಸಮಸ್ಯೆ ಎದುರಿಸುವಂತಾಗಿದೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕರ್ನಾಟಕ ಸರ್ಕಾರ ಐತಿಹಾಸಿಕವಾದಂತಹ ಒಂದು ನಿರ್ಧಾರವನ್ನು ಈ ತಿಂಗಳ 15ನೇ ತಾರೀಖಿಗೆ ತೆಗೆದುಕೊಂಡು, ರಾಜ್ಯ ಸರ್ಕಾರಿ ನೌಕರರ ಬಹುದಿನಗಳ ಬೇಡಿಕೆಯಾದ ಏಳನೇ ವೇತನ ಆಯೋಗದ ಶಿಫಾರಸ್ಸಿನಂತೆ ಅವರಿಗೆ ಒಂದನೇ ಆಗಸ್ಟ್‌ನಿಂದ ಕೊಡುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದೆ. ಇದಕ್ಕೆ ಮಾನ್ಯ ಸದಸ್ಯರುಗಳೆಲ್ಲರೂ ಸಹ ಅಭಿನಂದನೆ ಸಲ್ಲಿಸಿದ್ದಾರೆ. ಅದಕ್ಕೆ ಮಾನ್ಯ ಸದಸ್ಯರಿಗೂ ಸಹ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಈ ಸರ್ಕಾರ ನಿರ್ಧಾರ ತೆಗೆದುಕೊಂಡಿರುವುದಕ್ಕೆ ಎಲ್ಲರಿಗೂ ಒಳ್ಳೆಯದಾಯಿತು. ಎರಡನೆಯದಾಗಿ, ಹಳೆಯ ಪಿಂಚಣಿ ವಿಷಯದ ಬಗ್ಗೆ ಹೇಳುವುದಾದರೆ, ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿಯವರು ಒಂದು ಮಾತನ್ನು ಹೇಳಿದರು. ಅಂದರೆ, ತೀರ್ಮಾನ ತೆಗೆದುಕೊಳ್ಳುವುದಕ್ಕೆ ತಡವಾಗಿ ಆಗಿದೆ ಏಕೆ ಎಂದು ಕೇಳಿದರು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರು ಹಳೇ ಪಿಂಚಣಿ ಕೊಡುವ ಬಗ್ಗೆ ಕೇಳಿದ್ದಾರೆ ಅಷ್ಟೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಆರನೇ ವೇತನ ಆಯೋಗ ಸಹ ದಿನಾಂಕ 01.07.2017ರಲ್ಲಿ ತೀರ್ಮಾನವಾಯಿತು. ಆಮೇಲೆ financial effect ದಿನಾಂಕ: 01.04.2018ರಂದು ಆಯಿತು. ಆಗಲೂ ಸಹ ಒಂದು ವರ್ಷವಾಗಿತ್ತು. ಅದನ್ನು ಆಗಿನ ಸರ್ಕಾರ ಸಹಿತ payment ಮಾಡಿರಲಿಲ್ಲ. ಅದೇ ಪದ್ಧತಿಯನ್ನು ಈ ಸರ್ಕಾರ ಸಹ ಮುಂದುವರೆಸಿದೆ. ನಾವು ಈಗಾಗಲೇ ಹಳೆಯ ಪಿಂಚಣಿ ಯೋಜನೆ ಬಗ್ಗೆ ಆಶ್ವಾಸನೆಯನ್ನು ನೀಡಿದ್ದೇವೆ. ನಮ್ಮ manifesto ದಲ್ಲೂ ಸಹ ಅದನ್ನು mention ಮಾಡಿದ್ದೇವೆ. ಈಗಾಗಲೇ ತಮಗೆ ಗೊತ್ತಿರುವಂತೆ, ದಿನಾಂಕ: 01.03.2023ರಂದು ಒಂದು ಸಮಿತಿಯನ್ನು ರಚಿಸಿ, ಅದಕ್ಕೆ ಬೇಕಾಗಿರುವಂತಹ ಸುಮಾರು 122 ಲಕ್ಷ ರೂಪಾಯಿಗಳನ್ನು ಒದಗಿಸಿ, ಇವತ್ತು ಆ ಸಮಿತಿಯ ವರದಿಗಾಗಿ ಕಾಯುತ್ತಿದ್ದೇವೆ. ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದವರು ಸಹ ವಿಚಾರ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರು ಸಮಿತಿ ಎಷ್ಟು ಬಾರಿ ಸಭೆ ಮಾಡಿದೆ ಎಂದು ಕೇಳುತ್ತಿದ್ದಾರೆ. ತಾವು ಅದರ ಬಗ್ಗೆ ಏನೆಂದು ಹೇಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಳೇ ಪಿಂಚಣಿ ಯೋಜನೆಯನ್ನು ಜಾರಿಗೆ ತರುವುದಕ್ಕೆ ನಾವು ಈಗಾಗಲೇ ಆಶ್ವಾಸನೆ ಕೊಟ್ಟಿರುವಂಥದ್ದು. ಮತ್ತೆ ಅದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ನೇಮಕ ಮಾಡಿರುವಂಥದ್ದು. ಮಾನ್ಯ ಸದಸ್ಯರು ಆ ಸಮಿತಿ ಎಷ್ಟು

ಸಭೆಗಳನ್ನು ಮಾಡಿದೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಸಮಾಲೋಚನೆ ನಡೆಯುತ್ತಿದೆ. ಆದಷ್ಟು ತೀವ್ರವಾಗಿ ಆ ಸಮಿತಿಯ ವರದಿಯನ್ನು ತರಿಸಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಸರ್ಕಾರಕ್ಕೆ commitment ಇಲ್ಲ. ಸಮಿತಿ ರಚನೆಯಾಗಿ ಒಂದು ವರ್ಷ ಐದು ತಿಂಗಳಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಸಭೆ ಮಾಡುವುದಕ್ಕೆ ಆಗಿಲ್ಲವೇ? ಇದಕ್ಕೆ ನಾಚಿಕೆ ಪಡಬೇಕು. ಅವರು ಒಂದು ಸಭೆ ಮಾಡಬೇಕಾಗಿತ್ತು.

**(ಗೊಂದಲ)**

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಮಿತಿಯ ಒಂದೇ ಒಂದು ಸಭೆಯಾಗಿಲ್ಲ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಮಿತಿ ರಚನೆಯಾಗಿ ಸುಮಾರು ಹದಿನೈದು ತಿಂಗಳುಗಳಾಗಿವೆ. ಆದರೂ ಇನ್ನೂ ಸಮಿತಿ ಒಂದು ಸಭೆ ಮಾಡುವುದಕ್ಕೆ ಆಗಿಲ್ಲ. ಅಧಿಕಾರಿಗಳ ಜೊತೆ ಸಭೆ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಇದು ಯಾವ ರೀತಿಯ ನ್ಯಾಯ ಸ್ವಾಮಿ?

**(ಗೊಂದಲ)**

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ, ಈಗ ಅವರು ಅಧಿಕಾರಕ್ಕೆ ಬಂದಿದ್ದಾರೆ. ಇದನ್ನು implement ಮಾಡಬೇಕು.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೆ, ಇದು ಅವರ ಚುನಾವಣೆಯ ಪ್ರಣಾಳಿಕೆಯಲ್ಲಿ ಇರುವಂತಹ ಭರವಸೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಅವರು 'vote for OPS' ಎಂದು ಕೇಳಿಕೊಂಡಿದ್ದರು. ಈಗ 'vote for OPS' ಎಂದು ಬಂದು ಒಂದು ವರ್ಷವಾದರೂ ಅದಕ್ಕೆ ಉತ್ತರವಿಲ್ಲವೆಂದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, OPS ಅನ್ನು cancel ಮಾಡಿದ್ದು ಯಾರು?

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ, ನಾನು allow ಮಾಡುವುದಿಲ್ಲ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಕಳೆದ ಬಾರಿ ಬೆಂಗಳೂರಿನಲ್ಲಿ ನಡೆದಂತಹ ಅಧಿವೇಶನದಲ್ಲಿ ನಾವು ಇದೇ ಪ್ರಶ್ನೆಯನ್ನು ಕೇಳಿದ್ದೆವು. ಆಗ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಇದ್ದರು. ಮತ್ತೆ ಮಾನ್ಯ ಸಚಿವರಾದ ಶ್ರೀ ಮಧುಬಂಗಾರಪ್ಪನವರು ಸಹ ಇದ್ದರು. ಈಗ ಏನು ಸಮಿತಿಯನ್ನು ಮಾಡಿದ್ದಾರೆ. ಆ ಸಮಿತಿಗೆ ಒಂದು terms of reference ಕೊಟ್ಟಿದ್ದಾರೆ. ಅಂದರೆ, ಕೇವಲ ಸರ್ಕಾರಿ ನೌಕರರಿಗೆ ಎನ್.ಪಿ.ಎಸ್. ಅನ್ನು ಓ.ಪಿ.ಎಸ್. ಮಾಡಿದರೆ, ಏನೇನು ಆಗುತ್ತದೆ. ಮತ್ತೆ ಇದರಿಂದ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುತ್ತದೆ ಎಂದು ಅಧ್ಯಯನ ಮಾಡುವುದಕ್ಕೆ ಬೇರೆ ರಾಜ್ಯಗಳಿಗೆ ಹೋಗಿ ಎಂದು ಹೇಳಿದ್ದಾರೆ. ಆಗ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಪ್ರಶ್ನೆ ಮಾಡಿದ್ದೆ. ನಮ್ಮ ರಾಜ್ಯದಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಿವೆ. ಅವುಗಳಿಗೆ ಎನ್.ಪಿ.ಎಸ್. ಇಲ್ಲ ಮತ್ತೆ ಓ.ಪಿ.ಎಸ್. ಸಹ ಇಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರರವರೆ ತಾವು ಮಾತನಾಡಿದ್ದು ಸಾಕು. ಮಾನ್ಯ ಸಭಾನಾಯಕರು ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಹೇಳಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವಂಥದ್ದನ್ನು ನಾವು ಗಮನಿಸಿದ್ದೇವೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ Government of India ದಲ್ಲಿ ಚರ್ಚೆ ನಡೆದಿದೆ. ಅವರು ಸಹ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅವರು ಸಹ ವರದಿಯ ಸಲುವಾಗಿ wait ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ, ಅದನ್ನು ಕೇಂದ್ರ ಸರ್ಕಾರ ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ನಾವು ಸಹ ಅದರ ಸಾಧಕ–ಬಾಧಕಗಳನ್ನು ನೋಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರನ್ನು ಬಿಟ್ಟು ಬೇರೆಯವರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ವ್ಹಿ.ಸಂಕನೂರರವರೆ, ಈ ವಿಷಯವನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಎಂದು ಪತ್ರ ನೀಡಿ. ಆಗ ಇದನ್ನು ಚರ್ಚೆಗೆ ನೀಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾದ ವಿಷಯ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ವ್ಹಿ.ಸಂಕನೂರರವರೆ, ನಾನು ಈಗಾಗಲೇ ಹೇಳಿದ್ದೇನೆ.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೆ, ತಾವು ಈ ವಿಷಯವನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇವೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಆಯಿತು, ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಕೊಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಏನೇನೂ ಇಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್‌ರವರು on the floor of the House promise ಮಾಡಿದ್ದಾರೆ. ಅದು record ನಲ್ಲಿದೆ.

**(ಗೊಂದಲ)**

**ಸಭಾಪತಿಯವರು:–** ಆಯಿತು, ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಸರ್ಕಾರ ಸಹಿತ ಹೇಳುತ್ತಿದೆ. Government of India ಸಹಿತ ಈ ವಿಷಯದಲ್ಲಿ ಸಮಿತಿಯನ್ನು ರಚನೆ ಮಾಡಿದ್ದಾರೆ. ಆ ಸಮಿತಿಯ ವರದಿಗಾಗಿ Government of India ದವರು ಕಾಯುತ್ತಿದ್ದಾರೆ. ನಾವು ಅವರ ಮಾರ್ಗದರ್ಶನವನ್ನು ಪಡೆಯುವುದಕ್ಕೆ ಕಾಯುತ್ತಿದ್ದೇವೆ. ಅದು ಬಂದ ತಕ್ಷಣ ನಾವು ಕ್ರಮಕೈಗೊಳ್ಳುತ್ತೇವೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾದಂತಹ ಒಂದು ವಿಷಯವಾಗಿದೆ.

**(ಗೊಂದಲ)**

**ಸಭಾಪತಿಯವರು:–** ಆಯಿತು, ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಕೊಡುತ್ತೇನೆಂದು ಹೇಳಿದ್ದೇನೆ. ಈಗ ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಅವರು ಇದನ್ನು ಇನ್ನು ಜಾರಿಗೊಳಿಸಿರುವುದಿಲ್ಲ.

**ಪ್ರಶ್ನೆ ಸಂಖ್ಯೆ: 404**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಉಮಾಶ್ರೀ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಇತ್ತೀಚೆಗೆ ಅದರಲ್ಲೂ ಕಳೆದ ಐದು ವರ್ಷಗಳಲ್ಲಿ ಈ ಆನ್‌ಲೈನ್ ಉದ್ಯೋಗವನ್ನು ಕೊಡುತ್ತೇವೆಂದು ವಂಚನೆ ಮಾಡಿರತಕ್ಕಂಥದ್ದು ಮತ್ತೆ ನಕಲಿ App ಗಳನ್ನು ಮಾಡಿಕೊಂಡು ಲೋನ್ ಕೊಡುತ್ತೇವೆ ಎನ್ನುವಂತಹ ವಿಚಾರದಲ್ಲಿ ಬಹಳಷ್ಟು ಜನರು ವಂಚನೆಗೆ ಒಳಗಾಗುತ್ತಿದ್ದಾರೆಂದು ಕೇಳಲ್ಪಟ್ಟಿದ್ದೇನೆ. ಅದಕ್ಕೆ ಅವರು ಯಾವ್ಯಾವ ವರ್ಷದಲ್ಲಿ ಏನೇನು ಆಗಿದೆ ಮತ್ತು ಎಷ್ಟೆಷ್ಟು ಪ್ರಕರಣಗಳು ಆಗಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ. ಇದಕ್ಕೆ ನಾನು ಬಹಳ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಈಗ 2020ರಲ್ಲಿ 394 ಪ್ರಕರಣಗಳು, 2021ರಲ್ಲಿ 570 ಪ್ರಕರಣಗಳು, 2022ರಲ್ಲಿ 977 ಪ್ರಕಣಗಳು, 2023ರಲ್ಲಿ 4,470 ಪ್ರಕರಣಗಗಳು ವರದಿಯಾಗಿವೆ ಎಂದು ತಿಳಿಸಿದ್ದಾರೆ. ಇದು ಇಷ್ಟೊಂದು ಹೆಚ್ಚಾಗಿದೆ ಎಂದರೆ, ಇದಕ್ಕೆ ಏನು ಕಾರಣ? ನಕಲಿ ಲೋನ್ App ನಲ್ಲೂ ಕೂಡ 517 ವಂಚನೆ ಪ್ರಕರಣಗಳಾಗಿವೆ ಎಂದು ತಿಳಿಸಿದ್ದಾರೆ. ಮತ್ತೆ ಇತ್ತೀಚೆಗೆ ಆರು ತಿಂಗಳಿನಲ್ಲಿ 1,820 ಪ್ರಕರಣಗಳು ಆಗಿದೆ ಎಂದು ತಿಳಿಸಿದ್ದಾರೆ. ಅದರಲ್ಲಿ ವಿಲೇವಾರಿಯಾಗಿರುವಂಥದ್ದು 1,036 ಪ್ರಕರಣಗಳು. ಅಂದರೆ, ಒಟ್ಟಾರೆ ಎಲ್ಲಾ ಸೇರಿಕೊಂಡು ಇನ್ನು 5,234 ಪ್ರಕರಣಗಳು ಬಾಕಿಯಿವೆ. ಇದು ಆಗುವುದಕ್ಕೆ ಕಾರಣವೇನು? ತಾವು ನ್ಯಾಯಾಧೀಶರಿಗೆ ಮತ್ತು ಪೊಲೀಸ್‌ನವರಿಗೆ ಮತ್ತೆ ಅಭಿಯೋಜಕರಿಗೆ ತರಬೇತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೂ ಕೂಡ ಇಷ್ಟೊಂದು ದೂರುಗಳು ಏಕೆ ಬಾಕಿಯಿವೆ? ಮತ್ತೆ ಪ್ರಕರಣಗಳು ಇತ್ಯರ್ಥವಾಗುತ್ತಿಲ್ಲ ಏಕೆ? ನಾನು ಅಧ್ಯಯನ ಮಾಡಿರುವ ಪ್ರಕಾರ, 24X7 ನಲ್ಲಿ ಅವರು ಕೆಲಸ ಮಾಡುತ್ತಾರೆ. ಬಹುಶಃ ಈ ಕಾರಣವೂ ಇರಬಹುದೇನೋ? ಅಲ್ಲಿ ಸುಮಾರು 59 ಜನರು ಕೆಲಸ ಮಾಡುತ್ತಿದ್ದಾರೆ. ಒಂದು ತಿಂಗಳಿಗೆ ಒಬ್ಬ ಮನುಷ್ಯ ಏನಿಲ್ಲವೆಂದರೂ ಕೂಡ 3,019 ಕರೆಗಳನ್ನು ಸ್ವೀಕಾರ ಮಾಡಬೇಕಾಗುತ್ತದೆ. ಇದು ಸಾಧ್ಯವೇ? ಇದಕ್ಕೆ manpower ಅನ್ನು ಹೆಚ್ಚಿಗೆ ಮಾಡಿದ್ದಾರೆಯೇ? ಅದನ್ನು ಮಾಡಿಲ್ಲವೆಂದರೆ, ಅದನ್ನು ಯಾವಾಗ ಹೆಚ್ಚಿಗೆ ಮಾಡುತ್ತಾರೆ? ಅದನ್ನು ಮಾಡಿದರೆ ತುಂಬಾ ಒಳ್ಳೆಯದು. ಏಕೆಂದರೆ, ಹರಿಯಾಣ ರಾಜ್ಯದಲ್ಲಿ ಮೂರು ಕೋಟಿ ಜನರು ಇದ್ದರೆ, ಅವರಿಗೆ ಒಂದು proactive system ಅನ್ನು ತೆಗೆದುಕೊಂಡು ಬಂದು, ಏನು lien marking ನಲ್ಲಿ 23ನೇ ಅಕ್ಟೋಬರ್‌ನಲ್ಲಿ 10.42 percentage ಇದ್ದರು, ಇವತ್ತು ಅವರು 22.28 percentage ಗೆ ಬಂದಿದ್ದಾರೆ.

(ಮುಂದು)

(516) 18.07.2024 11.50 LL-KS (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಉಮಾಶ್ರೀ (ಮುಂದು):-**

ನಾವು ಕೂಡ ಹಾಗೆ ಹೆಚ್ಚು ಜನರಿಗೆ ಅನುಕೂಲ ಮಾಡುವಂಥದ್ದು ಮಾಡಬೇಕಲ್ಲವೇ? ಎರಡನೆಯದಾಗಿ, ಪ್ರತಿ ತಿಂಗಳು ಕೂಡ ಇವರೆಲ್ಲರ ಮೇಲೆ supervise ಅಥವಾ monitor ಮಾಡಲಿಕ್ಕೆ ಒಂದು ಕಮಿಟಿ ಏನಾದರೂ ರಚನೆ ಮಾಡಿದ್ದೀರಾ? ಇಲ್ಲವಾದರೆ, ರಚನೆ ಮಾಡುವುದಕ್ಕೆ ಸಾಧ್ಯವಿದೆಯೇ? ಇದು ನನ್ನ ಒಂದು ಉಪ ಪ್ರಶ್ನೆಯಾಗಿದ್ದು, ದಯಮಾಡಿ ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. Supportive system, quick actions, proactive measures ಇದೆಲ್ಲವೂ ಬೇಕಾಗಿರುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಡಾ: ಜಿ. ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರತಕ್ಕಂತಹ ಪ್ರಶ್ನೆಗಳಿಗೆ ಆನ್‌ಲೈನ್ ಉದ್ಯೋಗ ವಂಚನೆ, ನಕಲಿ ಲೋನ್ ಆಪ್ ಮತ್ತು ವಿದೇಶಿ ಕಂಪನಿಗಳು ಮೋಸ ಮಾಡುತ್ತಿವೆ ಎನ್ನುವ ಪ್ರಶ್ನೆಗೆ ಬಹಳ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಕಳೆದ 5 ವರ್ಷಗಳ ಮಾಹಿತಿ ಅಂದರೆ, 2020, 2021, 2022, 2023 ಮತ್ತು 2024 ಇಲ್ಲಿಯವರೆಗೂ ಮಾಹಿತಿಯನ್ನು/ಅಂಕಿ-ಅಂಶಗಳನ್ನು ಉತ್ತರದಲ್ಲಿ ಅವರಿಗೆ ತಿಳಿಸಿದ್ದೇನೆ. ಆದರೆ, ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಾ ಎನ್ನುವುದಾಗಿದೆ. ಆ ಅಂಕಿ-ಅಂಶಗಳನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಈ ರೀತಿ ಪ್ರಕರಣಗಳು ಏತಕ್ಕೆ ಇಷ್ಟೊಂದು ಸಂಖ್ಯೆಯಲ್ಲಿ ಆಗುತ್ತಿದೆ ಎಂದು ಕೇಳಿದ್ದಾರೆ. 2020 ರಿಂದ 2024 ರವರೆಗೆ ನಮ್ಮ ರಾಜ್ಯದಲ್ಲಿ CEN (Cybercrime, Economic offences, Narcotics) Police Station ಗಳೆಂದು ಎಂದು ಮೊದಲು ಇರಲಿಲ್ಲ. ಬೆಂಗಳೂರು ನಗರದಲ್ಲಿ ಮಾತ್ರ ಮೊದಲು ಇದ್ದು, ಈಗ ಅದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಿದ್ದು, ಪ್ರತಿ ಜಿಲ್ಲೆಗೆ ಒಂದರಂತೆ ಮತ್ತು ಬೆಂಗಳೂರಿನಲ್ಲಿ ಹೆಚ್ಚು ಸಂಖ್ಯೆಯಲ್ಲಿ ರಚನೆ ಮಾಡಿದ್ದು, ಪ್ರಸ್ತುತ 43 CEN Police Station ಗಳನ್ನು ಈಗ ರಚನೆ ಮಾಡಿದ್ದೇವೆ. ಜೊತೆಗೆ, ಯಾವುದೇ ಪೊಲೀಸ್ ಸ್ಟೇಷನ್‌ಗೆ ಇಂತಹ ದೂರುಗಳು ಬಂದರೆ, ಅವರು ಆ ಪ್ರಕರಣವನ್ನು ದಾಖಲಿಸಿ CEN Police Station ಗೆ ವರ್ಗಾವಣೆ ಮಾಡಬಹುದು ಎನ್ನತಕ್ಕಂತಹ ಅವಕಾಶ ಮಾಡಿಕೊಟ್ಟಿದ್ದೇವೆ. ಆ ಅವಕಾಶ ಇರುವ ಕಾರಣಕ್ಕೆ ಈಗ ಇಷ್ಟೊಂದು ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. 2023ರಲ್ಲಿ 4,470 ಪ್ರಕರಣಗಳು ದಾಖಲಾಗಿದ್ದು, ಸುಮಾರು 34 ಕೋಟಿ ರೂಪಾಯಿಗಳಷ್ಟು ವಂಚನೆಯಾಗಿದೆ ಎಂಬ ಮಾಹಿತಿಯನ್ನು ಕೊಟ್ಟಿದ್ದೇನೆ. ಜೊತೆಗೆ, ಈ ವರ್ಷಕ್ಕೆ ದಿನಾಂಕ:10.07.2024ರವರೆಗೆ ಸುಮಾರು 1,78,18,90,324 ಕೋಟಿ ರೂಪಾಯಿಗಳ ಈ ಆನ್‌ಲೈನ್ ಉದ್ಯೋಗ ಕೊಡುತ್ತೇವೆಂದು ವಂಚನೆ ಮಾಡಿರುತ್ತಾರೆ. ಅದರ ಜೊತೆಗೆ, ನಕಲಿ ಲೋನ್ ಆಪ್ ವಂಚನೆಯಲ್ಲಿ ಸುಮಾರು 4,61,77,041 ಕೋಟಿ ರೂಪಾಯಿ ವಂಚನೆ ಮಾಡಿದ್ದಾರೆಂಬ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಈಗ ಯಾವುದೇ ವ್ಯಕ್ತಿಗೆ ಆನ್‌ಲೈನ್ ವಂಚನೆಯಾದಾಗ ಆತ ಎಲ್ಲಿ ಹೋಗಿ ಪ್ರಕರಣವನ್ನು ದಾಖಲಿಸಬೇಕು ಎನ್ನುವ ಬಗ್ಗೆ

ಅವಕಾಶವಿರಲಿಲ್ಲ. ಆದರೆ, ನಮ್ಮ ರಾಜ್ಯದಲ್ಲಿ 43 CEN Police Station ಗಳಲ್ಲಿ ಈ ಬಗ್ಗೆ ದೂರನ್ನು ದಾಖಲಿಸಬಹುದು. ಜೊತೆಗೆ, ಎಲ್ಲಾ ಪೊಲೀಸ್ ಸ್ಟೇಷನ್‌ಗಳಲ್ಲಿಯೂ ದೂರು ದಾಖಲಿಸುವ ಅವಕಾಶ ಮಾಡಿಕೊಟ್ಟಿದ್ದೇವೆ. ಜೊತೆಗೆ, ಈಗ ಹೊಸದಾಗಿ ADGP (Addl. Director General of Police) ನೇತೃತ್ವದಲ್ಲಿ ಒಂದು ಹುದ್ದೆಯನ್ನು ಸೃಷ್ಟಿ ಮಾಡಿದ್ದೇವೆ. ಅದರಂತೆ, ಒಂದು vertical create ಮಾಡಿ, ಈ CEN Police Station ಮತ್ತು CEN Case ಗಳನ್ನು ಹ್ಯಾಂಡಲ್ ಮಾಡುವುದಕ್ಕೆ ಒಂದು vertical ಅನ್ನು ಪೊಲೀಸ್ ಇಲಾಖೆಯಲ್ಲಿ create ಮಾಡಿದ್ದೇವೆ. ಹಾಗಾಗಿ, ಯಾವುದೇ ಕಾರಣಕ್ಕೆ ಇಂತಹ ವಂಚನೆಗಳು ಮುಂದುವರೆಯುವುದಕ್ಕೆ ಬಿಡುವುದಿಲ್ಲ. ಅದಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಕಾಲ್ ಸೆಂಟರ್‌ಗಳಲ್ಲಿ ಕೇವಲ 59 ಜನ ಇದ್ದು, ಅವರಿಗೆ ಹೊರೆ ಜಾಸ್ತಿಯಾಗುತ್ತಿದೆ. ಹಾಗಾಗಿ, ಕೇವಲ ಅಷ್ಟು ಜನ ಕಾಲ್‌ಸೆಂಟರ್‌ನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಹರಿಯಾಣದಂತಹ ಸಣ್ಣ ರಾಜ್ಯದಲ್ಲಿ 3 ಕೋಟಿ ಜನಸಂಖ್ಯೆ ಇದ್ದು, ಅಲ್ಲಿ 71 ಜನ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಹೋಲಿಕೆ ಮಾಡಿದರೆ, ನಮ್ಮ ರಾಜ್ಯದಲ್ಲಿ 1:3 ರಷ್ಟಾದರೂ ಜನ ಅಂದರೆ, ಕನಿಷ್ಠ 140 ಜನ ಆದರೂ ಇರಬೇಕು. ಕೇವಲ 59 ಜನ ನಮ್ಮ ರಾಜ್ಯದಲ್ಲಿದ್ದಾರೆ. ಅದನ್ನು ಹೆಚ್ಚಿಸಬೇಕಲ್ಲವೇ? ಆ ಸಂಖ್ಯೆಯನ್ನು ಮಾನ್ಯ ಸಚಿವರು ಹೆಚ್ಚು ಮಾಡುತ್ತಾರೆಂದು ನಾನು ನಂಬಿದ್ದೇನೆ. ಹಾಗಾಗಿ, ದಯಮಾಡಿ ಆ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ: ಜಿ. ಪರಮೇಶ್ವರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು ನೇಮಕಾತಿಯನ್ನು ಪ್ರಾರಂಭ ಮಾಡಿದ್ದೇವೆ. ಈ ಕೆಲಸಕ್ಕೆ ನಮಗೆ ಎಷ್ಟು ಸಿಬ್ಬಂದಿಗಳು ಬೇಕಾಗುತ್ತದೆ, ಅವರಿಗೆ ತರಬೇತಿಯನ್ನು ಕೊಟ್ಟು ಅಲ್ಲಿಗೆ ನಿಯೋಜಿಸಬೇಕು. ಯಾರನ್ನೋ ನಾವು ಅಲ್ಲಿಗೆ ನೇಮಕ ಮಾಡುವುದಕ್ಕೆ ಆಗುವುದಿಲ್ಲ. ತರಬೇತಿ ನೀಡಿದ ನಂತರ, ಸಿಬ್ಬಂದಿಗಳನ್ನು ನಿಯೋಜಿಸಬೇಕಾಗುತ್ತದೆ. ಆ ಕೆಲಸವನ್ನು ನಾವು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 413**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಪ್ರಮುಖವಾಗಿ ನನ್ನ ಪ್ರಶ್ನೆ ಏನೆಂದರೆ, ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ಐದು ಗ್ಯಾರಂಟಿಗಳ ಬಗ್ಗೆ ಮತ್ತು ರಾಜ್ಯ ಸರ್ಕಾರ ರಾಜ್ಯದಲ್ಲಿ ಅಭಿವೃದ್ಧಿ ಮೂಲ ಸೌಕರ್ಯ ಕಲ್ಪಿಸುವುದಕ್ಕೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದರಲ್ಲಿ ವಿಫಲವಾಗಿರುವ ದೃಷ್ಟಿಯಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೇನೆ ಮತ್ತು ರಾಜ್ಯ ಸರ್ಕಾರ ಈ ಗ್ಯಾರಂಟಿಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಸಲುವಾಗಿ ಆಸ್ತಿ ನಗದೀಕರಣ ಮಾಡಬೇಕೆಂದು ಒಂದು ಪತ್ರವನ್ನು ಕೂಡ ಬರೆದಿದೆ. ಆದರೆ, ಸರ್ಕಾರ ಕೊಟ್ಟಂತಹ ಉತ್ತರದಲ್ಲಿ ಇದರ ಬಗ್ಗೆ ಯಾವುದೇ ರೀತಿಯಾದಂತಹ ಪ್ರಸ್ತಾಪ ಇಲ್ಲ. ದಿನಾಂಕ:18.05.2024ರಂದು ನಮ್ಮ ರಾಜ್ಯದ Infrastructure Development Department (IDD) ನ Smt. Hephsiba Rani Korlapati, IAS ಅಧಿಕಾರಿಯವರು ಒಂದು ಪತ್ರವನ್ನು ಎಲ್ಲಾ ಇಲಾಖೆ ಅಧಿಕಾರಿಗಳಿಗೆ ಬರೆಯುತ್ತಾರೆ. ತಮ್ಮ ತಮ್ಮ ಇಲಾಖೆಯಲ್ಲಿ ಎಷ್ಟೆಷ್ಟು ಆಸ್ತಿ ಇದೆ, ಯಾವ ಆಸ್ತಿಯನ್ನು ನಾವು ನಗದೀಕರಣ ಮಾಡಬೇಕೆಂದು, ಒಂದು ಅನುಬಂಧವನ್ನು ಲಗತ್ತಿಸಿ ಇದರಲ್ಲಿ ಭರ್ತಿ ಮಾಡಿ ಕಳುಹಿಸಿಕೊಡಿ" ಎಂದು ತಿಳಿಸಿರುತ್ತಾರೆ. ಇಷ್ಟು ಇದ್ದರೂ ಕೂಡ ಸರ್ಕಾರ ಈ ರೀತಿ ಆಸ್ತಿ ನಗದೀಕರಣ ಮಾಡುವ ಪ್ರಸ್ತಾವ ಇಲ್ಲ ಎಂದು ತಪ್ಪು ಉತ್ತರ ಕೊಟ್ಟಿದೆ. ಇದು ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಉತ್ತರವಾಗಿದೆ. ನಾನು ಈ ಪತ್ರವನ್ನು ಮಾಹಿತಿಗಾಗಿ ತಮಗೆ ಕಳುಹಿಸಿಕೊಡುತ್ತೇವೆ. ಈ ಬಗ್ಗೆ ತಾವು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

ಈ Asset Monetisation ಅನ್ನು ಯಾವ ರೀತಿ ಮಾಡಬೇಕೆಂದು ಕೇಂದ್ರ ಸರ್ಕಾರದ Department of Investment and Public Asset Management (DIPAM) ನವರು ಒಂದು ಮಾರ್ಗಸೂಚಿಯನ್ನು ಕೊಟ್ಟಿದ್ದಾರೆ. ಯಾವುದು ಜನ ಸಮುದಾಯಕ್ಕೆ ಭವಿಷ್ಯದಲ್ಲಿ ಅವಶ್ಯಕತೆ ಇರುವಂಥದ್ದು ಮತ್ತು ಯಾವುದು ಅನುಪಯುಕ್ತ ಮತ್ತು ಯಾವುದು non-core assets ನಲ್ಲಿದೆ ಇಂತಹ ಸ್ವತ್ತುಗಳನ್ನು ಸಹ ಭವಿಷ್ಯದಲ್ಲಿ ಬೇಕಾಗದೇ ಇದ್ದರೆ, ಇಂತಹವುಗಳನ್ನು ಮಾಡಬೇಕೆಂಬ ಮಾಹಿತಿಯನ್ನು ಕೊಟ್ಟಿದೆ. ಆದರೆ, ರಾಜ್ಯ ಸರ್ಕಾರ ಇವೊತ್ತಿನ ದಿವಸ ಬಿಡಿಎ ನಲ್ಲಿ ಏನು ಆಸ್ತಿ ಇದೆ, ಅದನ್ನು ನಗದೀಕರಣ ಮಾಡುವುದಕ್ಕೆ ಹೊರಟಿದೆ. ಅದೇ ರೀತಿಯಾಗಿ ಏನು NICE (Nandi Infrastructure Corridor Enterprises) Ltd. ಸಂಸ್ಥೆ ಇದೆ, Bengaluru-Mysuru Expressway Project ಅನ್ನು construct ಮಾಡತಕ್ಕಂತಹ ಜವಾಬ್ದಾರಿಯನ್ನು ವಹಿಸಿಕೊಂಡಿದೆ, ಅದು ಇದುವರೆವಿಗೂ ಸದರಿ ರಸ್ತೆ ನಿರ್ಮಾಣ ಮಾಡಿರುವುದಿಲ್ಲ. ಅದನ್ನು ಕೂಡ takeover ಮಾಡಬೇಕೆಂಬ ಒಂದು ಪ್ರಸ್ತಾವನೆ ಇದೆ ಎನ್ನುವುದು ಕೂಡ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾಗಿದೆ. ಅದೇ ರೀತಿಯಾಗಿ, *DECCAN HERALD'* ದಿನಪತ್ರಿಕೆಯಲ್ಲಿ, *"Govt. may monetise land to raise*

*revenues*" ಎಂದು ವರದಿಯಾಗಿದೆ. ಜೊತೆಗೆ, ಇದಕ್ಕೆ ಸಂಬಂಧಪಟ್ಟಂತೆ Boston Consulting Group (BCG) ಎನ್ನತಕ್ಕಂತಹ ಒಂದು consulting firm ಅನ್ನು ಕೂಡ ಸರ್ಕಾರ ನೇಮಕ ಮಾಡುತ್ತದೆ ಎನ್ನುವ ಬಗ್ಗೆ ವರದಿಯಾಗಿದೆ. ಇದರೊಂದಿಗೆ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಡಾ: ಶಾಲನಿ ರಜನೀಶ್‌ರವರ ಅಧ್ಯಕ್ಷತೆಯಲ್ಲಿ ಆಸ್ತಿ ನಗದೀಕರಣ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಸಭೆ ಕೂಡ ಆಗಿರುತ್ತದೆ. ಇಷ್ಟೆಲ್ಲಾ ಇದ್ದರೂ ಸಹ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಏತಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ದಯಮಾಡಿ ಇದಕ್ಕೆ ಉತ್ತರ ನೀಡಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ, ಮತ್ತೊಂದು ಉಪ ಪ್ರಶ್ನೆ ಇದ್ದು, ಅದನ್ನು ನಾನು ನಂತರ ಕೇಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ಗ್ಯಾರಂಟಿಗಳಿಗೆ ಯಾವ ಯಾವ ಇಲಾಖೆ ಮುಖಾಂತರ ಜಾರಿಗೊಳಿಸಿದ್ದಾರೆಂಬ ಬಗ್ಗೆ ಪ್ರಶ್ನೆ ಕೇಳಿದ್ದು, ಅದಕ್ಕೆ ಪೂರ್ತಿ ಉತ್ತರ ಕೊಟ್ಟಿದ್ದೇವೆ. ಸದರಿ ಗ್ಯಾರಂಟಿ ಯೋಜನೆಗಳಿಗೆ 2023-24 ಮತ್ತು 2024-25ನೇ ಸಾಲಿನಲ್ಲಿ ಒದಗಿಸಿರುವ ಅನುದಾನ ಮತ್ತು ಖರ್ಚಾಗಿರುವ ವಿವರಗಳನ್ನು ಕೇಳಿದ್ದು, ಅದಕ್ಕೂ ಸಹ ಉತ್ತರವನ್ನು ಕೊಟ್ಟಿದ್ದೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಗ್ಯಾರಂಟಿ ಯೋಜನೆಗಳನ್ನು ನೀಡಿರುವ ಬಗ್ಗೆ ನಾನು ಯಾವುದೇ ಪ್ರಶ್ನೆ ಮಾಡುತ್ತಿಲ್ಲ. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದಕ್ಕೆ ನನ್ನ ತಕರಾರು ಏನು ಇಲ್ಲ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೊನೆಯದಾಗಿ ಆಸ್ತಿ ನಗದೀಕರಣದ ಬಗ್ಗೆ ಪ್ರಶ್ನೆ ಕೇಳಿದ್ದು, ಅದಕ್ಕೆ ನಾವು, "ಯಾವುದೇ ಸಾಮಾನ್ಯ ಪ್ರಸ್ತಾವನೆಗಳು ಇರುವುದಿಲ್ಲ" ಎಂದು ಉತ್ತರ ನೀಡಿರುತ್ತೇವೆ. ಜೊತೆಗೆ, ಈ ದಿನ ಬೆಳಗ್ಗೆ ಇಲಾಖೆಯ ಅಧಿಕಾರಿಗಳೊಂದಿಗೆ ಈ ಬಗ್ಗೆ ಮಾಹಿತಿ ಪಡೆದಿದ್ದು ಅವರು, "ಈ ರೀತಿಯಾದಂತಹ ಪ್ರಕ್ರಿಯೆ ಪ್ರತಿಯೊಂದು ಸರ್ಕಾರದಲ್ಲಿ ಸಹಜವಾಗಿ ನಡೆಯುತ್ತಿರುತ್ತದೆ. ಆದರೆ, ಇದನ್ನು ಜಾರಿಗೊಳಿಸಬೇಕೇ ಅಥವಾ ಬೇಡವೇ ಎನ್ನುವ ಚರ್ಚೆಯಾಗುತ್ತದೆ, ನಂತರ ಅದು ಕ್ಯಾಬಿನೆಟ್‌ಗೆ ಬರುತ್ತದೆ. ಅಲ್ಲಿ ಅದೆಲ್ಲದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಚರ್ಚೆಯಾಗಿದೆ. ವಿಷಯಗಳು ಅವರ ಗಮನಕ್ಕೆ ತರುವುದಕ್ಕೆ ಆರ್ಥಿಕ ಇಲಾಖೆ ಈ ರೀತಿಯಾದಂತಹ ಮಾಹಿತಿ ಪಡೆಯುವುದಕ್ಕೆ ಮಾತ್ರ ಆ ಪತ್ರ ಬರೆದಿರುತ್ತಾರೆ ಎಂದು ಹೇಳಿರುತ್ತಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನೇ ಉತ್ತರದಲ್ಲಿ ಹೇಳಬಹುದಿತ್ತು. ಆದರೆ, ಸದನಕ್ಕೆ ಏತಕ್ಕೆ ತಪ್ಪು ಉತ್ತರ ನೀಡಿರುತ್ತಾರೆ.

(ಮುಂದು)

(517) 18-07-2024 (12.00) ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, It is an internal matter of the Finance Department.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ನನ್ನ ರಕ್ಷಣೆಗೆ ಬರಬೇಕು. ದಯವಿಟ್ಟು ಸರಿಯಾದ ಮಾಹಿತಿಯನ್ನು ಕೊಡಿಸಿ ಎಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವಿಚಾರ ನನಗೆ ಅರ್ಥವಾಗಿದೆ. ಆರ್ಥಿಕ ಇಲಾಖೆಯವರು ಎಲ್ಲಾ ಇಲಾಖೆ ಕೊಡುವುದಕ್ಕೆ internal matter ಆಗಿ ಮಾಹಿತಿ ಪಡೆಯುವ ಸಲುವಾಗಿ ಈ ಪತ್ರವನ್ನು ಕಳುಹಿಸಿರುವಂಥದ್ದಾಗಿದೆ. ರಾಜ್ಯ ಸರ್ಕಾರವು ಯಾವುದೇ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾದರೆ, ಮೊದಲು ಸಚಿವ ಸಂಪುಟ ಸಭೆಯ ಮುಂದೆ ತಂದು ಅಲ್ಲಿ ಚರ್ಚೆ ಮಾಡಬೇಕಾಗುತ್ತದೆ. ನಂತರ ಸಚಿವ ಸಂಪುಟ ಸಭೆಯಲ್ಲಿ ಏನಾದರೂ ತೀರ್ಮಾನ ತೆಗೆದುಕೊಂಡ ಪಕ್ಷದಲ್ಲಿ ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ಉತ್ತರ ಕೊಡಬೇಕಾಗುತ್ತದೆ. ನನಗೆ ಸಿಕ್ಕಿರುವಂಥ ಮಾಹಿತಿ ಪ್ರಕಾರ ಹಿಂದಿನ ಸರ್ಕಾರ ಮತ್ತು ಈ ಸರ್ಕಾರದಿಂದಲೂ ಆಗಾಗ ಈ ರೀತಿಯಾದ ಮಾಹಿತಿಯನ್ನು ಆರ್ಥಿಕ ಇಲಾಖೆಯವರು ಪಡೆದಿರುತ್ತಾರೆ. It is a Circular.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ತಪ್ಪು ಎಂದು ನಾನು ಹೇಳುತ್ತಿಲ್ಲ. Propose ಮಾಡುತ್ತಿದ್ದಾರೆ ಹಾಗೂ ಈ ರೀತಿಯಾದ ಪ್ರಸ್ತಾವನೆಯನ್ನು ಪರಿಶೀಲನೆ (ಗೊಂದಲ) ಪತ್ರ ಬರೆದಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಆ ರೀತಿಯಾದಂಥ,...

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಸಭಾನಾಯಕರು ಏನು ಹೇಳುತ್ತಿದ್ದಾರೆ ಎಂಬುದನ್ನು ಕೇಳಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವಿಷಯ ಗೊತ್ತಾಗಿತ್ತಲ್ಲವೇ? It is a Circular. It is an internal matter of the Finance Department. ಇಲಾಖೆಯವರಿಗೆ ಪತ್ರ ಬರೆದು, ಮಾಹಿತಿ ತರಿಸಿಕೊಳ್ಳುವಂತೆ ತಿಳಿಸುತ್ತಾರೆ. ಸರ್ಕಾರದವರು ಏನಾದರೂ ತೀರ್ಮಾನ ತೆಗೆದುಕೊಂಡು ಆಸ್ತಿ ನಗದೀಕರಣ ಮಾಡುವಂಥ ಪ್ರಶ್ನೆ ಬಂದರೆ, ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗಬೇಕಾಗುತ್ತದೆ. ಹಾಗಾಗಿ, ಆ ರೀತಿಯಾಗಿಲ್ಲ ಎಂದು ಮಾತ್ರ ಉತ್ತರ ಕೊಟ್ಟಿದ್ದೇನೆ. ಇದು internal matter. ಈ ರೀತಿಯಾಗಿ ಅನೇಕ ಸಂದರ್ಭದಲ್ಲಿ ಸುತ್ತೋಲೆಯನ್ನು ಕಳುಹಿಸಿ, ಸರ್ಕಾರದವರು ಮಾಹಿತಿಯನ್ನು ತರಿಸಿಕೊಂಡಿರುವಂಥ ಉದಾಹರಣೆ ಸಹಿತ ಇದೆ. ಹಾಗಾಗಿ, ನಾವು ಕೊಟ್ಟಿರುವಂಥ ಮಾಹಿತಿಯು ರಾಜ್ಯ ಸರ್ಕಾರದ ನಿರ್ಧಾರವಾಗಿಲ್ಲ. It is an internal matter of the Finance Department. ಅವರು ಮಾಹಿತಿ ಕೊಡಲಿಕ್ಕೆ circular ಅನ್ನು...

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, public domain ನಲ್ಲಿ ಇದೆ. ಪತ್ರ ಕೂಡಾ ಕಳುಹಿಸಿಕೊಟ್ಟಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪೇಸ್ವಾಮಿಯವರು ಸಾಕಷ್ಟು ಅನುಭವಸ್ಥರು. ಯಾವುದರ ಮೇಲೆ ಅವಲಂಬಿತರಾಗಿ ಈ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆಯೋ, ಅದಕ್ಕೆ ಸರ್ಕಾರದ ನಿರ್ಣಯವಾಗಿಲ್ಲ. ಇದು ಕೇವಲ ಆರ್ಥಿಕ ಇಲಾಖೆಯ internal department note ಆಗಿದೆ. ಆದ್ದರಿಂದ ಇದರ ಮೇಲೆ ಚರ್ಚೆ ಮಾಡುವುದು ಅಥವಾ ಪ್ರತಿಸ್ಪಂದಿಸುವುದು ಸೂಕ್ತವಾಗುವುದಿಲ್ಲ. ಅದಕ್ಕಾಗಿ ಈ ವಿಚಾರದ ಮೇಲಿನ ಚರ್ಚೆಯನ್ನು ಇಲ್ಲಿಗೆ ಮುಗಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವೇನು ಪತ್ರ ಬರೆದ್ದಿದೀರಿ ಅದು public domain ನಲ್ಲಿ ಇದೆ. ನಾನು ಕೇಳಿರುವಂಥ ಪ್ರಶ್ನೆಗೆ ಸದನದಲ್ಲಿ ಸರಿಯಾದ ರೀತಿ ಮಾಹಿತಿಯನ್ನು ಕೊಡಬೇಕಾಗಿತ್ತು. ಸರ್ಕಾರದವರು ಏನೂ ಬೇಕಾದರೂ ಮಾಡಲಿ ತಮಗೆ ತಮ್ಮದೇ ಆದಂತಹ powers ಇರುತ್ತದೆ. Boston Consulting Group ಯನ್ನು ಕೂಡಾ ನೇಮಕ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ನನ್ನ ಒಂದು ಸಲಹೆಯೇನೆಂದರೆ, ಇದಕ್ಕೆ ಆರ್ಥಿಕ ಸಲಹೆಗಾರರು ಬೇಡ. ನಮ್ಮಲ್ಲಿಯೇ ಸಾಕಷ್ಟು ರೀತಿಯಲ್ಲಿ ಅನುಭವ ಇರುವಂಥ ಈ ರಾಜ್ಯದ ಮುಖ್ಯಮಂತ್ರಿಗಳಾಗಿ, ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದಂಥ ಮಾನ್ಯ ವೀರಪ್ಪ ಮೊಯ್ಲಿ, ಮಾನ್ಯ ಹೆಚ್.ಕೆ.ಪಾಟೀಲ್ ಇದ್ದು, ಅವರ ಅಧ್ಯಕ್ಷತೆಯಲ್ಲಿ ಆಯೋಗ ರಚನೆ ಮಾಡಿ. ಜೊತೆಗೆ ನಿವೃತ್ತ ಐ.ಎ.ಎಸ್. ಅಧಿಕಾರಿಗಳು ಕೂಡಾ ಇದ್ದಾರೆ. ಒತ್ತಾಯಪೂರ್ವಕವಾಗಿ ಮಾಡಿ ಎಂದು ಹೇಳುತ್ತಿಲ್ಲ. ನಾನು ನನ್ನ ಸಲಹೆಯನ್ನು ಕೊಡುತ್ತಿದ್ದು, ಅದನ್ನು ಸ್ವೀಕಾರ ಮಾಡುವುದು, ಬಿಡುವುದು ಅವರಿಗೆ ಸಂಬಂಧಪಟ್ಟ ವಿಚಾರ. ಹಾಗೆಯೇ ಸಾಕಷ್ಟು ರೀತಿಯಲ್ಲಿ ಬಿ.ಬಿ.ಎಂ.ಪಿ., ಆರ್ಥಿಕ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದಂಥ ನಿವೃತ್ತ ಐ.ಎ.ಎಸ್. ಅಧಿಕಾರಿಗಳಿದ್ದಾರೆ ಹಾಗೂ ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಸೇವೆ ಸಲ್ಲಿಸಿರುವಂಥ ಶಾಸಕರಿದ್ದಾರೆ. ಅವರ ಸಲಹೆಯನ್ನು ಕೂಡಾ ತೆಗೆದುಕೊಳ್ಳಲಿ. ಅದಲ್ಲದೇ corporate sector ನಲ್ಲಿರುವಂಥ ಶ್ರೀ ಅಜೀಂ ಪ್ರೇಮ್‌ಜಿ, ಶ್ರೀ ಎನ್. ಆರ್.ನಾರಾಯಣ ಮೂರ್ತಿ, ಶ್ರೀ ಮೋಹನ್‌ದಾಸ್ ಪೈ ಇದ್ದು, ಇಂಥವರನ್ನು ಸೇರಿಸಿಕೊಂಡು ಒಂದು ಆಯೋಗ ಮಾಡಿ. BDA ನವರು acquire ಮಾಡಿ, ರೈತರ ಜಮೀನು ತೆಗೆದುಕೊಂಡು, monetize ಮಾಡಿ ಮಾರಾಟ ಮಾಡುತ್ತೇವೆ ಎಂದರೆ ಯಾರೂ ಒಪ್ಪುತ್ತಾರೆ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈ ಸುತ್ತೋಲೆಯನ್ನು ನಮ್ಮ ರಾಜ್ಯದ Infrastructure Development Department ನಿಂದ ಕೊಟ್ಟಿರುವಂಥದ್ದಾಗಿದೆ. ಅದರ ಸಂಬಂಧ ಮಾನ್ಯ ಸದಸ್ಯರ ಮಾಹಿತಿಗೆ ತರುತ್ತೇನೆ. ಮಾನ್ಯ ಸದಸ್ಯರು ಹೇಳಿದಂಥ ಸೂಚನೆಯನ್ನು ಸಹಿತ ಸರ್ಕಾರ ಗಮನಿಸುತ್ತದೆ.

Boston Consulting Group ನವರಿಗೆ ಕೊಡುತ್ತಿದ್ದಾರೆ ಎನ್ನುವಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದರು. ಈ ಸಂಬಂಧ ಭಾರತ ಸರ್ಕಾರವು ಅವರ ಹತ್ತಿರ ಸಲಹೆಯನ್ನು ಪಡೆಯುತ್ತಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಅದು ತಪ್ಪು ಎಂದು ಹೇಳುತ್ತಿಲ್ಲ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಉತ್ತರ ಪ್ರದೇಶ, ಮಧ್ಯಪ್ರದೇಶ, ತಮಿಳುನಾಡು, ತೆಲಂಗಾಣ ಇವೆಲ್ಲವೂ ಈಗಾಗಲೇ,... ಅದರ ಜೊತೆಗೆ ನಮ್ಮ ಕರ್ನಾಟಕದಲ್ಲಿ ಸಹ IIM (Indian Institute of Management), ISEC (Institute of Social and Economic Change), FPI (Fiscal Policy Institute) ಇದ್ದು, ಸಮಯ ಬಂದಾಗ ಯಾರ ವತಿಯಿಂದ ಪಡೆಯಬೇಕೆಂದು ಮಾನ್ಯ ಸದಸ್ಯರ ಸಲಹೆ, ಸೂಚನೆ ಪಡೆದು, ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ. ಈಗಾಗಲೇ "Boston Consulting Group ಗೆ ಬಂದಿದೆ" ಎಂದು ಪತ್ರಿಕೆಯಲ್ಲಿ ವರದಿಯಾಗಿತ್ತು. ಅನೇಕ ರಾಜ್ಯಗಳಲ್ಲಿ ಈ ರೀತಿಯಾದ ಪದ್ಧತಿ ಇದೆ. ಆ ಪದ್ಧತಿಯನ್ನು ಯಾರೋ ಹೇಳಿರುವ ಸಲುವಾಗಿ ಪ್ರಶ್ನೆಯಲ್ಲಿ ಬಂದಿರುವಂಥ ವಿಷಯವಾಗಿದೆ. ನಮ್ಮ ರಾಜ್ಯದಲ್ಲಿ ಕೂಡಾ ಏಜೆನ್ಸಿಗಳಿವೆ. ಹಾಗೆಯೇ ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ ಅನೇಕ ಅನುಭವಸ್ಥರು ಇದ್ದಾರೆ. ಅವರೆಲ್ಲರಿಂದ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 18ನೇ ಜುಲೈ 2024 ಸಮೂಹ-4ರಲ್ಲಿನ ಒಟ್ಟು 116 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಮುಖ್ಯ ಶಿಕ್ಷಕರ ಬಡ್ತಿ, ಪ್ರೌಢಶಾಲಾ ಶಿಕ್ಷಕರ ಬಡ್ತಿ, ಸೇವಾ ಜೇಷ್ಠತೆಯಂತಹ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವ ಕುರಿತು.**

- - - - -

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳ ಹಕ್ಕು ಕಾಯ್ದೆ 2009 ಹಾಗೂ ಎನ್.ಸಿ.ಟಿ.ಇ. ಅಧಿಸೂಚನೆ ಅನ್ವಯ 2017 ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿದ್ದು, ಅದರ ಪ್ರಕಾರ ಮೊದಲಿದ್ದ 1-8 ರ ವೃಂದವನ್ನು 1-5 ಮತ್ತು 6-8 ಎಂಬ ಎರಡು ವೃಂದಗಳಲ್ಲಿ ವಿಭಾಗಿಸಿ ವಿವಿಧ ವಿದ್ಯಾರ್ಹತೆಗಳನ್ನು ನಿಗದಿಪಡಿಸಲಾಗಿದೆ. ಇದು ಉತ್ತಮ ಬೆಳವಣಿಗೆಯಾದರೂ ಈ ನಿಯಮಗಳನ್ನು ಪೂರ್ವಾನ್ವಯವಾಗುವಂತೆ ಜಾರಿಗೊಳಿಸಿದ್ದರಿಂದ ರಾಜ್ಯದ ಲಕ್ಷಾಂತರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಹುದೊಡ್ಡ ಅನ್ಯಾಯವಾಗಿರುವುದರ ಜೊತೆಗೆ ಕೆಲವು ಸಮಸ್ಯೆಗಳು ಉದ್ಭವವಾಗಿದೆ. ಮುಖ್ಯವಾಗಿ 2016 ಕ್ಕಿಂತ ಮುಂಚೆ 1 ರಿಂದ 7-8ನೇ ತರಗತಿಗೆ ಸಹ ಶಿಕ್ಷಕರೆಂದು ನೇಮಕಾತಿ ಹೊಂದಿದ ಶಿಕ್ಷಕರಿಗೆ ಪಿ.ಎಸ್.ಜಿ. ಎಂದು ಪದನಾಮಿಕರಣ ಮಾಡಿ, 1-5 ಕ್ಕೆ ಹಿಂಬಡ್ತಿ ನೀಡಲಾಗಿದೆ. ಅಲ್ಲದೇ, ಸದರಿ ವೃಂದ ಮತ್ತು ನೇಮಕಾತಿ ನಿಯಮಗಳ ಜಾರಿಯಿಂದಾಗಿ ಶಿಕ್ಷಕರಿಗೆ ಸೇವಾ ಜೇಷ್ಠತೆ, ಕಾಲಮಿತಿ ಬಡ್ತಿ, ಸ್ವಯಂಚಾಲಿತ ಬಡ್ತಿ, ಮುಖ್ಯ ಶಿಕ್ಷಕರ ಬಡ್ತಿ, ಪ್ರೌಢಶಾಲಾ ಶಿಕ್ಷಕರ ಬಡ್ತಿ ಹಾಗೂ ವರ್ಗಾವಣೆಗಳಲ್ಲಿ ಅನ್ಯಾಯವಾಗುವುದರ ಜೊತೆಗೆ ನಿಯಮಗಳ ಉಲ್ಲಂಘನೆಯಾಗುತ್ತಿದೆ. ಆದ್ದರಿಂದ ಸರ್ಕಾರ, ಕೂಡಲೇ ಪ್ರಾಥಮಿಕ ಶಾಲಾ ಶಿಕ್ಷಕರಿಗಾದ ಅನ್ಯಾಯವನ್ನು ಗಂಭೀರವಾಗಿ ಪರಿಗಣಿಸಿ ತುರ್ತಾಗಿ ಆದೇಶ ಹೊರಡಿಸಿ, ಉಲ್ಲಂಘನೆಯಾಗಿರುವ ನಿಯಮಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಮತ್ತು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮತ್ತೊಮ್ಮೆ ಪರಿಶೀಲಿಸಿ, ನಂತರ ಸೇವಾನುಭವ ಮತ್ತು ಉನ್ನತ ವಿದ್ಯಾರ್ಹತೆ ಹೊಂದಿರುವ ಸೇವಾ ನಿರತ ಶಿಕ್ಷಕರಿಗೆ ಯಾವುದೇ ರೀತಿಯ ತಾರತಮ್ಯ ಹಾಗೂ ಅನ್ಯಾಯವಾಗದಂತೆ ನಿಯಮ ರೂಪಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು. ಹಿಂಬಡ್ತಿಗೊಳಗಾದ ಶಿಕ್ಷಕರನ್ನು ಜಿ.ಪಿ.ಟಿ. ಶಿಕ್ಷಕರೆಂದು ಸೇವಾ ಜೇಷ್ಠತೆಯೊಂದಿಗೆ ಪದನಾಮಿಕರಣ ಮಾಡುವುದರಿಂದ ನಿಯಮ ಪಾಲನೆಯ ಜೊತೆಗೆ ಶಿಕ್ಷಕರ ವರ್ಗಾವಣೆ ಸಮಸ್ಯೆ, ಮುಖ್ಯ ಶಿಕ್ಷಕರ ಬಡ್ತಿ ಸಮಸ್ಯೆ, ಪ್ರೌಢಶಾಲಾ ಶಿಕ್ಷಕರ ಬಡ್ತಿ ಸಮಸ್ಯೆ, ಪಿ.ಎಸ್.ಟಿ. ಮತ್ತು ಜಿ.ಪಿ.ಟಿ. ಹುದ್ದೆಗಳ ಸಮನ್ವಯದ ಸಮಸ್ಯೆ, ಕಾಲಮಿತಿ ಬಡ್ತಿಗಳ ಸಮಸ್ಯೆ ಹಾಗೂ ಸೇವಾ ಜೇಷ್ಠತೆಯಂತಹ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸುತ್ತೇನೆ.

**ಆ) ವಿಷಯ:- ನಗರ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಹಿತದೃಷ್ಟಿಯಿಂದ ಕಾನೂನು ತೊಡಕುಗಳನ್ನು ನಿವಾರಿಸಿ ಮೀಸಲಾತಿ ಪ್ರಕಟಿಸುವ ಕುರಿತು.**

- - - - -

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, **"ಅಧಿಕಾರ ಇದ್ದೂ ಇಲ್ಲದಂತಾದ ಚುನಾಯಿತ ಸದಸ್ಯರು"** ಎಂಬ ಶೀರ್ಷಿಕೆಯಡಿ ದಿನಾಂಕ: 30.06.2024ರ ಉದಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಸಾಲಿಗ್ರಾಮ ಪಟ್ಟಣ ಪಂಚಾಯತ್‌ನಲ್ಲಿ ಅಧ್ಯಕ್ಷ ಉಪಾಧ್ಯಕ್ಷರ ಮೊದಲಾರ್ಧದ ಅವಧಿ ಅಂತ್ಯಗೊಂಡು ಹಲವಾರು ತಿಂಗಳು ಕಳೆದಿವೆ. ಮೀಸಲಾತಿ ಘೋಷಣೆಯಾಗದ ಹಿನ್ನೆಲೆಯಲ್ಲಿ 2ನೇ ಅವಧಿಗೆ ಅಧ್ಯಕ್ಷ ಉಪಾಧ್ಯಕ್ಷರ ನೇಮಕವಾಗದೇ ಹತ್ತಾರು ಸಮಸ್ಯೆ ಸೃಷ್ಟಿಯಾಗಿದೆ. ಚುನಾಯಿತ ಅಧ್ಯಕ್ಷರಿಲ್ಲದೆ ಉಡುಪಿ ನಗರಸಭೆ ಮತ್ತು ಸಾಲಿಗ್ರಾಮ ಪಟ್ಟಣ ಪಂಚಾಯತಿ ಒಂದು ವರ್ಷಕ್ಕೂ ಹೆಚ್ಚು ಅವಧಿಯಿಂದ ಕಾರ್ಯಾಚರಿಸುತ್ತಿದೆ.

ರಾಜ್ಯದ ಯಾವುದೇ ನಗರ ಸ್ಥಳೀಯ ಸಂಸ್ಥೆಗೆ ಸರ್ಕಾರದ ಮಟ್ಟದಲ್ಲಿ 2ನೇ ಅವಧಿಗೆ ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆ ನಡೆಯದೇ ಇರುವುದರಿಂದ ಈ ಸಮಸ್ಯೆ ಎಲ್ಲೆಡೆಯೂ ಇದೆ. ಒಂದು ಬಾರಿ ಚುನಾಯಿತ ಸದಸ್ಯರು ಪ್ರಮಾಣವಚನ ಸ್ವೀಕರಿಸಿದರೆ ಮತ್ತೆ ಐದು ವರ್ಷ ಮಾತ್ರ ಆ ಮಂಡಳಿಯ ಅಧಿಕಾರಾವಧಿ ಮೊದಲ ಅವಧಿಗೆ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯಾಗಿ ಈಗ ಒಂದು ವರ್ಷ ಕಳೆದು ಹೋಗಿರುವುದರಿಂದ ಮುಂದೆ ಬರುವ ಅಧ್ಯಕ್ಷ ಉಪಾಧ್ಯಕ್ಷರಿಗೆ ಈ ಅವಧಿ ಲುಪ್ತವಾಗುತ್ತದೆ.

ಉಡುಪಿ, ಸಾಲಿಗ್ರಾಮ ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳ ಆಡಳಿತವಿದ್ದು ಅಧಿಕಾರಿಗಳ ಮಾತೇ ಅಂತಿಮ ಎನ್ನುವಂತಾಗಿದೆ. ಜನರ ಕೆಲಸಗಳು ಸರಿಯಾಗಿ ಆಗುತ್ತಿಲ್ಲ, ಮಧ್ಯವರ್ತಿಗಳ ಹಾವಳಿ ಹೆಚ್ಚುತ್ತಿದೆ. ಚುನಾಯಿತ ಸದಸ್ಯರಿಗೆ ನೇರ ಅಧಿಕಾರವಿಲ್ಲದ ಕಾರಣ ಹೆಸರಿಗಷ್ಟೇ ಸದಸ್ಯರು ಎಂಬ ಆರೋಪ ಕೇಳಿ ಬರುತ್ತಿದೆ. ಹಿಂದಿನ ಅವಧಿಯು ಅಂತ್ಯಗೊಂಡ ಒಂದೆರಡು ತಿಂಗಳಲ್ಲಿ ಮುಂದಿನ ಅವಧಿಯ ಅಧ್ಯಕ್ಷ-ಉಪಾಧ್ಯಕ್ಷ ಮೀಸಲಾತಿ ಪ್ರಕಟವಾಗಿ ಆಯ್ಕೆ ನಡೆಯಬೇಕಿತ್ತು. ಆದರೆ, ಕಾನೂನು ಸಂಘರ್ಷದಿಂದ ಈ ಪ್ರಕ್ರಿಯೆ ನನೆಗುದಿಗೆ ಬಿದ್ದಿದ್ದು ಸರ್ಕಾರ ಕೂಡ ಈ ಬಗ್ಗೆ ಆಸಕ್ತಿ ತೋರುತ್ತಿಲ್ಲ ಎನ್ನಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಹಿತದೃಷ್ಟಿಯಿಂದ ಆದಷ್ಟು ಬೇಗ ಕಾನೂನು ತೊಡಕುಗಳನ್ನು ನಿವಾರಿಸಿ ಮೀಸಲಾತಿ ಪ್ರಕಟಿಸಲು ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಪೌರಾಡಳಿತ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸುತ್ತೇನೆ.

(ಮುಂದು)

(518) 18.07.2024/12.10/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

ಇ) **ವಿಷಯ:- ರಾಜ್ಯದಲ್ಲಿ ಭೀಕರ ಬರದಿಂದ ತತ್ತರಿಸಿರುವ ರೈತರ ನೆರವಿಗೆ ಬರ ಪರಿಹಾರ ಅನುದಾನ ನೀಡುವಲ್ಲಿ ಕೇಂದ್ರ ಸರ್ಕಾರದ ತಾರತಮ್ಯ ನೀತಿ ಕುರಿತು.**

-------

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಜ್ಯದಲ್ಲಿ ಭೀಕರ ಬರದಿಂದ ತತ್ತರಿಸಿರುವ ರೈತರ ನೆರವಿಗೆ ಬರ ಪರಿಹಾರ ಅನುದಾನ ನೀಡುವಲ್ಲಿ ಕೇಂದ್ರ ಸರ್ಕಾರದ ತಾರತಮ್ಯ ಕುರಿತು ದಿನಾಂಕ 14.07.2024 ರಂದು "ಪ್ರಜಾವಾಣಿ" ದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ರಾಜ್ಯದಲ್ಲಿ ಭೀಕರ ಬರದಿಂದ ಸಂಕಷ್ಟಕ್ಕೆ ಸಿಲುಕಿದ ರಾಜ್ಯ ಗ್ರಾಮೀಣ ಭಾಗದ ಜನರ ಜೀವನೋಪಾಯಕ್ಕೆ ನೆರವಾಗುವ ಸಲುವಾಗಿ 12,557 ಕೋಟಿ ರೂಪಾಯಿಗಳನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಇಟ್ಟಿದ್ದ ಬೇಡಿಕೆಯನ್ನು ಕೇಂದ್ರ ಸರ್ಕಾರ ಒಪ್ಪದೇ ಕೇವಲ 232 ಕೋಟಿ ರೂಪಾಯಿಗಳನ್ನು ಅಷ್ಟೇ ನೀಡಿ ರಾಜ್ಯ ಜನರಿಗೆ ನಿರಾಸೆಯನ್ನು ಉಂಟು ಮಾಡಿದೆ ಎಂಬ ವಿಷಯವು "ಪ್ರಜಾವಾಣಿ" ದಿನ ಪತ್ರಿಕೆಯಲ್ಲಿ ಪರಿಹಾರಕ್ಕಾಗಿ ಜಟಾಪಟಿ ಎಂಬ ತಲೆಬರಹದಡಿ ವರದಿಯಾಗಿದೆ.

ಕೇಂದ್ರ ಸರ್ಕಾರ ಮೊದಲಿನಿಂದಲೂ ರಾಜ್ಯದ ಬೇಡಿಕೆಗಳಿಗೆ ಸ್ಪಂದಿಸದೇ ಮಲತಾಯಿ ಧೋರಣೆ ನೀತಿ ಅನುಸರಿಸುತ್ತಿದ್ದು, ಈ ಹಿಂದೆ ರಾಜ್ಯಕ್ಕೆ ವಿವಿಧ ಯೋಜನೆಗಳನ್ನು ಸಿಗಬೇಕಾದ ಅನುದಾನ ನೀಡದಿರುವುದು ಮತ್ತು ಜಿ.ಎಸ್.ಟಿ. ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಎಸಗುತ್ತಲೇ ಬಂದಿದೆ. ಎನ್.ಡಿ.ಆರ್.ಎಫ್., ಮಾರ್ಗಸೂಚಿ ಪ್ರಕಾರ ಕುಟುಂಬದ ಇಬ್ಬರಿಗೆ ಜೀವನೋಪಾಯಕ್ಕಾಗಿ ಪರಿಹಾರ ಒದಗಿಸಬಹುದಾಗಿದ್ದು, ರಾಜ್ಯ ಸರ್ಕಾರ ಒಬ್ಬ ವ್ಯಕ್ತಿಗೆ 90 ದಿನಗಳ ಮಟ್ಟಿಗೆ ಪರಿಹಾರ ನೀಡಲು ಉದ್ದೇಶಿಸಿದೆ. ಅದಕ್ಕಾಗಿ ಕೇಂದ್ರದಿಂದ 12,557 ಕೋಟಿ ರೂಪಾಯಿಗಳ ಪರಿಹಾರವನ್ನು ಕೋರಲಾಗಿತ್ತು. ಈ ಸಂಬಂಧ ಕೇಂದ್ರ ಸಚಿವರಿಗೆ ಮನವರಿಕೆಯನ್ನು ಸಹ ಮಾಡಲಾಗಿತ್ತು. ಆದರೆ ಪರಿಹಾರ ನೀಡಿರುವುದು ಚಿಕ್ಕಾಸು ಮಾತ್ರ.

ರಾಜ್ಯ ಕೃಷಿ ವಲಯವು ಜಿ.ಎಸ್.ಡಿ.ಪಿ.ಗೆ ಶೇಕಡಾ 15 ರಷ್ಟು ಕೊಡುಗೆ ನೀಡುತ್ತಿದೆ. ಶೇಕಡಾ 41ರಷ್ಟು ಜನರು ಈ ವಲಯದಲ್ಲಿ ತೊಡಗಿಸಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಜನರು ಜೀವನೋಪಾಯಕ್ಕಾಗಿ ಕೃಷಿ ಚಟುವಟಿಕೆಯನ್ನೇ ಅವಲಂಬಿಸಿದ್ದು, ಭೀಕರ ಬರದಿಂದಾಗಿ ಗ್ರಾಮೀಣ ರೈತ ಕುಟುಂಬಗಳಿಗೆ ನೆರವು ನೀಡುವುದು ಅಗತ್ಯವಾಗಿದೆ. ವೈಜ್ಞಾನಿಕ ದತ್ತಾಂಶಗಳ ಮೂಲಕ ಮಾಹಿತಿ ಕಲೆ ಹಾಕಿ ಕೇಂದ್ರಕ್ಕೆ ನೀಡಿದ್ದರೂ ಕೇಂದ್ರದ ಅವೈಜ್ಞಾನಿಕ ಲೆಕ್ಕಾಚಾರದಿಂದ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಬರ ಪರಿಸ್ಥಿತಿ ಹಿನ್ನಲೆಯಲ್ಲಿ ಕೊಳವೆಬಾವಿ ಹಾಗೂ ಟ್ಯಾಂಕರ್‌ಗಳ ಮೂಲಕ 2,048 ಹಳ್ಳಿಗಳಿಗೆ ಕುಡಿಯುವ ನೀರನ್ನು

ಒದಗಿಸಲಾಗಿದೆ. 21,000ಕ್ಕೂ ಹೆಚ್ಚು ಗೋವುಗಳ ಸಂರಕ್ಷಣೆಗೆ ಕ್ರಮ ಕೈಗೊಂಡು 29 ಗೋಶಾಲೆಗಳನ್ನು 66 ಮೇವಿನ ಶಿಬಿರಗಳನ್ನು ತೆರೆಯಲಾಗಿದೆ. ಅದಾಗಿಯೂ ರಾಜ್ಯದ ಮನವಿಯನ್ನು ಪುರಸ್ಕರಿಸದೇ ಕೇಂದ್ರ ರಾಜ್ಯಕ್ಕೆ ಅನ್ಯಾಯವೆಸಗಿರುವುದು ದುರಂತವೇ ಸರಿ.

ದಯಮಾಡಿ, ಈ ನಿಟ್ಟಿನಲ್ಲಿ ಮತ್ತೊಮ್ಮೆ ಕೇಂದ್ರದ ಮೇಲೆ ಒತ್ತಡವನ್ನು ತಂದು ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಿಸುವುದಿಲ್ಲ. ಇದು ಕಂದಾಯ ಸಚಿವರಿಗೆ ಬರುತ್ತದೆ. ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ:- ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಗುಡ್ಡ ಕುಸಿತ ಸಂಭವಿಸಿ ಮೃತರಾದ ಕುಟುಂಬಗಳಿಗೆ ಗರಿಷ್ಠ ಪರಿಹಾರ ಘೋಷಣೆ ಮಾಡುವ ಬಗ್ಗೆ.**

-------

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರ ಬಳಿ ಇರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುಡ್ಡ ಕುಸಿತ ಸಂಭವಿಸಿ ಸಾವು ನೋವುಗಳಾಗಿ ಆದ ಬಗ್ಗೆ ವರದಿ ಎಲ್ಲಾ ಪತ್ರಿಕೆಗಳ ಮುಖಪುಟಗಳಲ್ಲಿ ಪ್ರಕಟವಾಗಿರುವ ವಿಷಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದ ಅಂಕೋಲಾ ತಾಲ್ಲೂಕಿನ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಹೊಂದಿರುವ ಗುಡ್ಡ ಕುಸಿದು ಹೆದ್ದಾರಿ ಪಕ್ಷದಲ್ಲಿರುವ ಮನೆಗಳು, ಚಹಾ ಅಂಗಡಿ ಮತ್ತು ಅಡುಗೆ ಅನಿಲ ಹೊಂದಿರುವ ಟ್ಯಾಂಕರ್ ಕೊಚ್ಚಿ ಹೋಗಿರುವುದು ಎಂದು ವರದಿಯಾಗಿದೆ. ಈ ಘಟನೆಯಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿ ಒಟ್ಟು 15 ಜನ ಮೃತ ಪಟ್ಟಿರುವುದು ಎಂಬ ಬಗ್ಗೆ ಶಂಕಿಸಲಾಗಿದೆ ಮತ್ತು ಕೆಲವು ಜನ ನಾಪತ್ತೆ ಆಗಿರುವುದು ಎಂದು ತಿಳಿದು ಬಂದಿರುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಡ್ಡ ಕುಸಿಯುವುದಕ್ಕೆ ಕಾರಣ, ಹೆದ್ದಾರಿ ಮಾಡುವಾಗ ಅವೈಜ್ಞಾನಿಕವಾಗಿ ಗುಡ್ಡ ಕೊರೆದಿರುವುದೇ ಈ ದುರಂತಕ್ಕೆ ಕಾರಣ ಎಂದು ಸಾರ್ವಜನಿಕರು ಹೇಳುತ್ತಿರುವವರು. ಅದೇ ರೀತಿ ಸರ್ಕಾರ ನೇಮಿಸಿರುವ ಭೂವಿಜ್ಞಾನಿಗಳು ಸಹ ವರದಿಯನ್ನು ಸಲ್ಲಿಸಿರುವರು. ಈ ರೀತಿ ಗುಡ್ಡ ಕುಸಿತ ಕಳೆದ 2-3 ವರ್ಷಗಳಿಂದ ಆಗುತ್ತಾ ಬಂದಿರುವುದು. ಈ ಹಿನ್ನೆಲೆಯಲ್ಲಿ ಸರ್ಕಾರ ಸುಸಜ್ಜಿತ ತಡೆಗೋಡೆ ನಿರ್ಮಾಣ ಮಾಡುವ ಕಾರ್ಯ ಮಾಡಬೇಕಾಗಿತ್ತು. ಈ ಕುರಿತು ಈಗಾಗಲೇ ಜಿಲ್ಲಾಡಳಿತ ರಾಜ್ಯ ಸರ್ಕಾರಕ್ಕೆ ತಡೆಗೋಡೆ ನಿರ್ಮಿಸಲು

ಒಂದು ವರ್ಷದ ಹಿಂದೆಯೇ ಪ್ರಸ್ತಾವನೆಯನ್ನು ಸಲ್ಲಿಸಿದೆ. ಆದರೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ದುರ್ದೈವದ ಸಂಗತಿ. ಒಟ್ಟಾರೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಈ ರೀತಿಯ ಅವಘಡ ಆಗಿರುವುದು. ಆದ್ದರಿಂದ ಸಂಬಂಧಪಟ್ಟ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ವಸ್ತುಸ್ಥಿತಿ ಅಧ್ಯಯನ ಮಾಡಿ, ಅದನ್ನು ಸಾಮಾನ್ಯ ಸ್ಥಿತಿಗೆ ತಂದು ಮುಂದಿನ ದಿನಮಾನಗಳಲ್ಲಿ ಈ ರೀತಿ ಅವಘಡಗಳು ಪುನಃ ಆಗದ ಹಾಗೇ ಅಗತ್ಯ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಲು ಒತ್ತಾಯಿಸುತ್ತೇನೆ.

ಭೂಕುಸಿತ ದುರ್ಘಟನೆಯಿಂದ ಮೃತರ ಕುಟುಂಬಕ್ಕೆ ರೂ.5 ಲಕ್ಷ ಪರಿಹಾರ ಸರ್ಕಾರ ಘೋಷಣೆ ಮಾಡಿರುವುದು ಕಡಿಮೆ ಆಗಿರುವುದು. ಆದ್ದರಿಂದ ಇನ್ನೂ ಹೆಚ್ಚಿನ ಕನಿಷ್ಠ ರೂ.10 ಲಕ್ಷ ಪರಿಹಾರ ಘೋಷಣೆ ಮಾಡಬೇಕು ಹಾಗೂ ಮನೆ ಕಳೆದುಕೊಂಡವರಿಗೆ ಮನೆ ಕಟ್ಟಿಕೊಡುವ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ಅಂಕೋಲಾದಿಂದ ಕಾರವಾರವರೆಗಿನ 1500 ಎಕರೆ ಪ್ರದೇಶದಲ್ಲಿ ಹಸಿರು ನಿರ್ಮಾಣಕ್ಕೆ ಪ್ರಸ್ತಾವನೆಯ ಯೋಜನೆಯನ್ನು ಕರಾವಳಿ ಭಾಗದಲ್ಲಿ ಜಾರಿಗೆ ತರುವ ಕುರಿತು.**

-------

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಭೀಕರ ಭೂಕುಸಿತಕ್ಕೆ 15 ಬಲಿ, ಅವ್ಯಾಹತ ಮಳೆಗೆ ಉತ್ತರ ಕನ್ನಡ ತತ್ತರ ಎಂಬ ಶೀರ್ಷಿಕೆಯಡೆ ಜುಲೈ 17 ರ "ಹೊಸದಿಗಂತ" ದಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ ಉಲ್ಲೇಖಿಸಿದ ಕೆಲವು ಅಂಶಗಳ ಸದನ ಮುಂದೆ ಪ್ರಸ್ತಾಪಿಸಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ ಮೇಲೆ ಗುಡ್ಡ ಕುಸಿದು ಬಿದ್ದಿರುವುದರಿಂದ ಒಂದೇ ಕುಟುಂಬದ ಐದು ಜನ ಸೇರಿದಂತೆ ಸುಮಾರು 15 ಜನರು ಮಣ್ಣಿನಡಿಗೆ ಸಿಲುಕಿ ಪ್ರಾಣ ಕಳೆದುಕೊಂಡಿದ್ದಾರೆ. ಜೊತೆಗೆ 5 ಅಂಗಡಿಗಳು, ನಾಲ್ಕೈದು ಮನೆಗಳು ನೆಲಸಮವಾಗಿವೆ. ಅನೇಕ ಭಾರೀ ವಾಹನಗಳು ಮಣ್ಣಿನಲ್ಲಿ ಸಿಲುಕಿದೆ. ಗ್ಯಾಸ್ ಟ್ಯಾಂಕರ್ ಒಂದು ಗಂಗಾವಳಿ ನದಿಯಲ್ಲಿ ತೇಲಿ ಹೋಗಿದೆ ಎಂದು ವರದಿಯಾಗಿದೆ. ಜಿಲ್ಲೆಯಲ್ಲಿ ಈ ತರಹದ ಆರೇಳು ಕಡೆ ಭೂಕುಸಿತವಾಗಿದ್ದು, ಜೀವ ಹಾನಿ, ಬೆಳೆ ಹಾನಿ ಮತ್ತು ಆಸ್ತಿ ಹಾನಿ ಸಂಭವಿಸಿದೆ. ಇದಕ್ಕೆ ಪರಿಸರ ತಜ್ಞರು ಕಾರಣ ನೀಡಿದ್ದು, ಪಶ್ಚಿಮಘಟ್ಟ ಪ್ರದೇಶದಲ್ಲಿ ನಿರಂತರವಾಗಿ ಅವೈಜ್ಞಾನಿಕವಾಗಿ ನಡೆಯುತ್ತಿರುವ ಗಣಿಗಾರಿಕೆ, ಚತುಷ್ಪಥ ಹೆದ್ದಾರಿ ನಿರ್ಮಾಣದಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಕಾಮಗಾರಿ

ಇತ್ಯಾದಿಗಳು. ಹೀಗಾಗಿ ಈ ಪ್ರದೇಶದಲ್ಲಿ ನಡೆಯುತ್ತಿರುವ ಭಾರೀ ಸ್ಫೋಟಕ ಕಾಮಗಾರಿಗೆ ನಿಯಂತ್ರಣ ಆಗಬೇಕು. ಗುಡ್ಡ ಕಡಿಯುವಾಗ 90 ಡಿಗ್ರಿಯಲ್ಲಿ ಕತ್ತರಿಸದೇ ಇಳಿಜಾರು ಮಾದರಿಯಲ್ಲಿ ಕತ್ತರಿಸಬೇಕು ಎಂದು ಸಲಹೆಗಳನ್ನು ನೀಡಿದ್ದಾರೆ. ಅಲ್ಲದೇ 2019-2020ರಲ್ಲಿ ರಾಜ್ಯ ಸರ್ಕಾರ ರಚಿಸಿದ ಗ್ರೀನ್‌ಬೆಲ್ಟ್ ಯೋಜನೆಯನ್ನು ಜಾರಿಗೆ ತರದೇ ಇರುವುದೂ ಒಂದು ಕಾರಣ. ಅಂದು ರಾಜ್ಯ ಸರ್ಕಾರ ಇಂತಹ ಅವಘಡಗಳಿಗೆ ಸೂಕ್ತ ಸಲಹೆ ನೀಡಲು ಪಶ್ಚಿಮಘಟ್ಟ ಕಾರ್ಯಪಡೆ, ಜೀವವೈವಿಧ್ಯತಾ ಮಂಡಳಿ ಮತ್ತು ಭಾರತೀಯ ವಿಜ್ಞಾನ ಸಂಸ್ಥೆ ಇವುಗಳ ಪ್ರತಿನಿಧಿಗಳ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಭೂಸವಕಳಿ ತಡೆಯಲು ಪ್ರಾಯೋಗಿಕವಾಗಿ ಅಂಕೋಲಾದಿಂದ ಕಾರವಾರದವರೆಗಿನ 1,500 ಎಕರೆ ಪ್ರದೇಶದಲ್ಲಿ ಹಸಿರು ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಈ ಪ್ರಸ್ತಾವನೆಯ ಯೋಜನೆಯು ಕರಾವಳಿಯ ಈ ಭಾಗದಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ಸ್ಥಳೀಯರ ಮನವಿಗೆ ಸರ್ಕಾರ ಸ್ಪಂದಿಸಬೇಕೆಂಬ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಊ) ವಿಷಯ:- ಜವಳಿ ಉದ್ಯಮದ ಕುಸಿತದಿಂದಾಗಿ ನೇಕಾರರ ಕುಟುಂಬಗಳು ಸಂಕಷ್ಟದಲ್ಲಿದ್ದು, ಅವರುಗಳಿಗೆ ಪರಿಹಾರಧನ ಹಾಗೂ ಅಗತ್ಯ ನೆರವು, ಸೌಲಭ್ಯಗಳನ್ನು ಒದಗಿಸುವ ಬಗ್ಗೆ.**

--------

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಜಗತ್ತನ್ನೇ ಕಾಡಿದ ಮಹಾಮಾರಿ ಕೊರೊನಾ ಪಿಡುಗಿನಿಂದಾಗಿ ಲಾಕ್‌ಡೌನ್ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ನೇಕಾರಿಕೆ ಕಸುಬು ಇಲ್ಲಿಯವರೆಗೆ ಚೇತರಿಸಿಕೊಂಡಿಲ್ಲ. ನೇಕಾರಿಕೆಯನ್ನೇ ನಂಬಿ ಬದುಕುವವರ ಪಾಡು ಹೇಳಲು ಕಷ್ಟ ಸಾಧ್ಯವಾಗಿದೆ. ಕುಸಿದ ಜವಳಿ ಮಾರುಕಟ್ಟೆ ಹಾಗೂ ಗಗನಕ್ಕೇರಿದ ಕಚ್ಚಾ ವಸ್ತುಗಳ ಬೆಲೆಯಿಂದಾಗಿ ನೇಕಾರ ತತ್ತರಿಸುತ್ತಿದ್ದಾನೆ. ಇದರಿಂದಾಗಿ ತನ್ನ ಕಾಯಕ ಮುಂದುವರೆಸಲು ಮಾಡಿದ ಸಾಲ ತೀರಿಸಲಾಗದೇ ದುಸ್ಥಿತಿಗೆ ತಲುಪಿದ್ದಾನೆ.

ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಹೊಡೆತದಿಂದ ಮೇಲೇಳಲಾಗದೇ ಒತ್ತಡಕ್ಕೆ ಸಿಲುಕಿ ಆತ್ಮಹತ್ಯೆ ಒಂದೇ ದಾರಿ ಎಂಬ ತೀರ್ಮಾನಕ್ಕೆ ಬರುತ್ತಿರುವ ನೇಕಾರರ ಮನೋಬಲ ಹೆಚ್ಚಿಸುವ ಕಾರ್ಯಗಳನ್ನು ಇಂದಿನ ಸರ್ಕಾರವು ಮಾಡಲು ಮುಂದಾಗಬಹುದೆಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಬಹುದೊಡ್ಡ ಬಂಡವಾಳದಾರರು ಜವಳಿ ಉದ್ಯಮದತ್ತ ಮುಖ ಮಾಡಲು ಅವಕಾಶ ಸಿಕ್ಕಿರುವ ಹಿನ್ನೆಲೆಯಲ್ಲಿ ಬಡ ನೇಕಾರರಿಗೆ ಕಚ್ಚಾ ವಸ್ತುವಿನ ಕೊರತೆಯಾಗಿದೆ. ಜವಳಿ ಉದ್ಯಮ ಕುಸಿತಕ್ಕೆ ಇದೂ ಕೂಡ ಒಂದು ಕಾರಣವೆನ್ನಬಹುದು. ಬೃಹತ್ ಜವಳಿ ಉದ್ಯಮದ ಎದುರು ಸ್ಥಳೀಯವಾಗಿ ನೇಕಾರಿಕೆಯನ್ನೇ ನಂಬಿ ಬದುಕುವ ನೇಕಾರರು ನಿಧಾನವಾಗಿ ಆತ್ಮಹತ್ಯೆ ದಾರಿ ಹಿಡಿಯುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಇತ್ತೀಚೆಗೆ ಸಾಲದ ಬಾದೆಯನ್ನು ತಾಳಲಾರದೇ ನಾಲ್ವರು ನೇಕರಾರರು ಆತ್ಮಹತ್ಯೆ ಮಾಡಿಕೊಂಡಿರುವುದು ಇಲಾಖೆಯ ಗಮನಕ್ಕೆ ಬಂದಿರಬಹುದು ಎಂದು ಭಾವಿಸುತ್ತೇನೆ.

ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಹಳೇಪಾಳ್ಯದ ನಿವಾಸಿಯಾದ ಶ್ರೀನಾಥ್ ವಯಸಸ್ಸು 46 ಹಾಗೂ ಅದೇ ಊರಿನವರಾದ ಶ್ರೀ ಮಧು ನಾಯಕ್, ವಯಸ್ಸು 38 ಮತ್ತು ಮಧು ನಾಯಕ್‌ರವರ ಹೆಂಡತಿ ಶ್ರೀಮತಿ ಚರಿತಾಬಾಯಿ ನಾಯಕ್ ವಯಸ್ಸು 34, ಈ ದಂಪತಿಗಳು ನೇಣಿಗೆ ಶರಣಾಗಿದ್ದಾರೆ. ಮತ್ತೋರ್ವ ನೇಕಾರ ಅಣ್ಣಾಪುರದ ನಿವಾಸಿಯಾದ ಶ್ರೀ ನಾಗರಾಜು, ವಯಸ್ಸು 48 ಎಂಬುವವರು ಅಮಾನಿಕೆರೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಇವರುಗಳು ಖಾಸಗೀ ಫೈನಾನ್ಸ್‌ನಿಂದ ಸಾಲ ಪಡೆದು ಉದ್ಯೋಗ ನಡೆಸಿದ್ದರೂ ವ್ಯಾಪಾರ ವಹಿವಾಟು ಕೈಕೊಟ್ಟ ಹಿನ್ನೆಲೆಯಲ್ಲಿ ಸಾಲ ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದು ಬಂದಿದೆ.

ಆದ್ದರಿಂದ ದಯಮಾಡಿ, ಮಾನ್ಯ ಇಲಾಖೆಯ ಸಚಿವರು ಇತ್ತ ಗಮನಹರಿಸಿ ಈ ನೇಕಾರರ ಕುಟುಂಬಗಳಿಗೆ ಪರಿಹಾರಧನ ಒದಗಿಸಿ, ಅನಾಥವಾಗಿರುವ ಅವರ ಹೆಂಡತಿ, ಮಕ್ಕಳಿಗೆ ಸರ್ಕಾರದಿಂದ ಅಗತ್ಯ ನೆರವುಗಳನ್ನು ಹಾಗೂ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಖ) ವಿಷಯ:- ಯಾದಗಿರಿ ನಗರ ವ್ಯಾಪ್ತಿಯ ಶ್ರೀ ರಾಚೋಟಿ ವೀರಣ್ಣ ದೇವಾಲಯದ ಅಭಿವೃದ್ಧಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅನುದಾನ ಬಿಡುಗಡೆ ಮಾಡುವ ಕುರಿತು.**

- - - - -

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಪ್ರಕೃತಿಯಲ್ಲಿ ಮಳೆಗಾಲದ ನೀರನ್ನು ಹಿಡಿದಿಟ್ಟುಕೊಂಡು ವರ್ಷ ಪೂರ್ತಿ ಝರಿಗಳ ರೂಪದಲ್ಲಿ ಭೂಮಿಗೆ ನೀರುಣಿಸುವ ಅಂತರ್ಜಲ ಮಟ್ಟ ಕಾಯ್ದುಕೊಳ್ಳಲು ಸಹಾಯಕವಾಗುವ ಬೆಟ್ಟ ಗುಡ್ಡಗಳು, ಅವುಗಳ ಮೇಲೆ ಕಾಡು, ಅರಣ್ಯ ನಿರ್ಮಾಣವಾಗಲು ಸಹಸ್ರಾರು ವರ್ಷಗಳು ಬೇಕು. ಪರಿಸರಕ್ಕೆ ಪೂರಕವಾದ, ಜೀವ ವೈವಿದ್ಯಕ್ಕೆ ಆಶ್ರಯ

ನೀಡುವ, ಪ್ರಾಕೃತಿಕ ಸಂಪತ್ತು. ದೇಶದ ಆಸ್ತಿ ಅವುಗಳ ರಕ್ಷಣೆ ಸರ್ಕಾರದ ಜವಾಬ್ದಾರಿ ಅಷ್ಟೇ ಅಲ್ಲ, ಪ್ರತಿ ಪ್ರಜೆಯ ಜವಾಬ್ದಾರಿಯಾಗಿದೆ ಎಂದು ನೆನಪಿಸಲು ಸನಾತರು ಬೆಟ್ಟಗುಡ್ಡಗಳಲ್ಲಿ ಕೆರೆ, ಭಾವಿ, ನದಿ, ದಡಗಳ ಮೇಲೆ ದೇವಾಲಯಗಳನ್ನು, ದೇವ ವನಗಳನ್ನು ನಿರ್ಮಿಸುತ್ತಿದ್ದರು. ಮಾನವ ತನ್ನ ಸ್ವಾರ್ಥಕ್ಕಾಗಿ ಅವುಗಳೆಲ್ಲವನ್ನೂ ಒಂದೊಂದಾಗಿ ನಾಶ ಮಾಡುತ್ತಿರುವುದರಿಂದ ವಾತಾವರಣದಲ್ಲಿ ತಾಪಮಾನ ಹೆಚ್ಚಾಗುತ್ತಿದೆ. ಕಾಲ ಕಾಲದಲ್ಲಿ ಮಳೆ ಬರುತ್ತಿರುವುದು ಅನುಭವಿಸುತ್ತಿದ್ದಾರೆ. ಶತ ಶತಮಾನಗಳ ಕಾಲ ಆಸ್ತಿತ್ವದಲ್ಲಿದ್ದ ಬೆಟ್ಟ, ಪುರಣಾ ಪ್ರಸಿದ್ಧಿಯ ಐತಿಹಾಸಿಕ ಯಾದಗಿರಿಯ ನಗರ ವ್ಯಾಪ್ತಿಯಲ್ಲಿ ಶ್ರೀ ರಾಚೋಟಿ ವೀರಣ್ಣ ದೇವಾಲಯವಿರುವ ಬೆಟ್ಟವಿದೆ. ಒಂದು ಕಾಲದಲ್ಲಿ ಬೆಟ್ಟದಲ್ಲಿ ಗಿಡಮರಗಳಿಂದ ಕೂಡಿದ, ಪಕ್ಕದ ತಾಂಡಾಗಳಿಗೆ ದನ-ಕರು, ಕುರಿ, ಆಡು ಮೇಯಿಸಲು ಇರುವ ದಟ್ಟವಾದ ಕಾಡು ಇತ್ತು. ಬೆಟ್ಟದ ಗುಹೆಯಲ್ಲಿ ಬೃಹತ್ ಬಂಡೆ ಪ್ರಾಕೃತಿಕವಾಗಿ ನಿರ್ಮಿಸಿದ ಗವಿಯಲ್ಲಿ ನಗರದ ಅಧಿದೇವತೆ ದೇವರು ಶ್ರೀ ರಾಚೋಟಿ ವೀರಣ್ಣ ಮತ್ತು ಶ್ರೀಮಾತೆ ಮಹಾಕಾಳ ನೆಲೆಸಿದ್ದಾಳೆ. ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದಿಂದ ಭಕ್ತರು ದರ್ಶನಕ್ಕಾಗಿ ಬರುತ್ತಾರೆ. ಪವಿತ್ರ ಮತ್ತು ಪುಣ್ಯಕ್ಷೇತ್ರವುಳ್ಳ ಈ ಬೆಟ್ಟದ ಮೇಲೆ ಸ್ವಾರ್ಥಿಗಳ ಕಣ್ಣು ಬಿದ್ದು, ಪ್ರಭಾವಿಗಳ ಮೂಲಕ 2004-2005 ರಲ್ಲಿ ಅಕ್ರಮ ಗಣಿಗಾರಿಕೆ ನಡೆಸಲಾಗಿತ್ತು.

ಶತ ಶತಮಾನಗಳಿಂದ ಸಾಹಸಿಗರಿಗೆ ಚಾರಣಕ್ಕೆ ಕೈಬೀಸಿ ಕರೆದ ತಾಣ, ಭೂಮಿಯಿಂದ ಸುಮಾರು 200 ಮೀಟರ್ ಎತ್ತರದಲ್ಲಿ ದೊಡ್ಡ ಕಲ್ಲುಗಳಿಂದ ಕಟ್ಟಿದ ಭವ್ಯ ದಿವ್ಯ ದೇವಾಲಯ ಇರುವ ಜಾಗ, ಉತ್ಸವ ಜಾತ್ರೆಗಳ ನಿಮಿತ್ತ ಕುಸ್ತಿ, ದಾಸೋಹಕ್ಕಾಗಿದ್ದ ದೇವಸ್ಥಾನದ ಮುಂಭಾಗದ ವಿಶಾಲ ಮೈದಾನದಲ್ಲಿ ಖಾಸಗಿಯವರ ಲೇಔಟ್ ಬಂದಿದೆ. ಪ್ರಭಾವಿಗಳ ಸಹಕಾರದಿಂದ ಗುಡ್ಡದ ಭಾಗವನ್ನು ಅಕ್ಕ-ಪಕ್ಕ, ಹಿಂದೆ-ಮುಂದೆ ಕತ್ತರಿಸುತ್ತ ಕೊನೆಗೆ ತೋಳದ ಕಣ್ಣು ಹೋತದ ಮೇಲೆ ಎಂಬಂತೆ ದೇವಸ್ಥಾನದ ಎದುರಿನ ಮೈದಾನಕ್ಕೆ ಮತ್ತು ಬೆಟ್ಟದ ಮುಂಭಾಗಕ್ಕೆ ರಿಯಲ್ ಎಸ್ಟೇಟ್ ಸಂಚಕಾರ ತಂದಿದೆ. ಜಿಲ್ಲಾಧಿಕಾರಿಗಳ ಕಾರ್ಯಾಲಯದ 1 ಕಿ.ಮೀ. ದೂರದಲ್ಲಿರುವ, ಮತ್ತು ಪರಿಸರ ಸಂರಕ್ಷಣೆ ನಿಯಮಗಳನ್ನು ಉಲ್ಲಂಘಿಸಿ, ಯಾದಗಿರಿ ಡೆವಲಪ್‌ಮೆಂಟ್ ಅಥಾರಟಿ ಖಾಸಗಿ ಲೇಔಟ್‌ಗೆ ಅನುಮತಿ ನೀಡಿದೆ ಎಂದರೆ ಹಣ, ಅಧಿಕಾರದ ಪ್ರಭಾವದ ದುರ್ಬಳಕೆಗೆ ಜೀವಂತ ಉದಾಹರಣೆಯಾಗಿದೆ.

ಆದ್ದರಿಂದ ಕರ್ನಾಟಕ ಸರ್ಕಾರವು ಈ ಕೂಡಲೇ ಎಚ್ಚೆತ್ತು ಅಕ್ರಮವಾಗಿ ತಲೆ ಎತ್ತಿರುವ ಲೇಔಟ್‌ಗಳನ್ನು ಪ್ರತಿಬಂಧಿಸಬೇಕು. ಜಾತ್ರೆ ನಡೆಯುತ್ತಿರುವ ಮೈದಾನವನ್ನು ಯಥಾವತ್ತಾಗಿ ದೇವಸ್ಥಾನಕ್ಕೆ ಮೀಸಲಾಗಿ ಇಡಬೇಕು. ದೇವಸ್ಥಾನ ಬೆಟ್ಟದ ಒಟ್ಟು ಪ್ರದೇಶದ ಸರ್ವೆ ಮಾಡಿಸಿ ಸರ್ಕಾರದ ಜಮೀನು ಪರರ ಪಾಲಾಗದಂತೆ ಎಚ್ಚರಿಕೆ ವಹಿಸಬೇಕು. ಸಾಮಾಜಿಕ, ಅರಣ್ಯ ಅಭಿವೃದ್ಧಿ ಪಡಿಸಬೇಕು. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅನುದಾನವನ್ನು ಬಿಡುಗಡೆ ಮಾಡಿ ಯಾತ್ರಿ ನಿವಾಸ, ಮಹಾದ್ವಾರ, ದೇವಸ್ಥಾನದ ರಿಪೇರಿ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು, ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(519) 18.07.2024, 12.20, ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಎ) ವಿಷಯ:- ಬಾಗಲಕೋಟೆ ಜಿಲ್ಲೆಯಲ್ಲಿ ರಾಜ್ಯದ ಏಕಮಾತ್ರ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ದುರ್ಬಲಗೊಳಿಸುವ ಯತ್ನಗಳ ವರದಿಗಳನ್ನು ಮಾರ್ಪಡಿಸಿ, ಪುನರ್‌ಪರಿಶೀಲಿಸುವ ಬಗ್ಗೆ.**

- - - - -

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ದಿನಾಂಕ 17.07.2024 ಬುಧವಾರದಂದು `ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ "ಸಮಗ್ರ ವಿಶ್ವವಿದ್ಯಾಲಯ ಶಿಫಾರಸ್ಸು, ಏಕ ಮಾತ್ರ ತೋಟಗಾರಿಕೆ ವಿಶ್ವವಿದ್ಯಾಲಯದ ಘನತೆಗೆ ಕುತ್ತು" ಎಂಬ ಬಾಗಲಕೋಟೆ ಜಿಲ್ಲೆಯ ವಿಶೇಷ ಶೀರ್ಷಿಕೆಯಡಿ ವರದಿಯೊಂದು ಪ್ರಕಟವಾಗಿದೆ. ಈ ವಿಷಯದ ಬಗ್ಗೆ ಇಂದಿನ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

ಬಾಗಲಕೋಟೆ ಜಿಲ್ಲೆಯಲ್ಲಿ ರಾಜ್ಯದ ಏಕಮಾತ್ರ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ದುರ್ಬಲಗೊಳಿಸುವ ಯತ್ನಗಳು ಶುರುವಾಗಿದೆ ಎಂಬ ವರದಿಯನ್ನು ಗಮನಿಸಿದರೆ ಜಿಲ್ಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯದ ಬಗ್ಗೆ ರಾಜ್ಯ ಸರ್ಕಾರ ಕಿಂಚಿತ್ತೂ ಕಾಳಜಿ ವಹಿಸುತ್ತಿಲ್ಲ ಎಂದು ಅನಿಸುತ್ತದೆ.

2009ರಲ್ಲಿ ಆರಂಭಗೊಂಡ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯವು ತೋಟಗಾರಿಕೆಗೆ ಸಂಬಂಧಿಸಿದಂತೆ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಜೊತೆಗೆ ಸಂಶೋಧನೆಗೆ ಆದ್ಯತೆ ನೀಡುತ್ತಿದೆ. ತೋಟಗಾರಿಕೆ ಕ್ಷೇತ್ರವು ದೇಶದ ಸಮಗ್ರ ಅಭಿವೃದ್ಧಿಗೆ ಶೇ.30ರಷ್ಟು ಕೊಡುಗೆ ನೀಡುತ್ತಿರುವುದಲ್ಲದೇ ಎಲ್ಲಾ ಸಂದರ್ಭಗಳಲ್ಲೂ ತೋಟಗಾರಿಕಾ ಬೆಳೆಗಳು ರೈತರಿಗೆ ನೆರವಾಗುವ ಉದ್ದೇಶದಿಂದ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಲಾಗಿತ್ತು. ದಕ್ಷಿಣ ಕರ್ನಾಟಕದ ಕೋಲಾರ ಸೇರಿ ಒಂದೆರಡು ಜಿಲ್ಲೆಗಳಲ್ಲಿ ತೋಟಗಾರಿಕೆಗೆ ಅವಕಾಶಗಳಿದ್ದರೆ, ಉತ್ತರ ಕರ್ನಾಟಕದ ಭಾಗದಲ್ಲಿ ಬಾಗಲಕೋಟೆ-ವಿಜಯಪುರ ಭಾಗಶಃ ಬೆಳಗಾವಿ ಜಿಲ್ಲೆಗಳು ತೋಟಗಾರಿಕೆ ಬೆಳೆಗಳಿಗೆ ವಿಫುಲ ಅವಕಾಶ ನೀಡಿದವುಗಳಾಗಿವೆ. ಇದನ್ನು ಗಮನಿಸಿದ ಅಂದಿನ ಸರ್ಕಾರ ಕೇಂದ್ರ ಭಾಗದಲ್ಲಿರುವ ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆ ಮಾಡಿದ್ದನ್ನು ಮರೆಯಕೂಡದು.

ಮುಳುಗಡೆನಗರಿ ಪಟ್ಟ ಹೊತ್ತಿರುವ ಬಾಗಲಕೋಟೆಗೆ ವಿಶ್ವವಿದ್ಯಾಲಯ ಘೋಷಣೆಗೊಂಡಾಗ ಈ ಭಾಗಕ್ಕೆ ಸರ್ಕಾರದ ಉತ್ತಮ ಕೊಡುಗೆ ಎಂದು ಬಣ್ಣಿಸಲಾಗಿತ್ತು. ಆದರೆ ಈಗ ಸಮಗ್ರ ವಿಶ್ವವಿದ್ಯಾಲಯಕ್ಕೆ ಒಳಪಡುತ್ತಿರುವುದರಿಂದ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಪ್ರತಿಷ್ಠೆ ಕುಗ್ಗಲಿದ್ದು, ವಿಶ್ವವಿದ್ಯಾಲಯ ದುರ್ಬಲಗೊಳ್ಳುತ್ತಿದೆ ಎಂಬ ಆತಂಕ ಜಿಲ್ಲೆಯ ಜನರಲ್ಲಿ ಶುರುವಾಗಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ರಾಜೇಂದ್ರ ಪ್ರಸಾದ್ ನೇತೃತ್ವದ ಸಮಿತಿಯನ್ನು ಮಂಡ್ಯದಲ್ಲಿ ಆರಂಭವಾಗುವ ಕೃಷಿ ವಿಶ್ವವಿದ್ಯಾಲಯಕ್ಕೆ ಶಿಫಾರಸ್ಸು ಮಾಡುವುದಕ್ಕಾಗಿ ರಚಿಸಲಾಗಿತ್ತು. ಈ ಸಮಿತಿ ಇತ್ತೀಚೆಗೆ ಕೃಷಿ ಸಚಿವರಾದ ಶ್ರೀ ಎನ್.ಚೆಲುವರಾಯಸ್ವಾಮಿಯವರಿಗೆ ವರದಿಯನ್ನು ಸಲ್ಲಿಸಿದ್ದು, ಈ ವರದಿಯೇ ಹಲವು ಆಕ್ಷೇಪಗಳಿಗೆ ಕಾರಣವಾಗಿದೆ. ಸಮಗ್ರ ವಿಶ್ವವಿದ್ಯಾಲಯ ಶಿಫಾರಸ್ಸು ಮಾಡುತ್ತಿರುವ ಸಮಿತಿಯಲ್ಲಿ ತೋಟಗಾರಿಕೆ ಇಲಾಖೆ, ವಿಶ್ವವಿದ್ಯಾಲಯ ತಜ್ಞರು ಇಲ್ಲದಿರುವುದರಿಂದ ಇದು ಏಕಪಕ್ಷೀಯ ವರದಿ ಆಗಬಾರದು.

ಜಿಲ್ಲೆಯ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಅನುದಾನದ ವಿಚಾರದಲ್ಲೂ ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರುತ್ತಿರುವುದು ದುರ್ದೈವದ ಸಂಗತಿ. ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ನಿರೀಕ್ಷಿತ ಅನುದಾನವೂ ಲಭ್ಯವಾಗುತ್ತಿಲ್ಲ. ಕಳೆದ ಬಾರಿ ರೂ.197 ಕೋಟಿಗಳ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿ ಸರ್ಕಾರದಿಂದ ಕೇವಲ ರೂ. 102 ಕೋಟಿಗಳ ಅನುದಾನ ಲಭಿಸಿತ್ತು. ಎಲ್ಲಾ ಅಳೆದು ತೂಗಿದರೂ ರೂ. 38.35 ಕೋಟಿಗಳ ಅನುದಾನ ಕೊರತೆಯನ್ನು ವಾರ್ಷಿಕವಾಗಿ ವಿಶ್ವವಿದ್ಯಾಲಯ ಎದುರಿಸುತ್ತಲೇ ಬಂದಿದೆ ಎಂಬ ವರದಿಯನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 9 ಕಾಲೇಜು, 12 ಸಂಶೋದನಾ ಕೇಂದ್ರ ಹಾಗೂ 12 ವಿಸ್ತರಣಾ ಕೇಂದ್ರಗಳಿವೆ.

ಬಾಗಲಕೋಟೆ ಜಿಲ್ಲೆಯ ತೋಟಗಾರಿಕೆ ವಿಶ್ವವಿದ್ಯಾಲಯದ ಈ ಶಿಫಾರಸ್ಸುಗಳ ವರದಿಗಳನ್ನು ಸುದೀರ್ಘವಾಗಿ ಮತ್ತೊಮ್ಮೆ ಮಾರ್ಪಡಿಸಿ, ಪುನರ್ ಪರಿಶೀಲಿಸಬೇಕು ಎಂದು ಇಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಏ) ವಿಷಯ:- ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹಾನಬಾಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ, ವೈದ್ಯಾಧಿಕಾರಿಯನ್ನು ನೇಮಿಸುವ ಬಗ್ಗೆ.**

----

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು, ಹಾನಬಾಳ ಹೋಬಳಿ ಹಾಗೂ ಜಿಲ್ಲಾ ಪಂಚಾಯ್ತಿ ಕ್ಷೇತ್ರದ ವ್ಯಾಪ್ತಿಯಲ್ಲಿ ಸುಮಾರು 30 ಸಾವಿರಕ್ಕೂ ಅಧಿಕವಾದ ಜನಸಂಖ್ಯೆ ಇದ್ದು, ಈ ಹೋಬಳಿಯು ಪರಿಪೂರ್ಣವಾಗಿ ಮಲೆನಾಡು ಭಾಗವಾಗಿದ್ದು, ಇಲ್ಲಿನ ಅತೀ ಹೆಚ್ಚು ಜನರು ತಮ್ಮ ಜೀವನೋಪಾಯಕ್ಕೆ ಕಾಫಿ ತೋಟಗಳಲ್ಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ

ಪ್ರದೇಶದಲ್ಲಿ ಪದೇಪದೇ ಕಾಡುಪ್ರಾಣಿಗಳ ದಾಳಿ ಹಾಗೂ ಇದರೊಂದಿಗೆ ಹಾವು, ಚೇಳುಗಳು ಜಿಗಣೆಯಂತಹ ವಿಷಪೂರಿತ ಜೀವರಾಶಿಗಳು ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಜೀವಕ್ಕೆ ಹಾನಿಕರ ಸಮಸ್ಯೆಗಳನ್ನು ಉಂಟುಮಾಡುತ್ತವೆ. ಆದರೆ ಇವರ ಸುರಕ್ಷತೆಗೆ ಸುಸಜ್ಜಿತ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಲ್ಲವಾಗಿದ್ದು, ಇರುವಂತಹ ಒಂದೇ ಒಂದು ಚಿಕ್ಕ ಆಸ್ಪತ್ರೆಯಲ್ಲಿ ಒಬ್ಬರೇ ಮಹಿಳಾ ವೈದ್ಯರಿದ್ದು ಅವರು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಇವರಿಗೆ ಸರಿಯಾದ ವಸತಿ ಸಹ ಇಲ್ಲ ಹಾಗೂ ಯಾವುದೇ ಔಷಧಿಗಳು ಸಹ ಇಲ್ಲದಂತಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಹಾನಬಾಳ ಹೋಬಳಿಗೆ ಒಂದು ಸುಸಜ್ಜಿತವಾದ ಆಸ್ಪತ್ರೆಯ ಅವಶ್ಯಕತೆಯಿದೆ ಅಥವಾ ಇರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಪ್ರತಿನಿತ್ಯ 3 ಅವಧಿಯಲ್ಲಿ ಕರ್ತವ್ಯ ನಿರ್ವಹಿಸಲು ವೈದ್ಯಾಧಿಕಾರಿಗಳನ್ನು ನೇಮಿಸುವುದು ಹಾಗೂ ಅವರಿಗೆ ವಾಸ್ತವ್ಯಕ್ಕೆ ಅನುಕೂಲವಾಗಲು ವಸತಿ ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ ಅವಶ್ಯಕತೆಗೆ ತಕ್ಕಂತಹ ಔಷಧಿಗಳನ್ನು ಒದಗಿಸಲು ವ್ಯವಸ್ಥೆ ಮಾಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರ ಹಿತದೃಷ್ಟಿಯಿಂದ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನಕ್ಕೆ ತರಲು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಐ) ವಿಷಯ:- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಫ್ಲೆಕ್ಸ್/ಬ್ಯಾನರ್ ಹಾವಳಿ ಕುರಿತು.**

**- - - -**

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 15.07.2024 ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಪ್ರಕಟವಾದ ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಫ್ಲೆಕ್ಸ್/ಬ್ಯಾನರ್ ಹಾವಳಿ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ಅಕ್ರಮ ಜಾಹಿರಾತು ಫಲಕಗಳು, ಫ್ಲೆಕ್ಸ್ ಮತ್ತು ಹೋರ್ಡಿಂಗ್‌ಗಳ ಹಾವಳಿ ಮಿತಿಮೀರಿ ಹಲವಾರು ರೀತಿಯ ಸಮಸ್ಯೆಗೆ ಕಾರಣವಾಗುತ್ತಿದೆ. ಅನಧಿಕೃತವಾಗಿ ಹೋರ್ಡಿಂಗ್ಸ್, ಫ್ಲೆಕ್ಸ್, ಬ್ಯಾನರ್ ಅಳವಡಿಸುವುದಕ್ಕೆ ಕಡಿವಾಣ ಹಾಕುವಂತೆ ಹೈಕೋರ್ಟ್ ಪದೇಪದೇ ಸರ್ಕಾರಕ್ಕೆ ಚಾಟಿ ಬೀಸುತ್ತಿದ್ದರೂ ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ, ಪ್ರಮುಖ ವೃತ್ತಗಳಲ್ಲಿ ಸೇರಿದಂತೆ ಇತರೆ ಸ್ಥಳಗಳಲ್ಲಿ ಅನಧಿಕೃತ ಬ್ಯಾನರ್, ಫ್ಲೆಕ್ಸ್ ಹಾಕುವುದು ನಿಂತಿಲ್ಲ. ಕಣ್ಣಿಗೆ ರಾಚುವಂತೆ ಅಳವಡಿಸಿದ್ದರೂ ಪಾಲಿಕೆಯ ಅಧಿಕಾರಿಗಳು ಕುರುಡರಂತೆ ವರ್ತಿಸುತ್ತಿದ್ದಾರೆ.

ಹುಟ್ಟುಹಬ್ಬ, ಸಮಾರಂಭಗಳು, ಸಂಘ-ಸಂಸ್ಥೆಗಳ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ನಗರದ ಹಲವು ಭಾಗಗಳಲ್ಲಿ ಫ್ಲೆಕ್ಸ್ ಅಳವಡಿಸುವುದು ನಿಂತಿಲ್ಲ. ವಾಹನ ಸಂಚಾರಕ್ಕೆ ಅಡಚಣೆಯಾಗುವಂತೆ ರಸ್ತೆ ವಿಭಜಕಗಳಲ್ಲಿ, ವಿದ್ಯುತ್ ಕಂಬಗಳಿಗೆ ಫ್ಲೆಕ್ಸ್ ಅಳವಡಿಕೆ ಮುಂದುವರೆದಿದೆ. ಇನ್ನು ಅನುಮತಿ ಪಡೆದು ಫ್ಲೆಕ್ಸ್‌ಗಳು ಅಳವಡಿಕೆ ಮಾಡಿದ ನಂತರ ಒಂದು ದಿನದೊಳಗೆ ತೆರವು ಮಾಡಬೇಕೆಂದು ನಿಯಮ ಇದೆ. ಆದರೂ ತೆರವು ಕಾರ್ಯ ಮಾತ್ರ ಆಗುತ್ತಿಲ್ಲ ಹಾಗೂ ಕೆಲವರು ಕೆಲವೇ ಸಂಖ್ಯೆಯ ಫ್ಲೆಕ್ಸ್ ಅಳವಡಿಕೆಗೆ ಅನುಮತಿ ಪಡೆದು, ನೂರಾರು ಫ್ಲೆಕ್ಸ್ ಅಳವಡಿಸುತ್ತಿದ್ದಾರೆ. ಫ್ಲೆಕ್ಸ್ ಅಳವಡಿಸಲು ಹಾಕಲಾಗುವ ಹಲಗೆಗಳಿಗೆ ಹೊಡೆಯಲಾಗುವ ಮೊಳೆಗಳಿಂದಲೂ ಸಮಸ್ಯೆ ಎದುರಾಗುತ್ತಿದೆ. ಫ್ಲೆಕ್ಸ್‌ಗಳು ಗಾಳಿಗೆ, ರಸ್ತೆಗೆ ಬಿದ್ದಾಗ ಅವುಗಳ ಮೇಲೆ ವಾಹನಗಳು ಓಡಾಡಿದಾಗ ಟೈರ್‌ಗಳು ಜಖಂ ಆಗಿ ವಾಹನಗಳು ಚಲಿಸುತ್ತಿರುವಾಗಲೇ ಅಪಘಾತಕ್ಕೊಳಗಾಗಿವೆ.

ಫ್ಲೆಕ್ಸ್, ಬ್ಯಾನರ್‌ಗಳು ಬಹುಪಾಲು ಪ್ಲಾಸ್ಟಿಕ್‌ಗಳಿಂದ ಕೂಡಿದ್ದು, ಇವುಗಳನ್ನೂ ಕ್ಯಾಲ್ಸಿಯಂ ಕಾರ್ಬೋನೇಟ್, ಪಿವಿಸಿ ರೇಸಿನ್, ಫಾಲಿಸ್ಟರ್ ಪ್ಯಾಬ್ರಿಕ್, ಫ್ಲಾಸ್ಟಿಸೈಜರ್ಸ್ ವಸ್ತುಗಳನ್ನು ಉಪಯೋಗಿಸಿ ಫ್ಲೆಕ್ಸ್ ತಯಾರು ಮಾಡಲಾಗುತ್ತದೆ. ಇದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ. 2017ರಿಂದ ನ್ಯಾಯಾಲಯ ಆದೇಶ ನಿರ್ದೇಶನಗಳನ್ನು ನೀಡುತ್ತಾ ಬಂದಿದೆ. ಇದೇ ವರ್ಷ 2024 ಜನವರಿ 8 ರಂದು ವಿವರವಾದ ಆದೇಶವನ್ನು ನ್ಯಾಯಾಲಯ ಕೂಡ ಹೊರಡಿಸಿ, ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವು ಕುರಿತಾಗಿ ಎಚ್ಚರಿಕೆಯನ್ನು ಬಿಬಿಎಂಪಿಗೆ ನೀಡಿದ್ದರೂ ಸಹ ಅಧಿಕಾರಿಗಳು ಕ್ರಮವಹಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಈ ಮೂಲಕ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(520)18.7.2024/12.30/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಈಗ ವರದಿಯನ್ನೊಪ್ಪಿಸುವುದು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ನನ್ನ ವಿಷಯವೂ ಇದೆ.

**ಸಭಾಪತಿಯವರು:-** ಇಲ್ಲ. ನಮ್ಮ ನಿಯಮದ ಪ್ರಕಾರ ಶೂನ್ಯವೇಳೆಯಲ್ಲಿ 10 ವಿಷಯಗಳನ್ನು ಮಾತ್ರ ತೆಗೆದುಕೊಳ್ಳಲಾಗುವುದು. ಈ ವಿಷಯಗಳಿಗೆ ಉತ್ತರಗಳನ್ನು ಕೊಡಿಸುತ್ತೇನೆ. ಆದರೆ ಇಂದು 15 ವಿಷಯಗಳು ಬಂದಿವೆ. ಹತ್ತಕ್ಕಿಂತ ಹೆಚ್ಚಿನ ವಿಷಯಗಳನ್ನು ತೆಗೆದುಕೊಳ್ಳಲಾಗುವುದಿಲ್ಲ.

**5. ವರದಿಯನ್ನೊಪ್ಪಿಸುವುದು**

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಅಧ್ಯಕ್ಷರು, ಪರಿಶೀಲನಾ ಸಮಿತಿ ಹಾಗೂ ಸಹಕಾರ ಸಚಿವರು)**:- ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ ಹಾಗೂ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**ಸಭಾಪತಿಯವರು:-** ಈಗ ನಿಯಮ 68ರ ಮೇರೆಗೆ ಚರ್ಚೆಯನ್ನು ಮುಂದುವರೆಸೋಣ. ಮಾನ್ಯ ಭೋಜೇಗೌಡರೇ ತಾವು ಪ್ರಾರಂಭ ಮಾಡಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಅಂದು ನನಗೆ ಚರ್ಚೆಯನ್ನು conclude ಮಾಡುವುದಕ್ಕೆ ಆಗಿರಲಿಲ್ಲ. ಐದು ನಿಮಿಷದಲ್ಲಿ conclude ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ನೀವು ಈಗಾಗಲೇ 02 ಗಂಟೆ 30 ನಿಮಿಷ ಮಾತನಾಡಿದ್ದೀರಿ, ನಾನು ಅವಕಾಶ ಕೊಡುವುದಿಲ್ಲ. ಮಾನ್ಯ ಭೋಜೇಗೌಡರೇ, ಪ್ರಾರಂಭ ಮಾಡಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಚರ್ಚೆಯನ್ನು conclude ಮಾಡಿರಲಿಲ್ಲ. ಕೇವಲ ಐದು ನಿಮಿಷದಲ್ಲಿ conclude ಮಾಡುತ್ತೇನೆ.

**ಸಭಾಪತಿಯವರು:-** ಇಲ್ಲ ಅವಕಾಶ ಕೊಡುವುದಿಲ್ಲ, ಮಾನ್ಯ ಭೋಜೇಗೌಡರೇ, ತಾವು ಚರ್ಚೆಯನ್ನು ಪ್ರಾರಂಭಿಸಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು conclude ಮಾಡಿಲ್ಲ. ಅವರು (ಆಡಳಿತ ಪಕ್ಷದವರು) ಗದ್ದಲ ಎಬ್ಬಿಸಿದರು.

**ಸಭಾಪತಿಯವರು:-** ಮಾನ್ಯ ರವಿಯವರೇ, conclude ಆಗಿದೆ, conclude ಮಾಡಿದ್ದೀರಿ. ಮಾನ್ಯ ಉಪ ಸಭಾಪತಿಯವರು ಪೀಠದಲ್ಲಿದ್ದಾಗ ಹೇಳಿದ್ದಾರೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ಅಂತಿಮವಾಗಿ ಬೇಡಿಕೆಯನ್ನೇ ಹೇಳಿಲ್ಲ.

**ಸಭಾಪತಿಯವರು:-** ಮಾನ್ಯ ರವಿಯವರೇ, ಆಗುವುದಿಲ್ಲ. ನಿಮ್ಮದು conclude ಆಗಿದೆ. ನಾನು ಹೇಳಿದ ನಂತರ ತಿರುಗಿ ಮಾತನಾಡಬೇಡಿ. ಸಭಾಪತಿಗಳು ಒಂದು ಸಲ ಹೇಳಿದ ಮೇಲೆ ಕುಳಿತುಕೊಳ್ಳಬೇಕು. ಈಗ ಮಾನ್ಯ ಭೋಜೇಗೌಡರು ಚರ್ಚೆಯನ್ನು ಪ್ರಾರಂಭ ಮಾಡಲಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾನು ನಿಮ್ಮಲ್ಲಿ ನಿವೇದನೆ ಮಾಡುತ್ತಿರುವುದೇನೆಂದರೆ, ನಾನು ಏನನ್ನು ಬೇಡಿಕೆ ಇಡಬೇಕೋ ಅದನ್ನು ಹೇಳುವುದಕ್ಕೆ ಆಗಿಲ್ಲ.

**ಸಭಾಪತಿಯವರು:-** ಮಾನ್ಯ ರವಿಯವರೇ, ನಾನೀಗ ಗರಂ ಆಗಿದ್ದೇನೆ. ಈಗ ಮಾನ್ಯ ಭೋಜೇಗೌಡರನ್ನು ಕರೆದಿದ್ದೇನೆ, ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾವೀಗ ನಮ್ಮ ಬೇಡಿಕೆ ಏನೆಂದು ಹೇಳಬೇಕು ಅದನ್ನು ಹೇಳಿಯೆ ಇಲ್ಲ. ತಾವು ನನಗೆ ಐದು ನಿಮಿಷ ಸಮಯ ಕೊಟ್ಟರೆ ಮುಗಿಸುತ್ತೇನೆ. ತಾವು ಬೇಕಾದರೆ ಗಡಿಯಾರವನ್ನು ನೋಡಿ. ಐದು ನಿಮಿಷಕ್ಕೆ ಮುಗಿಸುತ್ತೇನೆ. 12 ಗಂಟೆ 36 ನಿಮಿಷಕ್ಕೆ ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ಒಂದು ನಿಮಿಷ ಕೇಳಿ. ಉಪಸಭಾಪತಿಗಳು ಪೀಠದಲ್ಲಿ ಕುಳಿತಾಗ ಹೇಳಿದ್ದಾರೆ, ನಿಮ್ಮದು ಸರಿಯಾದ ಸಮಯಕ್ಕೆ conclude ಆಗಿದೆ. ತಾವು 02 ಗಂಟೆ 30 ನಿಮಿಷಗಳ ಕಾಲ ಮಾತನಾಡಿದ್ದೀರಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಅವರು ನಿಮಗೆ ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಮಾತನಾಡಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಎಷ್ಟು ಸಮಯವನ್ನು ನಿಗದಿ ಮಾಡಿದ್ದೀರಿ ಎಂಬುದನ್ನು ತಿಳಿಸಿ. ನಮಗೆ ಎಷ್ಟು ಸಮಯ ಕೊಡುತ್ತೀರಿ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಮಗೆ ಎಷ್ಟು ಸಮಯ ನಿಗದಿ ಮಾಡಿದ್ದೀರಿ ಎಂಬುದನ್ನು ತಿಳಿಸಿ. ನಮಗೂ ಸಮಯ ನಿಗದಿ ಮಾಡಿ.

**ಸಭಾಪತಿಯವರು:-** ಆಯಿತು ಕೊಡುತ್ತೇನೆ, ಕುಳಿತುಕೊಳ್ಳಿ. ಈಗ ಮಾನ್ಯ ಭೋಜೇಗೌಡರು ಮಾತನಾಡಲಿ.

**6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ:- ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು.**

- - - - -

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬಹಳ ಗಂಭೀರವಾಗಿರುವಂತಹ ವಿಚಾರದ, ಅತ್ಯಂತ ಜರೂರಾದ ಸಾರ್ವಜನಿಕ ಮಹತ್ವವನ್ನು ಪಡೆದಿರುವಂತಹ ವಿಷಯವನ್ನು ಚರ್ಚಿಸಲು ನಿಯಮ 68ರಡಿ ತಾವು ಅವಕಾಶ ಕೊಟ್ಟಿರುವಂತಹ ಸಂದರ್ಭದಲ್ಲಿ ನಾವೆಲ್ಲರೂ ಕೂಡ ತುಂಬು ಹೃದಯದಿಂದ ತಮ್ಮನ್ನು ಶ್ಲಾಘಿಸುತ್ತೇವೆ ಜೊತೆಗೆ ಧನ್ಯವಾದಗಳನ್ನು ಕೂಡ ಅರ್ಪಿಸುತ್ತಿದ್ದೇವೆ. ಬಹು ದೊಡ್ಡದಾಗಿರುವಂತಹ ಈ ನಾಡಿನಲ್ಲಿ ಅದರಲ್ಲಿಯೂ ವಿಶೇಷವಾಗಿ ನಮ್ಮ ಭರತಖಂಡದಲ್ಲಿ ಮಹರ್ಷಿ ವಾಲ್ಮೀಕಿ ಹೆಸರೆಂದರೆ ನಮ್ಮೆಲ್ಲರಿಗೂ ಬಹುದೊಡ್ಡ ಹೆಮ್ಮೆಯ ವಿಚಾರವಾಗಿದೆ. ಅಂತಹ ಹೆಸರಿಟ್ಟಿರತಕ್ಕಂತಹ

ಸಂಸ್ಥೆಯಲ್ಲಿ ಆಗಿರುವಂತಹ ಪ್ರಮಾದ, ಹಣಕಾಸಿನ ವಿಚಾರದಲ್ಲಿ ಆಗಿರುವಂತಹ ಹಗಲುದರೋಡೆ ವಿಚಾರದಲ್ಲಿ ಬಹಳ ವಿಸ್ತಾರವಾಗಿ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿಯವರು ಮಾತನಾಡಿದ್ದಾರೆ. ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ನಮ್ಮ ನಾಡಿಗೆ 'ಭಗವದ್ಗೀತೆ, ರಾಮಾಯಣ ಮತ್ತು ಮಹಾಭಾರತ'ದಂತಹ ಶ್ರೇಷ್ಠ ಗ್ರಂಥಗಳನ್ನು ಕೊಟ್ಟಂತಹ ಅನೇಕ ಕವಿವರ್ಯರಲ್ಲಿ ಮಹರ್ಷಿ ವಾಲ್ಮೀಕಿಯವರು ರಾಮಾಯಣವನ್ನು ಕೊಟ್ಟಂತಹ, ಬಹುದೊಡ್ಡ ವ್ಯಕ್ತಿತ್ವವಿರುವಂತಹ ಮಹರ್ಷಿಗಳು. ಅವರು ಪೂರ್ವಾಶ್ರಮದಲ್ಲಿ ಒಬ್ಬ **XXX** 'ರತ್ನಾಕರ' ಎಂಬ ಹೆಸರಿನಲ್ಲಿ ಈ ನಾಡಿಗೆ ಪರಿಚಯವಾಗುತ್ತಾರೆ. ನಂತರ ಈ ರತ್ನಾಕರರು ಮಹರ್ಷಿ ವಾಲ್ಮೀಕಿಯಾದ ವಿಚಾರವನ್ನು ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಬದುಕಿನಲ್ಲಿ ಕುಟುಂಬವನ್ನು ಸಾಕಬೇಕಾದರೆ, ಕುಟುಂಬದ ಜವಾಬ್ದಾರಿ ಹೊರುವಂತಹ ಸಂದರ್ಭದಲ್ಲಿ ರತ್ನಾಕರರು ವೃತ್ತಿಯಲ್ಲಿ **XXX.** ಒಮ್ಮೆ 'ನಾರದ' ಮಹರ್ಷಿಯನ್ನು ಸಂಪರ್ಕ ಮಾಡಿದಂತಹ ಸಂದರ್ಭದಲ್ಲಿ ಈ ರತ್ನಾಕರರು ನಾರದ ಮುನಿಯನ್ನೂ ಬಿಡಲಿಲ್ಲ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ರತ್ನಾಕರರು ನಾರದ ಮಹರ್ಷಿಗಳನ್ನು **XXX** ಮಾಡುವುದಕ್ಕೆ ಬಂದಾಗ ನಾರದರು 'ನನ್ನ ಹತ್ತಿರ ಏನಿದೆಯಪ್ಪಾ ನನ್ನನ್ನು ನೀನು **XXX** ಮಾಡುವುದಕ್ಕೆ ಬಂದಿದ್ದೀಯಲ್ಲಾ; ನಾನೊಬ್ಬ ಯೋಗಿ. ನಾನು ಬೀದಿ ಬೀದಿ ಸಂಚಾರ ಮಾಡುವಂತಹವನು, ಭಿಕ್ಷೆ ಎತ್ತುವವನು. ನನ್ನ ಹತ್ತಿರ ನೀನು **XXX** ಮಾಡುವುದರಿಂದ ನಿನಗೇನು ಲಾಭ ಸಿಗುತ್ತದೆ' ಎಂದು ಕೇಳುತ್ತಾರೆ. ಮುಂದುವರೆದು ನಾರದ ಮಹರ್ಷಿಗಳು ರತ್ನಾಕರರಿಗೆ 'ಈ ರೀತಿ **XXX** ಮಾಡುತ್ತಿದ್ದೀಯಲ್ಲಾ ಇದರಿಂದ ಏನು ಮಾಡುತ್ತೀಯ' ಎಂದು ಪ್ರಶ್ನೆ ಮಾಡುತ್ತಾರೆ. ಅದಕ್ಕವರು ತಾನು ಹೆಂಡತಿ ಮಕ್ಕಳನ್ನು ಸಾಕುತ್ತಿರುವುದಾಗಿ, ಈ **XXX** ಅವರ ಜೀವನ ನಡೆಯುತ್ತಿದೆ ಎನ್ನುವ ವಿಚಾರವನ್ನು ನಾರದ ಮುನಿಗಳಿಗೆ ಹೇಳಿದಾಗ, ನಾರದ ಮಹರ್ಷಿಗಳು **XXX** ಮಾಡಿ ನಿನ್ನ ಹೆಂಡತಿ ಮಕ್ಕಳನ್ನು ಸಾಕುತ್ತಿದ್ದೀಯಲ್ಲಾ ಈ **XXX** ನಿನ್ನ ಹೆಂಡತಿ ಮಕ್ಕಳು ಪಾಲುದಾರರೇ' ಎಂದು ಕೇಳುತ್ತಾರೆ. ಆಗ ರತ್ನಾಕರರಿಗೆ ಈ ಪ್ರಶ್ನೆ ಬಹಳ ಕಾಡುತ್ತದೆ. ಅವರು ಮನೆಗೆ ಹೋಗಿ ತನ್ನ ಹೆಂಡತಿ ಮಕ್ಕಳನ್ನು ಕುರಿತು 'ನಾನು ಪ್ರತಿನಿತ್ಯ **XXX** ಮಾಡಿ ನಿಮ್ಮನ್ನು ಸಾಕುತ್ತಿದ್ದೇನೆ, ಸಲಹುತ್ತಿದ್ದೇನೆ. ಈ **XXX** ಹಣದಲ್ಲಿ ನೀವೂ ಪಾಲುದಾರರಾಗಬೇಕು, ಪಾಲುದಾರರಾಗುವುದಕ್ಕೆ ಸಾಧ್ಯವೇ' ಎಂದು ಕೇಳುತ್ತಾರೆ. ಹೆಂಡತಿ ಮಕ್ಕಳು 'ನೀನು **XXX** ಮಾಡುವ ವಿಚಾರದಲ್ಲಿ ನೂರಕ್ಕೆ ನೂರರಷ್ಟು ನಮ್ಮ

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

ಪಾತ್ರವಿಲ್ಲ ನಾವಿದರಲ್ಲಿ ಪಾಲುದಾರರಲ್ಲ' ಎಂದು ನೇರವಾಗಿ ಹೇಳುತ್ತಾರೆ. ಆಗ ರತ್ನಾಕರರಿಗೆ ಮನವರಿಕೆಯಾಗುತ್ತದೆ. ತಾನು ಎಷ್ಟೊಂದು **XXX** ಮಾಡಿ ಇವರನ್ನು ಸಾಕುತ್ತಿದ್ದೇನೆ, ಈ **XXX** ಹಣದಲ್ಲಿ ತಾವು ಪಾಲುದಾರರಲ್ಲ ಎಂದು ಹೆಂಡತಿ ಮಕ್ಕಳು ಹೇಳಬೇಕಾದರೆ ನಾನು **XXX** ಮಾಡಿ ಪ್ರಯೋಜನವೇನು ಎಂದು ಆ ವೃತ್ತಿಯನ್ನು ಬಿಡಬೇಕೆಂದು ಮನಸ್ಸು ಮಾಡಿ ಅದನ್ನು ನಾರದ ಮುನಿಗಳ ಬಳಿ ಹೇಳಿದಾಗ, **XXX** ಮಾಡುವ ರತ್ನಾಕರರಿಗೆ ಅಕ್ಷರಾಭ್ಯಾಸವಾಗಿರಲಿಲ್ಲ. ಇಡೀ ನಾಡಿನಲ್ಲಿ ಎಲ್ಲಾ ವಿಚಾರಗಳಲ್ಲಿಯೂ ಅತ್ಯಂತ ಶ್ರೇಷ್ಠವಾಗಿರುವಂತಹ ವ್ಯಕ್ತಿ ಯಾರೆಂದು ಕೇಳಿದಾಗ ನಾರದರು 'ರಾಮ'ನ ಹೆಸರು ಹೇಳುತ್ತಾರೆ. 'ರಾಮ' ಎನ್ನುವ ಪದವನ್ನು ಪ್ರಯೋಗ ಮಾಡುವಂತಹ, ವಿದ್ಯಾರ್ಹತೆ ಇಲ್ಲದೇ ಇರುವಂತಹ ರತ್ನಾಕರರು ಮರ ಮರ ಎಂದು ಅಭ್ಯಾಸ ಮಾಡುತ್ತಾ ವರ್ಷಾನುಗಟ್ಟಲೆ ತಪಸ್ಸಿನಲ್ಲಿ ಕುಳಿತಿರುವಾಗ, ನಾರದರು ಇನ್ನೊಮ್ಮೆ ಅಲ್ಲಿಗೆ ಬಂದಾಗ ರಾಮ ರಾಮ ರಾಮ ಎನ್ನುವ ಪದ ಆಚೆ ಬರುತ್ತಿರುತ್ತದೆ. ಇದು ಎಲ್ಲಿಂದ ಬರುತ್ತಿದೆ ಎಂದು ನೋಡಿದರೆ ಎಲ್ಲಿಯೂ ಕಾಣುವುದಿಲ್ಲ. ಕೊನೆಗೆ ಒಂದು ಹುತ್ತದೊಳಗಿನಿಂದ ಕೇಳಿ ಬರುತ್ತಿರುತ್ತದೆ. ಆ ಹುತ್ತದೊಳಗೆ ಯಾರಿದ್ದಾರೆ ಎಂದು ನೋಡಿದಾಗ ರತ್ನಾಕರ ಎನ್ನುವ ಮನುಷ್ಯ ರಾಮನ ಜಪ ಮಡುತ್ತಿರುತ್ತಾನೆ. ರಾಮ ಜಪ ಮಾಡುವ ಮುಖಾಂತರ ವಾಲ್ಮೀಕಿ ಮಹರ್ಷಿಗಳು ನಾಡಿಗೆ ಪರಿಚಯವಾಗುತ್ತಾರೆ. ಹುತ್ತಕ್ಕೆ 'ವಲ್ಮೀಕ' ಎಂದು ಹೇಳುತ್ತಾರೆ, ಅಲ್ಲಿ ತಪಸ್ಸು ಮಾಡುತ್ತಿದ್ದ ರತ್ನಾಕರರು ಅಲ್ಲಿಂದ ಮುಂದಕ್ಕೆ ವಾಲ್ಮೀಕಿ ಮಹರ್ಷಿಗಳು ಎಂದು ನಾಡಿಗೆ ಪರಿಚಯವಾಗುತ್ತಾರೆ. ನಂತರದ ದಿನಗಳಲ್ಲಿ 'ರಾಮಾಯಣ' ಗ್ರಂಥವನ್ನು ನಮ್ಮ ನಾಡಿಗೆ ಕೊಡುತ್ತಾರೆ. ರಾಮಾಯಣ ಗ್ರಂಥದಲ್ಲಿ ಬಹಳ ಮುಖ್ಯವಾದ ಎರಡು ವಿಚಾರಗಳಿವೆ. ಒಂದು, ರಾಮಾಯಣದಲ್ಲಿ ರಾಮನ 'ನಡೆ' ಮತ್ತೊಂದು, ಮಹಾಭಾರತದಲ್ಲಿ ಕೃಷ್ಣನ 'ನುಡಿ' ಎಂದು ಹೇಳುತ್ತೇವೆ. ಈಗ ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವಂತಹ ದರೋಡೆಯಲ್ಲಿ ಇಲ್ಲಿರುವಂತಹ ಯಾರೂ ಪಾಲುದಾರರಲ್ಲ ಎಂದು ನಾನು ಭಾವಿಸಿದ್ದೇನೆ. ಪಾಲುದಾರ ಅಲ್ಲ ಅಂದ ಮೇಲೆ ನಮಗೆ ಜವಾಬ್ದಾರಿ ಇದೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಆಯ್ಕೆಯಾಗಿರುವಂತಹವರು, ಸಂವಿಧಾನಬದ್ಧವಾಗಿ ಬಂದು ಕುಳಿತಿರುವಂತಹವರು ನಾವಿಲ್ಲಿ ಡಾ: ಬಿ.ಆರ್.ಅಂಬೇಡ್ಕರ್‌ರವರ ಸಂವಿಧಾನದ ಆಶಯಗಳೇನಿವೆ ಎನ್ನುವ ವಿಚಾರವನ್ನು ನಾವು ಅರಿತು ಮಾತನಾಡಬೇಕಾಗುತ್ತದೆ.

(ಮುಂದು)

{**XXX**} **ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

(521) 18-07-2024 12-40 KH/AK (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ಸಂವಿಧಾನದ ಆಶಯಗಳಗನುಗುಣವಾಗಿ ಇವತ್ತು ನಾವು ಕೆಲಸ ಮಾಡುವಂತಹ ಸಂದರ್ಭದಲ್ಲಿ ನಾಡು ನುಡಿಯ ರಕ್ಷಣೆ ಮತ್ತು ಆರ್ಥಿಕ ವ್ಯವಸ್ಥೆಯನ್ನು ಬೆಂಗಾವಲಾಗಿ . . . ಒಂದು ಸಾಕು ನಾಯಿಯನ್ನು ಅತ್ಯಂತ ನಿಷ್ಠೆಯ ಪ್ರಾಣಿ ಎಂದು ಹೇಳುತ್ತೇವೆ. ನಾವು ಕಾವಲುಗಾರರಾಗಿ ಈ ಆರ್ಥಿಕ ವ್ಯವಸ್ಥೆಯನ್ನು ಕಾಪಾಡಬೇಕಾದಂತಹ ಧರ್ಮ ಮತ್ತು ಕರ್ತವ್ಯ ನಮ್ಮೆಲ್ಲರದು ಇದೆ. ಇವತ್ತು ನಾವು ಇಲ್ಲಿ ಕುಳಿತುಕೊಂಡು ಮಾತನಾಡಬೇಕಾದಂತಹ ಸಂದರ್ಭದಲ್ಲಿ ಈ ರೀತಿಯಾಗಿದೆ ಎಂದು ಆಡಳಿತ ಪಕ್ಷದವರಿಗೆ ಕೆಲವು ವಿಚಾರಗಳನ್ನು ನಾವು ಹೇಳಬಹುದು. ಅವರು ಆಡಳಿತ ಪಕ್ಷದಲ್ಲಿ ಇರುವಂತಹ ಸಂದರ್ಭದಲ್ಲಿ ಇಂತಹ ವಿಚಾರಗಳು ಆಗಿದೆ. ಅದನ್ನು ನಾವು ಸಾರ್ವಜನಿಕವಾಗಿ ಚರ್ಚೆ ಮಾಡುವ ಮುಖಾಂತರ ನಿಮ್ಮ ಪಾತ್ರವೂ ಕೂಡ ಬಹಳ ದೊಡ್ಡದಿದೆ. ನೀವು ಕೂಡ ಸಾರ್ವತ್ರಿಕವಾಗಿ ಈ ವಿಚಾರಗಳನ್ನು ಆಚೆಗೆ ತರಬೇಕು. ಯಾವ ಸಂದರ್ಭದಲ್ಲಿ ಇದಾಗಿದೆ, ಏತಕ್ಕೋಸ್ಕರ ಆಗಿದೆ ಮತ್ತು ಇದರಲ್ಲಿ ಯಾರ್ಯಾರು ಸೇರಿದ್ದಾರೆ ಎನ್ನುವ ವಿಚಾರವನ್ನು ನಾವು ಇವತ್ತು ಸಾರ್ವಜನಿಕವಾಗಿ ಆಚೆಗೆ ತರದೇ ಇದ್ದರೆ ನಮ್ಮ ಕರ್ತವ್ಯ ಲೋಪವಾಗುತ್ತದೆ ಎನ್ನುವಂತಹ ವಿಚಾರವನ್ನು ಇವತ್ತು ನಾವೆಲ್ಲರೂ ಕೂಡ ಅರಿಯಬೇಕಾಗುತ್ತದೆ. ಅದಕ್ಕೆ 'ನಿಂದಕರು ಇರಬೇಕಯ್ಯ' ಎಂದು ಪುರಂದರದಾಸರು ಹೇಳಿದ್ದಾರೆ. ಈ ಸಮಾಜದಲ್ಲಿ ನಿಂದಕರು ಇರಬೇಕು. ನಿಂದಕರು ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ. ನಾವು ಹೇಗೆ ಇರಬೇಕೆಂದರೆ, ಹಂದಿಯ ರೀತಿ ಇರಬೇಕು. ಕೇರಿಯಲ್ಲಿ ಹಂದಿ ಯಾವ ರೀತಿ ಸ್ವಚ್ಛ ಮಾಡುವಂತಹ ಕೆಲಸ ಮಾಡುತ್ತದೆ. ಆ ಹಂದಿಗಳ ರೀತಿ ನಿಂದಕರು ಇರಬೇಕೆಂದು ಪುರಂದರದಾಸರು ಹೇಳಿರುವುದು. ಇದನ್ನು ನಾವು ಹೇಳಿರುವಂತಹದ್ದಲ್ಲ. ಹಾಗಾಗಿ, ಇವತ್ತು ಕಟ್ಟಕಡೆಯ ಮನುಷ್ಯರ ದಾರಿದ್ರ್ಯವನ್ನು ತೊಲಗಿಸಬೇಕೆಂದು ಡಾ॥ ಬಿ.ಆರ್.ಅಂಬೇಡ್ಕರ್‌ರವರ ಆಶಯದಂತೆ ಯಾವ್ಯಾವ ಸಮುದಾಯಗಳು ಇವತ್ತು ಆರ್ಥಿಕವಾಗಿ ಹಿಂದುಳಿದು ಅವರನ್ನು ಮೇಲೆತ್ತುವುದಕ್ಕೆ ಆಗದೇ ಇರುವಂತಹ ಸಮುದಾಯಗಳನ್ನೆಲ್ಲಾ ಈ ರೀತಿ ನಿಗಮದ ಮುಖಾಂತರ ಬೇರೆ ಬೇರೆ ಯೋಜನೆಗಳನ್ನು ರೂಪಿಸುವ ಮುಖಾಂತರ ಅಂತಹ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಾಗಿರುವಂತಹ ಕರ್ತವ್ಯ ನಮಗೆ ಇದೆ. ಆ ಕರ್ತವ್ಯವನ್ನು ಮಾಡುವಂತಹ ಸಂದರ್ಭದಲ್ಲಿ ಇಂತಹ ನಿಗಮದಲ್ಲಿ ಈ ರೀತಿಯಾಗಿರುವಂತಹ ಹಣಕಾಸಿನ ವ್ಯತ್ಯಾಸದ ವಿಚಾರದಲ್ಲಿ ನಾವು ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಹೇಗಾಗಿದೆ ಎಂದರೆ, ಇವತ್ತು ನಾವು, ನೀವು ಪರಿಸರದಲ್ಲಿ ಬದುಕುತ್ತಿದ್ದೇವೆ. ಈ ಪರಿಸರದಲ್ಲಿ ಬದುಕುತ್ತಿರುವಂತಹ ಈ ಪರಿಸರವನ್ನು ನಮಗೆ ಭಗವಂತ ಕೊಟ್ಟಂತಹ

ಸಂದರ್ಭದಲ್ಲಿ ನಾವು ಈ ಪರಿಸರದಲ್ಲಿ "ದೀಪವು ನಿನ್ನದೆ, ಗಾಳಿಯು ನಿನ್ನದೇ" ಇದು ಭಗವಂತನ ಆಟ. ಇದು ಭಗವಂತ ಕೊಟ್ಟಿರುವಂತಹ ಪರಿಸರ.

"ದೀಪವು ನಿನ್ನದೆ, ಗಾಳಿಯು ನಿನ್ನದೇ
ಆರದಿರಲಿ ಬೆಳಕು ॥
ಕಡಲು ನಿನ್ನದೇ, ಹಡಗು ನಿನ್ನದೇ
ಮುಳುಗದಿರಲಿ ಬದುಕು ॥

ಇವತ್ತು ಇಂತಹ ಒಂದು ಅನಾಹುತದಿಂದ ಯಾರ ಬದುಕು ಮುಳುಗಿದೆ? ಈ ಅನಾಹುತದಿಂದ ಮುಳುಗಿರುವಂತಹ ಬದುಕು ಬಡವರ ಬದುಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವಂತಹ ಹಣ ಇವತ್ತು ಮುಳುಗಿ ಹೋಗಿರುವಂತಹ ಸಂದರ್ಭದಲ್ಲಿ ಅದರ ಜವಾಬ್ದಾರಿಯನ್ನು ನಾವು ಹೊರಬೇಕಲ್ಲವೇ? ಅದನ್ನು ಹೊರಬೇಕಾದಂತಹ ಸಂದರ್ಭದಲ್ಲಿ ಕೆಲವು ಸಾರಿ ಆಡಳಿತ ಪಕ್ಷಕ್ಕೆ ನೋವಾಗುತ್ತದೆ. ಈ ರೀತಿ ನಾವು ನೇರವಾಗಿ ಮಾತನಾಡುವಾಗ ಈ ರೀತಿ ಮಾತನಾಡುತ್ತಾರೆ ಎನ್ನುವಂತಹ ವಿಚಾರ ಇದೆಯಲ್ಲವೇ? ಮಾತುಗಳಲ್ಲಿ ಅಲ್ಲ. ತಾಳ್ಮೆ ಬೇಕು. ಕೇಳುವಂತಹ ತಾಳ್ಮೆ ಇರಬೇಕು. ಆ ತಾಳ್ಮೆಯಿಂದಲೇ ಪರಿಹಾರ ಸಾಧ್ಯ. ಆ ತಾಳ್ಮೆ ಇಟ್ಟುಕೊಂಡು ನಾವು ಕೇಳಿದಾಗ ಅದಕ್ಕೆ ಪರಿಹಾರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ದಾಸರು ಇನ್ನೊಂದು ಕಡೆ ಹೇಳುತ್ತಾರೆ ನೋಡಿ.

**"ನಾರಾಯಣ ಅಚ್ಯುತ ಅನಂತಾದಿ ಕೇಶವನ**
**ಸಾರಾಮೃತವನ್ನುಂಡು ಸುಖಿಸೋ ಲಂಡ ಜೀವವೇ ಎಲೇ ಭಂಡ ಜೀವವೇ"**

ನಾವು ಇವತ್ತು ದೇವರೇ ನಮ್ಮಪ್ಪ ನನಗೆ ಅದು ಒಳ್ಳೆಯದು ಮಾಡು, ಇದು ಒಳ್ಳೆಯದು ಮಾಡು ಎಂದೆಲ್ಲಾ ಕೇಳಿ ಪಡೆದುಕೊಂಡು, ನಾಳೆಗೆ ನಾವು ಮಾಡುವಂತಹ ದ್ರೋಹ ಇದೆಯಲ್ಲವೇ, ಅಂತಹ ಭಂಡ ಜೀವ ನಮ್ಮದು ಎನ್ನುವಂತಹ ವಿಚಾರವನ್ನು ಹೇಳುತ್ತೇವೆ. ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲುಬೇಡಿ ಹುಚ್ಚಪ್ಪಗಳಿರಾ, ಹಾಗೆ ಓಡಿ ಹೋಗಬೇಡಿ ಎಂದು ಪುರಂದರದಾಸರು ಹೇಳಿರುವಂತಹ ಮಾತಿನಲ್ಲಿ ಇವತ್ತು ಮಾನವ ಜನ್ಮ ಸಿಗುವಂತಹದ್ದು 84 ಲಕ್ಷ ಜೀವರಾಶಿಗಳನ್ನು ದಾಟಿ ಬಂದ ಮೇಲೆ ಈ ಮಾನವ ಜನ್ಮ ಸಿಗುವಂತಹದ್ದು.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದನ್ನು ಅರ್ಥಮಾಡಿಕೊಳ್ಳದೇ ಇದ್ದರೆ ಸರ್ಕಾರ ಇದ್ದು ಏನು ಮಾಡುತ್ತದೆ?

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಎನ್.ರವಿಕುಮಾರ್‌ರವರೇ, ಇರಲಿ. 84 ಲಕ್ಷ ಜೀವರಾಶಿಗಳನ್ನು ದಾಟಿ ಬಂದಂತಹ ಸಂದರ್ಭದಲ್ಲಿ ಅದಕ್ಕೆ ಕನಕದಾಸರು ಹೇಳಿದ್ದಾರೆ.

"ಎಂಬತ್ನಾಲ್ಕು ಲಕ್ಷ ಜೀವರಾಶಿಯನ್ನು
ದಾಟಿ ಬಂದ ಈ ಶರೀರ
ತಾನಲ್ಲ ತನ್ನದಲ್ಲ
ಆಸೆ ತರವಲ್ಲ ಮುಂದೆ ಬಾಹೋದಲ್ಲ
ದಾಸನಾಗು ವಿಶೇಷನಾಗು
ದಾಸನಾಗು ವಿಶೇಷನಾಗು"

ನಾವೆಲ್ಲಾ ದಾಸನುದಾಸರಾಗಿ ನಮ್ಮ ನಮ್ಮ ಕಾರ್ಯಕ್ಷೇತ್ರದಲ್ಲಿ, ನಮ್ಮ ನಮ್ಮ ಕೆಲಸಗಳನ್ನು ಕಾಯಾ, ವಾಚಾ, ಮನಸಾ, ನಾವು ಸತ್ಯ ಪ್ರಾಮಾಣಿಕತೆಯಿಂದ ಮಾಡಿದರೆ ಇಂತಹ ವ್ಯತಿರಿಕ್ತಗಳು, ಇಂತಹ ಸಮಾಜದಲ್ಲಿ ಆಗುವುದಿಲ್ಲ ಎನ್ನುವ ವಿಚಾರವನ್ನು ನಾವು ಅರಿಯಬೇಕಾಗುತ್ತದೆ. ಪ್ರತಿಯೊಂದು ಸಾರಿ . . . ದಯಮಾಡಿ ಇದು ನಾನು ಹಾಡು ಹೇಳುವಂತಹದ್ದಲ್ಲ. ದಾಸರ ಪದ ಹೇಳುವಂತಹದ್ದಲ್ಲ. ಒಂದು ನನಗೆ ಕೊಟ್ಟಂತಹ ವಚನ/ದಾಸ ಸಾಹಿತ್ಯದಲ್ಲಿ, ತತ್ವಪದಗಳಲ್ಲಿ . . .

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಾಸರ ಪದದಲ್ಲಿ ಹೇಳಿರುವುದು, ದಾಸನಾಗು ಎಂದು ಪುರಂದರದಾಸರು ಹೇಳಿದರೆ, ಇವತ್ತಿನ ಸರ್ಕಾರ ಬಾಚುವಂತಹ ಕೆಲಸ ಮಾಡುತ್ತಿದೆ. ಎಲ್ಲದರಲ್ಲಿ ಎಲ್ಲೆಲ್ಲಿ ಸಿಗುತ್ತಿದೆ, ಅದನ್ನು ಬಾಚುವಂತಹ ಕೆಲಸ ಮಾಡುತ್ತಿದೆ ಎನ್ನುವಂತಹದ್ದನ್ನು . . .

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, (ಗೊಂದಲ) ಎಲ್ಲವೂ ಮುಳುಗಿ ಹೋಗಿದೆ. ಇಲ್ಲಿಯೂ ಮುಳುಗಿ ಹೋಗಿದೆ, ಅಲ್ಲಿಯೂ ಮುಳುಗಿ ಹೋಗಿದೆ. ಇಲ್ಲಿ ಮಾತನಾಡುವುದಕ್ಕೆ ಅವಕಾಶ ಇಲ್ಲ. ಈ ರಾಷ್ಟ್ರವೇ ಮುಳುಗಿ ಹೋಗಿದೆ.

**ಉಪ ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು yield ಆದರೆ ನಾನು ಏನು ಮಾಡುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಸಮಯ ಸಿಕ್ಕಿರುವುದು 10 ನಿಮಿಷ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, 30-32 ಸೀಟುಗಳನ್ನು ಕಾಂಗ್ರೆಸ್ ಪಾರ್ಟಿಗೆ ಕೊಟ್ಟಿರುವುದು.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ನವೀನ್‌ರವರು ಈ ಸರ್ಕಾರ ಬಾಚಿಕೊಳ್ಳುತ್ತದೆ ಎಂದು ಹೇಳಿದರು. ಲೋಕಸಭಾ ಚುನಾವಣೆಗಿಂತ ಮುಂಚೆ ನೋಡಿದ್ದೀರಿ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಧೀಶರು electoral bonds ನಲ್ಲಿ... ಸಿ.ಬಿ.ಐ., ಇ.ಡಿ., ಇನ್‌ಕಮ್ ಟ್ಯಾಕ್ಸ್ raid ಆಗುತ್ತದೆ. ಈ ಕಡೆಗೆ ಬಂದು ಬಿಜೆಪಿಗೆ bonds ಖರೀದಿ ಆಗುತ್ತದೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, . . . .

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಕೆ.ಎಸ್.ನವೀನ್‌ರವರೇ, ಒಂದು ನಿಮಿಷ ತಾಳ್ಮೆ ಇರಲಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, 45 ಜನ ಎಂ.ಪಿ.ಗಳಿಗೆ . . .

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, 5 ಸಾವಿರ ಕೋಟಿ . . . ಇಡೀ ದೇಶವನ್ನು ಮೆಚ್ಚಿಸುವಂತಹ ಕೆಲಸ ಮಾಡುತ್ತಿರುವಂತಹದ್ದು. ಇಡೀ ದೇಶವೇ ಮುಳುಗಿದೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇವರಿಗೆ ಸತ್ಯ ಹೇಳಿದರೆ ತ್ರಾಸಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನೋಡಿ, ದಯಮಾಡಿ ನಾನು ಏಕೆ ಹೇಳುತ್ತೇನೆ ಎಂದರೆ, ನನಗೆ ಮಾನ್ಯ ಸಭಾಪತಿಯವರು 10 ನಿಮಿಷಗಳ ಸಮಯ ಕೊಟ್ಟಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ನೀವು yield ಆದರೆ ನಿಮ್ಮ ಸಹಾಯಕ್ಕೆ ನಾನು ಬರುವುದಕ್ಕೆ ಆಗುವುದಿಲ್ಲ. ನೀವು yield ಆಗದೇ ಇದ್ದರೆ ನಿಮ್ಮ ಸಹಾಯಕ್ಕೆ ನಾನು ಬರಬಹುದು ಅಷ್ಟೇ. ನೀವು yield ಆದರೆ ನಾನೇನು ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ಸಮಯ ಹೋಗುತ್ತದೆ. ಈಗ ಮಾತನಾಡಿ, ವಿಷಯಕ್ಕೆ ಬನ್ನಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಒಳ್ಳೆಯತನದಲ್ಲಿ yield ಆದೆ. ಅವರು ಈ ರೀತಿ misuse ಮಾಡುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಈಗ ವಿಚಾರಕ್ಕೆ ಬನ್ನಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಚೆನ್ನಾಗಿ ಮಾತನಾಡುತ್ತಿದ್ದರು. ಅವರ ಹಿಂದೆ ಇದ್ದವರು ಮಾಡಿದ್ದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನೋಡಿ ದಯಮಾಡಿ . . .

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, misuse and confuse government…

**ಶ್ರೀ ಐವನ್ ಡಿ 'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರು ಈಗಾಗಲೇ misuse ಆಗಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಐವನ್ ಡಿ'ಸೋಜಾ ರವರೇ, ಆಯಿತಪ್ಪಾ, ತಮಗೆ ಕೈಮುಗಿಯುತ್ತೇನೆ. ನನಗೆ ಒಂದು ಅವಕಾಶ ಕೊಟ್ಟಿರುವಾಗ ನೀವು disturb ಮಾಡಬೇಡಿ. ದಯಮಾಡಿ ಕೈ ಮುಗಿಯುತ್ತೇನೆ. ನೋಡಿ, ಪ್ರತಿಯೊಂದು ಬಜೆಟ್ ಮಂಡಿಸುವಾಗ irrespective of government, all governments ನಲ್ಲಿ ಕೂಡ . . . ನಮ್ಮ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು 14 ಬಜೆಟ್ ಅನ್ನು ಮಂಡಿಸಿದ್ದಾರೆ. 14 ಬಜೆಟ್ ಅನ್ನು ಮಂಡಿಸುವಾಗಲೂ ಕೂಡ ಕವಿ ವಾಣಿಗಳನ್ನು, ದಾರ್ಶನಿಕರನ್ನು, ಉತ್ತಮವಾಗಿ ಈ ನಾಡಿಗೆ ಸೇವೆ ಮಾಡಿದಂತಹವರನ್ನು ವಿಚಾರ ಧಾರೆಗಳನ್ನು ಪ್ರತಿಯೊಂದು ಪೇಜ್‌ನಲ್ಲಿಯೂ ಅಥವಾ 4 ಬಾರಿ, 5 ಬಾರಿ ಕೊಟ್ಟಿರುವಂತಹ ಸಂದರ್ಭ ಇದೆಯಲ್ಲವೇ? ತಾವು ಏಕೆ ಕೊಡುತ್ತೀರಿ? ಅಂತಹ ಕವಿ ವಾಣಿಗಳನ್ನು ಏಕೆ ಹೇಳುತ್ತೀರಿ? ಅಂತಹ ದಾರ್ಶನಿಕರ ಮಾತುಗಳನ್ನು ವಚನ ಸಾಹಿತ್ಯದ ಅಡಿಯಲ್ಲಿ, ತತ್ವಪದಗಳ ಆಧಾರದಲ್ಲಿ

ಜಾನಪದ ಸಾಹಿತ್ಯದಲ್ಲಿ ಇವತ್ತು ಈ ನಾಡನ್ನು ಕಟ್ಟಿರುವಂತಹದ್ದು ಆಗಿದೆ. ಇವತ್ತು ಆ ನಾಡು ಭಾವೈಕತೆಯನ್ನು ಇಡೀ ಅಖಂಡ ಭಾರತಕ್ಕೆ ಸಾರಿರುವಂತಹ ಯಾವುದಾದರೂ ಒಂದು ದೇಶ ಇದ್ದರೆ ಅದು ನಮ್ಮ ದೇಶ ಎಂದು ಹೇಳುವುದಕ್ಕೆ ನಾವು ಇವತ್ತು ಬಹಳ ಅತ್ಯಂತ ಹೆಮ್ಮೆ ಪಡುತ್ತೇವೆ. ಶಿಶುನಾಳ ಷರೀಫರು ಗುರುಗೋವಿಂದ ಭಟ್ಟರ ಶಿಷ್ಯರು. ಅವರು ಕೊಟ್ಟಂತಹ ತತ್ವಪದಗಳ ಆಧಾರದಲ್ಲಿ ಇವತ್ತು ಅಂದು ಹೇಳಿರುವಂತಹ ತತ್ವಪದಗಳು, ಇವತ್ತು ಸಮಾಜ ಹೇಗೆ ಇದೆ ಎಂದು ಶಿಶುನಾಳ ಷರೀಫರು ಹೇಳುತ್ತಾರೆಯಲ್ಲವೇ?

(ಮುಂದು)

(522) 18.7.2024 12.50 ಪಿಕೆ:ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):**

**"ಬಿದ್ದೀಯಬೆ ಮುದುಕಿ, ಬಿದ್ದೀಯಬೆ ಮುದುಕಿ,**
**ಸದ್ಯಕಿದು ಹುಲಗೂರ ಸಂತಿ**
**ಗದ್ದಲದೊಳಗ ಯಾಕ ನಿಂತಿ**
**ಬಿದ್ದು ಒದ್ದಾಡಿದರ ಎಬ್ಬಿಸುವರಿಲ್ಲಾ**
**ಬುದ್ಧಿಗೇಡಿ ಮುದುಕಿ ನೀನು ಬಿದ್ದೀಯಬೆ ಮುದುಕಿ"** ಎಂದು ಹೇಳುತ್ತಾರೆ.

ಮುಂದೆ, ಸಂತೆಯಲ್ಲಿನ ಗಂಟು ಕಳ್ಳರ ಜಾಗ ಇದು, ಉಟ್ಟುಕೊಂಡ ಸೀರೆಯನ್ನು ಬಿಚ್ಚೋರು ಜೋಕೆ ಎಂದು ಹೇಳುತ್ತಾರೆ. ಅಂದರೆ ನಾವು ಎಚ್ಚರ ವಹಿಸದೇ ಇದ್ದರೆ, ಸರಿಯಾಗಿ ಇಲ್ಲದೇ ಇದ್ದರೆ, ಇಂತಹ ಕೆಟ್ಟ ಸಮಾಜದಲ್ಲಿ, ಹೊರಗೆ ಬರುವಂತಹ ಸಂದರ್ಭದಲ್ಲಿ ಏನು ಬೇಕಾದರೂ ಆಗಬಹುದು; ಬಹಳ ಎಚ್ಚರಿಕೆಯಿಂದ ಇರು ಎಂದು ಅಂದೇ ತತ್ವಪದಗಳನ್ನು ಶಿಶುನಾಳ ಶರೀಫರು ಹೇಳುತ್ತಾರೆ. ಮಹರ್ಷಿಯವರ ಹೆಸರಿನಲ್ಲಿ ಆಗಿರುವ ದರೋಡೆಯ ಬಗ್ಗೆ ಆವತ್ತೇ ಶಿಶುನಾಳ ಶರೀಫರು ಕನಸು ಕಂಡಿದ್ದರೇ? ಇಂತಹ ಸಮಾಜಗಳ ಬಗ್ಗೆ ಹಿಂದೆ ದಾಸರು, ಕನಕದಾಸರು ಕೂಡ ಎಚ್ಚರಿಸಿದ್ದಾರೆ. ಈ ಸಂವಿಧಾನದ ಆಶಯಗಳ ವಿರುದ್ಧ ಆಗಿರುವಂತಹ ಇಂತಹ ಘಟನೆಯನ್ನು ಪಕ್ಷಾತೀತವಾಗಿ ಅಕ್ಷರಶಃ ಖಂಡಿಸಬೇಕಾಗುತ್ತದೆ. ಇದರಲ್ಲಿ ಯಾರು ಶಾಮೀಲಾಗಿದ್ದಾರೋ ಅಂಥವರಿಗೆ ಸಂವಿಧಾನದ ರೀತ್ಯಾ ಶಿಕ್ಷೆ ಕೊಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಭೋಜೇಗೌಡರ ಪರವಾಗಿ ನಾನು ಮಾತನಾಡ ಬಯಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಇಲ್ಲ, ನಾನು ಯೀಲ್ಡ್ ಆಗಿಲ್ಲ. ನನಗೆ ಆಮೇಲೆ ಸಪೋರ್ಟ್ ಮಾಡಿ. ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ; ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಭಾಪತಿಗಳೆ, ಅಂದು ನಮ್ಮ ದಾರ್ಶನಿಕರು ಹೇಳಿರುವ ವಿಚಾರಧಾರೆಗಳ ಆಧಾರದ ಮೇಲೆ ನಮ್ಮ ನಾಡು ನಿಂತಿದೆ. ಅಂತಹ ವಿಚಾರಧಾರೆಗಳನ್ನು ನಾವೆಲ್ಲರೂ, ನಮ್ಮ ಮಕ್ಕಳು ಮತ್ತು ಮುಂದಿನ ಪೀಳಿಗೆಗಳು ಅರಿಯಬೇಕಾಗುತ್ತದೆ. ಇಂತಹ ದರೋಡೆಗಳು ಆಗಿಬಿಟ್ಟರೆ ನಾವು ಸ್ವಸ್ಥ ಸಮಾಜವನ್ನು ಹೇಗೆ ಕಟ್ಟುವುದಕ್ಕೆ ಆಗುತ್ತದೆ? ಕೇವಲ ಭಾಷಣವನ್ನು ಮಾಡುವುದರಿಂದ ಸ್ವಸ್ಥ ಸಮಾಜವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಅವು ಕಾರ್ಯಗತವಾಗಬೇಕಾದರೆ, ಸಂವಿಧಾನ ಆಶಯಗಳು ಈಡೇರಬೇಕಾದರೆ, ಮಾನ್ಯ ಅಂಬೇಡ್ಕರ್‌ರವರ ಆಶಯಗಳು ಈಡೇರಬೇಕಾದರೆ ಸ್ವಸ್ಥ ಸಮಾಜದೆಡೆಗೆ ಹೋಗಬೇಕಾಗುತ್ತದೆ. ಅಂತಹ ಆರೋಗ್ಯಕರ ಸಮಾಜವನ್ನು ಕಟ್ಟಬೇಕಾಗುತ್ತದೆ. ಒಕ್ಕಾಲು ವಿದ್ಯೆ-ಮುಕ್ಕಾಲು ಬುದ್ಧಿಯಲ್ಲಿ, ಅಂತಹ ಜ್ಞಾನಶಕ್ತಿ ಇಲ್ಲದೇ, ಆಕ್ಸ್‌ಫರ್ಡ್ ಯೂನಿವರ್ಸಿಟಿ, ಕೇಂಬ್ರಿಡ್ಜ್ ಯೂನಿವರ್ಸಿಟಿಗೆ ಹೋಗದೆಯೂ ನಮ್ಮ ಹಿರಿಯರು ಸ್ವಸ್ಥ ಸಮಾಜವನ್ನು ಕಟ್ಟಿದ್ದಾರೆ. ಇವತ್ತು ನಾವು ಎಲ್ಲಾ ಮೂಲ ಭೂತ ಸೌಕರ್ಯಗಳನ್ನು ಇಟ್ಟುಕೊಂಡು ಸ್ವಾಸ್ಥ್ಯ ಸಮಾಜವನ್ನು ಕಟ್ಟದೇ ಇದ್ದರೆ, ನಾಡು-ನುಡಿಯ ರಕ್ಷಣೆ ಮಾಡದೇ ಇದ್ದರೆ ಮುಂದಿನ ಪೀಳಿಗೆಗೆ ನಾವು ನಾವು ಯಾವರೀತಿಯ ಸಂದೇಶವನ್ನು ಕೊಡುವುದಕ್ಕಾಗುತ್ತದೆ? ಇವತ್ತು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ರೂ. 187 ಕೋಟಿಗಳ ಹಗರಣವಾಗಿದೆ.

**ಶ್ರೀ ಬಿ.ಝೆಡ್. ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಗಳೆ, ಅದು ರೂ. 87 ಕೋಟಿಯಾಗಿದೆ . . .

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಸಚಿವರು ಉತ್ತರ ಕೊಡಬೇಕಾದಾಗ ಅವರ ಮಾತುಗಳನ್ನು ಹೇಳುತ್ತಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಾಖಲೆಗೆ ತಪ್ಪು ಮಾಹಿತಿ ಹೋಗಬಾರದು. ಯಾರೋ ನಿಮಗೆ ಬರೆದುಕೊಟ್ಟಿದ್ದಾರೆ ಎಂದು ಅದನ್ನೇ ಹೇಳುವುದು ಬೇಡ. ನಿಮ್ಮ ಇ.ಡಿ.ಯವರೇ, ರೂ. 89.65 ಕೋಟಿ ಎಂಬ ಅಂಕಿಯನ್ನು ಕೊಟ್ಟಿದ್ದಾರೆ. ನಿಮ್ಮ ಇ.ಡಿ.ಯವರೇ ಸ್ಟೇಟ್‌ಮೆಂಟ್ ಮಾಡಿದ್ದಾರೆ. ತಪ್ಪು ಮಾಹಿತಿ ದಾಖಲೆಗೆ ಹೋಗಬಾರದು.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ.

**Sri S.L. BHOJEGOWDA:-** Subject to correction, ರೂ. 187 ಕೋಟಿ ಲೆಕ್ಕ ಹೇಗೆ ಎಂದು ಹೇಳುತ್ತೇನೆ. ಕಳ್ಳತನ ಮಾಡುವುದಕ್ಕೆ ಹೋದರು. *"ಬೆಂಗಳೂರಿನ ವಸಂತ ನಗರ ಶಾಖೆಯ ಯೂನಿಯನ್*

*ಬ್ಯಾಂಕ್ ಆಫ್ ಇಂಡಿಯಾದ ಉಳಿತಾಯ ಖಾತೆಯಲ್ಲಿದ್ದ ಹಣವನ್ನು ಏಕಾಏಕಿ ಸರ್ಕಾರದ ಅನುಮತಿ ಇಲ್ಲದೇ ಎಂ.ಜಿ.ರಸ್ತೆಯ ಶಾಖೆಯಲ್ಲಿ ಹೊಸ ಖಾತೆಯನ್ನು ತೆರೆದು ಹಣವನ್ನು ವರ್ಗಾಯಿಸಿರುವುದು ನಿಯಮ ಬಾಹಿರವಾಗಿರುತ್ತದೆ. ಹಾಗೂ ಈ ಖಾತೆಗಳಿಂದ ವಿವಿಧ ದಿನಾಂಕಗಳಂದು ಒಟ್ಟು ರೂ. 187.33 ಕೋಟಿ ಹಣವನ್ನು ಎಂ.ಜಿ. ರಸ್ತೆಯ ಶಾಖೆಗೆ ವರ್ಗಾವಣೆ ಆಗಿರುವುದು ಕಂಡುಬಂದಿರುತ್ತದೆ*". ಇದು ಸರ್ಕಾರದ ನಡವಳಿಯಾಗಿದೆ. You are not supposed to transfer the amount, not even a single rupee from this Account to that Account. ಹಾಗೆ ಮಾಡುವ ಹಾಗಿಲ್ಲ. ಆದರೆ ನೀವು ಹಾಗೆ ಮಾಡಿದ್ದೀರಿ.

**ಶ್ರೀ ಎಂ.ಬಿ.ಪಾಟೀಲ (ಭಾರೀ ಮತ್ತು ಮಧ್ಯಮ ಕೈಗಾರಿಕೆ, ಮೂಲ ಸೌಕರ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, "ಸರ್ಕಾರದ ಅನುಮತಿ ಇಲ್ಲದೇ" ಎನ್ನುವುದನ್ನು ಮಾನ್ಯ ಸದಸ್ಯರೇ ಕೋಟ್ ಮಾಡುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ನಾನು ಆ ವಿಷಯವನ್ನೂ ಕೂಡ ಹೇಳುತ್ತೇನೆ. ನಿಮ್ಮ ಪಾತ್ರ ಏನಿದೆ ಎನ್ನುವುದನ್ನೂ ಹೇಳುತ್ತೇನೆ. ದಯವಿಟ್ಟು ತಾಳ್ಮೆಯಿಂದಿರಿ. ಸರ್ಕಾರದ ಅನುಮತಿ ಇಲ್ಲದೇ ಮಾಡಿರುವಂತಹ ವಿಚಾರ ನಡವಳಿಯಾಗಿದೆ. ನಡವಳಿಯಲ್ಲಿ ಎಲ್ಲವನ್ನು ಉಲ್ಲೇಖ ಮಾಡಿದ್ದಾರೆ. ರೂ. 187 ಕೋಟಿ ವರ್ಗಾವಣೆಯಾಯಿತು. ಆದರೆ, ಅದನ್ನು ನುಂಗುವುದಕ್ಕೆ ಕಾಲಾವಕಾಶ ಸಿಗಲಿಲ್ಲ. ಕಾಲಾವಕಾಶದ ಕೊರತೆಯಿಂದ ರೂ. 83 ಕೋಟಿಯನ್ನು ಮಾತ್ರ ನುಂಗಿದ್ದಾರೆ. ಕಾಲಾವಕಾಶ ಸಿಕ್ಕಿದ್ದರೆ ರೂ. 187 ಕೋಟಿ ಕೂಡ ಸಿಗುತ್ತಿರಲಿಲ್ಲ.

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ನಿಗಮ, ಇಲ್ಲಿ ಅನುದಾನಗಳಿಗೆ ಅಧಿಕಾರಿಗಳು ಫೋರ್ಜರಿ ಸಹಿ ಮಾಡಿ, ದುರ್ಬಳಕೆ ಮಾಡಿಕೊಂಡ ಕುರಿತು ದಿನಾಂಕ 29.5.2024ರ ಸರ್ಕಾರದ ಪತ್ರ ಇದೆ. 26ನೇ ದಿನಾಂಕದಂದು ಚಂದ್ರಶೇಖರ್ ಎನ್ನುವ ಮನುಷ್ಯ ಸತ್ತು ಹೋದರು. ಇದು ಸರ್ಕಾರಕ್ಕೆ ಗೊತ್ತಾಗಬೇಕಾದರೆ ಮೂರೂವರೆ ದಿನ ಬೇಕಾಯಿತು. ಎಲ್ಲಿಯಾದರೂ ಉಂಟೇ? Within a span of time and forthwith, the Government should act. ಆ ಮನುಷ್ಯ ಸಾಯದೇ ಇದ್ದಿದ್ದರೆ ಈ ರೂ. 187 ಕೋಟಿಗೆ ಎಳ್ಳು-ನೀರು ಬಿಟ್ಟುಬಿಡುತ್ತಿದ್ದರು. ಆ ಮನುಷ್ಯ ಸತ್ತು ಇವತ್ತು ಇಂತಹ ಒಂದು ಪ್ರಮಾದ ಆಗಿರುವಂತಹ, ಇಂತಹ ದರೋಡೆ ಆಗಿರುವ ವಿಚಾರವನ್ನು ಮನನೊಂದು ಡೆತ್ ನೋಟ್‌ನಲ್ಲಿ ಬರೆದಿದ್ದಾರೆ. ಮತ್ತೆ ನಾನು ಆ ವಿವರಣೆ ಹೇಳುವುದಕ್ಕೆ ಹೋಗುವುದಿಲ್ಲ. I don't want to waste the precious time of this House. ಈ ವಿಷಯ ಆಚೆ ಬಂತು. 26ನೇ ದಿನಾಂಕದಂದು ವಿಷಯ ಆಚೆಗೆ ಬಂದರೂ 29ರವರೆಗೆ ಸರ್ಕಾರ ಏನು ಮಾಡುತ್ತಿತ್ತು? ಈ ನಿಗಮದ ಅಧಿಕಾರಿಗಳು ಏನು ಮಾಡುತ್ತಿದ್ದರು? It is the responsibility of the Government. I am also a Government Servant. Here, each and everybody who is involved in this scandal is answerable to the Government. ಸರ್ಕಾರ, ನಾವು ಇದರಲ್ಲಿ ಶಾಮೀಲಾಗಿಲ್ಲ ಎಂದು ಹೇಳುವುದು ವಿಚಾರ ಬಹು ದೊಡ್ಡ ಪ್ರಮಾದವಾಗುತ್ತದೆ.

*"ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖ ಪತ್ರದಲ್ಲಿ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ರೂ. 88.2 ಕೋಟಿ ಹಣ ದುರುಪಯೋಗ ಹಾಗೂ ಫೋರ್ಜರಿ ದಾಖಲೆಗಳನ್ನು ಸೃಷ್ಟಿಸಿರುವ ಮತ್ತು ಅಕ್ರಮ ಹಣ ವರ್ಗಾವಣೆ ಮಾಡಿರುವ ಮತ್ತು ಮಾಡಿಕೊಂಡಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಳ್ಳಲು ಹಾಗೂ ನಿಗಮದ ಹಣವನ್ನು ಹಿಂದಿರುಗಿಸುವಂತೆ ಹೈಗ್ರೌಂಡ್ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಲು ಘಟನೋತ್ತರ ಅನುಮತಿ ನೀಡಲಾಗಿದೆ ಹಾಗೂ ಸರ್ಕಾರಕ್ಕೆ ಯಾವುದೇ ಮುಜುಗರ ಬಾರದ ರೀತಿಯಲ್ಲಿ ಹಿಂಬಾಲಿಕೆ ವಹಿಸಿ, ಕ್ರಮ ವಹಿಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ "*

(ಮುಂದು)

(523) 18-7-2024 1.00 ಡಿಎಸ್-ವಿಕೆ

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):**

ಇದನ್ನು ಯಾರು ಕೊಟ್ಟಿದ್ದಾರೆ? "ಸರ್ಕಾರಕ್ಕೆ ಮುಜುಗರವಾಗದ ರೀತಿಯಲ್ಲಿ ಹಿಂಬಾಲಿಕ ಕ್ರಮ ವಹಿಸಿ." I don't know what exactly the meaning of this word is and the hidden agenda behind this. "ಹಿಂಬಾಲಿಕ ಕ್ರಮ ವಹಿಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ." Who has written like this? ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು. Such a great Officer we have and we are proud of that Officer. ಅವರಿಗೆ ನಾಚಿಕೆಯಾಗುವುದಿಲ್ಲವೇ? ಆ ಅಧಿಕಾರಿಗೆ ನಾಚಿಕೆಯಾಗಬೇಕು. ಸರ್ಕಾರಕ್ಕೆ ಯಾವುದೇ ರೀತಿಯ ಮುಜುಗರ ಉಂಟು ಮಾಡದೆ ಹಿಂಬರಹ ಕೊಡಬೇಕೆಂದು how dare enough to say like this, before lodging a complaint in the High Grounds Police Station? How dare enough? ಒಬ್ಬ ಅಧಿಕಾರಿಯಾಗಿ ಸರ್ಕಾರ ಭಾಗಿಯಾಗಿರಲಿ, ಯಾರು ಬೇಕಾದರೂ ಭಾಗಿಯಾಗಿರಲಿ, ತಪ್ಪಿತಸ್ಥ ಅಧಿಕಾರಿಗಳಿರಬಹುದು, ರಾಜಕಾರಣಿಗಳಿರಬಹುದು, ಇದರಲ್ಲಿ ಯಾರು ಭಾಗಿಯಾಗದೆ ಕ್ರಮ ವಹಿಸಬೇಕೆಂದು ಆ ದೂರಿನಲ್ಲಿ ಕೊಡುತ್ತಾರೆ. ಸರ್ಕಾರಕ್ಕೆ ಮುಜುಗರವಾಗದ ರೀತಿಯಲ್ಲಿ ಹಿಂಬಾಲಿಕಾ ಕ್ರಮ ವಹಿಸಬೇಕೆಂದು ಆ ಅಧಿಕಾರಿ ಹೇಳುತ್ತಾರಲ್ಲಾ ಅವರನ್ನು ಇವತ್ತು forthwith suspend ಮಾಡಬೇಕು. Is this the law for our citizens? Does our law says like this? ಈ ವಿಚಾರದಲ್ಲಿ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. This itself is sufficient for acting against that Officer. ಇಂತಹ ಅಕ್ರಮವಾಗಿದೆ. 88 ಕೋಟಿ ಹಗರಣವಾಗಿದೆ, ಇದನ್ನು ಯಾರು ಮಾಡಿದ್ದಾರೆ ಎಂಬುದು I don't want to go deep into that. ಆದರೆ ಸರ್ಕಾರಕ್ಕೆ ಮುಜುಗರವಾಗುವ ರೀತಿಯಲ್ಲಿ ಏಕೆ ಮಾಡಬೇಕು? ಇದರಲ್ಲಿ ಯಾರನ್ನು ರಕ್ಷಣೆ ಮಾಡಬೇಕೆಂದು ದೂರನ್ನು ಕೊಡುತ್ತಿದ್ದಾರೆ? 29ನೇ ತಾರೀಖಿನಂದೇ ದೂರು ಕೊಟ್ಟಿರುವಂಥದ್ದು. 26ನೇ ತಾರೀಖು ಶ್ರೀ

ಚಂದ್ರಶೇಖರನ್ ಬರೆದಿರುವ ಡೆತ್ ನೋಟ್‌ನ್ನು ಸರ್ಕಾರ ಓದಿದೆ. ಈ ಅಧಿಕಾರಿ ಕೂಡ ಓದಿದ್ದಾರೆ. He has clearly mentioned in his Death Note that those who are involved ಹಾಗೂ ತನ್ನ ಸಾವಿಗೆ ಕಾರಣ ಯಾರು ಎಂಬುದನ್ನು ಆ ಮನುಷ್ಯ ಹೇಳಿದ್ದಾರೆ. ಆ ಮನುಷ್ಯ ಮಂತ್ರಿಗಳಾಗಿರತಕ್ಕಂತಹ ಶ್ರೀ ನಾಗೇಂದ್ರರವರು ಮೌಖಿಕ ಆದೇಶದಲ್ಲಿ ಈ ರೀತಿ ಹೇಳಿದ್ದಾರೆ ಎನ್ನುವ ವಿಚಾರವನ್ನು ಕೂಡ he has mentioned it in his death note. When he has mentioned in his Death Note the very name of that Minister, at that time he was a Minister. ಸರ್ಕಾರ ಹಾಗೂ ಅಧಿಕಾರಿಯಾಗಿದ್ದಂತಹ ಅಪರ ಮುಖ್ಯ ಕಾರ್ಯದರ್ಶಿ ನೋಡಿದ ಮೇಲೂ ಕೂಡ ಸರ್ಕಾರಕ್ಕೆ ಮುಜುಗರವಾಗದ ರೀತಿಯಲ್ಲಿ ಹಿಂಬಾಲಿಕ ಕ್ರಮ ವಹಿಸಿ, ನೀವು ಈ ರೀತಿ ಮಾಡಬೇಕೆಂದು ಹೈಗ್ರೌಂಡ್ ಪೋಲೀಸ್ ಸ್ಟೇಷನ್‌ನಲ್ಲಿ ಈ ದೂರನ್ನು ಕೊಟ್ಟಿದ್ದಾರೆ. ಸರ್ಕಾರ ಯಾರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದೆ? ಇದರಲ್ಲಿ ನಿಷ್ಪಕ್ಷವಾದ ತನಿಖೆಯನ್ನು ಯಾವ ರೀತಿ ನಿರೀಕ್ಷೆ ಮಾಡುತ್ತಾರೆ? How do you expect a fair and clear investigation in this case? That is why ED and CBI have entered this case, because of this prima facie ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ನಾನು ಅನೇಕ ದಾರ್ಶನಿಕರ ಬಗ್ಗೆ, ದಾಸ ಸಾಹಿತ್ಯದ ಬಗ್ಗೆ, ವಚನ ಸಾಹಿತ್ಯದ ಬಗ್ಗೆ, ತತ್ವಪದಗಳ ಬಗ್ಗೆ, ಶಿಶುನಾಳ ಷರೀಫ್‌ರವರ ಉದಾಹರಣೆಗಳನ್ನು ಕೊಟ್ಟಿರುವಂಥದ್ದು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ನಾನು ಮಾತನಾಡುತ್ತಿದ್ದೇನೆ, ಅವರಿಗೆ ಅವಕಾಶ ಕೊಡುವುದು ಬೇಡ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ಯೀಲ್ಡ್ ಆಗಿದ್ದಾರೆಯೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಭ್ರಷ್ಟಾಚಾರಕ್ಕೆ….. **(ಗೊಂದಲ)** ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ಯೀಲ್ಡ್ ಆಗಿದ್ದಾರೆಯೇ?

**ಉಪ ಸಭಾಪತಿಯವರು:-** ಅದು ಮಾನ್ಯ ಭೋಜೇಗೌಡರವರಿಗೆ ಬಿಟ್ಟಂಥ ವಿಚಾರ, ನೀವು ಏಕೆ ವಿರೋಧ ಮಾಡುತ್ತಿದ್ದೀರಿ. ಅದು ಮಾತನಾಡತಕ್ಕಂಥವರ ವಿಚಾರ.

**(ಗೊಂದಲ)**

**ಶ್ರೀ ಬಿ.ಝಡ್ ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ,.....

**ಉಪ ಸಭಾಪತಿಯವರು:–** ಮಾನ್ಯ ಜಮೀರ್ ಅಹಮದ್‌ರವರೇ, ತಾವು ಕುಳಿತುಕೊಳ್ಳಿ. ಅದು ಅವರಿಗೆ ಬಿಟ್ಟಂಥ ವಿಚಾರ. ಮಂತ್ರಿಗಳು ಸದನದಲ್ಲಿ ಈ ರೀತಿ ಮಾಡಿದರೆ ಹೇಗೆ? ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**(ಗೊಂದಲ)**

**ಉಪ ಸಭಾಪತಿಯವರು:–** ಅವರು ಮಾತಾಡಿರುವಂತಹ ವಿಚಾರಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ಕುಳಿತುಕೊಳ್ಳಿ. ಮಾನ್ಯ ಜಮೀರ್ ಅಹಮದ್‌ರವರೇ, ಕುಳಿತುಕೊಳ್ಳಿ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಜಮೀರ್ ಅಹಮದ್‌ರವರೇ, ಪೀಠ ಹೇಳಿದ ಮೇಲೆ ಕುಳಿತುಕೊಳ್ಳಬೇಕಲ್ಲವೇ? ತಾವು ಮಂತ್ರಿಗಳಾಗಿದ್ದೀರಿ, ನಿಮಗೆ ಜವಾಬ್ದಾರಿ ಇಲ್ಲವೆಂದರೆ, ಇನ್ನು ಯಾರಿಗೆ ಜವಾಬ್ದಾರಿ ಇರುತ್ತದೆ, ಕುಳಿತುಕೊಳ್ಳಿ. ಮಾನ್ಯ ಭೋಜೇಗೌಡರವರೇ, ತಾವು ಮಾತನಾಡಿ. ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಬಿ.ಝಡ್ ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಮುಖ್ಯಮಂತ್ರಿಗಳ ಹೆಸರನ್ನು ಹೇಳಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಜಮೀರ್ ಅಹಮದ್‌ರವರೇ, ಮಾನ್ಯ ರವಿಕುಮಾರ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ, ಅವರು ಮಾತನಾಡಿರುವುದು ರೆಕಾರ್ಡ್‌ಗೂ ಹೋಗಿಲ್ಲ. ನೀವು ಮಾತನಾಡಿರುವುದು ರೆಕಾರ್ಡ್‌ಗೆ ಹೋಗಿಲ್ಲ, ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದ್ದೇನೆ, ಈಗ ನಾನು ಮತ್ತೊಮ್ಮೆ ಹೇಳುತ್ತೇನೆ. ಸಂಬಂಧಗಳ ಅಡಿಯಲ್ಲಿ ನಮ್ಮ, ನಿಮ್ಮ ಸಂಬಂಧದಿಂದ ಈ ನಾಡನ್ನು ಕಟ್ಟಿರುವಂಥದ್ದು.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ,......

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಣ್ಣರವರೇ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ,......

**ಉಪ ಸಭಾಪತಿಯವರು:–** ಅವರು ಮಾತನಾಡಿರುವುದು ರೆಕಾರ್ಡ್‌ಗೆ ಹೋಗಿಲ್ಲ. ನೀವು ಉತ್ತರ ಕೊಡಬೇಕಾದಾಗ ಹೇಳಿ. ಈಗ ತಾವು ಕುಳಿತುಕೊಳ್ಳಿ. ಮಾನ್ಯ ಭೋಜೇಗೌಡರವರೇ, ತಾವು ಮಾತನಾಡಿ.

**ಶ್ರೀ ಎಲ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅನೇಕ ಬಾರಿ ಹೇಳಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ತಾವು ಪೀಠವನ್ನು ಉದ್ದೇಶಿಸಿ ಮಾತನಾಡಿ.

**ಶ್ರೀ ಎಲ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಪೀಠ ಮತ್ತು ಇಲ್ಲಿ ಕುಳಿತ್ತಿರುವಂತಹ ಎಲ್ಲರ ಸಂಬಂಧ "ಎಲ್ಲಿದೆ ನಂದನ, ಎಲ್ಲಿದೆ ಬಂಧನ, ಎಲ್ಲಾ ಇದೆ ನಮ್ಮೊಳಗೆ, ಒಳಗಿನ ತಿಳಿಯನು ಕಲಕದಿದ್ದರೆ ಅಮೃತದ ಸವಿ ಇದೆ ನಾಲಿಗೆಗೆ, ಎಷ್ಟು ಕಷ್ಟವೋ ಹೊಂದಿಕೆ ಎಂಬುವುದು, ನಾಲ್ಕು ದಿನದ ಈ ಬದುಕಿನಲ್ಲಿ" ಎಂದು ನಾವೆಲ್ಲಾ ಹೊಂದಿಕೊಂಡು ಬಾಳಬೇಕಾಗುತ್ತದೆ. ಆ ಹೊಂದಾಣಿಕೆ ಇರಬೇಕಾಗುತ್ತದೆ. ಆ ಅವಿನಾಭಾವ ಸಂಬಂಧ ಇರಬೇಕಾಗುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ,....

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಕುಳಿತುಕೊಂಡರೆ ಎಲ್ಲಾ ಸಂಬಂಧಗಳು ಸರಿ ಇರುತ್ತದೆ. ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸಂಬಂಧಗಳು ಹೇಗಿರಬೇಕೆಂದರೆ, **"ಸಂಬಂಧಗಳು ದೀಪದ ಎಣ್ಣೆಯಂತಿರಬೇಕು, ಯಾರೇ ಎಷ್ಟೇ ಬತ್ತಿ ಇಟ್ಟರೂ ಅದು ಬೆಳಗುತ್ತಿರಬೇಕು"** ಹಾಗಾಗಿ ಯಾರೇ ಎಷ್ಟು ಬತ್ತಿ ಇಟ್ಟರೂ ದೀಪ ಮಾತ್ರ ಬೆಳಗುತಿರಬೇಕು. ಬತ್ತಿಯನ್ನು ಬತ್ತಿ ರೂಪದಲ್ಲಿ ಉಪಯೋಗ ಮಾಡಬೇಕು. ಬತ್ತಿಯನ್ನು ಬೇರೆ ಅರ್ಥದಲ್ಲಿ ಉಪಯೋಗ ಮಾಡುವ ಕೆಲಸ ಆಗಬಾರದು. ಹಾಗಾಗಿ ಇಲ್ಲಿ ಆಗಿರುವಂತಹ ವಿಚಾರ, ಯಾರು ಎಷ್ಟೇ ಬತ್ತಿ ಇಟ್ಟರೂ ಆ ದೀಪ ಹತ್ತಿ ಹತ್ತಿ ಉರಿಯುತ್ತಿರಬೇಕು. ಕತ್ತಲನ್ನು ಕತ್ತಲಿನಿಂದ ಓಡಿಸುವುದಕ್ಕೆ ಸಾಧ್ಯವಿಲ್ಲ, ಅದೇರೀತಿ ದ್ವೇಷದಿಂದ ದ್ವೇಷವನ್ನು ಓಡಿಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಅರಿಯಬೇಕಾಗುತ್ತದೆ. ದ್ವೇಷದಿಂದ ಏನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಕತ್ತಲನ್ನು ಕತ್ತಲಿನಿಂದ ಓಡಿಸುವುದಕ್ಕಾಗುತ್ತದೆಯೇ? ಕತ್ತಲನ್ನು ಓಡಿಸಬೇಕಾದರೆ ದೀಪ ಹಚ್ಚಿ ಬೆಳಗಿಸಬೇಕು, ಆಗ ಕತ್ತಲು ಓಡಿ ಹೋಗುತ್ತದೆ. ದ್ವೇಷದಿಂದ ಓಡಿಸುವುದಕ್ಕೆ ಸಾಧ್ಯವಿಲ್ಲ. ಪ್ರೀತಿ ತೋರಿಸಿ, ಪ್ರೀತಿಯಿಂದ ದ್ವೇಷವನ್ನು ಓಡಿಸಬಹುದು. ಹಾಗಾಗಿ ಪ್ರೀತಿ ಸಂಬಂಧಗಳ ಅಡಿಯಲ್ಲಿ ನಾವು ಇವತ್ತು ಅವರ ಜೀವನವನ್ನು, ಅಂದರೆ ಮಹರ್ಷಿ ವಾಲ್ಮಿಕಿ ನಿಗಮದಲ್ಲಿ ಬರುವಂತಹ ಫಲಾನುಭವಿಗಳಿದ್ದಾರಲ್ಲಾ ಅವರೆಲ್ಲರ ಜೀವನವನ್ನು ನಶ್ವರ ಮಾಡಿದ್ದೇವೆ, ಅವರ ಜೀವನವನ್ನು ಹಾಳು ಮಾಡಿದ್ದೇವೆ. ನಾವು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಅಂತಹ ಬಡ ಕುಟುಂಬಗಳಿಗೆ ನೆರವು ಆಗಿರಬೇಕಾಗಿರುವಂತಹ ಹಣ ಇವತ್ತು Lamborghini and Range Rover car, ಐಷರಾಮಿ ಬಂಗಲೆ, ಗೋಲ್ಡ್ ಅಂಗಡಿ, ಬಾರ್‌ಗಳು, ಇಂತಹವುಗಳಿಗೆ ವಿನಿಯೋಗವಾಗಿದೆಯಲ್ಲಾ ಅದಕ್ಕೆ ನಾವೇನು ಹೇಳಬೇಕು? ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣೆಂದೆತ್ತ ಸಂಬಂಧವಯ್ಯ, ಆ ಸಂಬಂಧ, ಈ ಸಂಬಂಧ

ಕಲ್ಪಿಸಿದ್ದೀರಲ್ಲಾ, ಇದು ಯಾವ ರೀತಿ? ಅದಕ್ಕೋಸ್ಕರ ಸಂಬಂಧವೇ ಇಲ್ಲದಿರುವಂತಹದಕ್ಕೆ ಇದನ್ನು ವಿನಿಯೋಗ ಮಾಡಿರುವ ಸಂದರ್ಭದಲ್ಲಿ ಭಗವಂತ ಕೂಡ ಕ್ಷಮಿಸುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 40 ನಿಮಿಷಗಳಾಗಿವೆ. ಸುಮಾರು ಜನರು ಮಾತನಾಡುವವರಿದ್ದಾರೆ, ಬೇಗ ಮುಗಿಸಿ.

**(ಗೊಂದಲ)**

(ಮುಂದು)

(524) 18/07/2024 1:10/ಎಸ್‌ಪಿಆರ್/ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಶ್ರೀ ಎಸ್.ಎಲ್.ಭೋಜೇಗೌಡರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಹೀಗಾಗಿ ನಾವು ಅವರಿಗೆ ಸಪೋರ್ಟ್ ಮಾಡುತ್ತಿದ್ದೇವೆ.

**ಉಪ ಸಭಾಪತಿಯವರು:-** ಶ್ರೀ ಭೋಜೇಗೌಡರೇ, ನಿಮ್ಮ ಭಾಷಣವನ್ನು ಪೂರ್ಣಗೊಳಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಮಾಯಕ ಶ್ರೀ ಚಂದ್ರಶೇಖರನ್ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು. ಇಂತಹ ಘಟನೆಯಿಂದ ಆಳುವ ಪಕ್ಷಕ್ಕೆ ಮುಜುಗರ ಆಗಿದೆಯೋ ಅಥವಾ ಇಲ್ಲವೋ ಎಂದು ನಾನು ಪ್ರಶ್ನಿಸುತ್ತೇನೆ. ಅವರು ಪ್ರಾಮಾಣಿಕವಾಗಿ ಹೇಳಬೇಕು. **(ಗೊಂದಲ)** ಈ ಮುಜುಗರವನ್ನು ತಪ್ಪಿಸಬೇಕು; ಹೀಗಾಗಿ ಸರ್ಕಾರವು ಜವಾಬ್ದಾರಿಯಿಂದ ತನ್ನ ಕರ್ತವ್ಯಗಳನ್ನು ನಿಭಾಯಿಸಬೇಕು. ಬ್ಯಾಂಕಿನ ಅಧಿಕಾರಿಗಳು ಸ್ವೇಚ್ಛಾಚಾರವಾಗಿ ತಮ್ಮ ಅಧಿಕಾರವನ್ನು ಬಳಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಣವನ್ನು ದರೋಡೆ ಮಾಡಿದ್ದಾರೆ. ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯಾಗಬೇಕು; ಈ ಮೂಲಕ ಸದರಿ ಹಣವನ್ನು ವಾಪಸ್ಸು ಪಡೆದುಕೊಳ್ಳುವುದರ ಮುಖಾಂತರ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ನ್ಯಾಯ ದೊರಿಕಿಸಿಕೊಟ್ಟು; ಈ ಮೂಲಕ ಆ ಜನಾಂಗದ ಜನಗಳಿಗೆ ನ್ಯಾಯ ಒದಗಿಸುವ ಕೆಲಸಗಳಾಗಬೇಕು. ಸಾರ್ವಜನಿಕವಾಗಿ ಸರ್ಕಾರವು ತಾನು ತಪ್ಪಿತಸ್ಥರಲ್ಲ ಎಂದು ತೋರಿಸಬೇಕಾಗುತ್ತದೆ. ಈ ಬಗ್ಗೆ ಸರ್ಕಾರಕ್ಕೆ ಜವಾಬ್ದಾರಿ ಇದೆ. ಅದನ್ನು ಬಿಟ್ಟು ಸುಖಾಸುಮ್ಮನೆ ಕೂಗಾಡಿದರೆ, ಮತ್ತೊಂದು ಮಾಡಿದರೆ ಸಮಸ್ಯೆಯು ಬಗೆಹರಿಯುವುದಿಲ್ಲ. ರಾಜಿನಾಮೆ ನೀಡಿದ ಮಂತ್ರಿಗಳಾದ ಶ್ರೀ ಬಿ.ನಾಗೇಂದ್ರ ಸರ್ಕಾರವಲ್ಲವೇ? ಶ್ರೀ ಬಸವರಾಜ ದದ್ದಲ್ ಸರ್ಕಾರವಲ್ಲವೇ? ಇಂತಹ ಸಂದರ್ಭದಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸರ್ಕಾರದ ಭಾಗವಲ್ಲವೇ? ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸರ್ಕಾರದ ಭಾಗವಲ್ಲವೇ? ಆತ್ಮಹತ್ಯೆ ಮಾಡಿಕೊಂಡ ಶ್ರೀ ಪಿ.ಚಂದ್ರಶೇಖರನ್ ರವರು ಸರ್ಕಾರದ ಭಾಗವಲ್ಲವೇ? ಅಭಿವೃದ್ಧಿ

ನಿಗಮದಿಂದ ದರೋಡೆಯಾದ ಹಣ ಸರ್ಕಾರ ಅಥವಾ ಸಾರ್ವಜನಿಕರದ್ದಲ್ಲವೇ? ಆರ್ಥಿಕ ಇಲಾಖೆಯು ಸರ್ಕಾರದ ಭಾಗವಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀ ಭೋಜೇಗೌಡ ರವರೇ ನಿಮಗೆ 20 ನಿಮಿಷಗಳ ಕಾಲಾವಕಾಶವನ್ನು ನೀಡಲಾಗಿತ್ತು; ಆದರೆ ನೀವು 40 ನಿಮಿಷಗಳ ಕಾಲಾವಧಿಯನ್ನು ತೆಗೆದುಕೊಂಡಿದ್ದೀರಿ. ಹೀಗಾಗಿ ನಿಮ್ಮ ಭಾಷಣವನ್ನು ಬೇಗ ಪೂರ್ಣಗೊಳಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಈ ವಿಚಾರವು ಬಹಳ ಗಂಭೀರತೆಯಿಂದ ಕೂಡಿದೆ.

**ಶ್ರೀ ನಸೀರ್ ಅಹ್ಮದ್:-** ಶ್ರೀ ಭೋಜೇಗೌಡರವರೇ, ನೀವು ಮಾತನಾಡಿ.

**ಉಪ ಸಭಾಪತಿಯವರು:-** ಶ್ರೀ ನಸೀರ್ ಅಹ್ಮದ್ ರವರೇ ತಾವೇ ಇಲ್ಲಿ ಬಂದು ಕುಳಿತುಕೊಳ್ಳಿ. ಇದು ಶಾಸನ ಸಭೆ; ಹೀಗಾಗಿ ಸ್ವಲ್ಪ ಯೋಚನೆ ಮಾಡಿ ಮಾತನಾಡಿ. ನೀವು ಕುಳಿತುಕೊಳ್ಳಿ. ಸಭೆ ನಡೆಸುವುದಕ್ಕೆ ಪೀಠ ಇದೆ; ನಾವು ಇಲ್ಲಿದ್ದೇವೆ. ಶ್ರೀ ಭೋಜೇಗೌಡರವರೇ ತಾವು ಮುಂದುವರೆಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಮಾರ್ಚ್ ಮಾಹೆಯಲ್ಲಿ ಮಂಡಿಸಲಾಗುವ ಆಯವ್ಯಯದ ಲೆಕ್ಕ ಪರಿಶೋಧನೆಯಾಗುವುದಿಲ್ಲವೇ? ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಧನ ವಿನಿಯೋಗವಾಗುತ್ತದೆ ಎಂಬ ಸಂಪೂರ್ಣ ಮಾಹಿತಿಯು ಮಾರ್ಚ್ ಅಖೈರಿನಲ್ಲಿ ಆರ್ಥಿಕ ಇಲಾಖೆಗೆ ದೊರೆಯುವುದಿಲ್ಲವೇ? ಇಂತಹ ಪರಿಸ್ಥಿತಿಯಲ್ಲಿ 88 ಕೋಟಿ 32 ಲಕ್ಷ ರೂಪಾಯಿಗಳಷ್ಟು ಹಣ ದುರುಪಯೋಗವಾಗಿರುವುದು ಆರ್ಥಿಕ ಇಲಾಖೆಗೆ ಇಷ್ಟೊಂದು ತಡವಾಗಿ ಗೊತ್ತಾಗುವುದಾದರೂ ಹೇಗೆ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಈ ಹಗರಣವು ಫೆಬ್ರವರಿ ಮಾಹೆಯಿಂದಲೇ ನಡೆಯುತ್ತಿದ್ದು, ಆದಾಗ್ಯೂ ಸಹ ಆರ್ಥಿಕ ಇಲಾಖೆಗೆ ಗೊತ್ತಾಗಲಿಲ್ಲವೇ? ಇದರ ಮಾಹಿತಿಯು ಜೂನ್ ತಿಂಗಳಿನಲ್ಲಿ ಗೊತ್ತಾಗಿದೆ. ಹೀಗಾಗಿ ಸರ್ಕಾರವು ಇದಕ್ಕೆ ಹೊಣೆಯನ್ನು ಹೊರಬೇಕಲ್ಲವೇ? ಸರ್ಕಾರವು ಹೊಣೆಹೊರಬೇಕಾದರೆ, ತಪ್ಪು ನಡೆದ ಇಲಾಖೆಯ ಮಂತ್ರಿಗಳು ಹಾಗೂ ರಾಜ್ಯದ ಮುಖ್ಯಮಂತ್ರಿಗಳು ಇದರ ಹೊಣೆಯನ್ನು ಹೊರಬೇಕಾಗುತ್ತದೆ. ಇದಕ್ಕೆ ನಾನು ಜವಾಬ್ದಾರನಲ್ಲ ಎಂದು ಹೇಗೆ ಹೇಳುವುದಕ್ಕಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಈಶ್ವರಪ್ಪ ರವರ ಪ್ರಕರಣದಲ್ಲಿ ಶ್ರೀ ಈಶ್ವರಪ್ಪನವರು.... **(ಗೊಂದಲ)** ಆಗ ಮುಖ್ಯಮಂತ್ರಿಗಳ ರಾಜಿನಾಮೆಯನ್ನು ಪಡೆದುಕೊಳ್ಳಲಾಗಿತ್ತೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಶ್ರೀ ಐವನ್ ಡಿ'ಸೋಜಾರವರೇ ನೀವು ಕುಳಿತುಕೊಳ್ಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಆ ಪ್ರಕರಣದಲ್ಲಿ ಅವರನ್ನು ಖುಲಾಸೆ ಮಾಡಲಾಗಿದೆ.

**ಉಪ ಸಭಾಪತಿಯವರು:-** ಶ್ರೀ ಅರುಣ್ ರವರೇ ಕುಳಿತುಕೊಳ್ಳಿ. ಶ್ರೀ ಎಸ್.ಎಲ್.ಭೋಜೇಗೌಡ ರವರು ಮಾತನಾಡಿರುವುದನ್ನು ಹೊರತುಪಡಿಸಿ, ಇನ್ನುಳಿದ ಸದಸ್ಯರುಗಳು ಮಾತನಾಡಿರುವುದನ್ನು ಕಡತಕ್ಕೆ ತೆಗೆದುಕೊಳ್ಳಬಾರದು.

**(ಮಾನ್ಯ ಸಭಾಪತಿಯವರ ನಿರ್ದೇಶನದಂತೆ, ಈ ಹಂತದಲ್ಲಿ ಶ್ರೀ ಎಸ್.ಎಲ್.ಭೋಜೇಗೌಡರವರು ಮಾತನಾಡಿರುವುದನ್ನು ಹೊರತುಪಡಿಸಿ, ಇನ್ನುಳಿದ ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ನಡವಳಿಗಳಲ್ಲಿ ದಾಖಲಿಸಿರುವುದಿಲ್ಲ)**

**ಉಪ ಸಭಾಪತಿಯವರು:-** ಶ್ರೀ ಭೋಜೇಗೌಡರೇ, ಇತರೆ ಸದಸ್ಯರೊಂದಿಗೆ ಮಾತನಾಡಬೇಡಿ. ನಿಮಗೆ ನೀಡಿದ ಸಮಯಾವಕಾಶವು ಮುಗಿಯುತ್ತಿದ್ದು, ನಿಮ್ಮ ಭಾಷಣವನ್ನು ಪೂರ್ಣಗೊಳಿಸಿ. ಇನ್ನೂ ಸಾಕಷ್ಟು ಸದಸ್ಯರು ಈ ಬಗ್ಗೆ ಮಾತನಾಡುವವರಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಈ ವಿಚಾರದಲ್ಲಿ ರಾಜಕೀಯ ಮಾಡುತ್ತಿಲ್ಲ; ಹೀಗಾಗಿ ಅವರು ರಾಜಕೀಯವನ್ನು ಇಲ್ಲಿ ಬೆರೆಸಬಾರದು. ಆಗಿರುವ ಅನಾಹುತವನ್ನು ಹೇಗೆ ಸರಿಪಡಿಸಬೇಕು ಎಂಬ ಬಗ್ಗೆ ಸರ್ಕಾರವು ತಿಳಿಸಬೇಕು. ಸಮಾಜದ ಕಟ್ಟ ಕಡೆಯ ಜನಾಂಗಕ್ಕೆ ಆದ ಅನ್ಯಾಯದ ಬಗ್ಗೆ ಸರ್ಕಾರಕ್ಕೆ ಖುಷಿ ಇದೆಯೇ? ಈ ಹಗರಣದ ಬಗ್ಗೆ ಮುಖ್ಯಮಂತ್ರಿಗಳಿಗೆ ಹಾಗೂ ಆಡಳಿತ ಪಕ್ಷಕ್ಕೆ ಖುಷಿ ಇದೆಯೇ? ಈ ವಿಚಾರವನ್ನು ಬಹಳ ಗಂಭೀರವಾಗಿ ವಿಚಾರ ಮಾಡಬೇಕು. ಸಾರ್ವಜನಿಕವಾಗಿ ಸಮಾಜಕ್ಕೆ ಏನು ಹೇಳಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕು. ಸರ್ಕಾರಕ್ಕೆ ತಾಕತ್ತು ಇದ್ದರೆ ಈ ಹಗರಣದಲ್ಲಿ ಸರ್ಕಾರವು ಭಾಗಿಯಾಗಿಲ್ಲ ಮತ್ತು ತಪ್ಪಿತಸ್ಥರಲ್ಲ ಎಂದು ಹೇಳಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಭೋಜೇಗೌಡರು ನೈತಿಕವಾಗಿ ಹೊಣೆ ಹೊತ್ತು ...

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಶ್ರೀ ಐವನ್ ಡಿ'ಸೋಜಾ ರವರು ಪದೇ ಪದೇ ಎದ್ದು ನಿಲ್ಲುವುದು ಬೇಡ; ಅವರು ಕುಳಿತುಕೊಳ್ಳಲಿ. **(ಗೊಂದಲ)** "ಮಾಡಿರುವುದು ಅನಾಚಾರ; ಮನೆ ಮುಂದೆ ವೃಂದಾವನ" ಎಂಬ ನಾಣ್ಣುಡಿಯಂತಾಗಿದೆ ಇವತ್ತಿನ ಪರಿಸ್ಥಿತಿ. ಸರ್ಕಾರವು ಅನಾಚಾರವನ್ನು ಮಾಡಿಲ್ಲವೇ? ಇದಕ್ಕೆ ಯಾರೇ ಕಾರಣರಾಗಿಬಹುದು. "ಉಪ್ಪು ತಿಂದವನು ನೀರು ಕುಡಿಯಲೇಬೇಕು" ಎಂಬ ನಾಣ್ಣುಡಿಯಂತೆ ಉಪ್ಪು ತಿಂದವರು ನೀರು ಕುಡಿಯುತ್ತಾರೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎನ್ನುವ ವಿಚಾರವನ್ನು ನಾನು ಹೇಳುತ್ತಿದ್ದೇನೆ. **(ಗೊಂದಲ)** ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳಿದರೆ, ಇವರಿಗೆ ಏಕೆ ಮೈ ಉರಿಯುತ್ತದೆ?

**ಉಪ ಸಭಾಪತಿಯವರು:-** ಶ್ರೀ ಭೋಜೇಗೌಡರವರೇ, ನಿಮಗೆ ನೀಡಿದ ಸಮಯವು ಮುಗಿದಿದೆ, ಹೀಗಾಗಿ ನಿಮ್ಮ ಭಾಷಣವನ್ನು ಪೂರ್ಣಗೊಳಿಸಿ. ಈ ವಿಷಯದ ಬಗ್ಗೆ ಇನ್ನೂ ಸುಮಾರು ಸದಸ್ಯರು ಮಾತನಾಡುವವರಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಹೇಳುವ ಸಂಗತಿಗಳನ್ನು ಬಹಳ ಸ್ಫೂರ್ತಿದಾಯಕವಾಗಿ ಹಾಗೂ ಆರೋಗ್ಯದಾಯಕವಾಗಿ ತೆಗೆದುಕೊಳ್ಳಲಿ. ತಪ್ಪು ಮಾಡಿದ್ದರೆ, ಮುಖ್ಯಮಂತ್ರಿಗಳಿಂದ ರಾಜಿನಾಮೆಯನ್ನು ಕೊಡಿಸುತ್ತೇವೆಂದು ಹೇಳಲಿ. ಮುಖ್ಯಮಂತ್ರಿಗಳಿಂದ ರಾಜಿನಾಮೆ ಕೊಡಿಸಿ.

**(ಗೊಂದಲ)**

**ಶ್ರೀ ಬಿ.ಝೆಡ್. ಜಮೀರ್ ಅಹ್ಮದ್ ಖಾನ್:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ನಮ್ಮ ಕಡೆಗಳಲ್ಲಿ ತುರಿಕೆ ಸೊಪ್ಪು ಎಂಬ ಸೊಪ್ಪು ಇದೆ. ಅಂತಹ ಸೊಪ್ಪನ್ನು ತಂದು ಆಡಳಿತ ಪಕ್ಷದವರ ಕುರ್ಚಿಗಳಿಗೆ ಏನಾದರೂ ಹಾಕಿದ್ದಾರೆಯೇ ಎಂಬ ಅನುಮಾನ ನನಗೆ ಬರುತ್ತಿದೆ; ಏಕೆಂದರೆ ಅವರುಗಳು ಪದೇ ಪದೇ ಎದ್ದು ನಿಂತುಕೊಳ್ಳುತ್ತಿದ್ದಾರೆ. ಅದನ್ನು ಮುಟ್ಟಿದ್ದರೆ ಮೈ ಎಲ್ಲಾ ಕೆರೆದುಕೊಳ್ಳುವಂತಾಗುತ್ತದೆ.

**(ಗೊಂದಲ)**

**ಶ್ರೀ ಬಿ.ಝೆಡ್.ಜಮೀರ್ ಅಹ್ಮದ್ ಖಾನ್:-** ಮಾನ್ಯ ಸಭಾಪತಿಯವರೆ, ನಾವು ಶ್ರೀ ಎಸ್.ಎಲ್.ಭೋಜೇಗೌಡರಿಗೆ ಸಪೋರ್ಟ್ ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ಶ್ರೀ ಎಸ್.ಎಲ್.ಭೋಜೇಗೌಡ ರವರು ಮಾತನಾಡುತ್ತಿರುವುದಕ್ಕೆ ನಮ್ಮ ವಿರೋಧವಿಲ್ಲ. ಬೋವಿ ಮತ್ತು ದೇವರಾಜು ಅರಸು ಟ್ರಕ್ ಟರ್ಮಿನಲ್‌ನಲ್ಲಿ ಏನಾಯಿತು? ಈ ಬಗ್ಗೆ ಸದಸ್ಯರು ಸ್ವಲ್ಪ ಬೆಳಕನ್ನು ಚೆಲ್ಲಬೇಕು.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಪುರಂದರ ದಾಸರು ಎಲ್ಲರ ಬಗ್ಗೆ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಶ್ರೀ ಭೋಜೇಗೌಡರವರು ಬಹಳ ಒಳ್ಳೆಯ ರೀತಿಯಿಂದ ಮಾತನಾಡುತ್ತಿದ್ದಾರೆ. ಎಲ್ಲರಿಗೂ ಪ್ರೀತಿ ಬರುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. **(ಗೊಂದಲ)** ಇವರು ಎಲ್ಲಾ ಅಭಿವೃದ್ಧಿ ನಿಗಮಗಳ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಈ ಬಗ್ಗೆ ಮಾತನಾಡಲು ಆಡಳಿತ ಪಕ್ಷದವರು ಮನವಿಯನ್ನು ಸಲ್ಲಿಸಿದರೆ, ಆ ವಿಚಾರವಾಗಿ ನಾವೂ ಸಹ ಮಾತನಾಡುತ್ತೇವೆ.

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀ ಭೋಜೇಗೌಡರವರೇ, ನಿಮ್ಮ ಸಮಯ ಮುಗಿದಿದೆ; ಇನ್ನು 5 ನಿಮಿಷದಲ್ಲಿ ನಿಮ್ಮ ಭಾಷಣವನ್ನು ಪೂರ್ಣಗೊಳಿಸಿ; ಇನ್ನೂ ಬೇರೆಯವರು ಮಾತನಾಡುವವರಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯರೆ, ಶ್ರೀ ಭೋಜೇಗೌಡ ರವರು ಇನ್ನೂ ಬೇರೆ ನಿಗಮಗಳ ವಿಷಯದ ಬಗ್ಗೆ ಮಾತನಾಡಲಿ; ಆಗ ಎಲ್ಲರಿಗೂ ವಿಷಯ ಗೊತ್ತಾಗುತ್ತದೆ. ಎಲ್ಲಾ ಅಂಶಗಳ ಬಗ್ಗೆ ಅವರು ಹೇಳಬೇಕು.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, electoral bonds ಬೇರೆ ನಿಗಮಗಳ ಬಗ್ಗೆಯೂ ಸಹ ಅವರು ಹೇಳುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಅರ್ಕಾವತಿ ಬಡಾವಣೆ, ಕೆಂಪಣ್ಣ ಆಯೋಗದ ವರದಿಯ ಬಗ್ಗೆ ಹೇಳುತ್ತಾರೆ. ನಾವು ಮೂಡಾ ಹಗರಣದ ಬಗ್ಗೆಯೂ ಸಹ ಚರ್ಚಿಸೋಣ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, …

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಅದನ್ನು ನಾವು ಮಾಡಿದ್ದಲ್ಲ; ಅವರು ಮಾಡಿದ್ದು.

**ಉಪ ಸಭಾಪತಿಯವರು:-** ಸಭಾನಾಯಕರೇ, ನೀವು ಕುಳಿತುಕೊಳ್ಳಿ. ಶ್ರೀ ಭೋಜೇಗೌಡರೇ, 1:20 ಸಮಯಕ್ಕೆ ನಿಮ್ಮ ಭಾಷಣವನ್ನು ಮುಗಿಸಿ. ನೀವು ಯೀಲ್ಡ್ ಆದರೆ, ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ; ನೀವು ಈಗ ಮುಂದುವರೆಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಈಗ ನಾವು ಎಷ್ಟೇ ಚರ್ಚೆ ಮಾಡಿದರೂ ಸರ್ಕಾರವು ಕಲ್ಲಿನಂತೆ ಕೂಡಬಾರದು. ಕಲ್ಲನ್ನು ಕೆತ್ತಿದಾಗ, ಒಳ್ಳೆಯ ವಿಗ್ರಹವಾಗುತ್ತದೆ. ಈ ರೀತಿಯಾಗಿ ಆಗುವುದಕ್ಕೆ ಸರ್ಕಾರವು ಪ್ರಯತ್ನಿಸಬೇಕು. ಸಮಾಜಮುಖಿಯಾಗಿ, ತಾವು ತಪ್ಪಿತಸ್ಥರಲ್ಲ; ಆಗಿರುವ ಅನಾಹುತವನ್ನು ಸರಿಪಡಿಸುತ್ತೇವೆ; ಆ ಜನಾಂಗಕ್ಕೆ ನ್ಯಾಯವನ್ನು ಒದಗಿಸುತ್ತೇವೆ ಎಂಬ ವಿಚಾರವನ್ನು ಬಹಳ ಮನದಟ್ಟು ಮಾಡಿ ಸಮಾಜಕ್ಕೆ ತಿಳಿಸಬೇಕು. ಸರ್ಕಾರಕ್ಕೆ ಈಗಲೂ ಸಹ ಕಾಲ ಮಿಂಚಿಲ್ಲ. ಯಾವ ಅಧಿಕಾರಿಗೆ ಈ ರೀತಿಯಾಗಿ ಸರ್ಕಾರಕ್ಕೆ ಮುಜುಗರವಾಗದಂತೆ ಸರ್ಕಾರದ ಪರವಾಗಿ ವರದಿಯನ್ನು ನೀಡುವಂತೆ ತಾಕೀತು ಮಾಡಲಾಗಿತ್ತೋ, ಅಂತಹ ಅಧಿಕಾರಿಯ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಬೇಕು. ಮೃತ ಪಿ.ಚಂದ್ರಶೇಖರನ್ ರವರ ಕುಟುಂಬಕ್ಕೆ ನ್ಯಾಯವನ್ನು ಒದಗಿಸಿಕೊಡಬೇಕು. ಅವರ ಡೆತ್ ನೋಟ್‌ನಲ್ಲಿ ತಿಳಿಸಿದಂತೆ, does it not amount to murder? ಮೃತರು ಕೆಲವರ ಹೆಸರುಗಳನ್ನು ಹೇಳಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಭಾರತೀಯ ದಂಡ ಸಂಹಿತೆಯ ಕಲಂ 306 ರ ಅಡಿಯಲ್ಲಿ ಕೆಲವರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿದೆ. ಇಂತಹ ದುಷ್ಕೃತ್ಯಕ್ಕೆ ಕಾರಣರಾದವರೆಲ್ಲಾ ಭಾರತೀಯ ದಂಡ ಸಂಹಿತೆಯ ಕಲಂ 306 ರಡಿ ಶಿಕ್ಷೆಗೆ ಒಳಪಡುವುದಿಲ್ಲವೇ? ಇಂತಹ ಕೆಲವರ ವಿರುದ್ಧ ಏಕೆ ಈ ಕಲಂ ನಡಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಲ್ಲ? ಮಾಜಿ ಸಚಿವ ಶ್ರೀ ಬಿ.ನಾಗೇಂದ್ರ ಮತ್ತು ಶ್ರೀ ಬಸವರಾಜ ದದ್ದಲ್ ರವರುಗಳಿಗೆ ಏಕೆ ಈ ಕಲಂನಡಿ ವರದಿಯನ್ನು ದಾಖಲಿಸಿಲ್ಲ?

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಸದಸ್ಯರು ಸದನಕ್ಕೆ ತಪ್ಪು ಮಾಹಿತಿ ಕೊಡಬಾರದು. ಮೌಖಿಕವಾಗಿ ಯಾರೋ ಹೇಳಿದ್ದಾರೆಂದು ಬಿ.ನಾಗೇಂದ್ರ ರವರ ವಿರುದ್ಧ ಜಾರಿ ನಿರ್ದೇಶನಾಲಯದವರಾಗಲೀ ಅಥವಾ ಸಿ.ಬಿ.ಐ. ರವರಾಗಲೀ ಪ್ರಕರಣವನ್ನು ದಾಖಲಿಸಿಲ್ಲ. (ಗೊಂದಲ) ಈ ವಿಷಯದಲ್ಲಿ ತನಿಖೆಯಾಗಲಿ. ಈ ವಿಚಾರದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ ಅದೇನೆಂದರೆ, ಯಾರೇ ತಪ್ಪಿತಸ್ಥರಿರಲಿ, ಅವರ ವಿರುದ್ಧ ನಿಷ್ಪಕ್ಷವಾಗಿ ತನಿಖೆಯಾಗಲಿ. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಅನ್ಯಾಯದ ವಿಚಾರದಲ್ಲಿ ನಾವು ಕಠಿಣವಾದ ಶಿಕ್ಷೆಯನ್ನು ನೀಡುತ್ತೇವೆ; ಅವ್ಯವಹಾರವಾದ ಹಣವನ್ನು ರಿಕವರಿ ಮಾಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಅವರ ಕೈಯ್ಯಲ್ಲಿ ಅಧಿಕಾರವಿದೆ. ಅವ್ಯವಹಾರವಾಗುವ ಸಂದರ್ಭದಲ್ಲಿ ಆರ್ಥಿಕ ಇಲಾಖೆಯ ಉನ್ನತಾಧಿಕಾರಿಗಳು ಕಣ್ಣುಮುಚ್ಚಿಕೊಂಡು ಕುಳಿತಿದ್ದರೆ? ಇವರುಗಳನ್ನೂ ಸಹ ಪ್ರಕರಣದಲ್ಲಿ ಸೇರಿಸಿಕೊಳ್ಳಿ. ಇವರನ್ನು ಏಕೆ ಸೇರಿಸಿಲ್ಲ? ಈ ವಿಚಾರದ ಬಗ್ಗೆ ಪ್ರಶ್ನಿಸಿದರೆ,

ಆಡಳಿತ ಪಕ್ಷದವರಿಗೆ ಮೈ ಉರಿಯುತ್ತದೆ. ನಾವು ಈ ಬಗ್ಗೆ ಕೇಳಬಾರದೇ? ಇದನ್ನು ಸರ್ಕಾರವು ಮಾಡಿ ತೋರಿಸಬೇಕು. ಸರ್ಕಾರವು ಆ ಜನಾಂಗದವರಿಗೆ ನ್ಯಾಯವನ್ನು ಒದಗಿಸಬೇಕು. ಈಗಿನ ಮುಖ್ಯಮಂತ್ರಿಗಳು 14 ಆಯವ್ಯಯಗಳನ್ನು ಮಂಡಿಸಿರುವ ಕೀರ್ತಿಗೆ ಭಾಜನರಾಗಿದ್ದಾರೆ.

(ಮುಂದು)

(525) 18-07-2024/ 1-30/bkp-bns (ಉಪ ಸಭಾಪತಿಯವರು ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):**

14 ಬಜೆಟ್‌ಗಳನ್ನು ಮಂಡನೆ ಮಾಡಿರುವಂತಹದ್ದರಲ್ಲಿ 3,27,00 ಸಾವಿರ ಕೋಟಿ ರೂಪಾಯಿಗಳ ಮೊತ್ತದ ಆಯವ್ಯಯವನ್ನು ಮಂಡನೆ ಮಾಡಿರತಕ್ಕಂತಹ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಹೆಮ್ಮೆ ಇದೆ. ಖುಷಿ ಇದೆ. 52,000 ಕೋಟಿ ರೂಪಾಯಿಗಳನ್ನು ಗ್ಯಾರಂಟಿಗೋಸ್ಕರವೇ ಕೊಡುತ್ತಿದ್ದಾರೆ. ಆ ಗ್ಯಾರಂಟಿಗೆ ಕೊಡತಕ್ಕಂತಹ ಒಂದು ಒಳ್ಳೆಯ ಕೆಲಸವನ್ನು ಮಾಡುವಂತಹದ್ದರಲ್ಲಿ ಈ ಪರಿಶಿಷ್ಟ ಜಾತಿ/ಪಂಗಡಗಳ ಹಣವನ್ನೂ ಕೂಡ ಗ್ಯಾರಂಟಿಗೆ ಉಪಯೋಗಿಸಿರುವ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಅದನ್ನೂ ಕೂಡ ಇಲ್ಲಿ ದಾಖಲೆಗಳೊಂದಿಗೆ ಇಲ್ಲಿ ಕೊಟ್ಟಿದ್ದೇವೆ. ಎಷ್ಟು ಬಾರಿ ಈ ಪರಿಶಿಷ್ಟ ಜಾತಿ/ಪಂಗಡಗಳವರಿಗೆ ನೀವು ಅನ್ಯಾಯ ಮಾಡುತ್ತೀರಿ? ಇನ್ನು ಏನು ಅವರಿಗೆ ಕತ್ತು ಹಿಸುಕುವಂತಹ ಕೆಲಸ ಮಾಡುತ್ತಿದ್ದೀರಿ? ಇದನ್ನು ನಿಮಗೆ ಕೇಳಬಾರದೇ? ಕೇಳಿದರೆ ನಿಮಗೆ ಏತಕ್ಕೆ ಮೈ ಉರಿಯುತ್ತದೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಎಸ್‌ಐಟಿ ಯಿಂದ ತನಿಖೆ ಮಾಡಿಸಿದ್ದೇವೆಯಲ್ಲವೇ?

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ನಾನು ಹೇಳುವುದನ್ನು ಕೇಳಿ, ನಾನು ಒಂದೇ ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಸರ್ಕಾರಕ್ಕೆ ಆ ಚಂದ್ರಶೇಖರ್‌ರವರು ಸಾಯುವವರೆಗೂ ಈ ವಿಚಾರ ಗೊತ್ತಿರಲಿಲ್ಲ. ಪಾಪ, ಅವರ ಕುಟುಂಬಕ್ಕೆ ಭಗವಂತ ಎಲ್ಲಾ ರೀತಿಯ ಶ್ರೇಯಸ್ಸು, ಅವರಿಗೆ ಆಗಿರುವಂತಹ ದುಃಖವನ್ನು ತಡೆದುಕೊಳ್ಳುವಂತಹ ಶಕ್ತಿಯನ್ನು ಕೊಡಲಿ, ಮತ್ತು ಆ ಕುಟುಂಬದ ರಕ್ಷಣೆಗೆ ಸರ್ಕಾರ ಬರಲೇಬೇಕು. ನಿಮಗೆ ಮನುಷ್ಯತ್ವ ಇದ್ದರೆ , ಧರ್ಮ ಇದ್ದರೆ, ಸರ್ಕಾರದ ಕರ್ತವ್ಯ ಇದ್ದರೆ ಆ ಕುಟುಂಬದ ರಕ್ಷಣೆಗೆ ಬರಬೇಕು. ಏಕೆಂದರೆ, ಇಂತಹ ಒಂದು ಪ್ರಮಾದವನ್ನು ಮುಂದೆ ಎಂದೂ ಸಹ, ಯಾವತ್ತು ಸಹ ಇತಿಹಾಸದಲ್ಲಿ ಆಗಬಾರದು ಎಂದು ಹೇಳಿ ಆ ಮನುಷ್ಯ ತನ್ನ ಪ್ರಾಣವನ್ನೇ ತೆತ್ತಿದ್ದಾರೆ. ನಿಜವಾಗಿಯೂ ನಾನು ಪ್ರಾಮಾಣಿಕವಾಗಿದ್ದೇನೆ. ನಾನು ಅನ್ಯಾಯವನ್ನು ಸಹಿಸಲಿಕ್ಕೆ ಆಗದೇ ನಾನು ಸತ್ತಿದ್ದೇನೆಂದು ತನ್ನ ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ. ಅದಕ್ಕೋಸ್ಕರ ಅವನ ಕುಟುಂಬದ ರಕ್ಷಣೆಗೆ ನೀವು ಬರಲೇಬೇಕಾಗುತ್ತದೆ. ಇವತ್ತು ಈ ನಿಟ್ಟಿನಲ್ಲಿ ಬಂದು ಈ ಒಂದು ಕೆಲಸವನ್ನು ನೀವು ಮಾಡಬೇಕು. ಇವತ್ತು ಹೇಳಿರುವಂತಹ

ವಿಚಾರ ಟಿ.ವಿ. ಪತ್ರಿಕೆಗಳಲ್ಲಿ ಬಂದಾದ ಮೇಲೆ 29ನೇ ತಾರೀಖು ಸರ್ಕಾರದವರು ಎಚ್ಚರ ವಹಿಸಿದ್ದೀರಲ್ಲಾ, ನಿಮಗೆ ನಾಚಿಕೆಯಾಗಬೇಕು. ಸರ್ಕಾರದಲ್ಲಿ ಗೃಹ ಸಚಿವರು ಇರಲಿ, ಮುಖ್ಯಮಂತ್ರಿಗಳು ಇರಲಿ, ಮಂತ್ರಿಗಳು ಇರಲಿ, ಸರ್ಕಾರಕ್ಕೆ ನಾಚಿಕೆಯಾಗಬೇಕಾಗುತ್ತದೆ. 29ನೇ ತಾರೀಖು ಈ ಅಧಿಕಾರಿಯಿಂದ ಸರ್ಕಾರದ ಪರವಾಗಿ, ಸರ್ಕಾರಕ್ಕೆ ಮುಜುಗರ ಆಗುವ ರೀತಿಯಲ್ಲಿ ಒಂದು ವರದಿಯನ್ನು ಕೊಡಬೇಕೆಂದು ಕೇಳಿದ್ದಾರಲ್ಲಾ, ಆ ಅಧಿಕಾರಿ, he is unfit to become an IAS officer. ಆ ಅಧಿಕಾರಿಯನ್ನು ಆ ಹುದ್ದೆಯಿಂದ forthwith ಸಸ್ಪೆಂಡ್ ಮಾಡಬೇಕು, ಡಿಸ್‌ಮಿಸ್ ಮಾಡಬೇಕು. ಮುಖ್ಯಮಂತ್ರಿಗಳು ಜವಾಬ್ದಾರಿ ಹೊತ್ತು ರಾಜೀನಾಮೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಹೀಗಾಗಿ, ಇಂತಹ ಅನಾಹುತಗಳಿಗೆ ಮುಂದೆ ಎಂದಿಗೂ ಕೂಡ ಇಂತಹ ಅನಾಹುತಗಳಾಗದ ರೀತಿಯಲ್ಲಿ ತಡೆಯುವಂತಹ ಕೆಲಸವನ್ನು ಸಮಾಜದಲ್ಲಿ ನಾವು ಮತ್ತು ನೀವುಗಳೆಲ್ಲಾ ಸೇರಿ ಮಾಡುವಂತಹ ಧರ್ಮ, ಜವಾಬ್ದಾರಿ ಮತ್ತು ಕರ್ತವ್ಯ ಇದೆ. ಆ ಕೆಲಸವನ್ನು ಮಾಡಬೇಕೆಂದು ಹೇಳಿ, ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**7. ಪ್ರಕಟಣೆ**

**"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 222 ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಪುನರ್ ರಚಿಸಲಾಗಿರುವ ಕುರಿತು."**

– – – –

**ಉಪ ಸಭಾಪತಿಯವರು:-** ಒಂದು ಪ್ರಕಟಣೆ ಇದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 222 ರ ಮೇರೆಗೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ:

1. ಶ್ರೀ ಪ್ರಾಣೇಶ್ ಎಂ.ಕೆ. ಮಾನ್ಯ ಉಪ ಸಭಾಪತಿಯವರು : ಸದಸ್ಯರು

2. ಶ್ರೀ ಎನ್.ಎಸ್. ಬೋಸರಾಜು : ಸದಸ್ಯರು
   ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

3. ಶ್ರೀ ಸಲೀಂ ಅಹಮದ್ : ಸದಸ್ಯರು
   ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು

4. ಶ್ರೀ ಸುನೀಲ್ ವಲ್ಯಾಪುರ್ : ಸದಸ್ಯರು
   ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಉಪ ನಾಯಕರು

5. ಶ್ರೀ ಬಿ.ಕೆ. ಹರಿಪ್ರಸಾದ್ : ಸದಸ್ಯರು
ವಿಧಾನ ಪರಿಷತ್ತಿನ ಮಾನ್ಯ ಶಾಸಕರು

6. ಶ್ರೀ ಶಶೀಲ್ ಜಿ. ನಮೋಶಿ : ಸದಸ್ಯರು
ವಿಧಾನ ಪರಿಷತ್ತಿನ ಮಾನ್ಯ ಶಾಸಕರು

7. ಶ್ರೀ ಎಸ್.ಎಲ್. ಭೋಜೇಗೌಡ : ಸದಸ್ಯರು
ವಿಧಾನ ಪರಿಷತ್ತಿನ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ನಾಯಕರು

8. ಶ್ರೀ ಎನ್. ರವಿಕುಮಾರ್ : ಸದಸ್ಯರು
ವಿಧಾನ ಪರಿಷತ್ತಿನ ಮಾನ್ಯ ಶಾಸಕರು

9. ಶ್ರೀ ಬಿ.ಜಿ. ಪಾಟೀಲ್ : ಸದಸ್ಯರು
ವಿಧಾನ ಪರಿಷತ್ತಿನ ಮಾನ್ಯ ಶಾಸಕರು

10. ಶ್ರೀ ಸಿದ್ಧರಾಮಯ್ಯ ಮಾನ್ಯ ಮುಖ್ಯಮಂತ್ರಿಗಳು : ವಿಶೇಷ ಆಹ್ವಾನಿತರು

11. ಶ್ರೀ ಡಿ.ಕೆ. ಶಿವಕುಮಾರ್ ಮಾನ್ಯ ಉಪ ಮುಖ್ಯಮಂತ್ರಿಗಳು : ವಿಶೇಷ ಆಹ್ವಾನಿತರು

12. ಶ್ರೀ ಹೆಚ್.ಕೆ. ಪಾಟೀಲ್, ಮಾನ್ಯ ಕಾನೂನು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು : ವಿಶೇಷ ಆಹ್ವಾನಿತರು

**ಮಾನ್ಯ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನದೊಂದು ಚಿನ್ನಹ ಇದೆ. ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅದು ಮುಂದಕ್ಕೆ ಹೋಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 59ರ ಮೇರೆಗೆ ಮುಂಬರುವ ಪ್ರಸಕ್ತ ವಿಧಾನ ಪರಿಷತ್ತಿನ .......

**ಉಪ ಸಭಾಪತಿಯವರು:-** ಈ ನಿಲುವಳಿ ಚರ್ಚೆಯಾಗುವುದಕ್ಕಿಂತ ಮೊದಲು ನೀವು ಅದನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಹೀಗಾಗಿ, ಈ ವಿಷಯ ಈಗಾಗಲೇ ಪ್ರಸ್ತಾಪವಾಗಿ ಚರ್ಚೆಯಾಗುತ್ತಿದೆ. ಆದ್ದರಿಂದ ತಾವು ಹೊಸದಾಗಿ ಇನ್ನೊಂದು ಅರ್ಜಿ ಕೊಡಿ. ಅದನ್ನು ಪುನರ್ ಪರಿಶೀಲನೆ ಮಾಡುತ್ತೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹೊರಗಡೆ ಪ್ರತಿಭಟನೆ ನಡೆಯುತ್ತಿದೆ. ಅಲ್ಲಿ ಸುಮಾರು 10 ಸಾವಿರ ಜನರು ಸೇರಿದ್ದಾರೆ. ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ...

**ಉಪ ಸಭಾಪತಿಯವರು:-** ಇದನ್ನು ಚರ್ಚೆ ಮಾಡಲಿಕ್ಕೆ ಹೊಸದಾಗಿ ಒಂದು ಅರ್ಜಿಯನ್ನು ಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 25 ಸಾವಿರದ 296 ಕೋಟಿ ರೂಪಾಯಿಗಳ ಲೂಟಿಯಾಗಿದೆ.

**ಉಪ ಸಭಾಪತಿಯವರು:-** ಶ್ರೀ ನಾರಾಯಣಸ್ವಾಮಿಯವರೆ, ನಾನು ಇಲ್ಲಿ ಹೇಳುವುದನ್ನು ಸ್ವಲ್ಪ ಕೇಳಿ. ಒಂದು ಚರ್ಚೆ ನಡೆಯಬೇಕಾದರೆ ಅದಕ್ಕೊಂದು ಅರ್ಜಿಯನ್ನು ಕೊಡಿ. ನೀವು ಅರ್ಜಿಯನ್ನು ಕೊಟ್ಟ ಮೇಲೆ ಇದಕ್ಕೆ ನಿಯಮಗಳಿದ್ದು, ಅದರ ಬಗ್ಗೆ ಕೇಳಿ ತಿಳಿದುಕೊಳ್ಳಿ.

ನಿಯಮ 68 ರಡಿಯಲ್ಲಿ ಚರ್ಚೆ ಮಾಡಲು ಕೇಳಿಕೊಂಡಿರುವವರು ಶ್ರೀ ಎನ್. ರವಿಕುಮಾರ್‌ರವರು, ಶ್ರೀ ಸಿ.ಟಿ.ರವಿಯವರು, ಶ್ರೀ ಬಿ.ಎಸ್.ಅರುಣ್‌ರವರು, ಶ್ರೀಮತಿ ಭಾರತಿ ಶೆಟ್ಟಿಯವರು, ಶ್ರೀ ಎಸ್.ವ್ಹಿ. ಸಂಕನೂರ ರವರು, ಶ್ರೀ ಎಸ್.ಎಲ್. ಬೋಜೇಗೌಡರವರು, ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ಇವರೆಲ್ಲರೂ ಸೇರಿಕೊಂಡು ಕೊಟ್ಟಿದ್ದಾರೆ. ಇವರೆಲ್ಲರದ್ದೂ ಮುಗಿದ ನಂತರ ತಮಗೆ ಅವಕಾಶ ಕೊಡುವಂತದ್ದು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಆ ರೀತಿ ಆಗುವುದಿಲ್ಲ.

**ಉಪ ಸಭಾಪತಿಯವರು:-** ಇದನ್ನು ಸರ್ಕಾರದ ಒಂದು ವಿಚಾರವಾಗಿ ತೆಗೆದುಕೊಂಡಿರುವುದರಿಂದ ತಾವು ಸಚೇತಕರಾಗಿ ಕೆಲಸ ಮಾಡಿದ್ದು, ಇದರ ಬಗ್ಗೆ ತಮಗೆ ಅನುಭವ ಇದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅದಕ್ಕೆ ನಾನು ಸಚೇತಕನಾಗಿ ಕೆಲಸ ಮಾಡಿದ್ದಕ್ಕೆ ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:-** ಇದು ಸರ್ಕಾರದ ಒಂದು ವಿಚಾರವಾಗಿ ತೆಗೆದುಕೊಂಡಿರುವುದರಿಂದ ಇದರ ಬಗ್ಗೆ ಎಲ್ಲರೂ ಮಾತನಾಡುವವರು ಇದ್ದಾರೆ. ಈಗ ಏನಾಗಿದೆ ಎಂದರೆ, ಈಗಾಗಲೇ ಮಾತನಾಡಲಿಕ್ಕೆ

ಕೇಳದವರಿಗೆ ಪ್ರಾರಂಭಿಕವಾಗಿ ಕೊಟ್ಟ ತಕ್ಷಣ ನಿಮಗೆ ಅವಕಾಶ ಕೊಡುತ್ತೇನೆ. ತಾವು ಈ ಬಗ್ಗೆ ಕೇಳಿರುವುದಕ್ಕೆ ನಾನು ಪರಿಗಣಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅವರುಗಳೆಲ್ಲರೂ ಮಾತನಾಡಿದ ಮೇಲೆ ನಾವು ಮಾತನಾಡುವುದಲ್ಲ.

**ಉಪ ಸಭಾಪತಿಯವರು:-** ಅವರು ಮಾತನಾಡಿದ ಮೇಲೆ ಅದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವವರು ನೀವುಗಳು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀಯುತ ಐವನ್ ಡಿ'ಸೋಜಾ ರವರೆ, ತಾವು ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಕೊಟ್ಟಿರುವ ನಿಲುವಳಿ ಸೂಚನೆಯನ್ನು ಓದಿ. 25,000 ಕೋಟಿ ರೂಪಾಯಿಗಳು....

**ಉಪ ಸಭಾಪತಿಯವರು:-** ಯಾರು ನಿಲುವಳಿ ಸೂಚನೆಗಳನ್ನು ಕೊಡುತ್ತಾರೆ, ಅವರು ಆ ನಿಲುವಳಿ ಸೂಚನೆಗಳ ಬಗ್ಗೆ ಮಾತನಾಡುತ್ತಾರೆ, ಅದಕ್ಕೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಇರುವಂತಹ ವ್ಯವಸ್ಥೆ ಇದಾಗಿದೆ. ಅದನ್ನು ಬಿಟ್ಟು ಈ ರೀತಿ ಮಾತನಾಡಿದರೆ ಕಷ್ಟವಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಈ ರೀತಿ ಹೇಳಿದರೆ ನಾನು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ನಿಲುವಳಿ ಸೂಚನೆ ಕೊಟ್ಟಮೇಲೆ ಅದನ್ನು ಪ್ರಸ್ತಾವನೆ ಮಾಡಲಿಕ್ಕೆ ಅವಕಾಶ ಕೊಡಲಿಲ್ಲವೆಂದರೆ ನಿಲುವಳಿ ಸೂಚನೆಗೆ ಅರ್ಥ ಹೇಗೆ ಬರುತ್ತದೆ? ಸರ್ಕಾರ ಅಧಿಕಾರದ ದುರುಪಯೋಗ ಪಡಿಸಿಕೊಂಡಿದೆ.

**(ಗೊಂದಲ)**

**ಉಪ ಸಭಾಪತಿಯವರು:-** ನೀವು ನಿಲುವಳಿ ಸೂಚನೆ ಕೊಟ್ಟಿದ್ದು, ನೀವು ಮಾತನಾಡುವುದು, ಅವರು ಮಾತನಾಡುವುದು ಎಂದರೆ ಹೇಗೆ? ಬಿಜೆಪಿ ಮತ್ತು ಜೆ.ಡಿ.(ಎಸ್) ಪಕ್ಷದವರು ಮಾತನಾಡಿದ ಮೇಲೆ ನೀವು ಮಾತನಾಡಿ. ಅಲ್ಲಿಯವರೆಗೆ ಅವರು ಮಾತನಾಡಿದ ವಿಷಯಗಳನ್ನು ನೀವು ನೋಟ್ ಮಾಡಿಕೊಳ್ಳಿ. ಆದ್ದರಿಂದ ಮೊದಲಿಗೆ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

**(ಗೊಂದಲ)**

ನೀವುಗಳೆಲ್ಲರೂ ಹಿರಿಯ ಸದಸ್ಯರಿದ್ದೀರಿ, ಐವನ್ ಡಿ'ಸೋಜಾರವರು ಹಿರಿಯ ಸದಸ್ಯರಿದ್ದಾರೆ. ಈ ನಿಲುವಳಿ ಸೂಚನೆಯನ್ನು ನಿಯಮ 68 ರಡಿಯಲ್ಲಿ ಚರ್ಚೆ ಮಾಡಲಿಕ್ಕೆ ತೆಗೆದುಕೊಂಡಿರುವುದು, ಸೂಚನಾ ಪತ್ರದಲ್ಲಿ ಸಹಿ ಮಾಡಿದ ಸದಸ್ಯರಿಗೆ ಮೊದಲಿನ ಆದ್ಯತೆ. ಹೌದು ಅಲ್ಲವೇ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ತಾವು ನಿಯಮ 58 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದರೆ ನಾನು ಮಾತನಾಡುತ್ತಿರಲಿಲ್ಲ. ನೀವು ಇದನ್ನು ನಿಯಮ 68ಕ್ಕೆ ಕನ್ವರ್ಟ್ ಮಾಡಿದ್ದೀರಿ. When it is converted into Rule 68, ಆಗ ಅದರಲ್ಲಿ ಏನು ಹೇಳಲಾಗುತ್ತದೆ ಎಂದರೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಯಾರೇ ಒಬ್ಬ ಸದಸ್ಯರು ಚರ್ಚೆಗೆ ತರಬೇಕೆನ್ನುವ ವಿಚಾರವನ್ನು ಸ್ಪಷ್ಟವಾಗಿ ಅದನ್ನು ಲಿಖಿತ ಮೂಲಕವಾಗಿ ಕೊಡಬೇಕು. ಕೊಟ್ಟಮೇಲೆ ....

(ಗೊಂದಲ)

**ಉಪ ಸಭಾಪತಿಯವರು:-** ಲಿಖಿತವಾಗಿ ಕೊಟ್ಟವರಿಗೆ ಅವಕಾಶ ಕೊಡುತ್ತಿದ್ದೇನೆ. ನಾನು ನಿಯಮವನ್ನು ಎಲ್ಲಿಯೂ ಉಲ್ಲಂಘನೆ ಮಾಡುತ್ತಿಲ್ಲ. ನಾನು ಅದರ ವಿರುದ್ಧ ಹೋಗುತ್ತಿಲ್ಲ. ನಿಯಮದ ಮೇಲೆ ಹೋಗುತ್ತಿದ್ದೇನೆ. ನಾನು ಅದನ್ನು overrule ಮಾಡುತ್ತಿಲ್ಲ. ತಾವು ಕುಳಿತುಕೊಳ್ಳಿ. ಸದನವನ್ನು ಮಧ್ಯಾಹ್ನ 2 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗಿದೆ

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

(526) 18.07.2024 03.00 LL-MD(VK)

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 03 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**8. ಸದನದಲ್ಲಿ ಸಂಬಂಧಪಟ್ಟ ಸಚಿವರು ಹಾಜರಿಲ್ಲದಿರುವ ಕುರಿತು.**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರದವರು ಈ ಸದನದಲ್ಲಿ ಯಥಾಸ್ಥಿತಿ ಕಾಪಾಡಿದ್ದಾರೆ. ಈ ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹಾಜರಿರಬೇಕೆಂದು ಬೆಳಗ್ಗೆ ತಾವು

ಕೂಡ ಹೇಳಿದ್ದೀರಿ. ನಾವು ಕೂಡ ಪ್ರತಿದಿನ ಬೆಳಗ್ಗೆ ಇದೇ ವಿಷಯದ ಬಗ್ಗೆ ಹೇಳುತ್ತಿರುತ್ತೇವೆ. ನಮಗೂ ಕೂಡ ಮಾಡುವುದಕ್ಕೆ ಏನು ಕೆಲಸ ಇಲ್ಲವೆಂದು ನಾವು ಅದೇ ವಿಷಯವನ್ನು ಇಲ್ಲಿ ಪದೇ ಪದೇ ಹೇಳುತ್ತಿರುತ್ತೇವೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಎಲ್ಲರೂ ಬರುತ್ತಿದ್ದಾರೆ.

**ಸಭಾಪತಿಯವರು:-** ಈ ಸದನದಲ್ಲಿ ನಾನು ಕೂಡ 44 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಮಾನ್ಯ ಸಭಾನಾಯಕರೇ, ಒಂದು ಬಾರಿ ನಾನು ಹೇಳಿದರೆ ಅದನ್ನು ತಾವು ಕೇಳಬೇಕು. ತಾವು ನನ್ನ ಮಾತನ್ನು ಕೇಳಲಿಲ್ಲವೆಂದರೆ, ನಾನು ಸದನವನ್ನು ಮುಂದೂಡುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಬೇಡ. ನಾನು ಬೇರೆ ಏರ್ಪಾಡು ಮಾಡಿದ್ದೇನೆ. ತಾವು ಹೇಳಿರುವ ಮಾತನ್ನು ನಾನು ಈಗ ಕೇಳುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ನಾನು ಮಾತನಾಡುವಾಗ ಬೇರೆ ಯಾರು ಮಧ್ಯೆ ಮಾತನಾಡಬೇಡಿ. ಪ್ರತಿದಿನ ಸದನದಲ್ಲಿ ಕಡ್ಡಾಯವಾಗಿ ಯಾರು ಹಾಜರಿರಬೇಕೆಂದು ಪಟ್ಟಿ ಇರುತ್ತದೆ, ಅವರು ಇಲ್ಲಿ ಹಾಜರಿರಬೇಕು. ಒಂದು ವೇಳೆ ಅವರು ಇಲ್ಲವಾದರೆ, ಅದಕ್ಕೆ ನನಗೆ ಸಕಾರಣ ನೀಡಬೇಕು. ಜೊತೆಗೆ, ಅವರ ಬದಲಾಗಿ ಬೇರೆಯವರನ್ನು ಕರೆಯಬೇಕು. ಇಲ್ಲವಾದರೆ, ಸದನವನ್ನು ನಾನು ಮುಂದೂಡುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗಲೇ ಕರೆಯುತ್ತೇನೆ.

**ಸಭಾಪತಿಯವರು:-** ಈಗ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹಾಜರಿಲ್ಲವೆಂದರೆ, ಮಾನ್ಯ ಸದಸ್ಯರು ಬೇರೆ ಬೇರೆ ಮಾತನಾಡುತ್ತಿರುತ್ತಾರೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಸಂಬಂಧಪಟ್ಟವರಿಗೆ ಮೆಸೇಜ್ ಕಳುಹಿಸಿದ್ದು, ತಕ್ಷಣ ಬರಬೇಕೆಂದು ಹೇಳಿದ್ದೇನೆ.

**ಸಭಾಪತಿಯವರು:-** ಇದು ಸರಿಯಲ್ಲ. ಹಾಗಾದರೆ, ನಾನು 10 ನಿಮಿಷಗಳ ಕಾಲ ಸದನವನ್ನು ಮುಂದೂಡುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇಲ್ಲ. ಬೇಡ, ಬೇಡ. ಅವರು ಬಂದುಬಿಟ್ಟರು.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಬೇಡ.

**ಸಭಾಪತಿಯವರು:-** ಸರ್ಕಾರದ ಮುಖ್ಯ ಸಚೇತಕರು ಇರುವುದಕ್ಕೆ ಏತಕ್ಕೆ? ಸಂಬಂಧಪಟ್ಟವರನ್ನು ಕರೆಯಬೇಕಲ್ಲವೇ? I don't like it. ತಾವು ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳಬೇಡಿ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಇನ್ನೊಮ್ಮೆ ಈ ರೀತಿ ಆಗುವುದಿಲ್ಲ. ನಾವು ಇದನ್ನು ಸರಿ ಮಾಡುತ್ತೇವೆ.

**ಸಭಾಪತಿಯವರು:-** ಇದು ಸರಿಯಲ್ಲ. ಸಭಾನಾಯಕರು ತಾವು ಇದೆಲ್ಲವನ್ನೂ ತಿಳಿದುಕೊಳ್ಳಬೇಕು. **(ಗೊಂದಲ)** ತಾವು ಈ ರೀತಿ ಮಾಡಿದರೆ ಹೇಗೆ? ಈ ಸದನಕ್ಕೆ ಘನತೆ-ಗೌರವ ಇರಬೇಕಲ್ಲವೇ? ತಾವು ಮೇಲ್ಮನೆಯನ್ನು ಇಷ್ಟು ನಿರ್ಲಕ್ಷ್ಯ ಮಾಡಿದರೆ ಹೇಗೆ? ಇದು ನನಗೆ ಸರಿ ಬರುವುದಿಲ್ಲ. **(ಗೊಂದಲ)** ಮಾನ್ಯ ವಿರೋಧ ಪಕ್ಷದ ಉಪ ನಾಯಕರೇ, ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಿಯಮ 69 ರಡಿಯಲ್ಲಿ ಚರ್ಚೆ ನಡೆದು, ಇಲ್ಲಿಗೆ 2 ಗಂಟೆ 30 ನಿಮಿಷ ಸಮಯ ಕಳೆದಿದೆ. ಅದರಂತೆ, ಸಮಯ ನಿಗದಿ ಮಾಡಿದರೆ, ಎಲ್ಲರಿಗೂ 5 ನಿಮಿಷಕ್ಕಿಂತ ಹೆಚ್ಚು ಕಾಲಾವಕಾಶ ಕೊಡುವುದಕ್ಕೆ ಆಗುವುದಿಲ್ಲ. ಆದಾಗ್ಯೂ, ನಾನು ಎಲ್ಲರಿಗೂ 10 ನಿಮಿಷ ಕಾಲಾವಕಾಶ ನೀಡುತ್ತೇನೆ. ದಯಮಾಡಿ, ನಾನು ಬೆಲ್ ಮಾಡಿದ ತಕ್ಷಣ ತಾವುಗಳು ತಮ್ಮ ಮಾತನ್ನು ಮುಕ್ತಾಯಗೊಳಿಸಬೇಕು.

**09. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ಆಡಳಿತ ಪಕ್ಷದವರಿಗೂ ಅವಕಾಶ ನೀಡಬೇಕೆನ್ನುವ ಕುರಿತು.**

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಬಿಜೆಪಿ ಪಕ್ಷದ ವತಿಯಿಂದ ಎರಡನೆ ಸದಸ್ಯರು ಮಾತನಾಡುತ್ತಿದ್ದಾರೆ. We are highest in number in the House. ನಮಗೂ ಅವಕಾಶ ಕೊಡಿ. Its on rotation only.

**(ಗೊಂದಲ)**

**ಸಭಾಪತಿಯವರು:-** ತಾವು ಒಂದು ಕೆಲಸ ಮಾಡುತ್ತೀರಾ? **(ಗೊಂದಲ)** ಈ ನಿಲುವಳಿ ಸೂಚನೆಯನ್ನು ತಾವು ಒಮ್ಮೆ ಓದಿ. ಅದರಂತೆ, ಈ ನಿಲುವಳಿ ಸೂಚನೆಯಲ್ಲಿ, "ಈ ವಿಷಯದಲ್ಲಿ ನಾವು ಸರ್ಕಾರದ ನಿಲುವನ್ನು ವಿರೋಧಿಸುತ್ತೇವೆ" ಎಂದು ಹೇಳಿದ್ದಾರೆ. ತಾವು ಕೂಡ ಇದನ್ನು ವಿರೋಧಿಸುವುದಾದರೆ, ನಾನು ತಮಗೆ ಮಾತನಾಡಲು ಅವಕಾಶ ನೀಡುತ್ತೇನೆ. ತಾವು ಮಾತನಾಡಿ.

**(ಗೊಂದಲ)**

**Sri IVAN D'SOUZA:-** Sir, it is converted now.

**(ಗೊಂದಲ)**

**ಸಭಾಪತಿಯವರು:-** ಈ ಬಗ್ಗೆ ನಾನು ಏನು ಹೇಳುವುದಿಲ್ಲ. ತಾವು ಈ ನಿಲುವಳಿ ಸೂಚನೆಯನ್ನು ಒಮ್ಮೆ ಓದಿ. ಅದರಲ್ಲಿ, "ಸರ್ಕಾರದ ನಿಲುವನ್ನು ನಾವು ವಿರೋಧಿಸುತ್ತೇವೆ" ಎಂದು ಹೇಳಿದ್ದಾರೆ. ತಾವು ವಿರೋಧವಾಗಿ ಮಾತನಾಡುವುದಾದರೆ, ತಾವು ಮಾತನಾಡಿ. I have no objection.

**Sri IVAN D'SOUZA:-** Sir, it is converted and now it is the property of the House.

**ಸಭಾಪತಿಯವರು:-** ಈ ವಿಷಯದ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದು ಕೂಡ ತಮ್ಮ ಕರ್ತವ್ಯ ಅಲ್ಲ. ಅದು ಸರ್ಕಾರದ ಮಂತ್ರಿಗಳ ಕರ್ತವ್ಯವಾಗಿದೆ. ತಾವು ಇದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ.

**Sri IVAN D'SOUZA:-** Sir, all Members are equal.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ನಾನು ಮಾತನಾಡುವಾಗ ತಾವು ಮಧ್ಯದಲ್ಲಿ ಮಾತನಾಡಿದರೆ ನಾನು ಕೇಳುವುದಿಲ್ಲ. ಈ ರೀತಿ ಮಧ್ಯದಲ್ಲಿ ಮಾತನಾಡಿದರೆ, ನಾನು ನನ್ನ ಸ್ಥಾನದಿಂದ ಎದ್ದು ಹೊರನಡೆಯುತ್ತೇನೆ. ನಾನು ಹೇಳುವವರೆಗೂ ತಾವು ಕೇಳಬೇಕು. ನಾನು ಏನು ಹೇಳುತ್ತೇನೆಂದರೆ, now this is the property of the House. ಅದನ್ನು ನಾನು ಕೂಡ ಒಪ್ಪುತ್ತೇನೆ. ತಾವು ಈ ನಿಲುವಳಿ ಸೂಚನೆಯನ್ನು ಒಮ್ಮೆ ಓದಿ. ಅದರಲ್ಲಿ ವಿರೋಧ ಪಕ್ಷದ ಸದಸ್ಯರು ಏನು ಹೇಳಿದ್ದಾರೆಂದರೆ, "ನಾವು ಸರ್ಕಾರದ ನಿಲುವನ್ನು ವಿರೋಧ ಮಾಡುತ್ತೇವೆಂದು" ಹೇಳಿದ್ದಾರೆ. ತಾವು ಕೂಡ ಸರ್ಕಾರವನ್ನು ವಿರೋಧ ಮಾಡುವುದಾದರೆ, ಮಾತನಾಡಿ.

**ಶ್ರೀ ಐವನ್ ಡಿ ಸೋಜಾ:-** ಮಾನ್ಯ ಸಭಾಪತಿಯವರೇ, ತಾವು ಅದನ್ನು convert ಮಾಡಿದ್ದೀರಲ್ಲವೇ? It is the property of the House, and all Members are equal.

**ಸಭಾಪತಿಯವರು:-** ಹೌದು, ನಿಯಮ 59 ಅನ್ನು ನಿಯಮ 68 ರಡಿಯಲ್ಲಿ ಚರ್ಚಿಸುವುದಕ್ಕೆ convert ಮಾಡಿದ್ದೇನೆ. ಸದರಿ ವಿಷಯವನ್ನು convert ಮಾಡಿದರೂ ಸಹ, ಅದರ ಮೂಲ ಉದ್ದೇಶ ಬದಲಾಗುವಂತಿಲ್ಲ. ಅದರಂತೆ, ಆ ಮೂಲ ಉದ್ದೇಶ ಹಾಗೆಯೇ ಇರುತ್ತದೆ. ಆ ಮೂಲ ಉದ್ದೇಶವನ್ನು ವಿರೋಧ ಮಾಡಬೇಕು. ತಾವು ಕೂಡ ಅದನ್ನು ವಿರೋಧ ಮಾಡುತ್ತೇನೆಂದರೆ, ಮಾತನಾಡಿ. ನಾನು ತಮಗೆ ಅವಕಾಶ ನೀಡುತ್ತೇನೆ. ಸರ್ಕಾರದ ವಿರುದ್ಧ ಮಾತನಾಡುವುದಾದರೆ, ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ.

**(ಗೊಂದಲ)**

(ಮುಂದು)

(527) 18-07-2024 (3.10) ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**10. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.</u>**

**ವಿಷಯ:- "ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು."**

\- - - - -

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಹಿಂದೆ ಎಂದೂ ಕಂಡರಿಯದ ರೀತಿಯಾದಂಥ ಒಂದು ಹಗರಣ ಇತ್ತೀಚೆಗೆ ನಡೆದಿದ್ದು, ಅದರ ಬಗ್ಗೆ ಈ

ನಿಲುವಳಿ ಸೂಚನೆ ಮೂಲಕ ನಾವು ಆಕ್ರೋಶ ಭರಿತವಾಗಿ ಮತ್ತು ಇಡೀ ವಾಲ್ಮೀಕಿ ಸಮುದಾಯದ ನೋವಿನ ಸಂಗತಿಯನ್ನು ಸರ್ಕಾರದ ಗಮನಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದರ ಮೂಲಕ ಇಡೀ ಹಗರಣದ ತನಿಖೆಗೆ ಒತ್ತಾಯ ಮಾಡುತ್ತಾ, ಈ ವಿಷಯವನ್ನು ಸದನದ ಮುಂದೆ ಮಂಡಿಸುತ್ತಿದ್ದೇವೆ. ಈ ದೇಶ ಹಾಗೂ ನಮ್ಮ ರಾಜ್ಯವು ಒಳಗೊಂಡಂತೆ ಎಸ್.ಟಿ. ಸಮುದಾಯದವರನ್ನು ಆದಿವಾಸಿಗಳು ಎಂದು ಕರೆಯುತ್ತೇವೆ. ಪರಿಶಿಷ್ಟ ಪಂಗಡದವರ ಮೂಲ ಕಸುಬು ಯಾವುದು ಎಂದು ಅವರ ಸಮುದಾಯದ ಜೊತೆಗೆ ಗುರುತಿಸಿರುವುದಿಲ್ಲ. ಅವರು nomadic tribes. ಗುಂಪು ಗುಂಪಾಗಿ ಕಾಡಿನಂಚಿನಲ್ಲಿ ವಾಸ ಮಾಡುವುದು ಅಥವಾ ಒಂದು ಗುಂಪಿನಲ್ಲಿ ವಾಸ ಮಾಡುವಂಥವರಿಗೆ ಬುಡಕಟ್ಟು ಜನಾಂಗ ಎಂದು ಹೇಳಿ, ಆ 'Scheduled Tribe' ಎನ್ನುವ ಹೆಸರನ್ನು ಕೊಟ್ಟು ಅವರನ್ನು ಮೇಲೆತ್ತುವಂಥ ಕೆಲಸ ಮಾಡಬೇಕೆಂದು ಹೇಳಿ, ಸಂವಿಧಾನದಲ್ಲಿ ಒಂದು ಅವಕಾಶ ಮಾಡಿಕೊಟ್ಟರು.

ನಮ್ಮ ರಾಜ್ಯದಲ್ಲಿ ಸುಮಾರು ಶೇಕಡಾ 8 ರಿಂದ 8½ ರಷ್ಟು ಪರಿಶಿಷ್ಟ ಪಂಗಡ ಜನಾಂಗದ ಜನಸಂಖ್ಯೆ ಇದೆ. ಅತೀ ಹೆಚ್ಚು ಜನಸಂಖ್ಯೆ ಇರುವ ಜಿಲ್ಲೆಗಳ ಪೈಕಿ ನಾನು ಪ್ರತಿನಿಧಿಸುವಂಥ ಕ್ಷೇತ್ರ ಅತೀ ಹೆಚ್ಚು ವಾಲ್ಮೀಕಿ ಸಮಾಜ ಇರುವಂಥ ಒಂದು ಕ್ಷೇತ್ರ. ಬಳ್ಳಾರಿ, ರಾಯಚೂರು, ಚಿತ್ರದುರ್ಗ, ಮೈಸೂರು ಗ್ರಾಮಾಂತರ, ಬೆಳಗಾವಿ ಈ ರೀತಿಯಾಗಿ ಸುಮಾರು 50 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವಂಥ ಎಸ್.ಟಿ. ಸಮುದಾಯದ ಮೂಲ ಆಶಯಗಳನ್ನು ಸರ್ಕಾರದ ಮೂಲಕ ಅವರಿಗೆ ಕಾರ್ಯಕ್ರಮಗಳನ್ನು ಕೊಟ್ಟು, ಆರ್ಥಿಕವಾಗಿ ಸದೃಡರನ್ನಾಗಿ ಮಾಡಿ, ಅವರನ್ನು ಮೇಲೆತ್ತಬೇಕೆಂಬ ಸದಾಶಯದೊಂದಿಗೆ ಈ ವಾಲ್ಮೀಕಿ ಅಭಿವೃದ್ಧಿ ನಿಗಮವನ್ನು 2006-07ನೇ ಸಾಲಿನ ಮಧ್ಯೆದಲ್ಲಿ ಅಂದಿನ 2020ರ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸಮಿಶ್ರ ಸರ್ಕಾರ ಇದ್ದ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿ, ಅನೇಕ ಯೋಜನೆಗಳನ್ನು ಜಾರಿಗೆ ತರುವಂಥ ಕೆಲಸವನ್ನು ಸರ್ಕಾರ ಮಾಡಿತ್ತು. ನಾವು ಆ ಕಾರ್ಯಕ್ರಮಗಳ ಬಗ್ಗೆ ಸ್ವಲ್ಪ ಬೆಳಕು ಚೆಲ್ಲುವಂಥ ಕೆಲಸ ಮಾಡುತ್ತೇನೆ. ದೂರದೃಷ್ಟವಶಾತ್ Treasury Bench ನಲ್ಲಿ ಬೆರಳೆಣಿಕೆಯಷ್ಟು ನೌಕರರು ಇಲ್ಲ. ಮೊನ್ನೆ ದಿವಸ ಮಾನ್ಯ ಶ್ರೀ ಸಿ.ಟಿ.ರವಿರವರು ಈ ವಿಷಯವನ್ನು ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಆಡಳಿತ ಪಕ್ಷದವರೆಲ್ಲರೂ ಎದ್ದು ನಿಂತು ಅವರ ಮಾತನ್ನು ತಡೆಯುವಂಥ ಕೆಲಸ ಮಾಡಿದ್ದರು. ಆದರೆ, ಈ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು ಏನು, ಈ ಕಾರ್ಯಕ್ರಮಗಳನ್ನು ಸರ್ಕಾರ ಏತಕ್ಕೆ ಜಾರಿಗೆ ತಂದಿದ್ದು ಮತ್ತು ಈ ರೀತಿ ಹಗರಣ ಆಗಿರುವುದರಿಂದ ಆ ಸಮುದಾಯಕ್ಕೆ ಎಷ್ಟು ನೋವಾಗಿದೆ ಎಂಬುದನ್ನು ಕೇಳುವುದಕ್ಕೆ ಇಲ್ಲಿ ಸರಿಯಾದ representation Treasury Bench ಗಳಲ್ಲಿ ಇಲ್ಲ. ಆದರೂ ಕೂಡಾ ನನ್ನ ಮಾತನ್ನು ಸದನದ ಮುಂದೆ, ಈ ರಾಜ್ಯದ ಜನರ ಮುಂದೆ ಇಡುವಂಥ ಪ್ರಯತ್ನ ಮಾಡುತ್ತೇನೆ. ಅದರಲ್ಲಿ 5 ಕಾರ್ಯಕ್ರಮಗಳಿವೆ. ಮೊದಲನೆಯದಾಗಿ, ಸ್ವಯಂ ಉದ್ಯೋಗ (self-employment). ಈ ಮೊದಲೇ ನಾನು ಹೇಳಿದಂತೆ ಈ ವಾಲ್ಮೀಕಿ ಸಮುದಾಯದ ಜನರಿಗೆ ಮೂಲ

ಕಸುಬು ಎನ್ನುವುದು ಇಲ್ಲ. ಅನೇಕ ಪಂಗಡ ಮತ್ತು ಸಮುದಾಯಗಳಿಗೆ ಮೂಲ ಕಸುಬು ಇದೆ. ಆದರೆ, ವಾಲ್ಮೀಕಿ ಸಮುದಾಯದವರಿಗೆ ಮೂಲ ಕಸುಬು ಇಲ್ಲ. ಇವರಿಗೆ ಸ್ವಯಂ ಉದ್ಯೋಗದ ತರಬೇತಿಯನ್ನು ನೀಡಬೇಕು, ಅವರು ಆರ್ಥಿಕವಾಗಿ ತಮ್ಮ ಸ್ವಂತ ಬದುಕಿನಲ್ಲಿ ನಿಲ್ಲಬೇಕು ಎನ್ನುವಂಥ ಸದಾಶಯದೊಂದಿಗೆ ಅವರಿಗೆ ತರಬೇತಿ ಕೊಡುವಂಥ ಕಾರ್ಯಕ್ರಮವನ್ನು ಇದರೊಳಗೆ ಮಾಡಲಾಗಿತ್ತು. ಅದೇ ರೀತಿ ಸಾರಥಿ ಎನ್ನುವಂಥ ಯೋಜನೆ ಮೂಲಕ ಅವರು ಕೂಡಾ ಸ್ವಂತ ವಾಹನವನ್ನಿಟ್ಟುಕೊಂಡು ದುಡಿಮೆ ಮಾಡಬೇಕೆನ್ನುವುದಕ್ಕಾಗಿ ಸಾರಥಿ ಎನ್ನುವಂಥ ಕಾರ್ಯಕ್ರಮವನ್ನು ಕೊಟ್ಟರು.

ಹಾಗೆಯೇ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಅವರ ಹೊಲಗಳಿಗೆ ಬೋರ್ ಹಾಕಿಸಬೇಕು, ವಿಶೇಷವಾಗಿ ಬೆಂಗಳೂರು ಗ್ರಾಮಾಂತರ ಭಾಗದಲ್ಲಿರುವವರಿಗೆ ನಾಲ್ಕೂವರೆ ಲಕ್ಷ ರೂಪಾಯಿ ಮತ್ತು ಬೇರೆ ಭಾಗದಲ್ಲಿರುವವರಿಗೆ ನಾಲ್ಕು ಲಕ್ಷ ರೂಪಾಯಿ ಅನುದಾನ ಕೊಡುವಂಥ ಯೋಜನೆ ಸಹ ಮಾಡಿತ್ತು. ಇನ್ನೂ ವಿಶೇಷವಾಗಿ ಭೂಮಿ ರೈತರಿಗೆ ರೂ.25,00,000 ಅನುದಾನವನ್ನು ಕೊಟ್ಟು, ಭೂಮಿ ಕೊಡಿಸುವಂಥ ಕೆಲಸ ಮತ್ತು ಆ ಭೂಮಿಯಲ್ಲಿ ವಾಲ್ಮೀಕಿ ಸಮುದಾಯದವರು ಕೃಷಿಯನ್ನು ಪ್ರಾರಂಭ ಮಾಡಬೇಕೆನ್ನುವಂಥ ಯೋಜನೆಯನ್ನು ನೀಡಿತ್ತು. ಇನ್ನೂ ಹೆಚ್ಚಿನದಾಗಿ ಯಾರೂ ಕಾಡಿನಿಂದ ಮೂಲ ವಸ್ತುವನ್ನು ತಂದು ಮಾರಾಟ ಮಾಡುತ್ತಾರೆ, ಅಂಥವರಿಗೆ ಬೆಂಗಳೂರಿನಂಥ ಮಹಾನಗರದಲ್ಲಿ ಅದನ್ನು ಸ್ಥಾಪನೆ ಮಾಡುವ ಸಲುವಾಗಿ ರೂ.2,00,00,000 ಅನುದಾನ ಕೊಡುವಂಥ ಕಾರ್ಯಕ್ರಮವನ್ನು ಕೂಡಾ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಸ್ಥಾಪನೆ ಮಾಡಲಾಗಿತ್ತು. ಇಂತಹ ಒಂದು ಸರ್ಕಾರದ ನಿಗಮದಲ್ಲಿ ಕಳೆದ ಒಂದೂವರೆ, ಎರಡೂ ತಿಂಗಳ ಹಿಂದೆ ಆಗಿರುವಂಥ ಹಣದ ದುರ್ಬಳಕೆಯನ್ನು ನೋಡಿದಾಗ ಖಂಡಿತ ಈ ರಾಜ್ಯದ ಹಳ್ಳಿಯ ಹಟ್ಟಿಯಲ್ಲಿರುವಂಥ ಯುವಕ, ಯುವತಿ ಕಣ್ಣೀರು ಹಾಕುತ್ತಿದ್ದಾರೆ. ಏಕೆಂದರೆ, ನಮ್ಮ ಬದುಕನ್ನು ಬದಲಾಯಿಸಲು ಸರ್ಕಾರದಿಂದ ಏನಾದರೂ ಸವಲತ್ತು ಸಿಗಬಹುದೆಂದು ಸರ್ಕಾರದ ಮೇಲೆ ಬಹಳ ವಿಶ್ವಾಸವನ್ನಿಟ್ಟುಕೊಂಡು ಅರ್ಜಿ ಸಲ್ಲಿಸಿರುತ್ತಾರೆ. ಆದರೆ, ಇವತ್ತು ಬಂದಿರುವಂಥ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಸರ್ಕಾರ ಎಡವಿರುವುದು ಮಾತ್ರವಲ್ಲ, ಅವರಿಗಾಗಿ ಮೀಸಲಿಟ್ಟ ಹಣವನ್ನು ದೂರದ ಹೈದ್ರಾಬಾದ್ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಆ ಹಣವು ವಿತ್‌ಡ್ರಾ ಆಗಿರುವ ಬಗ್ಗೆ ಈಗಾಗಲೇ ಸದನದ ಗಮನಕ್ಕೆ ಬಂದಿದೆ.

ಹಲವಾರು ವರ್ಷಗಳಿಂದ ಆ ಸಮುದಾಯದ ಸ್ನೇಹಿತರ ಮಧ್ಯೆ ನಾನೇ ಸ್ವತಃ ಅನೇಕ ಹಳ್ಳಿಗಳಿಗೆ ಹೋಗಿ ನೋಡಿದಂಥ ಸಂದರ್ಭದಲ್ಲಿ ಅವರು ಬಹಳ ಸ್ವಾಭಿಮಾನಿ ಜೀವಿಗಳಾಗಿ ಜೀವಿಸುತ್ತಿದ್ದರು. ಒಬ್ಬ ವಾಲ್ಮೀಕಿ ಸಮುದಾಯದ ವ್ಯಕ್ತಿಯನ್ನು ನೋಡಿದರೆ, ದೈಹಿಕವಾಗಿ ಬಹಳ ಕಟ್ಟುಮಸ್ತಾಗಿ ಈ ರಾಜ್ಯದಲ್ಲಿ ಆಳ್ವಿಕೆ ಮಾಡಿದಂಥ ಪಾಳೇಗಾರರು ಕೂಡಾ ವಾಲ್ಮೀಕಿ ಸಮುದಾಯದವರಾಗಿದ್ದಾರೆ. ವಿಶೇಷವಾಗಿ ಚಿತ್ರದುರ್ಗದಲ್ಲಿ ಆಳ್ವಿಕೆ ಮಾಡಿದಂಥ ಮದಕರಿ ನಾಯಕ, ಕಂಪ್ಲಿಯ ಕುಮಾರರಾಮ, ವಿದ್ಯಾರಣ್ಯರಿಂದ ಆಶೀರ್ವಾದ ಪಡೆದಂಥ ಹಕ್ಕಾಬುಕ್ಕರು ಇರಬಹುದು. ಇವರೆಲ್ಲರೂ ಕೂಡಾ ಅದೇ ಸಮುದಾಯದಿಂದ ಬಂದವರಾಗಿದ್ದಾರೆ. ಕರ್ನಾಟಕ ರಾಜ್ಯಕ್ಕೆ

ಕೀರ್ತಿಯನ್ನು ತಂದುಕೊಟ್ಟ ಸಮುದಾಯದ ಜನರಿಗೆ ಸರ್ಕಾರದಿಂದ ಆಗಿರುವಂಥದ್ದೇನೆಂದರೆ, ಅವರ ತಟ್ಟೆಯಲ್ಲಿರಬೇಕಾದಂಥ ಹಣ, ಅವರ ಬದುಕನ್ನು ಬದಲಾಯಿಸಬೇಕಾಗಿದಂಥ ಹಣವು ಬಾರ್‌ಗಳಲ್ಲಿ, ಬಂಗಾರದ ಅಂಗಡಿಗಳಲ್ಲಿ, ಯಾರ್ಯಾರದೋ ಮನೆಯ ಸೂಟ್ ಕೇಸ್‌ಗಳಲ್ಲಿ ಇವತ್ತು ಆ ಹಣ ಪತ್ತೆಯಾಗಿರುವುದು ನಿಜವಾಗಿಯೂ ಕೂಡಾ ಕೆಟ್ಟ ಹಗರಣವಾಗಿದೆ. ಅನೇಕ ಹಗರಣವನ್ನು ಕೇಳಿದ್ದೇವೆ. ಆದರೆ, ಈ ರೀತಿಯಾಗಿ ವಾಲ್ಮೀಕಿ ಎಸ್.ಟಿ. ಸಮುದಾಯದ ಜನರ ಮಧ್ಯೆ ಹೋಗಿ ಖರ್ಚಾಗಬೇಕಾದ ಹಣ ಇವತ್ತು ಬೇರೆ ರಾಜ್ಯಗಳಲ್ಲಿ ಹೋಗಿ, ಮೋಜು-ಮಸ್ತಿಗಳಿಗೆ ಬಳಕೆಯಾಗಿರುವಂಥದ್ದು ಏನು ತೋರಿಸುತ್ತದೆ ಎಂದರೆ, ಈ ಸರ್ಕಾರದ ಮುಖ್ಯಸ್ಥರು ಯಾರು ಇದ್ದರು, ಸರ್ಕಾರವನ್ನು ಯಾರು ನಡೆಸುತ್ತಿದ್ದರು ಅವರ ಕಣ್ಗಾವಲಿನಲ್ಲಿರಬೇಕಾದ ಹಣ ಇವತ್ತು ಅನೇಕ ಕಡೆಗಳಲ್ಲಿ ಖರ್ಚಾಗಿ ಹೋಗಿವೆ.

ಆ ಹಣ ಖರ್ಚಾಗಿದೆ ಎಂದು ಗೊತ್ತಾಗಿದ್ದು ಹೇಗೆ? ಅದೇ ನಿಗಮದ ಒಬ್ಬ ಅಧಿಕಾರಿ ಚಿತ್ರಹಿಂಸೆಗೊಳಪಟ್ಟು ಆತ್ಮಹತ್ಯೆ ಮಾಡಿಕೊಂಡು, ಆತ ಬರೆದಿಟ್ಟ ಡೆತ್ ನೋಟ್‌ನಲ್ಲಿ 'ತನ್ನಿಂದ ಏನೆಲ್ಲಾ ಹಗರಣವಾಗಿದೆ, ತನ್ನ ಮೇಲಾಧಿಕಾರಿ ಯಾವ ರೀತಿ ಆತನಿಂದ ಹಗರಣ ಮಾಡಿಸಿದರು, ಒಬ್ಬ ಮಂತ್ರಿ ಯಾವ ರೀತಿ ನಿರ್ದೇಶನ ಕೊಟ್ಟರು' ಎನ್ನುವುದರ ಮೂಲಕ ಈ ಹಗರಣ ಬಯಲಿಗೆ ಬಂದಿದೆ. ಮೃತ ಚಂದ್ರಶೇಖರ್ ಎಂಬುವವರು ಕೂಡಾ ಎಸ್.ಟಿ. ಸಮುದಾಯಕ್ಕೆ ಸೇರಿದಂಥ ವ್ಯಕ್ತಿಯಾಗಿದ್ದು, ಪ್ರಾಮಾಣಿಕ ವ್ಯಕ್ತಿಯಾಗಿದ್ದಾರೆ. ವಿಧಾನಸೌಧದ ಮುಖ್ಯದ್ವಾರದ ಮುಂದೆ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ನಮೂದಿಸಿದ್ದು, ಅದರಂತೆ ಸರ್ಕಾರದ ಕೆಲಸವನ್ನು ದೇವರ ಕೆಲಸದಂತೆ ಮಾಡಬೇಕೆಂಬ ಮನಸ್ಥಿತಿಯನ್ನು ಹೊಂದಿರುವಂಥ ವ್ಯಕ್ತಿಯೂ ಅಪಮಾನಕ್ಕೊಳಗೊಂಡು ಆತ್ಮಹತ್ಯೆ ಮಾಡಿಕೊಂಡು, ಅವನ ಆತ್ಮಹತ್ಯೆಯಿಂದ ಹೊರಗೆ ಬಂದಿರುವಂಥ ವಿಷಯವಾಗಿದೆ. ಆತನ ಪತ್ನಿಯಾದ ಶ್ರೀಮತಿ ಕವಿತಾ ಎಂಬುವವರು ಹೊರಗುತ್ತಿಗೆ ಆಧಾರದ ಮೇಲೆ ಕೇವಲ ರೂ.8,000 ಗಳಿಗೋಸ್ಕರ ಜೀವನ ನಡೆಸುತ್ತಿದ್ದಾರೆ. 18 ವರ್ಷ ಮತ್ತು 16 ವರ್ಷದ ಆತನ ಮಕ್ಕಳಾದ ಶಿಶೀಲ್ ಮತ್ತು ಚಿನ್ಮಯ್ ಆಗಿದ್ದು, ಅಂತಹ ಒಂದು ಕುಟುಂಬದಲ್ಲಿ ಘೋರ ದುರಂತ, ಅನ್ಯಾಯವಾಗಿದೆ. ಮೃತ ಚಂದ್ರಶೇಖರ್ ಎಂಬುವವರು ತನ್ನ ಸಾವಿಗೆ ಯಾರೆಲ್ಲಾ ಕಾರಣರು ಎಂದು 6 ಪುಟಗಳನ್ನೊಳಗೊಂಡ ಒಂದು ಡೆತ್ ನೋಟ್ ಬರೆದಿಟ್ಟು, ತನ್ನ ಪ್ರಾಣ ಕಳೆದುಕೊಳ್ಳುವಂಥ ಕೆಲಸ ಮಾಡಿದ್ದಾರೆ.

(ಮುಂದು)

(528) 18.07.2024/3.20/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್. ನವೀನ್ (ಮುಂದು):**

ಆತ್ಮಹತ್ಯೆಯಿಂದ ಬಹಿರಂಗವಾದ ಈ ಒಂದು ಪ್ರಕರಣದಲ್ಲಿ ಯಾರು ಯಾರು ಪ್ರಮುಖ ರೂವಾರಿಗಳಿದ್ದರು? ಈ ಪ್ರಕರಣದಲ್ಲಿ ಯಾರು ಒತ್ತಾಯವನ್ನು ಮಾಡಿದ್ದರು? ಎಲ್ಲವೂ ಗೊತ್ತಿದ್ದರೂ ಸಹ ಸರ್ಕಾರ ಅವೊತ್ತಿನ ದಿನವೇ ಎಚ್ಚೆತ್ತುಕೊಂಡು, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಅತಿ ಉನ್ನತ ತನಿಖೆಯಾಗಬೇಕೆಂದು ಸಿ.ಬಿ.ಐ. ನವರಿಗೆ

ವಹಿಸಬೇಕಾಗಿತ್ತು. ಏಕೆಂದರೆ ಅಲ್ಲಿ ಒಬ್ಬ ಸರ್ಕಾರಿ ನೌಕರನ ಹತ್ಯೆಯಾಗಿದೆ. ಅದು ಆತ್ಮಹತ್ಯೆ ಎಂದು ಕರೆಯಬಹುದು. ಆದರೆ ನಿಜವಾಗಲೂ ಹತ್ಯೆಯಾಗಿದೆ. ಆ ಹತ್ಯೆಯಾದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ಪ್ರಕರಣದ ತನಿಖೆಯನ್ನು ಸಿ.ಬಿ.ಐ.ವರಿಗೆ ಕೊಡಬೇಕಾಗಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಯಾರನ್ನು ಅದರಲ್ಲಿ ರಕ್ಷಣೆ ಮಾಡಬೇಕು ಅಥವಾ ಅದರಲ್ಲಿ ಆಗಿರುವಂತಹ ವಿಷಯಗಳು ಬಹಿರಂಗವಾದರೆ ಏನೆಲ್ಲಾ ಆಗಬಹುದು ಎನ್ನುವ ಕಾರಣಕ್ಕೋ ಏನೋ ಗೊತ್ತಿಲ್ಲ. ಒಂದು ಎಸ್.ಐ.ಟಿ. ಅನ್ನು ರಚನೆ ಮಾಡಿ, ಅದನ್ನು ಎಸ್.ಐ.ಟಿ. ತನಿಖೆಗೆ ಕೊಡುತ್ತಾರೆ.

ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಐದು ನಿಮಿಷ ಸಮಯ ಕೊಡಬೇಕು.

**ಸಭಾಪತಿಯವರು:–** ಮಾನ್ಯ ಕೆ.ಎಸ್. ನವೀನ್‌ರವರೇ, ಇಲ್ಲಿ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ. ಮುಂದಿನ ಕಾರ್ಯಕ್ರಮಗಳು ಇವೆ. ತಮ್ಮ ಮಾತನ್ನು ಎರಡು ನಿಮಿಷದಲ್ಲಿ ಮುಗಿಸಿ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಸ್.ಐ.ಟಿ. ರಚನೆ ಮೂಲಕ ಆ ಒಂದು ಪ್ರಕರಣದ ದಿಕ್ಕನ್ನು ತಪ್ಪಿಸುವಂತಹ ಕೆಲಸವನ್ನು ಸರ್ಕಾರದ ಮುಖ್ಯಸ್ಥರಾಗಿರುವ ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ. ನಿನ್ನೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಿರಬೇಕಾದರೆ, ಸನ್ಮಾನ್ಯ ಗೃಹ ಸಚಿವರವರು ಏನು ಹೇಳುತ್ತಾರೆಂದರೆ, ಸಿ.ಬಿ.ಐ. ಬಂದಿದೆ ಮತ್ತು ಇ.ಡಿ. ಬಂದಿದೆ. ಈ ಪ್ರಕರಣ ಮಾನ್ಯ ನ್ಯಾಯಾಲಯದಲ್ಲಿದೆ, ಹಾಗೇ-ಹೀಗೆ ಎಂದು ಹೇಳಿದರು. ಬ್ಯಾಂಕ್‌ನವರು ದೂರಿನ ಆಧಾರದ ಸಿ.ಬಿ.ಐ. ಬಂದಿರುವಂತಹದ್ದು. ಬೇರೆ ಬೇರೆ ಕಡೆಗಳಲ್ಲಿ ಬೃಹತ್ ಪ್ರಮಾಣದ ನಗದು ಸಿಕ್ಕಿರುವಂತಹದ್ದಕ್ಕೆ ಇ.ಡಿ. ಅವರು ಬಂದಿರುವಂತಹದ್ದು. ಆದರೆ ಸರ್ಕಾರ ಸಿ.ಬಿ.ಐ. ಗೆ ವಹಿಸುವಂತಹ ಕೆಲಸವನ್ನು ಮಾಡಲಿಲ್ಲ. ಅಂದರೆ ಯಾರನ್ನು ಉಳಿಸುವುದಕ್ಕೋಸ್ಕರ ಈ ರೀತಿಯಾದಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೇ, ಹೇಳಿಕೆಯಲ್ಲಿ ತಿಳಿಸಬೇಕಾದಂತಹ ಅವಶ್ಯಕತೆ ಇದೆ.

ಮಾನ್ಯ ಸಭಾಪತಿಯವರೇ, ಈ ರಾಜ್ಯದ ಜನರು ಹಗಲು ರಾತ್ರಿ ದುಡಿದು ದುಡಿದು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ತೆರಿಗೆಯ ಮೂಲಕ ಹಣವನ್ನು ತುಂಬಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ರಾಜ್ಯ ಸರ್ಕಾರದ ಚುಕ್ಕಾಣಿಯಲ್ಲಿರುವಂತಹವರು custodian of the government ಯಾರು ಎಂದರೆ, ಸನ್ಮಾನ್ಯ ಮುಖ್ಯಮಂತ್ರಿಯವರು. ಸನ್ಮಾನ್ಯ ಮುಖ್ಯಮಂತ್ರಿಯವರು ಹಾಕುವಂತಹ ಒಂದು ಉಡುಗೆಯ ಬಗ್ಗೆ ನಾನು ಉದಾಹರಣೆ ಕೊಟ್ಟು ಹೇಳುವುದಾದರೆ, ನಮ್ಮ ರಾಜ್ಯದ ಬಡವರು ಕಷ್ಟಪಟ್ಟು ದುಡಿದು ಮಾನ್ಯ ಸಿದ್ದರಾಮಯ್ಯನವರ ಜುಬ್ಬಾದ ಜೇಬಿನೊಳಗೆ ಹಣ ತುಂಬುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ನೋಡಿ ವೈಯಕ್ತಿಕವಾಗಿ ಯಾರ ಹೆಸರನ್ನು .... ಸಿದ್ದರಾಮಯ್ಯನವರ ...

**(ಗೊಂದಲ)**

**ಶ್ರೀ ಕೆ.ಎಸ್. ನವೀನ್:- ....**ಆ ಹಣದ ಪ್ರತಿಯೊಂದು ರೂಪಾಯಿಯನ್ನು ಕೊಡಿಸುವಂತಹ ...

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಭೋವಿ ಅಭಿವೃದ್ಧಿ ನಿಗಮದೊಳಗೆ ...

**(ಗೊಂದಲ)**

**ಸಭಾಪತಿಯವರು:-** ಒಂದು ನಿವಿಷವಿರಿ. ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ನಿಮ್ಮ ಜೇಬಿನೊಳಗೆ ತುಂಬಿದವರು ಯಾರು? **(ಗೊಂದಲ)** ಇದನ್ನು ತನಿಖೆಗೆ ಕೊಟ್ಟಿದ್ದೇವೆ. ತನಿಖೆಯಾಗುತ್ತಿದೆ. ಭೋವಿ ಅಭಿವೃದ್ಧಿ ನಿಗಮದ ದುಡ್ಡು... **(ಗೊಂದಲ)** proof...

**(ಗೊಂದಲ)**

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. **(ಗೊಂದಲ)** ತಾವು ನನ್ನ ರಕ್ಷಣೆಗೆ ಬರಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೆ.ಎಸ್. ನವೀನ್‌ರವರೇ, ಒಂದು ನಿಮಿಷವಿರಿ. ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು yield ಆಗಿಲ್ಲವೆಂದರೆ, ಅವರು ಏತಕ್ಕೆ ಮಾತನಾಡುತ್ತಾರೆ.?

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಿದ್ದರಾಮಯ್ಯನವರ ಜೇಬಿಗೆ ದುಡ್ಡು ತುಂಬಿಸುತ್ತಿದ್ದಾರೆ ಎಂದು ಹೇಳಿದರೆ...

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಏನು ಬೇಕಾದರೂ ಮಾತನಾಡಬಹುದೇ? ಭೋವಿ ಅಭಿವೃದ್ಧಿ ನಿಗಮ ಮಂಡಳಿಯ ಹಣ ಯಾರ ಜೇಬಿಗೆ ಹೋಯಿತು?

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಬೋವಿ ನಿಗಮದ ಹಣ ಯಾರ ಜೇಬಿಗೆ ಹೋಯಿತು?

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:-** ಅರವತ್ತು ಕೋಟಿ ರೂಪಾಯಿ ಹಣ ಯಾರ ಜೇಬಿಗೆ ಹೋಯಿತು?

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ನಿಮ್ಮ ಸರ್ಕಾರವಿದ್ದಾಗ ಏನು ಮಾಡಿದಿರಿ? ...

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷವಿರಿ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):–** ಕೋಟಿ ಕೋಟಿ ದುಡ್ಡು ಲೂಟಿ ಮಾಡಿದಿರಿ. ಅದರ ಬಗ್ಗೆ ಮಾತನಾಡಿ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷವಿರಿ. ಮಾನ್ಯ ಶಿವರಾಜ ಎಸ್. ತಂಗಡಗಿಯವರೇ, ನನ್ನ ಅಪ್ಪಣೆ ಇಲ್ಲದೇ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, electoral bonds ಯಾರ ಜೇಬಿಗೆ ಹೋಯಿತು ಕೇಳಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ಮಾನ್ಯ ಸಭಾಪತಿಯವರೇ, ತಾವು ಕಡತ ತೆಗೆಸಿ ನೋಡಿ.

**(ಗೊಂದಲ)**

**ಸಭಾಪತಿಯವರು:–** ನಾನು ಕಡತವನ್ನು ತೆಗೆಸಿ ನೋಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಪೂರ್ತಿಯಾಗಿ ಹೇಳುವುದಕ್ಕಿಂತ ಮುಂಚೆಯೇ ಈಗ ಮಂತ್ರಿಗಳು ಹೇಳಿದ ತಕ್ಷಣವೇ, ಅದಕ್ಕೆ ಪ್ರತಿಕ್ರಿಯೆ ಕೊಡುವಂತಹ ರೀತಿಯಲ್ಲಿ ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದಾರೆ. ನಾನು ಹೇಳಿದ್ದೇನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಯವರು he is the custodian of the government. He is the custodian of the tax money. ಅದನ್ನು ನಾನು ಅವರಿಗೆ ಹೇಳುವಂತಹದ್ದು. **(ಗೊಂದಲ)** Finance Minister ಆಗಿ, ಈ ರಾಜ್ಯದ ಪ್ರತಿಯೊಬ್ಬರು ತೆರಿಗೆ ಕಟ್ಟುವ ಹಣ ಕೂಡ Finance Minister ಕಡೆಯಿಂದ ಹೋಗುತ್ತದೆ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷವಿರಿ. ಮಾನ್ಯ ತಿಮ್ಮಾಪೂರ್‌ರವರೇ, ತಮಗೆ ಏನು ತೊಂದರೆಯಾಯಿತು? "He is the custodian of the government" ಎಂದು ಹೇಳಿರುವುದರಲ್ಲಿ ತಪ್ಪು ಏನಿದೆ ಹೇಳಿ. The Chief Minister is the custodian of the government.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು custodian ಎಂದು ಹೇಳಿದ್ದು ತಪ್ಪಲ್ಲ. ಜೇಬಿಗೆ...

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ಮಾನ್ಯ ಸಭಾಪತಿಯವರೇ, ಕಡತವನ್ನು ತೆಗೆಸಿ.

**ಶ್ರೀ ಕೆ.ಎಸ್. ನವೀನ್:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಸಮಧಾನದಿಂದ ಕೇಳಬೇಕು.

**ಸಭಾಪತಿಯವರು:–** ಮಾನ್ಯ ನವೀನ್‌ರವರೇ, ಒಂದು ನಿಮಿಷ. It is not in good taste. ಯಾವಾಗಾದರೂ ಮಾತನಾಡಬೇಕಾದರೆ, ಈ ವಿಷಯದ ಬಗ್ಗೆ ಮಾತನಾಡಿ. ಮಾನ್ಯ ಸದಸ್ಯರು ಮಾತನಾಡಬೇಕಾದರೆ, ಯಾರು ಮಧ್ಯೆ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೆ.ಎಸ್. ನವೀನ್:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಪೂರ್ತಿ ಮುಗಿಸುವುದಕ್ಕಿಂತ ಮುಂಚೆಯೇ ಅವರು ಪ್ರತಿಕ್ರಿಯೆ ಕೊಡುತ್ತಿದ್ದಾರೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಕಡತವನ್ನು ತೆಗೆಸಿ ನೋಡಿ.

**ಶ್ರೀ ಕೆ.ಎಸ್. ನವೀನ್:–** ನಾನು ಹೇಳಿರುವಂತಹ ಪದ ಏನೆಂದರೆ, ತೆರಿಗೆಯ ಹಣ...

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಿದ್ದರಾಮಯ್ಯನವರ ಜೇಬಿಗೆ ತುಂಬಿಸಿಕೊಂಡಿದ್ದಾರೆ ಎಂದು ಅವರು ಹೇಳಲಿಲ್ಲ.

**(ಗೊಂದಲ)**

**ಶ್ರೀ ಎ. ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):–** ಜನ ಸಾಮಾನ್ಯರ ತೆರಿಗೆಯ ಹಣ. ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೆ.ಎಸ್. ನವೀನ್‌ರವರೇ, ಒಂದು ನಿಮಿಷವಿರಿ. ಮಾನ್ಯ ಎಂ.ಬಿ. ಪಾಟೀಲ್‌ರವರೇ ಮತ್ತು ಶಿವರಾಜ ಎಸ್. ತಂಗಡಗಿಯವರೇ, ನಾನು ಕಡತವನ್ನು ತರಿಸಿಕೊಂಡು ನೋಡಿ. ಅನಂತರ ಹೇಳುತ್ತೇನೆ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ನಾವು ಅವರು ಹೇಳಿದ್ದನ್ನು ಆರಾಮವಾಗಿ ಕೇಳುತ್ತಿದ್ದೇವೆ. ಅವರು ಎಷ್ಟು ಹೊತ್ತಿನವರೆಗಾದರೂ ಮಾತನಾಡಲಿ ಬಿಡಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಮಾನ್ಯ ಸುನೀಲ್‌ರವರೇ, ನಾನು ಹೇಳಿದ್ದೇನೆ. ತಾವು ಕುಳಿತುಕೊಳ್ಳಿ. ತಾವು ಮಾತನಾಡಬೇಡಿ. ಮಾನ್ಯ ಕೆ.ಎಸ್. ನವೀನ್‌ರವರಿಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿರುವಾಗ, ಮಧ್ಯದಲ್ಲಿ ಎದ್ದುನಿಂತು ಮಾತನಾಡುತ್ತಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇನ್ನು ಎರಡು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಿ. ಅದು ನನಗೆ ಗೊತ್ತಿಲ್ಲ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನಾನು ಪೂರ್ತಿ ಹೇಳುವುದಕ್ಕಿಂತ ಮುಂಚಿತವಾಗಿ, ಅವರು ಎದ್ದುನಿಂತು ಮಾತನಾಡುತ್ತಾರೆ.

**ಸಭಾಪತಿಯವರು:-** ಮಾನ್ಯ ನವೀನ್‌ರವರೇ, ಅದು ಅಲ್ಲಿಗೆ ಮುಗಿದಿದೆ. ತಾವು ಮಾತನಾಡಿ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದನ್ನು ಮತ್ತೆ ಉಲ್ಲೇಖ ಮಾಡಿ ಹೇಳುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಕಡತವನ್ನು ತೆಗೆಸಿದರೆ, ಗೊತ್ತಾಗುತ್ತದೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದೇನೆಂದರೆ, 'CM (Chief Minister) is the custodian of the government. He is the Finance Minister. Every rupee is accountable by the Chief Minister' ಎಂದು ಹೊರಟಿರುವಂತಹದ್ದು. Every rupee is accountable by the Chief Minister. ಆ 187 ಕೋಟಿ ರೂಪಾಯಿಗಳ ಹಣ ಎಲ್ಲಿ ಹೋಯಿತು? ಅದು ಯಾರೇ ತಿಂದಿರಬಹುದು, ಯಾರೇ ಮಾಡಿರಬಹುದು. ನಾನೊಬ್ಬ ಸದಸ್ಯನಾಗಿ ಈ ಮೇಲ್ಮನೆಗೆ ಬಂದಾಗ, ಇಂದಿನ ಸನ್ಮಾನ್ಯ ಮುಖ್ಯಮಂತ್ರಿಗಳು ಕೆಳಮನೆಯ ವಿರೋಧ ಪಕ್ಷದ ನಾಯಕರಾಗಿದ್ದರು. ಅವರು ಅವೊತ್ತಿನ ದಿನ ಏನು ಮಾತನಾಡುತ್ತಿದ್ದರು ಎಂದರೆ, "Chief Minister is the custodian. Where is the money? ಹಣ ಎಲ್ಲಿ ಹೋಯಿತು?" ಅವರೇ ಹೇಳಿರುವಂತಹ ಮಾತು ಇದು.

ಮಾನ್ಯ ಸಭಾಪತಿಯವರೇ, ಅವರ ಭಾಷಣವನ್ನು quote ಮಾಡಿ ಹೇಳುತ್ತಿದ್ದೇನೆ. ಅವರೇ ಹೇಳಿರುವಂತಹದ್ದೇನೆಂದರೆ, ಸರ್ಕಾರದ ಪ್ರತಿಯೊಂದು ಹಣಕ್ಕೂ ಕೂಡ ಮುಖ್ಯಮಂತ್ರಿಗಳು ನೇರ ಜವಾಬ್ದಾರಿ ಎಂದು ಹೇಳಿ ನಮ್ಮ ಸರ್ಕಾರದ ಮೇಲೆ ಆರೋಪ ಮಾಡಿರುವಂತಹ ಈಗಿನ ಮುಖ್ಯಮಂತ್ರಿಯಾದ ಸನ್ಮಾನ್ಯ ಸಿದ್ಧರಾಮಯ್ಯನವರು...

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):–** ಜೇಬಿಗೆ ಹೋಯಿತು ಎಂದು ಹೇಳಿದಿರಿ. ಅದಕ್ಕೆ ನಾವು ಹೇಳಿದ್ದು.

**ಸಭಾಪತಿಯವರು:–** ಅದರ ಬಗ್ಗೆ ನಾನು ನೋಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್. ನವೀನ್:–** ಮಾನ್ಯ ಸಭಾಪತಿಯವರೇ, ಇವತ್ತು 187 ಕೋಟಿ ರೂಪಾಯಿಗಳ ಹಗರಣ ವಾಲ್ಮೀಕಿ ನಿಗಮದಲ್ಲಿ ಆಗಿದೆ. ಆ ಒಂದು ಹಗರಣದ ಬಗ್ಗೆ ಇವತ್ತು ಈ ರಾಜ್ಯದ ಜನರು ಪ್ರಶ್ನೆಯನ್ನು ಮಾಡುತ್ತಿದ್ದಾರೆ. ಪ್ರಶ್ನೆಯನ್ನು ಮಾಡಿದಂತಹ ಸಂದರ್ಭದಲ್ಲಿ, ಪ್ರಶ್ನೆ ಮಾಡುವಂತಹದ್ದು. ಈ ರಾಜ್ಯದ ಸಾಮಾನ್ಯ ಜನರ ಹಕ್ಕು. ಆದರೆ ಆ ಹಕ್ಕಿನ ಹೋರಾಟವನ್ನು ಹತ್ತಿಕ್ಕುವಂತಹ ಕೆಲಸ ಆಗಿದೆ. ನಾವು ಏನನ್ನೂ ಪ್ರಶ್ನೆ ಮಾಡಬಾರದು, ಯಾವ ವಿಚಾರವನ್ನು ನಾವು ಪ್ರಶ್ನೆ ಮಾಡಬಾರದು ಎನ್ನುವಂತಹ ಧೋರಣೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಏನು ತೋರಿಸುತ್ತಿದ್ದಾರೆ ಇದು ಸರಿಯಲ್ಲ. ಹಾಗಾಗಿ ವಿರೋಧ ಪಕ್ಷ ಮತ್ತು ರಾಜ್ಯದ ಜನರಿಗೆ ಇವತ್ತು ಏನೊಂದು 187 ಕೋಟಿ ರೂಪಾಯಿಗಳ ಹಗರಣ ಆಗಿದೆ, ಆ 187 ಕೋಟಿ ರೂಪಾಯಿಗಳ ಹಿಂದೆ ಯಾರೆಲ್ಲಾ ಇದ್ದಾರೆ; ಈ ಹಣ ಯಾವ್ಯಾವ ಕಾರಣಕ್ಕೆ ಬಳಕೆಯಾಗಿದೆ; ಸರ್ಕಾರ ಮತ್ತು ಸರ್ಕಾರದಲ್ಲಿ ಇರುವಂತಹವರು ಕೂಡ ಇದರಲ್ಲಿ ಏನು ಭಾಗಿಯಾಗಿದ್ದಾರೆ ಅವರೆಲ್ಲರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನಾನು ಒಂದೇ ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಮಾತನಾಡುವುದಕ್ಕೆ ಈಗಾಗಲೇ ಇಪ್ಪತ್ತು ನಿಮಿಷ ಸಮಯ ತೆಗೆದುಕೊಂಡಿದ್ದೀರಿ.

(ಮುಂದು)

(529) 18.07.2024, 3.30, ಟಿಸಿಹೆಚ್-(ಎಂಡಿ) ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಹಗರಣ ನಡೆದಂತಹ ಸಮಯ ಕೂಡ ಬಹಳ ಮುಖ್ಯವಾಗುತ್ತದೆ. ಈ ಹಗರಣದಲ್ಲಿ ಮಾರ್ಚ್ ಕೊನೆಯ ವಾರದಲ್ಲಿ ಹಣ ಡ್ರಾ ಆಗಿದೆ. ಅವೊತ್ತು ನಮ್ಮ ದೇಶದ ಲೋಕಸಭಾ ಚುನಾವಣೆ ನಡೆಯುತ್ತಿತ್ತು. ಏಕೆ ಹಣ ಬಳಕೆಯಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಎಲ್ಲಿಗೆ ಹಣ ಹೋಗಿದೆ ಎನ್ನುವುದನ್ನು ಬಾಯಿ ಬಿಡುತ್ತಾರೆ ಎನ್ನುವಂಥ ಭಯಕ್ಕೋಸ್ಕರ ಇವತ್ತಿನ ದಿವಸ ಯಾರೂ ಬೇಡ, ನಾವೇ SIT (Special Investigation Team) ಮೂಲಕ ತನಿಖೆ ಮಾಡುತ್ತೇವೆ ಎನ್ನುವಂತಹ ರೀತಿಯಲ್ಲಿ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಶ್ರೀ ಕೆ.ಎಸ್.ನವೀನ್ ರವರೇ ಆಯಿತು, ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಹಾಗಾಗಿ ನಾನು ಒತ್ತಾಯ ಮಾಡುವುದೇನೆಂದರೆ, ಈ ಒಂದು ಹಗರಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಒಂದು ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಈ ಹಗರಣ ಪೂರ್ತಿಯಾಗಿ ತನಿಖೆಯಾಗುವ ತನಕ ಅವರು ಆ ಸ್ಥಾನದಲ್ಲಿ ಕುಳಿತು ಈ ರಾಜ್ಯದ ಜನರಿಗೆ ನ್ಯಾಯ ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಅವರು ರಾಜೀನಾಮೆಯನ್ನು ಕೊಡಬೇಕು. ಯಾರ್ಯಾರು ಇದರಲ್ಲಿ ಭಾಗವಹಿಸಿದ್ದಾರೋ, ಇದಕ್ಕೆ ಸೂತ್ರದಾರರು ಯಾರ್ಯಾರು ಇದ್ದಾರೋ ಆ ಎಲ್ಲಾ ಗ್ಯಾಂಗ್, inside gang, inside Vidhana Soudha gang, outside Vidhana Soudha gang ಎಲ್ಲರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು request. ತಾವು ಈಗಾಗಲೇ ಇದನ್ನು ನಿಯಮ 68 ಕ್ಕೆ convert ಮಾಡಿದ್ದೀರಿ. Now it has become the property of the House. Of course, ಅವರು ಸಹಿ ಮಾಡಿದ್ದಾರೆ ನೀವು ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಆದರೆ ನಾವು ಆಗಲೇ request ಮಾಡಿಕೊಂಡಿದ್ದೇವೆ. ವಿರೋಧ ಪಕ್ಷದ ಎರಡ್ಮೂರು ಜನ ಸದಸ್ಯರು ಕೂಡ ಮಾತನಾಡಲು ಕೊಡಿ, ಆಡಳಿತ ಪಕ್ಷದ ಎರಡ್ಮೂರು ಜನಕ್ಕೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಅವರು ಪತ್ರ ಬರೆದು ಕೊಟ್ಟಿದ್ದಾರೆ, ತಾವು ಬೇಕಾದರೆ ಅದನ್ನು ಓದಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನನಗೆ ಅರ್ಥ ಆಯಿತು. You have converted it to Rule 68 ಅಲ್ಲವೇ? ನಿಯಮ 68 ರ ಅಡಿಯಲ್ಲಿ ನೀವು ಅವರಿಗೆ ಅವಕಾಶ ಕೊಡಿ. ಆದರೆ ಆಡಳಿತ ಪಕ್ಷದವರಿಗೂ ಕೂಡ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಸಲೀಂ ಅಹಮದ್ ರವರೇ, ತಾವು ಒಂದು ನಿಮಿಷ ಕೇಳಿ. ಈ ಪತ್ರದಲ್ಲಿ ನಿಮ್ಮವರು ಯಾರು ಕೂಡ ಸಹಿ ಮಾಡಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ . . .

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ಒಂದು ನಿಮಿಷ. ನಾನು ಮಾನ್ಯ ಸಭಾಪತಿಯವರನ್ನು request ಮಾಡಿ ಕೇಳಿಕೊಳ್ಳುತ್ತಿದ್ದೇನೆ. ವಿರೋಧ ಪಕ್ಷದಲ್ಲಿ ಇಬ್ಬರಿಗೆ ಮತ್ತು ಆಡಳಿತ ಪಕ್ಷದಲ್ಲಿ ಇಬ್ಬರಿಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ನೀವು ಇದನ್ನು ಓದಿಕೊಳ್ಳಿ ಕೊಡುತ್ತೇನೆ.

**Sri SALEEM AHMED:–** Sir, you have converted it to Rule 68.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್ ರವರೇ, ನಿಯಮ 68ಕ್ಕೆ convert ಆದರೂ ಕೂಡ ಮೂಲ ಉದ್ದೇಶ ಬದಲಾವಣೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಆಡಳಿತ ಪಕ್ಷದವರಿಗೂ ಮಾತನಾಡಲು ಅವಕಾಶ ಮಾಡಿ ಕೊಡಿ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್ ರವರೇ, ಆಯಿತು.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೇಕಾದರೆ ಅವರು ನಿಲುವಳಿಯ ಸೂಚನೆಯ ಪರವಾಗಿದ್ದರೆ ಮಾತನಾಡಲಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, it has been converted to Rule 68. ಈಗ ಪರ ಮತ್ತು ವಿರೋಧ ಇಲ್ಲ. The House has to come to the conclusion. ಈಗ ಇದನ್ನು ಓಟಿಗೆ ಹಾಕುವುದಿಲ್ಲ. ವಿಷಯ ಗೊತ್ತಿಲ್ಲವೆಂದರೆ ಕೇಳಿಕೊಳ್ಳಿ. It will not be put for voting. Only concluding in the House. The Chief Minister has to reply for it, that's all.

**ಸಭಾಪತಿಯವರು:–** ಶ್ರೀ ಐವನ್ ಡಿ'ಸೋಜಾ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಏನೇನೋ ಮಾತನಾಡುತ್ತಿರಲ್ಲಾ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಕುರಿತು ಮಾನ್ಯ ಶ್ರೀ ಸಿ.ಟಿ. ರವಿಯವರಿಂದ ಹಿಡಿದು ಶ್ರೀ ಕೆ.ಎಸ್.ನವೀನ್ ರವರೆಗೆ ಹಲವಾರು ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಅವರೆಲ್ಲಾ ಈ ನಿಗಮದಲ್ಲಿ ಆಗಿರತಕ್ಕಂಥ ಹಗರಣವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಯಾವ ರೀತಿ ಹಣವನ್ನು ಲೂಟಿ ಮಾಡಿದ್ದಾರೆ, ದರೋಡೆ ಮಾಡಿದ್ದಾರೆ ಮತ್ತು ನುಂಗಿದ್ದಾರೆ ಎನ್ನುವುದರ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಈಗ ನಾನು ಆ ವಿವರಣೆಗೆ ಹೋಗುವುದಿಲ್ಲ. ಬಹಳ ಮಹತ್ವದ ವಿಷಯಗಳನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ವಾಲ್ಮೀಕಿ ಹಗರಣದ ವಿಷಯದ ಕುರಿತು ವೈಯಕ್ತಿವಾಗಿ ನನ್ನ ಮನಸ್ಸಿನೊಳಗೆ ಹಾಗೂ ಬಹಳಷ್ಟು ಜನ ಸದಸ್ಯರೊಳಗೆ ಏನೋ ಒಂದು ಕಾಡುತ್ತಿದೆ. ಅದೇನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಯಾದಂತಹ ಶ್ರೀ ಸಿದ್ದರಾಮಯ್ಯನವರು ಸಮರ್ಥವಾದಂತಹ, ಪಾರದರ್ಶಕವಾದಂತಹ ಮತ್ತು ಬಿಗಿಯಾದಂತಹ ಆಡಳಿತವನ್ನು ಕೊಡುವುದಕ್ಕೆ ಹೆಸರು ಪಡೆದುಕೊಂಡಿದ್ದಾರೆ. ಅಂತಹವರ ಅವಧಿಯಲ್ಲಿ ಈ ರೀತಿಯ ಒಂದು ದೊಡ್ಡ ಹಗರಣ ಹೇಗೆ ನಡೆಯಿತು? ಹಾಗಾದರೆ ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರ ಬಗ್ಗೆ ಯಾರಿಗೂ ಭಯ-ಭೀತಿ ಇಲ್ಲವೇ? ಏನು ಇವತ್ತು ಸಂಬಂಧಪಟ್ಟ ಸಚಿವರಾದ ಶ್ರೀ ಬಿ.ನಾಗೇಂದ್ರರವರು ಮತ್ತು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಬಸನಗೌಡ ದದ್ದಲ್ ಇವರ್ಯಾರಿಗೂ ಭಯವೇ ಇಲ್ಲವೇ? ಎನ್ನುವುದು ನಮ್ಮ ಮನಸ್ಸಿನೊಳಗೆ ಬಹಳ ಕಾಡುತ್ತಿದೆ. ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಈ ಹಗರಣದೊಳಗೆ ಯಾರು ಕೂಡ ನಂಬಲಾರದಷ್ಟು ಕೆಟ್ಟ ಕೆಲಸ ಮತ್ತು ಹೀನ ಕೆಲಸ ನಡೆದಿದೆ. ನಾನು ಹೇಳಬೇಕಾಗಿರುವುದು ಇಷ್ಟೇ. "ಬೇಲಿಯೇ ಎದ್ದು ಹೊಲ ಮೇಯ್ತಂತೆ" ಎಂಬ ಒಂದು ಗಾದೆ ಮಾತು ಇದೆ. ಇದು ಆ ರೀತಿ ಆಗಿದೆ. ಇದಕ್ಕೆ ಸಂಬಂಧಟ್ಟ ಸಚಿವರು, ಸಂಬಂಧಪಟ್ಟ ನಿಗಮದ ಅಧ್ಯಕ್ಷರು, ಮ್ಯಾನೇಜಿಂಗ್ ಡೈರೆಕ್ಟರ್ ಇವರೆಲ್ಲರೂ ಸೇರಿಕೊಂಡಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮವು ಎಸ್.ಟಿ., ಸಮಾಜದಲ್ಲರುವ ಬಡವರ ಅಭಿವೃದ್ಧಿಗಾಗಿ ಇರತಕ್ಕಂಥ ಹಣವನ್ನು ಇವರೆಲ್ಲರೂ ನುಂಗಿದ್ದಾರೆ. ಮತ್ತೆ ಈ ಹಗರಣದ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ಬಂದಿರುವ ವಿಚಾರವನ್ನು ಹೇಳಬೇಕಾಗುತ್ತದೆ. ಇಲ್ಲಿಯವರೆಗೆ ಕಮೀಷನ್ ತಿನ್ನುತ್ತಿದ್ದರಂತೆ. ಆದರೆ ಇವರು ಇಲ್ಲಿ ಕಮಿಷನ್ ತಿಂದಿಲ್ಲ, ಆ ನಿಗಮದ ಪೂರ್ತಿ ಹಣವನ್ನು ನುಂಗಿದ್ದಾರೆ. ಶೇ.100 ಕಮಿಷನ್. ಮತ್ತೆ ಈ ಹಗರಣ ನಡೆದಾಗ ಎಂ.ಪಿ., ಚುನಾವಣೆ ನಡೆದಿದೆ. ಮತ್ತೆ ಈ ಹಣ ಏತಕ್ಕೆ ಬಳಕೆಯಾಗಿದೆ? ಆಗ ನೀತಿ ಸಂಹಿತೆ ಜಾರಿಯಲ್ಲಿತ್ತು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದಂತಹ ಸಂದರ್ಭದಲ್ಲಿ, ಚುನಾವಣೆ ನಡೆದಂತಹ ಸಂದರ್ಭದೊಳಗೆ ಚುನಾವಣಾ ಆಯೋಗದ ನೀತಿ-ನಿಯಮಗಳಿವೆ. ಅಂದರೆ ಇವರಿಗೆ ಸನ್ಮಾನ್ಯ

ಮುಖ್ಯಮಂತ್ರಿಗಳೆಂದರೆ ಭಯವೇ ಇಲ್ಲ. ಚುನಾವಣಾ ಆಯೋಗದವರ ಭಯ ಕೂಡ ಇಲ್ಲ. ಇದಕ್ಕೆ ಏನು ಕ್ರಮ ಕೈಗೊಳ್ಳುತ್ತಾರೆಂದು ಈ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಒಟ್ಟಾರೆಯಾಗಿ ನಾವು ಏನು ಹೇಳುತ್ತೇವೆಂದರೆ, ಈ ಒಂದು ಹಗರಣದೊಳಗೆ ಏನು ಹಣ ನುಂಗಿದ್ದಾರೆ, ಅದು ದುರ್ಬಳಕೆ ಆಗಿದೆ. ಅದು ಚುನಾವಣೆಗೆ ಹೋಗಿದೆ. ಸಂಬಂಧಪಟ್ಟ ಸಚಿವರಾದ ಶ್ರೀ ಬಿ.ನಾಗೇಂದ್ರರವರು ಮತ್ತು ಶ್ರೀ ಬಸನಗೌಡ ದದ್ದಲ್‌ರವರು ಆಸ್ತಿ ಖರೀದಿ ಮಾಡಿಕೊಂಡು ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಹಣ ದುರ್ಬಳಕೆ ಆಗಿದೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಒಂದು ಪ್ರಶ್ನೆ ಕೇಳುವುದೇನೆಂದರೆ, ಸರ್ಕಾರ ನಿಯಮಗಳನ್ನು ರೂಪಿಸಿದೆ. ಎಸ್.ಸಿ.ಎಸ್.ಟಿ. ಸಮುದಾಯದ ಅಭಿವೃದ್ಧಿಗೆ ಹಣವನ್ನು ಮೀಸಲು ಇಟ್ಟಿರುತ್ತೇವೆ. ಆ ಹಣವನ್ನು ಪೂರ್ತಿ ಸದ್ಬಳತೆ ಮಾಡಿಕೊಳ್ಳಬೇಕು. ಯಾರು ಆ ಹಣವನ್ನು ಬಳಕೆ ಮಾಡುವುದಿಲ್ಲವೋ ಅಂತಹ ಐಎಎಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಕಾನೂನು ಮಾಡಿದ್ದೀರಿ. ಮತ್ತೆ ಇದರೊಳಗೆ ಹಣ ಉಳಿಸುವ ಪ್ರಶ್ನೆ ಅಲ್ಲ. ಸಂಪೂರ್ಣವಾಗಿ ಹಣವನ್ನು ದೋಚಿ ನುಂಗಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ. ಇದರ ಜೊತೆಗೆ ಎಲ್ಲಾ ಸಮಾರಂಭದೊಳಗೆ congress party leaders, ಮಾನ್ಯ ಸಚಿವರು ಮತ್ತು ಮಾನ್ಯ ಶಾಸಕರುಗಳು ಎಸ್.ಸಿ.ಎಸ್.ಟಿ. ಸಮುದಾಯದವರನ್ನು ಅಭಿವೃದ್ಧಿ ಮಾಡುವರು, ಕಲ್ಯಾಣ ಮಾಡುವರು ಮತ್ತು ಅವರನ್ನು ನಾವೇ ಸಂರಕ್ಷಣೆ ಮಾಡುತ್ತೇವೆ ಎಂದು ಯಾವಾಗಲೂ ಹೇಳುತ್ತಿರುತ್ತಾರೆ. ಮತ್ತೆ ಎಸ್.ಟಿ., ಸಮಾಜದವರ ರೂ. 187 ಕೋಟಿಗಳನ್ನು ನುಂಗಿದ್ದಾರಲ್ಲಾ! ನೀವು ಅವರನ್ನು ಸಂರಕ್ಷಣೆ ಮಾಡುತ್ತೀರೋ, ಸಂಹಾರ ಮಾಡುತ್ತೀರೋ? ಇದಕ್ಕೆ ಮಾನ್ಯ ಸಚಿವರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಈ ಒಂದು ಹಗರಣದೊಳಗೆ ಅತ್ಯಂತ ನೋವಿನ ಮತ್ತು ದುಃಖದ ಸಂಗತಿ ಏನೆಂದರೆ, ಈ ನಿಗಮದೊಳಗೆ ಈ ಹಗರಣ ಅಧೀಕ್ಷಕರಾದ ಶ್ರೀ ಚಂದ್ರಶೇಖರನ್ ರವರ ಜೀವ ತೆಗೆದುಕೊಂಡಿದೆ. ಆ ಜೀವವನ್ನು ಮತ್ತೆ ವಾಪಸ್ಸು ತರಿಸುವುದಕ್ಕೆ ಆಗುವುದಿಲ್ಲ. ಆ ಜೀವ ಹಣ ಕೊಟ್ಟರೆ ಬರುವುದಿಲ್ಲ. ತನಿಖೆ ಮಾಡಿ ಹಣವನ್ನು ವಾಪಸ್ಸು ಪಡೆಯುಬಹುದು. ಆದರೆ ಅವರ ಜೀವ ವಾಪಸ್ಸು ತರುವುದಕ್ಕೆ ಆಗುತ್ತದೆಯೇ? ಈ ಹಗರಣ ಒಂದು ಜೀವವನ್ನೇ ತೆಗೆದುಕೊಂಡಿದೆ. ಇದು ಬಹಳ ಗಂಭೀರವಾದಂತಹ ವಿಷಯ. ಇವತ್ತಿನ ದಿವಸ ಅವರ ಕುಟುಂಬ ಬೀದಿಪಾಲಾಗಿದೆ. ಅವರ ಮನೆಯವರಿಗೆ ಸರ್ಕಾರದಿಂದ ಒಂದು ನೌಕರಿಕೊಡಬೇಕು ಮತ್ತು ಅವರಿಗೆ ಪರಿಹಾರವನ್ನೂ ಕೊಡಬೇಕಾಗುತ್ತದೆ. ಇದರ ಜೊತೆಗೆ ಈ ಹಗರಣದೊಳಗೆ ಗಮನಿಸಬೇಕಾದಂತಹ ಮುಖ್ಯವಾದ ಅಂಶಗಳು ನನ್ನ ಗಮನಕ್ಕೆ ಬಂದಿದ್ದು ಏನೆಂದರೆ, SIT (Special Investigation Team) ರಚನೆ ಮಾಡಿದ್ದಾರೆ. ಈ SIT

ತನಿಖಾ ತಂಡದವರು ಜೂನ್ 14ಕ್ಕೆ ನಿಗಮದ ಎಂ.ಡಿ., ಯವರಾದ ಶ್ರೀ ಪದ್ಮನಾಬ್, ಲೆಕ್ಕಾಧಿಕಾರಿಯಾಗಿರತಕ್ಕಂಥ ಶ್ರೀ ಪರಶುರಾಂ ಉಳಿದ 11 ಆರೋಪಿಗಳನ್ನು ಬಂಧನ ಮಾಡಿದ್ದಾರೆ. ಅವೊತ್ತಿನ ದಿನವೇ ಮಾನ್ಯ ಸಚಿವರಾದ ಶ್ರೀ ಬಿ.ನಾಗೇಂದ್ರರವರನ್ನು ಏಕೆ ಬಂಧಿಸಲಿಲ್ಲ? ಆಮೇಲೆ 11 ಜನ ಬಂಧನವಾಗಿರತಕ್ಕಂಥವರು ಮಾನ್ಯ ಸಚಿವರ ಆದೇಶದ ಮತ್ತು ಸೂಚನೆ ಮೇರೆಗೆ ಹಣವನ್ನು ನಾವು ವರ್ಗಾವಣೆ ಮಾಡಿದ್ದೇವೆಂದು ಹೇಳಿದ್ದಾರೆ. ಅವರು SIT ಮುಂದೆ ಸಾಕ್ಷಿ ಹೇಳಿದರೂ ಕೂಡ ಅವರು ಏನು ಈ 11 ಜನರನ್ನು ಬಂಧನ ಮಾಡಿದ್ದರೋ ಅವತ್ತಿನ ದಿನವೇ ಮಾನ್ಯ ಸಚಿವರನ್ನು SIT ಬಂಧನ ಮಾಡಬೇಕಾಗಿತ್ತು. ಇವರ ಕರ್ತವ್ಯದಲ್ಲಿ ಲೋಪದೋಷ ಆಗಿದೆ. ಅದಕ್ಕಾಗಿ ನಾವೆಲ್ಲರೂ ಕೂಡ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. SIT ಎಂದರೇನು? SIT ಯವರು ಸರ್ಕಾರದ ಅಡಿಯಲ್ಲಿ ಕೆಲಸ ಮಾಡುತ್ತಾರೆ.

(ಮುಂದು)

(530)18.7.2024/3.40/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು):**

ಸಚಿವರನ್ನು ಬಂಧನ ಮಾಡುವುದಕ್ಕೆ ಹೆದರುತ್ತಾರೆ. ಎಲ್ಲರನ್ನೂ ಬಂಧಿಸುವುದಕ್ಕೆ ಮುಂಚೆ ಅವರನ್ನು ಬಂಧಿಸುವುದಕ್ಕೆ ಆಗಿಲ್ಲ. ಇದರ ಜೊತೆಗೆ ಈ ಹಗರಣದಲ್ಲಿ ಮುಖ್ಯಮಂತ್ರಿಗಳದ್ದೂ ಲೋಪದೋಷವಾಗಿದೆ. ಆ Death Note ನಲ್ಲಿ ಶ್ರೀ ಚಂದ್ರಶೇಖರ್‌ರವರು ನೇರವಾಗಿ ಬರೆದಿದ್ದಾರೆ. ಸಚಿವರ ಸೂಚನೆಯ ಮೇರೆಗೆ ಹಣವನ್ನು ವರ್ಗಾವಣೆ ಮಾಡಲಾಗಿದೆ ಎಂದು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, Death Note ಗಿಂತ ಬೇರೆ ಯಾವ ಸಾಕ್ಷಿ ಬೇಕು? ತಕ್ಷಣವೇ ಮುಖ್ಯಮಂತ್ರಿಯವರು ಅವರ ರಾಜೀನಾಮೆಯನ್ನು ಪಡೆದುಕೊಳ್ಳಬೇಕಾಗಿತ್ತು ಮತ್ತು ಸಂಪುಟದಿಂದ ಅವರನ್ನು ತೆಗೆದುಹಾಕಬೇಕಾಗಿತ್ತು. ಆ ಕೆಲಸವನ್ನು ಮಾಡಲಿಲ್ಲ. ಅವರು ನಿರ್ದೋಷಿ, ಇದರಲ್ಲಿ ಅವರ ಪಾತ್ರ ಏನೂ ಇಲ್ಲ ಎಂದು ತಿಳಿದುಕೊಂಡಿದ್ದರು. ಭಾರತೀಯ ಜನತಾ ಪಾರ್ಟಿಯು ಇಡೀ ರಾಜ್ಯದಾದ್ಯಂತ ಜಿಲ್ಲಾದ್ಯಂತ ಹೋರಾಟ ಮಾಡಿದ ಮೇಲೆ 11 ದಿನಗಳ ನಂತರ ಅವರ ರಾಜಿನಾಮೆಯನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಮುಖ್ಯಮಂತ್ರಿಗಳು ವಿಫಲರಾದ ಹಾಗೆ ಆಗಲಿಲ್ಲವೇ? Death Note ನಲ್ಲಿ ಬರೆದಿರುವಾಗ ತಕ್ಷಣವೇ ಅವರನ್ನು ಕರೆಸಿ ರಾಜಿನಾಮೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಇಲ್ಲವೇ ಸಂಪುಟದಿಂದ ಅವರನ್ನು ವಜಾ ಮಾಡಬೇಕಾಗಿತ್ತು. ಎರಡೂ ಕೆಲಸ ಮಾಡಲಿಲ್ಲ. ಎಲ್ಲರಿಗೂ ಕಾನೂನು ಗೊತ್ತಿದೆ. 03 ಕೋಟಿಗಿಂತಲೂ ಹೆಚ್ಚು ಹಗರಣವಾದಾಗ ಅದನ್ನು ಸಿ.ಬಿ.ಐ. ಗೆ ಕೊಡಬೇಕು. ಅದನ್ನೂ ಮಾಡಲಿಲ್ಲ. ಇವತ್ತು ಮುಖ್ಯಮಂತ್ರಿಗಳು ವಿಫಲವಾಗಿದ್ದಾರೆ. ಹಾಗಾಗಿ ನಾವು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದೇನೆಂದರೆ, ಇದು ಆರ್ಥಿಕ ಇಲಾಖೆಯಲ್ಲಿ ಆಗಿರುವುದು. ಇದರಲ್ಲಿ ಅವರ ನೇರವಾದ ಪಾತ್ರ ಇದೆ. ಅವರು ನೇರವಾದ ಹೊಣೆ ಹೊರಬೇಕು. ನೈತಿಕ ಹೊಣೆ ಹೊತ್ತು, ಎಲ್ಲಾ ಸದಸ್ಯರೂ ಹೇಳಿದ ಹಾಗೆ ನಾನು ಕೂಡ ಈ

ಹಗರಣದಲ್ಲಿ ಮುಖ್ಯಮಂತ್ರಿಗಳ ಪಾಲು, ಪಾತ್ರವೂ ಇರುವುದರಿಂದ, ಇಲಾಖೆ ಅವರ ಅಧೀನದಲ್ಲಿರುವುದರಿಂದ ಅವರು ಜವಾಬ್ದಾರಿ ತೆಗೆದುಕೊಂಡು ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ, ಧನ್ಯವಾದಗಳು.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಈಗಾಗಲೇ ಈ ನಿಲುವಳಿ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ ಸಿ.ಟಿ. ರವಿಯವರು, ಶ್ರೀ ಭೋಜೇಗೌಡರು, ಶ್ರೀ ನವೀನ್‌ರವರು ಮತ್ತು ಶ್ರೀ ಸಂಕನೂರ್‌ರವರು ವಿಸ್ತೃತವಾಗಿ ಈ ಹಗರಣ ಯಾವ ರೀತಿ ನಡೆಯಿತು ಎನ್ನುವ ಬಗ್ಗೆ ಹೇಳಿದರು. ಇಡೀ ಕರ್ನಾಟಕದ ಜನತೆಗೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಗ್ಗೆ ಯಾರ್ಯಾರು ತಪ್ಪಿತಸ್ಥರಿದ್ದಾರೆ ಆ ತಪ್ಪಿತಸ್ಥರಿಗೆ ಏನೇನಾಗಬೇಕೆಂದು ಎಲ್ಲವನ್ನೂ ಹೇಳಲಾಗಿದೆ. Death Note ಬರೆದು ಆತ್ಮಹತ್ಯೆ ಮಾಡಿಕೊಂಡ ಚಂದ್ರಶೇಖರ್‌ರವರ ಮನೆಗೆ ನಾನೂ ಎರಡು ಬಾರಿ ಹೋಗಿದ್ದೆ. ಶ್ರೀ ಚಂದ್ರಶೇಖರ್‌ರವರ ಹಳೆಯ ಇತಿಹಾಸವನ್ನು ಸ್ವಲ್ಪ ನೋಡಿದೆವು. ಅವರು ಮುಂಚೆ ಎಲ್ಲಿ ಕೆಲಸ ಮಾಡುತ್ತಿದ್ದರು, ಅವರ ನಡವಳಿಕೆ ಹೇಗಿತ್ತು ಎಂಬುದನ್ನು ನೋಡಿದೆವು. ಒಂದು ಮನೆಯ ಮಹಡಿ ಮೇಲೆ ಅವರು ಬಾಡಿಗೆಗಿದ್ದರು. ಚಂದ್ರಶೇಖರ್‌ರವರ ಹಳೆಯ ಇತಿಹಾಸವನ್ನು ನೋಡಿದರೆ ಅವರು ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು, ಅದು ಮುಚ್ಚಿ ಹೋಗುತ್ತದೆ. ಅದಕ್ಕಿಂತ ಮುಂಚೆ ಅವರು ತಿಂಗಳಿಗೆ ಕನಿಷ್ಟ 500 ಜನರಿಗೆ salary report ಮಾಡುತ್ತಿದ್ದರು. ಎಲ್ಲರಿಗೂ ಇ.ಎಸ್.ಐ., ಪಿ.ಎಫ್., ಕೊಡಬೇಕು ಅಂತಹದ್ದನ್ನು ನೋಡುವಂತಹ ಅಧಿಕಾರಿಯಾಗಿದ್ದರು. ಸ್ವಲ್ಪ ಜನರಲ್ಲಿ ಅವರ ನಡವಳಿಕೆ ಹೇಗಿತ್ತು ಎಂದು ಕೇಳಿದೆವು. ಅಂದರೆ ವೇತನ ಕೊಡಬೇಕಾದರೆ ಬೇರೆ ಬೇರೆ ಇಲಾಖೆಗಳಲ್ಲಿ ಏನೇನು ಮಾಡುತ್ತಾರೆ ಎಂಬುದನ್ನು ನೋಡುತ್ತಿರುತ್ತೇವೆ. ತನಗೆ ತಡವಾದರೂ ಪರವಾಗಿಲ್ಲ, ಅಲ್ಲಿನ ಕೆಲಸಗಾರರಿಗೆ ತಡವಾಗಬಾರದು, ಒಂದೇ ಒಂದು ರೂಪಾಯಿಯು ಕೂಡ ಎಲ್ಲಿಯೂ ಪೋಲಾಗದ ಹಾಗೆ ಚೆಕ್‌ಗಳನ್ನು ಕೊಡುವಂತಹ ಮನಸ್ಥಿತಿ ಚಂದ್ರಶೇಖರ್‌ರವರಿಗಿತ್ತು. ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದಂತಹ ವ್ಯಕ್ತಿ. ಮೈಸೂರು ಪೇಪರ್ ಮಿಲ್ಸ್ ಮುಚ್ಚಿದ ಮೇಲೆ ಈ ನಿಗಮಕ್ಕೆ ಅಧೀಕ್ಷಕರಾಗಿ ಅವರನ್ನು ನೇಮಕಗೊಂಡಿರುತ್ತಾರೆ. ಅವರು ಈ ನಿಗಮಕ್ಕೆ ಬಂದು ತುಂಬಾ ವರ್ಷಗಳೇನೂ ಆಗಿಲ್ಲ. ಅಲ್ಲಿಗೆ ಬಂದು ಒಂದೂವರೆ ವರ್ಷವಾಗಿದೆ ಅಷ್ಟೇ. ಅತ್ಯಂತ ಪ್ರಾಮಾಣಿಕವಾಗಿ ಬೆಳಗ್ಗೆ ಕಛೇರಿಗೆ ಹೋದರೆ ಯಾರ ಜೊತೆಯೂ ಮಾತನಾಡುವುದಿಲ್ಲ, ಬೆಳಗ್ಗೆಯಿಂದ ಸಂಜೆಯತನಕ ಆ ನಿಗಮದಲ್ಲಿ ತುಂಬಾ ಒಳ್ಳೆಯ ಕೆಲಸ ಮಾಡಿಕೊಂಡಿದ್ದರು. ನಾನು ಸಹ ಒಂದು ನಿಗಮದ ಅಧ್ಯಕ್ಷನಾಗಿದ್ದೆ. Corporation is an independent body. ನಮಗೆ ಬಜೆಟ್ ಹಂಚಿಕೆಯಾಗುತ್ತದೆ, ಬಜೆಟ್ ಆದ ಮೇಲೆ ನಿಗಮದ ಖಾತೆಗೆ ಹಣ ಬರುತ್ತದೆ, ಅದಾದ ಮೇಲೆ ಅಲ್ಲಿನ ಎಂ.ಡಿ., ಅಲ್ಲಿನ ಸಿಸ್ಟಂನಲ್ಲಿ ನಿಗಮದ ಒಟ್ಟು ಖರ್ಚನ್ನು, ಯೋಜನೆಗಳನ್ನು ಕೂಡ ಮಾಡುತ್ತಾರೆ. ನನಗೆ ಈ ಸರ್ಕಾರ ಬಂದ 14-15 ತಿಂಗಳುಗಳಾದ ಮೇಲೆ ಮೊದಲನೇ ವರ್ಷದಿಂದಲೇ ಈ ಸರ್ಕಾರದ ಸಮಸ್ಯೆ ಪ್ರಾರಂಭವಾಯಿತು. ಅದೇನೆಂದರೆ, ನಮ್ಮ ಒಟ್ಟು ಬಜೆಟ್‌ನ್ನು ನೋಡಲಿಲ್ಲ, ಒಟ್ಟು ನಮ್ಮ income source ಏನು, ಮುಂಬರುವ ವರ್ಷಗಳಲ್ಲಿ ಈ ರಾಜ್ಯಕ್ಕೆ ಏನೇನಾಗಬೇಕು ಎನ್ನುವುದನ್ನು ನೋಡದೇ ಎಲ್ಲಾ ಸ್ಕೀಂಗಳನ್ನು ಮಾಡಿದರು

ಅದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಒಳ್ಳೊಳ್ಳೆಯ ಸ್ಕೀಂಗಳನ್ನು ಮಾಡಿದ್ದಾರೆ, ಅದರಿಂದ ಜನರಿಗೆ ಕೂಡ ಅನುಕೂಲವಾಗುತ್ತದೆ. ಆದರೆ ಯಾವಾಗ ಮಾಡಬೇಕು ಎನ್ನುವುದನ್ನು ಈ ಸರ್ಕಾರ ಕಿಂಚಿತ್ತೂ ಯೋಚನೆ ಮಾಡಲಿಲ್ಲ. ಕರ್ನಾಟಕ ಸರ್ಕಾರ ಒಂದು ರೀತಿಯಲ್ಲಿ ಅಭಿವೃದ್ಧಿ ಮಾಡುತ್ತಿದ್ದರೆ, ನಮ್ಮ ಹಿಂದಿನ ಸರ್ಕಾರ ನಮಗೆ ಇದ್ದಂತಹ ಬಜೆಟ್, excess of income ಅಂದರೆ ಬಜೆಟ್‌ಗಿಂತ ಜಾಸ್ತಿ ಆದಾಯವನ್ನು ತೋರಿಸಿರುವಂತಹ ಒಂದು ಸರ್ಕಾರವನ್ನು 2022-23 ರಲ್ಲಿ ನೋಡಿದರೆ, 2023-24ಕ್ಕೆ ಯಾವ ರೀತಿಯಾಯಿತು ಎಂದರೆ, ಈ ಸರ್ಕಾರದಲ್ಲಿ ಯಾವುದೇ ರೀತಿಯ ಅಭಿವೃದ್ಧಿಗಳಾಗುತ್ತಿಲ್ಲ. ನಿಗಮಗಳಿಗೆ ಕೊಡಬೇಕಾಗಿರುವಂತಹ ಸ್ಥಿತಿಗೆ ಕೂಡ ಕಡಿವಾಣ ಹಾಕುವಂತಾಯಿತು. ಆ ಒಂದು ದಿಕ್ಕಿನಲ್ಲಿ ಸರ್ಕಾರ ನಡೆಯಬೇಕಾದರೆ ಈ ಸ್ಕೀಂಗಳ ಮೇಲೆ ಎಲ್ಲರ ಒತ್ತಡ, ಖಜಾನೆ ಖಾಲಿಯಾಯಿತು, ಅಭಿವೃದ್ಧಿಗಳಿಲ್ಲ. ಯಾವಾಗ ಅಭಿವೃದ್ಧಿ ಕುಂಠಿತವಾಗುತ್ತದೆ ಆಗ ಮಾನ್ಯ ಸದಸ್ಯರಾದ ಸಂಕನೂರ್‌ರವರು ಹೇಳಿದ ಹಾಗೆ ಕಮೀಷನ್ ಸಮಸ್ಯೆಗಳು ಪ್ರಾರಂಭವಾಗುತ್ತದೆ. ಯಾವಾಗ ಅಭಿವೃದ್ಧಿ ಆಗುವುದಿಲ್ಲ, ಯಾವಾಗ ನೇರವಾಗಿ DBT (Direct Benefit Transfer) ಆಗುತ್ತದೋ ಇದೆಲ್ಲಕ್ಕೂ ಹೋಗಿ ಅಭಿವೃದ್ಧಿ ಶೂನ್ಯವಾದಾಗ ಎಲ್ಲಿದೆ ಹಣ ಎಂದು ಪ್ರಾರಂಭವಾಗುತ್ತದೆ. ಅದು ನಿಗಮಗಳಲ್ಲಿದೆ. ನಿಗಮಗಳಿಗೆ ನಾವು ಕೈ ಹಾಕಬೇಕು ಎಂದು ಈ ಸರ್ಕಾರ ಯೋಚನೆ ಮಾಡಿತು. ಯಾವ ಯಾವ ನಿಗಮಗಳಿಗೆ ಹಣ ಹೋಗುತ್ತದೆ, ಎಲ್ಲೆಲ್ಲಿ ಹಣವಿದೆ ಎಂದು ಈ ಸರ್ಕಾರ ವಿಶೇಷವಾದ ಗಮನವನ್ನು ವಹಿಸಿತು. ನಾವೆಲ್ಲಾ ನಂಬಿರುವುದೇನೆಂದರೆ, ಸುಮಾರು 25,200 ಕೋಟಿ ರೂಪಾಯಿಗಳನ್ನು SCP-TSP (Special Component Plan – Tribal Sub Plan) ಗೆ ಇಟ್ಟರು, ಆಗಲೂ ಕೂಡ diversion of fund, ಯಾವ ಒಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಏಳಿಗೆಗೋಸ್ಕರ ಇಟ್ಟಂತಹ ಹಣವನ್ನು ಇವರ ಸ್ಕೀಂಗಳಿಗೆ ಬಳಸಿಕೊಂಡು 11,500 ಸಾವಿರ ಕೋಟಿ ಹಣವನ್ನು ಕೂಡ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಕೊಡಲಿಲ್ಲ. ಅವರ ಏಳಿಗೆಗೆ ಕೊಡಲಿಲ್ಲ, ಅಲ್ಲಿಯೂ ಕೂಡ ಏನೂ ಮಾಡುವುದಕ್ಕಾಗಲಿಲ್ಲ. ಕೊನೆಗೆ ನಿಗಮಕ್ಕೆ ಕೈ ಹಾಕಿದರು, 187 ಕೋಟಿ ರೂಪಾಯಿಗಳು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿತ್ತು. ನಾನು ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ 22-26 ಒಟ್ಟು ಎಷ್ಟು ನಿಗಮಗಳಿವೆ, ಆ ನಿಗಮಗಳಿಂದ 2023 ಮಾರ್ಚ್ ಅಂತ್ಯಕ್ಕೆ ಎಷ್ಟು ಹಣ ಬಾಕಿ ಉಳಿದಿದೆ ಎಂದು ಪ್ರಶ್ನೆ ಕೇಳಿದ್ದೆ. ಒಂದು ರೂಪಾಯಿಯೂ ಉಳಿದಿಲ್ಲ ಎಂದು ನನಗೆ ಉತ್ತರ ಸಿಕ್ಕಿತ್ತು. ಉಳಿದಂತಹ ಹಣ ನಮ್ಮ Zilla Panchayat, Taluk Panchayat ನಲ್ಲಿ ಹಾಗೂ ಕರ್ನಾಟಕದ ಎಲ್ಲಿಯೂ ಇಲ್ಲ, ಅಲ್ಲಿ ಕೊಟ್ಟಂತಹ ಹಣವನ್ನು ಕೂಡ ಎಷ್ಟು ಉಳಿಸಿದ್ದೀರಿ ಎಂದು ಪ್ರಶ್ನೆ ಕೇಳಿದ್ದೆ. ಅದು ಬಹಳ ಕಡಿಮೆ 1,494 ಕೋಟಿ ರೂಪಾಯಿಗಳಷ್ಟು ಹಣ ಉಳಿದಿದೆ ಅದನ್ನು Consolidated Fund ಗೆ ಕಳುಹಿಸಬೇಕು. ಆ Consolidated Fund ಗೆ ಬಂದಿರುವಂತಹ ಹಣವನ್ನು ಈ ಸರ್ಕಾರ Legislature ನ ಒಪ್ಪಿಗೆ ಇಲ್ಲದೇ ಅದನ್ನು ಗ್ಯಾರಂಟಿ ಸ್ಕೀಂಗಳಿಗೆ ಬಳಸಲಾಯಿತು. ನಮ್ಮ Legislature ನಲ್ಲಿ ಇದನ್ನು ಪಾಸ್ ಮಾಡಲೇ ಇಲ್ಲ. ನಾನೇ 3-4 ನಿಗಮಗಳಲ್ಲಿ ನಿಮ್ಮ ಖಾತೆಯಲ್ಲಿ ಮಾರ್ಚ್ 31 ಮತ್ತು ಏಪ್ರಿಲ್, 01ನೇ ತಾರೀಖಿಗೆ ಎಷ್ಟು ಬಾಕಿ ಇದೆ ಎಂದು

ಕೇಳಿದೆ. ನನ್ನ ಹತ್ತಿರ ಸುಮಾರು ನಿಗಮಗಳ ಮಾಹಿತಿ ಇದೆ. ಆದರೆ ಈ ಸರ್ಕಾರ ನಿಗಮಗಳಿಂದ ಯಾವುದೇ ರೀತಿಯ ಒಂದು ರೂಪಾಯಿಯೂ ಬಾಕಿ ಇಲ್ಲ, ಎಲ್ಲವನ್ನೂ ಖಾಲಿ ಮಾಡಿದ್ದೇವೆ ಎಂದು ನನಗೆ ಉತ್ತರ ಕೊಟ್ಟಿದೆ. ಹೀಗೆ ನಿಗಮಗಳ ಹಣವನ್ನು ಯಾವ ರೀತಿ ಹೇಗೆ divert ಮಾಡಬೇಕೆಂಬ ಪ್ರಯತ್ನಗಳು ಪ್ರಾರಂಭವಾಯಿತು. ಒಂದು ಲೋಕಸಭಾ ಚುನಾವಣೆ, ಇನ್ನೊಂದು ಬಹಳ ಪ್ರಮುಖವಾಗಿ ತೆಲಂಗಾಣ ಚುನಾವಣೆ. ತೆಲಂಗಾಣ ಚುನಾವಣೆಗೆ ಹಿಂದೆ ನಾವು ನೋಡುತ್ತಾ ಬಂದಿದ್ದೇವೆ. ನಮ್ಮ ಕರ್ನಾಟಕದಲ್ಲಿ ಒಂದು ಡೈರಿ ಸಿಗುತ್ತದೆ. 2013-18ರತನಕ ಸರ್ಕಾರ ನಡೆಸಬೇಕಾದರೆ ಎಷ್ಟೆಷ್ಟು ಹಣ ಹೈಕಮಾಂಡ್‌ಗೆ ಹೋಗಿದೆ ಎಂಬ ಲೆಕ್ಕ ಆ ಡೈರಿಯಿಂದ ಸಿಗುತ್ತದೆ.

(ಮುಂದು)

(531) 18-07-2024 3-50 KH/BNS (ಸಭಾಪತಿಯವರ ಉಪಸ್ಥಿತಿ)

**ಡಿ.ಎಸ್.ಅರುಣ್ (ಮುಂದು):-**

ಎಷ್ಟೆಷ್ಟು ಆರ್‌ಜಿ., ಎಸ್‌ಜಿ., ಎಪಿ., ಎಷ್ಟೆಷ್ಟು ಹಣ ಹೋಗಿದೆ ಎನ್ನುವಂತಹದ್ದನ್ನು ಇವರು ಲೆಕ್ಕ . . . ಪಿಜಿ. ಐಜಿ., ನೂ ಬರುತ್ತದೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಎಸ್. ಅರುಣ್‌ರವರೇ, ನೀವೇ ಡೈರಿ ಬರೆಸಿದ್ದಾ? ಎಲ್ಲಾ ಹೇಳುತ್ತಿದ್ದೀರಿಯಲ್ಲವೇ? ಎಲ್ಲಾ ಅವರಿಗೆ ಗೊತ್ತಿದೆ. ಹಾಗಾಗಿ ನೀವೇ ಬರೆಸಿದ್ದಾ ಎಂದು ನಾನು ಕೇಳುತ್ತಿದ್ದೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರೇ ನಿಮ್ಮ ಹೆಸರು ಇಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಿ.ಟಿ.ರವಿ ರವರೇ, ನನ್ನ ಹೆಸರು ಇಲ್ಲ. ನಿಮ್ಮ ಹೆಸರು ಇಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಐವನ್ ಡಿ 'ಸೋಜಾರವರೇ, incoming ಎಲ್ಲ, outgoing ಎಲ್ಲಿ ಎಂದು ಇತ್ತು. ಅದರಲ್ಲಿ ಅವರ ಹೆಸರು ಇಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಿ.ಟಿ.ರವಿ ರವರೇ, ನಿಮ್ಮದರಲ್ಲಿ incoming ಎಲ್ಲಿ ಎಂದು ಇರಬೇಕು.

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ:-** ಮಾನ್ಯ ಸಭಾಪತಿಯವರೇ, electoral bonds, ಭೋವಿ ನಿಗಮ...

**ಶ್ರೀ ಸಿ.ಟಿ.ರವಿ:-** ಮಾನ್ಯ ಸಚಿವರೇ, ಮಾನ್ಯ ಸಭಾಪತಿಯವರು ಅನುಮತಿ ಕೊಟ್ಟರೆ ಷೇರು ಹಗರಣ . . .

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಅವರು ಮಾತನಾಡಲಿ. ಅವರು ಮಾತನಾಡುವುದು ಮುಗಿಯಲಿ.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಧ್ಯದಲ್ಲಿ yield ಆಗಿಲ್ಲ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಮಾನ್ಯ ಡಿ.ಎಸ್.ಅರುಣ್‌ರವರು yield ಆಗಿಲ್ಲ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಸಣ್ಣ ಮಕ್ಕಳು ಜಗಳ ಆಡುತ್ತಾರೆ. ಅವರಿಗೇನಾದರೂ ನಾವು ಹೊಡೆದರೆ, ಏಕೆ ಹೊಡೆದೆ ಎಂದು ಕೇಳಿದರೆ ಅವತ್ತು ಹೊಡೆದಿದ್ದೆ ಅಲ್ಲವೇ, ಅದಕ್ಕೆ ನಾನು ಈಗ ಹೊಡೆಯುತ್ತಿದ್ದೇನೆ ಎಂದು ಹೇಳುತ್ತಾರೆ. ಅದನ್ನು ಹೇಳಿ. ಬೋವಿ ನಿಗಮದ್ದು ತೆಗೆಯಿರಿ. Electoral bonds ದ್ದು ತೆಗೆಯಿರಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಐವನ್ ಡಿ'ಸೋಜಾ ರವರೇ, ಒಂದು ನಿಮಿಷ. ಜೀಪ್ ಹಗರಣ ತೆಗೆಯಿರಿ. ಅರ್ಕಾವತಿ ಬಡಾವಣೆಯದ್ದು ತೆಗೆಯಿರಿ. Bofors ಹಗರಣ ತೆಗೆಯಿರಿ.

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರಿಗೆ ಹಗರಣದ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇಲ್ಲ ಎಂದು ಹೇಳುತ್ತೇನೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, 77 ವರ್ಷಕ್ಕೆ ನಾವು ದಿನ ಮಾತನಾಡುವುದಕ್ಕೆ ಶುರು ಮಾಡಿದರೆ ನಮ್ಮ ಜೀವನವೇ ಸಾಕಾಗುವುದಿಲ್ಲ. ನಿಮ್ಮ ಏನೇನು ವಕ್ಫ್ ಹಗರಣದ ಕುರಿತು ಇದೇ ಸದನದಲ್ಲಿ ಕೊಟ್ಟಿದ್ದರು. ಇನ್ನು ನೀವು accept ಮಾಡಿಲ್ಲ. ಅದನ್ನು ತನಿಖೆ ಮಾಡುವುದಕ್ಕೆ ಆಗಿಲ್ಲ. ನಾವು ಹೇಳುತ್ತಿರುವುದು. . .

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, 100 ಕೋಟಿ ಮೇಲೆ CBI enquiry ಆಗಬೇಕೆಂದು ಮಾನ್ಯ ಎಸ್.ವ್ಹಿ.ಸಂಕನೂರರವರು ಹೇಳುತ್ತಾರೆ. 6½ ಸಾವಿರ ಕೋಟಿ ರೂಪಾಯಿಗಳ electoral bond ಬಗ್ಗೆ ಅವರು ಹೇಳಬೇಕು?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಹೇಳುವಾಗ ಹೇಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, official ಅಲ್ಲ **(interruption)** electoral bonds…

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂತಹ ಹಗರಣಗಳನ್ನು ನಾನು ತುಂಬಾ ಹೇಳಲ್ಲ. ನಾವು ಮೊದಲು 187 ಕೋಟಿ ರೂಪಾಯಿಗಳ ಹಗರಣ ಎಂದು ಹೇಳಿದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಚೆನ್ನಾಗಿ ಹೇಳುತ್ತಾರೆ ಎಂದರೆ, ಅದು 187 ಕೋಟಿ ರೂಪಾಯಿಗಳ ಹಗರಣ ಅಲ್ಲ. ಬರೀ 84 ಕೋಟಿ ರೂಪಾಯಿಗಳ ಹಗರಣ ಎಂದು ಹೇಳುತ್ತಾರೆ. ಆ ರೀತಿಯೆಂದರೆ, ನಾವು ತಿಂದಿದ್ದೇವೆ. ಸ್ವಲ್ಪ ಮೂತಿಗೆ ಹಚ್ಚಿಕೊಂಡಿದ್ದೇವೆ. ಅದು ಹೊಟ್ಟೆಯೊಳಗೆ ಎಷ್ಟು ಹೋಗಿದೆ ಎಂಬುದು ಗೊತ್ತಿಲ್ಲ. ಹಾಗಾಗಿ 84 ಕೋಟಿ ರೂಪಾಯಿಗಳು ಮಾತ್ರ ನುಂಗಿರುವುದು. **(ಗೊಂದಲ)** ಈಗ ಲೆಕ್ಕಕ್ಕೆ 84 ಕೋಟಿ ರೂಪಾಯಿಗಳು.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದಕ್ಕೆಲ್ಲಾ ಉತ್ತರ ಕೊಡುತ್ತಾರೆ. ತಪ್ಪು ಮಾಹಿತಿ ಹೋಗುವುದು ಬೇಡ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಕೊಡುವಾಗ ಹೇಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಈಗ 14-15 ತಿಂಗಳಿನಲ್ಲಿ ನಾನು ಹೇಳಿದನಲ್ಲವೇ ಹಿಂದಿನ ಡೈರಿ . . .

**ಸಭಾಪತಿಯವರು:-** ಮಾನ್ಯ ಡಿ.ಎಸ್.ಅರುಣ್‌ರವರೇ, ನಿಮಗೆ ಇನ್ನು 3 ನಿಮಿಷ ಅವಕಾಶ ಮಾತ್ರ ಇದೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಇನ್ನು 5 ನಿಮಿಷ ಅವಕಾಶ ಕೊಡಿ. ಆ ಡೈರಿ ಬಗ್ಗೆ ಹೇಳಿದೆನಲ್ಲವೇ? ಆ ಡೈರಿ ಮತ್ತೆ ಕರ್ನಾಟಕದಲ್ಲಿ ಪ್ರಾರಂಭವಾಗಿದೆ. ಇದು ಪ್ರಾರಂಭವಾಗುವುದಕ್ಕೆ ಇಲಾಖೆಗಳನ್ನು ಹುಡುಕುತ್ತೇವೆ. ಯಾವ ಯಾವ ಇಲಾಖೆಗಳಲ್ಲಿ ಎಂದು ಇಲಾಖೆಗಳನ್ನು ಹುಡುಕಿದ್ದಾರೆ. ಯಾವ ಇಲಾಖೆಯಲ್ಲಿಯೂ ದುಡ್ಡಿಲ್ಲ. ಗ್ಯಾರಂಟಿಗಳಿಗೆ 65 ಸಾವಿರ ಕೋಟಿ ರೂಪಾಯಿಗಳು ಬೇಕು. ಎಲ್ಲೆಲ್ಲಿ ಎಂದು ಹುಡುಕುವುದು. ಇದನ್ನು ಎಲ್ಲಾದರೂ ಹುಡುಕಿ ಈಗ ತೆಗೆಯಬೇಕು. ಅದು ಮುಗಿಯಿತು. ಹಾಗೂ ಹೀಗೂ ಯಾವ ಅಭಿವೃದ್ಧಿ ಆಗುತ್ತಿಲ್ಲ. ಯಾರಿಗೆ ಕೊಡಬೇಕಾಗಿತ್ತೋ, ಅವರಿಗೆ ಸ್ಯಾಲರಿಗಳನ್ನು ಕೊಡುತ್ತಿಲ್ಲ. ಇಡೀ ರಾಜ್ಯ ಅಧೋಗತಿಗೆ ಹೋಗುತ್ತಿದೆ. ಈ ಸಂದರ್ಭದಲ್ಲಿ ಇನ್ನು ಎಲ್ಲಿ ಹುಡುಕುತ್ತಾರೆ. ಇವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಏಳಿಗೆಗಾಗಿ

ನಿಗಮದಲ್ಲಿ ಇಟ್ಟಂತಹ ದುಡ್ಡು ಇವರಿಗೆ ಬೇಕಿತ್ತಾ ಎನ್ನುವುದೇ ನಮ್ಮೆಲ್ಲರಿಗೂ ನೋವು. ಹಾಗಾಗಿ, ಇವರು ಈ ನಿಗಮದ ದುಡ್ಡನ್ನು... ನಾನು ಹೈದರಾಬಾದ್‌ಗೆ ಹೋಗಿದೆ, ತೆಲಂಗಾಣ ಚುನಾವಣೆಗೆ ಹೋಗಿದೆ ಎಂದು ನಾನು ಹೇಳುವುದಿಲ್ಲ. ಈಗಾಗಲೇ ಯಾರ್ಯಾರ ಮನೆಗಳನ್ನು seize ಮಾಡಿದ್ದಾರೆ. ಸದ್ಯಕ್ಕೆ ನಮಗೇನು ಖುಷಿಯೆಂದರೆ, ಒಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬಂದಿರುವುದು, ಅದರೊಳಗೆ 3 ಕೋಟಿ ರೂಪಾಯಿಗಳ ಹಗರಣ ಯಾವಾಗ ಆಯಿತೋ ಆಗಲೇ ಸಿಬಿಐ., ಗೆ ಬಂದಿರುವಂತಹದ್ದು. Financial misappropriation ಗೆ E.D. (Enforcement Directorate) ಬಂದಿರುವಂತಹದ್ದು. ಕ್ಯಾಷ್ ಇದೆ ಎಂದು ಗೊತ್ತಾಗುತ್ತಿದಂತೆಯೇ ಇ.ಡಿ., ಬಂದಿರುವಂತಹದ್ದು. ಇದೆಲ್ಲದನ್ನೂ ನೋಡಿದ ಮೇಲೆ ನಮಗೊಂದು ನ್ಯಾಯ ಸಿಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವರ್ಗಕ್ಕೆ ಖಂಡಿತವಾಗಿಯೂ ನ್ಯಾಯ ಸಿಗುತ್ತದೆ. ಇಡಿ., ಮತ್ತು ಸಿಬಿಐ., ದಯಮಾಡಿ . . . ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಆವತ್ತಿನ ದಿವಸ ಅವರ ಆತ್ಯಹತ್ಯೆ ಆಗುತ್ತದೆಯಲ್ಲವೇ? ನಮ್ಮ ಶಿವಮೊಗ್ಗ ನಗರದ ಮಾನ್ಯ ಶಾಸಕರು ಏನಾದರೂ ಹೋಗಿಲ್ಲ ಎಂದಿದ್ದರೆ ಆವತ್ತಿನ ದಿವಸ ಅವರ ಮೇಲೆ ಒತ್ತಡ ಇತ್ತು. ನಮಗೆ ಗೊತ್ತು. ಆವತ್ತಿನ ದಿವಸ ಮಾನ್ಯ ಶಾಸಕರು ಏನಾದರೂ ಅವರ ಮನೆಗೆ ಹೋಗಿಲ್ಲ ಎಂದಿದ್ದರೆ ಮನೆಯಲ್ಲಿ ಇದ್ದಂತಹ ಡೆತ್‌ನೋಟ್ ಕೂಡ ಸಿಗುತ್ತಿರಲಿಲ್ಲ. ಅದನ್ನು ಕೂಡ ಇವರು ಮುಗಿಸಿಬಿಟ್ಟಿರುವವರು. ಮನೆಯಲ್ಲಿ ಇದ್ದ ಲ್ಯಾಪ್‌ಟಾಪ್, digital signature, pen drive…

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ . . .

**ಸಭಾಪತಿಯವರು:-** ಮಾನ್ಯ ಸಚಿವರೇ, ನೀವು ಆಮೇಲೆ ಹೇಳಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಡಿ.ಎಸ್.ಅರುಣ್‌ರವರೇ, ನಿಮ್ಮ ದುಡ್ಡು ನೀವು ಕೇಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಾನು last sentence ಹೇಳಿ ನಿಲ್ಲಿಸುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರರೇ, ಕುಳಿತುಕೊಳ್ಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಮ್ಮ ಶಾಸಕರು ಆವತ್ತೇನಾದರೂ ಅವರ ಮನೆಗೆ ಹೋಗಿಲ್ಲ ಎಂದರೆ, ಡೆತ್‌ನೋಟ್ ಸಿಗುತ್ತಿರಲಿಲ್ಲ. ಮನೆಯಲ್ಲಿ ಇದ್ದಂತಹ pen drive, ಅವರು ಉಪಯೋಗಿಸುತ್ತಿದ್ದಂತಹ ಲ್ಯಾಪ್‌ಟಾಪ್‌ನಲ್ಲಿ ಏನೇನು ಇದೆ ಎಂದು ಗೊತ್ತಿಲ್ಲ. ಅದೆಲ್ಲಾದರನ್ನು ಸೀಜ್ ಮಾಡಿದರು.

ಅವರ ಹೆಂಡತಿಯ ಹತ್ತಿರ 4 ಬಾರಿ ಹೋಗಿ ಅವರಿಗೆ ಚುಚ್ಚಿ ಚುಚ್ಚಿ ಮಾತನಾಡುವುದು, ಬೇರೆ ಬೇರೆ ಅಧಿಕಾರಿಗಳನ್ನು ಅವರ ಹತ್ತಿರ ಕಳುಹಿಸುವುದು. ಅವರದ್ದು ನಿಜವಾಗಿಯೂ ಕಷ್ಟ ಹೇಗಿದೆ ಎಂದರೆ, ಶ್ರೀ ಚಂದ್ರಶೇಖರನ್ ಅವರಿಗೆ ಕೋವಿಡ್ ಸಮಯದಲ್ಲಿ ಕೋವಿಡ್ ಪಾಸಿಟಿವ್ ಆಗುತ್ತದೆ. ಶ್ರೀ ಚಂದ್ರಶೇಖರನ್ ರವರು ಆಸ್ಪತ್ರೆಗೆ ಸೇರುತ್ತಾರೆ. ಆಸ್ಪತ್ರೆಗೆ ಸೇರಿದಾಗ ಬಿಲ್ಲು ಎಷ್ಟಾಗುತ್ತದೆ ಎಂದರೆ, 8½ ಲಕ್ಷ ರೂಪಾಯಿಗಳು ಆಗುತ್ತದೆ. ಆ ತಾಯಿ ತನ್ನ ಪೂರ್ತಿ ಒಡವೆಯನ್ನು ಇಟ್ಟು ಸಾಲ ತೆಗೆದುಕೊಳ್ಳುತ್ತಾರೆ. ಇನ್ನು ಬಿಡಿಸಿಕೊಳ್ಳುವುದಕ್ಕೆ ಆಗಲಿಲ್ಲ. ಇವರು ಹೋಗಿ ಒಂದು ರೂಪಾಯಿ ಪರಿಹಾರ ಕೊಡಲಿಲ್ಲ. ಆ ಹೆಣ್ಣು ಮಗಳಿಗೆ ಈಗಾಗಲೇ ಕೆಲಸ ಇಲ್ಲ. ಗಂಡು ಮಕ್ಕಳಿಗೆ 14 ವರ್ಷ, 18 ವರ್ಷವಾಗಿದ್ದು, ಇನ್ನು ಓದುತ್ತಿದ್ದಾರೆ. ಅವರದ್ದು ಮುಂದಿನ ದಿನಗಳಲ್ಲಿ ಸ್ಥಿತಿ ಏನು ಎಂದು ಗೊತ್ತಿಲ್ಲ. ಅವರಿಗೆ ಒಂದು ರೂಪಾಯಿಯ ಪರಿಹಾರ ಕೊಡಲಿಲ್ಲ. ಹಾಗಾಗಿ ಇದರೊಳಗೆ ನೇರ ಆರೋಪ, ಈ ದುಡ್ಡನ್ನು ನಿಗಮಗಳಿಂದ ಹೊಡೆಯುವಂತಹ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರಾದ ಸಿದ್ದರಾಮಯ್ಯನವರು ಮಾಡುತ್ತಿದ್ದಾರೆ. ಅದಕ್ಕೆಲ್ಲಾ ಪೂರಕವಾಗಿ ಈ ಸಚಿವ ಸಂಪುಟ . . .

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಡಿ.ಎಸ್.ಅರುಣ್‌ರವರೇ, ಲೂಟಿ ಮಾಡಿರುವಂತಹವರು ನೀವು ಮಾತನಾಡಬೇಕೇ? ಇಡೀ ದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿ ನೀವು ಹೇಳುತ್ತೀರಾ? ಅದಕ್ಕೆ ಸಂಬಂಧ ಇರಲಾರದೇ ನೀವು ಮಾತನಾಡಬೇಡಿ. ಇವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದಾರೆ. ಇವರು ಏನು ಮಾತನಾಡುತ್ತಿದ್ದಾರೆ. ಇದನ್ನು ರೆಕಾರ್ಡ್‌ನಿಂದ ತೆಗೆಯಿಸಿ. ನಿಮಗೆ ಈ ರೀತಿ ಮಾತನಾಡುವುದಕ್ಕೆ ನಾಚಿಕೆಯಾಗುವುದಿಲ್ಲವೇ? **(ಗೊಂದಲ)** ಲೂಟಿ ಮಾಡಿದವರು ನೀವು. ಇವರು ಏನು ಮಾತನಾಡುತ್ತಾರೋ, ಅದಕ್ಕೆ ಸಂಬಂಧ ಇಲ್ಲ. ಇದನ್ನು ರೆಕಾರ್ಡ್‌ನಿಂದ ತೆಗೆಯಿಸಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್‌ರವರೇ, ಕುಳಿತುಕೊಳ್ಳುತ್ತೀರೋ, ಇಲ್ಲವೋ?

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇವರಿಗೆ ಮಾನ-ಮರ್ಯಾದೆ ಇದ್ದರೆ . . .

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ನಾನು ಹೇಳುತ್ತೇನೆ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವರು ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. **(ಗೊಂದಲ)** ನಿಮಗೆ ನಾಚಿಕೆಯಾಗುವುದಿಲ್ಲವೇ? ನಿಮಗೆ ಮಾತನಾಡುವುದಕ್ಕೆ ನೈತಿಕತೆ ಇಲ್ಲ. ಇಡೀ ದೇಶವನ್ನು ಲೂಟಿ ಮಾಡಿದ್ದೀರಿ. **(ಗೊಂದಲ)** ಆರೂವರೆ ಸಾವಿರ ಕೋಟಿ ರೂಪಾಯಿಗಳ ಪಬ್ಲಿಕ್ ಹಣವನ್ನು deceive ಮಾಡಿರುವುದು. ಇಡೀ ದೇಶವನ್ನು ಬಿಜೆಪಿಯವರು ಕೊಳ್ಳೆ ಹೊಡೆದಿದ್ದಾರೆ. ಆರೂವರೆ ಸಾವಿರ ಕೋಟಿ ರೂಪಾಯಿಗಳನ್ನು . . . ಇವರಿಗೆ ನಾಚಿಕೆ ಇಲ್ಲವೇ? ನೀವು ಮಾತನಾಡುತ್ತೀರಿ. ನಿಮಗೆ ಮಾತನಾಡುವುದಕ್ಕೆ ನೈತಿಕತೆ ಇಲ್ಲ. ಇಡೀ ದೇಶವನ್ನು ಲೂಟಿ ಮಾಡಿದರು. ಬಿಜೆಪಿ ಯವರು ಕೊಳ್ಳೆ ಹೊಡೆದರು. ಬೇರೆಯವರ ಬಗ್ಗೆ ಮಾತನಾಡಬೇಕಾದರೆ ನಾಚಿಕೆಯಾಗಬೇಕು. **(ಗೊಂದಲ)** ಸುಪ್ರೀಂ ಕೋರ್ಟ್ ಹೇಳುವುದಲ್ಲ. ಇಡೀ ದೇಶದ ಜನರು ಮಾತನಾಡುತ್ತಾರೆ. ನಿಮಗೆ ನಾಚಿಕೆಯಾಗುವುದಿಲ್ಲ. **(ಗೊಂದಲ)** ಇವರಿಗೆ ಮಾತನಾಡುವುದಕ್ಕೆ ನೈತಿಕತೆ ಇಲ್ಲ. ಇಡೀ ದೇಶವನ್ನು ಬಿಜೆಪಿಯವರು ಕೊಳ್ಳೆ ಹೊಡೆದರು. **(ಗೊಂದಲ)** ಅದನ್ನು ಕಡತದಿಂದ ತೆಗೆಯಿಸಿ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರಾದ ಸಿದ್ದರಾಮಯ್ಯನವರ ಹೆಸರನ್ನು ಕಡತದಿಂದ ತೆಗೆಯಿರಿ.

**(ಗೊಂದಲ)**

(ಮುಂದು)

(532) 18.7.2024 4.00 ಪಿಕೆ:ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಏಕೆ ಹೆಸರನ್ನು ತೆಗೆಯಬೇಕು?

**(ಗೊಂದಲ)**

**ಸಭಾಪತಿಯವರು:-** ಅದನ್ನು ಪ್ರಶ್ನೆ ಮಾಡುವ ಅಧಿಕಾರ ನಿಮಗಿಲ್ಲ. ಹಾಗೆ ನೀವು ಮಾತನಾಡಬಾರದು. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಮುಖವಾಗಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಪಟ್ಟಂತೆ ನಡೆಯುತ್ತಿರುವಂತಹ 3 ತನಿಖೆಗಳ ಬಗ್ಗೆ ಮಾತನಾಡಬಯಸುತ್ತೇನೆ. ರಾಜ್ಯ ಸರ್ಕಾರ ರಚಿಸಿರುವ Special

Investigation Team (SIT) ತನಿಖೆ, ಎರಡನೆಯದು, ಬ್ಯಾಂಕಿಂಗ್ ಫ್ರಾಡ್‌ಗೆ ಸಂಬಂಧಪಟ್ಟಂತೆ ಸಿಬಿಐ ತನಿಖೆ ಮತ್ತು the Prevention of Money Laundering Act, 2002 ರ ಅಡಿಯಲ್ಲಿ Enforcement Directorate (E.D.) ನಡೆಸುತ್ತಿರುವ ತನಿಖೆ. ರಾಜ್ಯ ಸರ್ಕಾರ ರಚನೆ ಮಾಡಿರುವಂತಹ SIT ಬಗ್ಗೆ ಮಾತನಾಡುತ್ತೇನೆ.

ಮಾನ್ಯ ಸಭಾಪತಿಗಳೆ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ರೂ. 94.73 ಕೋಟಿ ಹಣ ವರ್ಗಾವಣೆಯ ಹಗರಣ ಮತ್ತು ಅವ್ಯವಹಾರದ ಬಗ್ಗೆ ನಿಗಮದ ಶ್ರೀ ವಿ.ರಾಜಶೇಖರ್ ಎನ್ನುವವರು ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ದಿನಾಂಕ 28.5.2024ರಂದು ದೂರು ದಾಖಲು ಮಾಡಿದ್ದಾರೆ. ಇದರ ಪ್ರಮುಖವಾದ ಅಂಶಗಳು ಏನೆಂದರೆ, ದಿನಾಂಕ 19.2.2024ರಂದು ನಿಗಮ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವಸಂತ ನಗರ ಶಾಖೆಯಲ್ಲಿ ಒಂದು ಉಳಿತಾಯ ಖಾತೆ ಸಂಖ್ಯೆ: 520141001659653 ಯನ್ನು ತೆರೆಯುತ್ತದೆ. ನಂತರ, ಇದೇ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಂ.ಜಿ.ರೋಡ್‌ನಲ್ಲಿರುವಂತಹ ಶಾಖೆಯಲ್ಲಿ ಇದೇ ಸಂಖ್ಯೆಯ ಖಾತೆಗೆ ವರ್ಗಾವಣೆ ಆಗುತ್ತದೆ. ದಿನಾಂಕ 4.3.2024 ರಿಂದ 21.5.2024ರ ಮಧ್ಯದ ಅವಧಿಯಲ್ಲಿ ಸುಮಾರು 5-6 ಟ್ರ್ಯಾನ್ಸ್ಯಾಕ್ಷನ್ಸ್ ಆಗುತ್ತದೆ. ಅದರಲ್ಲಿ ರಾಜ್ಯ ಹುಜೂರ್ ಟ್ರೆಷರಿ ಖಜಾನೆ -2 ರಿಂದ ಸುಮಾರು ರೂ. 89 ಕೋಟಿಗಳು ಮತ್ತು ಇದೇ ನಿಗಮ ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ತೆರೆದಿದ್ದಂತಹ ಖಾತೆಗಳಿಂದ ಸುಮಾರು ರೂ. 90 ಕೋಟಿ ಹಣವನ್ನು ಎಂ.ಜಿ.ರಸ್ತೆಯಲ್ಲಿನ ಬ್ಯಾಂಕಿನ ಖಾತೆಗೆ ವರ್ಗಾವಣೆ ಆಗುತ್ತದೆ. ವರ್ಗಾವಣೆ ಆದರೂ ಕೂಡ ನಿಗಮದ ಅಧಿಕಾರಿಗಳು ಯಾರೂ ಕೂಡ ಪಾಸ್‌ಬುಕ್ ಆಗಲಿ, ಚೆಕ್ ಬುಕ್ ಆಗಲಿ ತೆಗೆದುಕೊಳ್ಳುವುದಿಲ್ಲ. ನಂತರ, ಯಾರೋ ಒಬ್ಬ ವ್ಯಕ್ತಿ, ಯಾರಿಗೂ ಪರಿಚಯವಿಲ್ಲದ ವ್ಯಕ್ತಿ ಶ್ರೀ ಶಿವಕುಮಾರ್, ಕಿರಿಯ ಲೆಕ್ಕಾಧಿಕಾರಿ ಎಂದು ಹೇಳಿಕೊಂಡು ಒಂದು ಪತ್ರ ಸೃಷ್ಟಿ ಮಾಡಿ RTGS form, cheque book ಮತ್ತು pass book ಗಳನ್ನು ಪಡೆದುಕೊಳ್ಳುತ್ತಾರೆ. ಇದಲ್ಲದೇ ದಿನಾಂಕ 30.3.2024ರಂದು ಒಂದು ನಿಗಮದ ಮಂಡಳಿ ಸಭೆಯಲ್ಲಿ ರೂ. 89 ಕೋಟಿಯಲ್ಲಿ ರೂ. 50 ಕೋಟಿಗಳನ್ನು Fixed Deposit ನಲ್ಲಿ ಅದೇ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಇಡುವುದು, ಅದರ ಆಧಾರದ ಮೇಲೆ ಸುಮಾರು ರೂ. 40.10 ಕೋಟಿ ಸಾಲ ಪಡೆಯಬೇಕು ಎನ್ನುವ ನಿರ್ಣಯವನ್ನು ಮಾಡಬೇಕು ಎಂದು ರೆಸಲ್ಯೂಷನ್ ಮಾಡುತ್ತಾರೆ ಮತ್ತು ಸಾಲ ಕೂಡ ಮಂಜೂರು ಆಗುತ್ತದೆ. ನಂತರ, ಈ ರೂ. 89 ಕೋಟಿ ಹಣವನ್ನು ಹಲವಾರು ಅಕೌಂಟ್‌ಗಳಿಗೆ, ಅದು ರಾಜ್ಯದಲ್ಲಿರುವ ಅಕೌಂಟ್‌ಗಳಿಗಿರಬಹುದು ಅಥವಾ ಹೈದರಾಬಾದ್‌ನಲ್ಲಿರುವ ಅಕೌಂಟ್‌ಗಳಿರಬಹುದು, ಅಲ್ಲಿಗೆ ಹಣ ವರ್ಗಾವಣೆ ಆಗುತ್ತದೆ. ಈ ಎಲ್ಲಾ ವಿಷಯಗಳನ್ನು ನಿಗಮದಲ್ಲಿ ಅಕೌಂಟ್ ಸೂಪರಿಂಟೆಂಡಂಟ್ ಆಗಿ ಕೆಲಸ ಮಾಡುತ್ತಿದ್ದ ಶ್ರೀ ಚಂದ್ರಶೇಖರ್ ಎನ್ನುವವರು ಒಂದು ಡೆತ್ ನೋಟನ್ನು ಬರೆದು 26ನೇ ದಿನಾಂಕದಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ಏನು ದಾಖಲಾಗಿದೆಯೋ ಅದರಿಂದ ತೆಗೆದುಕೊಂಡಿರುವ ಮಾಹಿತಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. ಕಂಪ್ಲೇಂಟ್ ಕಾಪಿ ಕೂಡ ನನ್ನ ಕೈಯಲ್ಲಿದೆ. ಆ ಕಂಪ್ಲೇಂಟ್

ಕಾಪಿಯಲ್ಲಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಕೆಳಕಂಡ ಅಧಿಕಾರಿಗಳು ಈ ಹಗರಣದಲ್ಲಿ ಭಾಗಿ ಆಗಿದ್ದಾರೆ ಎಂದು ಹೇಳಲಾಗಿದೆ. ಅದರಲ್ಲಿ "ಶ್ರೀಮತಿ ಎ. ಮಣಿಮೇಕಲೈ, ಎಂ.ಡಿ. ಮತ್ತು ಸಿ.ಇ.ಓ. ಯೂನಿಯನ್ ಬ್ಯಾಂಕ್, ಶ್ರೀ ನಿತೇಶ್ ರಂಜನ್, ಶ್ರೀ ರಾಮ ಸುಬ್ರಹ್ಮಣ್ಯಂ, ಶ್ರೀ ಸಂಜಯ್ ರುದ್ರ, ಶ್ರೀ ಪಂಕಜ್ ದ್ವಿವೇದಿ, ಶ್ರೀಮತಿ ಸುಚಿಸ್ಮಿತಾ ರೌಲ್, ಮುಖ್ಯ ವ್ಯವಸ್ಥಾಪಕರು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಜಿ. ರಸ್ತೆ. ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಅನ್ನು ಆಧಾರ ಮಾಡಿಕೊಂಡು ರಾಜ್ಯ ಸರ್ಕಾರ SIT ರಚನೆ ಮಾಡಿತು". ಈಗಾಗಲೇ CID, SIT ವಿಭಾಗದ ತಂಡ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಶ್ರೀ ಪದ್ಮನಾಭ್ ಮತ್ತು ಲೆಕ್ಕಾಧಿಕಾರಿಯಾದ ಶ್ರೀ ಪರಶುರಾಂ ದುಗ್ಗಣ್ಣವರ್ ಅವರನ್ನು ದಸ್ತಗಿರಿ ಮಾಡಿದೆ. ಅದೇರೀತಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಶ್ರೀ ನಾಗೇಂದ್ರ ಅವರಿಗೆ ಮತ್ತು ನಿಗಮದ ಅಧ್ಯಕ್ಷರಾಗಿದ್ದ ಶ್ರೀ ಬಸವನಗೌಡ ದದ್ದಲ್ ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ಈ ಮಧ್ಯೆ E.D., ಶ್ರೀ ನಾಗೇಂದ್ರ ಅವರನ್ನು ಅರೆಸ್ಟ್ ಮಾಡಿದೆ. ಶ್ರೀ ಬಸವನಗೌಡ ದದ್ದಲ್‌ರವರು ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾಗಿದ್ದಾರೆ. ಇದು ಪ್ರಸ್ತುತ ಎಸ್‌ಐಟಿಯ ತನಿಖೆ ಹಂತದಲ್ಲಿದೆ. ಮಾನ್ಯ ಸಭಾಪತಿಗಳೆ, ಇಲ್ಲಿ ಇನ್ನೊಂದು ಕೇಸ್ ದಾಖಲಾಗುತ್ತದೆ. ಅದು ಬೆಂಗಳೂರಿನಲ್ಲಿರುವ ಸಿಬಿಐ ಕಚೇರಿಯಲ್ಲಿ ಒಂದು ಪ್ರಕರಣ ದಾಖಲಾಗುತ್ತದೆ. ದಿನಾಂಕ 3.6.2024ರಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರಿನ ರೀಜನಲ್ ಮುಖ್ಯಸ್ಥರಾಗಿದ್ದಂತಹ ಶ್ರೀ ಜೆ.ಮಹೇಶ್ ಎನ್ನುವವರು, Banking Securities Fraud Branch, CBI, Bengaluru, ಇಲ್ಲಿನ ಮುಖ್ಯಸ್ಥರಿಗೆ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಜಿ.ರಸ್ತೆಯ ಶಾಖೆಯಲ್ಲಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಸಂಬಂಧಪಟ್ಟಂತೆ ಕಾನೂನು ಬಾಹಿರವಾಗಿ ರೂ. 84.63 ಕೋಟಿ ಹಣದ ವರ್ಗಾವಣೆ ಮತ್ತು ಹಣ ಹಿಂಪಡಿಕೆಯಲ್ಲಿ ಬ್ಯಾಂಕಿನ ಚೀಫ್ ಮ್ಯಾನೇಜರ್ ಆಗಿದ್ದ ಶ್ರೀಮತಿ ಸುಚಿಸ್ಮಿತಾ, ಉಪ ಮುಖ್ಯಸ್ಥೆ ಶ್ರೀಮತಿ ದೀಪಾ ಮತ್ತು Credit Officer ಆಗಿದ್ದಂತಹ ಶ್ರೀ ಕೃಷ್ಣಮೂರ್ತಿ ವಿ. ಇವರುಗಳ ವಿರುದ್ಧ ಲಂಚ ನಿರ್ಮೂಲನ ಕಾಯಿದೆ 2018ರ ಅಡಿಯಲ್ಲಿ ಕ್ರಮ ಜರುಗಿಸುವಂತೆ ದೂರು ಕೂಡ ದಾಖಲಾಗಿದೆ. ಎಫ್‌ಐಆರ್ ದಾಖಲಾಗಿದೆ; ಪ್ರಕರಣ ವಿಚಾರಣೆಯ ಹಂತದಲ್ಲಿದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಕೇಂದ್ರ ಸರ್ಕಾರದ ಆರ್ಥಿಕ ಇಲಾಖೆಯ E.D. ಯಿಂದ the Prevention of Money Laundering Act, 2002 ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಈ ಕಾಯಿದೆ ಏನು ಎಂದು ಕೂಲಂಕಷವಾಗಿ ನೋಡುವುದು ಉತ್ತಮ. ಏಕೆಂದರೆ, ಇದು ಸಾಕಷ್ಟು ರೀತಿಯಲ್ಲಿ ದೇಶದಲ್ಲಿ, ರಾಜ್ಯದಲ್ಲಿ ವ್ಯಾಪಕವಾಗಿ ಚರ್ಚೆ ಆಗುತ್ತಿದೆ. 2002ರಲ್ಲಿ ಮಾನ್ಯ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಜಾರಿಗೆ ತಂದಿತು. 2005ರಲ್ಲಿ ಯುಪಿಎ ಸರ್ಕಾರ ಇದನ್ನು ಅನುಷ್ಠಾನ ಮಾಡುವ ಸಲುವಾಗಿ ರೂಲ್ಸ್ ಮಾಡಿತ್ತು. ಅನುಷ್ಠಾನ ಮಾಡಬೇಕಾದರೆ ರೂಲ್ಸ್ ಮಾಡಬೇಕಾಗುತ್ತದೆ. ಈ ಕಾಯಿದೆ ನಮ್ಮ ದೇಶದಲ್ಲೇ ಅಲ್ಲ ಪ್ರಪಂಚದ ಎಲ್ಲಾ ದೇಶಗಳಲ್ಲೂ ಇದೆ.

(ಮುಂದು)

(533) 18-7-2024 4.10 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಇದಕ್ಕೆ ಕಾರಣವೇನೆಂದರೆ, illicit traffic in Narcotic Drugs and Psychotropic Substances ಅನ್ನು ನಿಗ್ರಹಿಸುವ ದೃಷ್ಟಿಯಿಂದ ಡ್ರಗ್ಸ್ ಹಣ ಏನಿದೆ, ಆ ಹಣವನ್ನು ದಾಂಧಲೆಯನ್ನು ತಪ್ಪಿಸುವುದಕ್ಕಾಗಿ United Nations ನವರು ವಿಶ್ವಸಂಸ್ಥೆಯಲ್ಲಿರುವಂತಹ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ money laundering ನಿಲ್ಲಿಸುವುದಕ್ಕೆ ಹಾಗೂ prevention ಮಾಡುವ ದೃಷ್ಟಿಯಲ್ಲಿ ಈ ಕಾಯ್ದೆಯನ್ನು ತೆಗೆದುಕೊಂಡು ಬಂಧಿರುವಂಥದ್ದು. ಇದರ main focus ಏನೆಂದರೆ, ಮಾರಕ ವಸ್ತುಗಳ ಸಾಗಾಣಿಕೆಯಿಂದ ಬರುವಂತಹ ಅಕ್ರಮ ಹಣವನ್ನು ತಡೆಗಟ್ಟುವುದು, ಅಕ್ರಮ ಹಣ ವರ್ಗಾವಣೆ ಪ್ರಕರಣಗಳನ್ನು ನಿಗ್ರಹ ಮಾಡುವಂಥದ್ದು, ಅಲ್ಲದೆ ಇದರಲ್ಲಿ ಯಾವುದೇ ರೀತಿಯ written complaint ಅವಶ್ಯಕತೆ ಇಲ್ಲ. ಬಾಯಿ ಮಾತಿನ ಮೇಲೆ oral evidence ಮೇಲೆ ಅಥವಾ ಯಾವುದೇ ವ್ಯಕ್ತಿಯನ್ನು money laundering ನಲ್ಲಿದ್ದಾನೆ ಎಂದು ಅರೆಸ್ಟ್ ಮಾಡಬಹುದು. ಹಾಗೆಯೇ, burden of proof ಸಹ ಯಾವ ವ್ಯಕ್ತಿಯ ಮೇಲೆ ಗುಮಾನಿ ಇದೆ, ಆ ವ್ಯಕ್ತಿ ನಿರಾಪರಾಧಿ ಅಥವಾ ನಿರ್ದೋಷಿ ಎಂದು ಸಾಬೀತು ಮಾಡಬೇಕಾಗುತ್ತದೆ. ಆದರೆ ಸುಲಭವಾಗಿ ಜಾಮೀನು ಸಿಗುವುದಿಲ್ಲ. ನಾವು ಈಗಾಗಲೇ ದೆಹಲಿಯಲ್ಲಿ ಶ್ರೀ ಅರವಿಂದ ಕೇಜ್ರಿವಾಲ್‌ರವರಿಗೆ ಏನಾಗಿದೆ ಎಂಬುದನ್ನು ನೋಡಿದ್ದೇವೆ, ಜಾರ್ಖಂಡ್ ರಾಜ್ಯದ ಮುಖ್ಯಮಂತ್ರಿ ಪ್ರಕರಣ, ತೆಲಂಗಾಣದ ಮುಖ್ಯಮಂತ್ರಿಯವರ ಮಗಳಾದ ಶ್ರೀಮತಿ ಕವಿತಾರವರ ಪ್ರಕರಣಗಳನ್ನು ನಾವು ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 306 ರಲ್ಲಿ, "ಸರ್ಕಾರಿ ಅಧಿಕಾರಿಗಳನ್ನು ಹೆಸರು ಹಿಡಿದು ಕರೆಯತಕ್ಕದ್ದಲ್ಲ; ಮತ್ತು ಪೀಠದ ಪೂರ್ವಾನುಮತಿಯ ಹೊರತು ಬರವಣಿಗೆಯಲ್ಲಿರುವ ಭಾಷಣವನ್ನು ಓದತಕ್ಕದ್ದಲ್ಲ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಕೂಡ ಅಧಿಕಾರಿಗಳಾಗಿದ್ದರು. ಜಾರ್ಖಂಡ್ ರಾಜ್ಯದ ಮುಖ್ಯಮಂತ್ರಿಯವರಿಗೆ ಹೈಕೋರ್ಟ್ ಇದರಲ್ಲಿ ಯಾವುದೇ ರೀತಿಯ ಸಾಕ್ಷಿ ಇಲ್ಲ, ಸುಮ್ಮನೆ ಅವರ ಮೇಲೆ ಕೇಸ್ ಹಾಕಿದ್ದೀರಿ ಎಂದು ಹೇಳಿದೆ. ಅದನ್ನು ಕ್ವೋಟ್ ಮಾಡುವುದು ತಪ್ಪು. ಏಕೆಂದರೆ, ಅವರು ನಿರಾಪರಾಧಿ ಎಂದು ಜಾರ್ಖಂಡ್ ಹೈಕೋರ್ಟ್ ಹೇಳಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇವಲ ಸಾಂದರ್ಭಿಕವಾಗಿ ಹೇಳಿದ್ದೇನೆಯೇ ಹೊರತು ಅದರ ಮೆರಿಟ್ ಬಗ್ಗೆ ನಾನು ಮಾತನಾಡಲಿಲ್ಲ.

**ಸಭಾಪತಿಯವರು:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ಆ ವ್ಯಕ್ತಿ ಬಂದು ಇಲ್ಲಿ defend ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಅವರ ಹೆಸರು ಹೇಳುವುದು ಸರಿಯಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದನ್ನು ಬೇಕಾದರೆ ವಾಪಸ್ ತೆಗೆಯಿರಿ, ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಸಂಪೂರ್ಣವಾಗಿ ಅವರ ಭಾಷಣ ಕೇಳುತ್ತಿದ್ದೇನೆ. ಅವರು ಅಧಿಕಾರಿಗಳ ಹೆಸರುಗಳನ್ನು ಹೇಳುತ್ತಲೇ ಇದ್ದಾರೆ. ಅವರು ಯಾರು ಸಹ ಇಲ್ಲಿಗೆ ಬಂದು defend ಮಾಡಿಕೊಳ್ಳುವುದಕ್ಕಾಗುವುದಿಲ್ಲ. ನಾನು ನಿಯಮಾವಳಿಯಲ್ಲಿರುವುದನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಯಾರು defend ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಅವರ ಹೆಸರನ್ನು ಹೇಳಬೇಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಎಲ್ಲರಿಗೂ ಅನ್ವಯವಾಗುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:–** ಎಲ್ಲರಿಗೂ ಅನ್ವಯವಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಎಲ್ಲರೂ ಅಧಿಕಾರಿಗಳ ಹೆಸರು ಹೇಳುವುದಿಲ್ಲ. ಅವರು ಯಾರು ಇಲ್ಲಿ ಬಂದು defend ಮಾಡಿಕೊಳ್ಳುವುದಕ್ಕಾಗುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ ಅನ್ವಯವಾಗಿದ್ದರೆ ನಾನು ವಾಪಸ್ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:–** ಹುದ್ದೆಯ ಹೆಸರು ಹೇಳಿ, ಅವರ ಹೆಸರನ್ನು ಹೇಳಬೇಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ Enforcement Directorate ಶ್ರೀ ಬಿ.ನಾಗೇಂದ್ರರವರನ್ನು ಅರೆಸ್ಟ್ ಮಾಡಿದೆ. ಇದಲ್ಲದೆ Enforcement Directorate ಸುಮಾರು ನಾಲ್ಕು ರಾಜ್ಯಗಳಲ್ಲಿ ತನಿಖೆ, ಶೋಧನೆ ನಡೆಸಿ ಸುಮಾರು 50 ಲಕ್ಷ ರೂಪಾಯಿಗಳನ್ನು ಜಪ್ತಿ ಮಾಡಿದೆ ಮತ್ತು ಹಲವರನ್ನು ದಸ್ತಗಿರಿ ಮಾಡಿದೆ. ಈ ಪ್ರಕರಣಗಳ ತನಿಖೆ ಏನಿದೆ ಅದು ತುಂಬಾ ಗೊಂದಲಮಯವಾಗಿದೆ. ಇದು ಹಲವಾರು ದಾರಿಗಳಲ್ಲಿ ಸಾಗುತ್ತಿದೆ. ಯಾವ್ಯಾವ ತನಿಖಾ ತಂಡ ಯಾವ ರೀತಿ ಹೋಗುತ್ತಿದೆ, ಏನಾಗುತ್ತಿದೆ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ. ಒಂದಕ್ಕೊಂದು overlap ಆಗುತ್ತಿದೆ. ಸಂಘರ್ಷವಿದೆ, conflict ಇದೆ. ಈಗ Enforcement Directorate ಮಾಡತಕ್ಕಂಥ ತನಿಖೆಗೂ, ಸಿಬಿಐ ತನಿಖೆ ಮಾಡತಕ್ಕಂಥದ್ದಕ್ಕೂ ಹಾಗೂ SIT (Special Investigation Team) ಮಾಡತಕ್ಕಂಥ ತನಿಖೆಗೂ conflict ಇದೆ. ಯಾವುದೇ ರೀತಿಯಲ್ಲಿ ಹೊಂದಾಣಿಕೆಯಾಗುತ್ತಿಲ್ಲ. ಹಣ ದುರುಪಯೋಗ ಕೇವಲ ನಮ್ಮ ರಾಜ್ಯದಲ್ಲಿ ಆಗಿಲ್ಲ, ಹಲವಾರು ರಾಜ್ಯಗಳಲ್ಲಿ ಆಗಿದೆ. ಇಲ್ಲಿರುವಂತಹ ಎಸ್.ಐ.ಟಿ.ಯು ಬೇರೆ ರಾಜ್ಯಗಳಿಗೆ ಹೋಗಿ ತನಿಖೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಿಬಿಐ ತನಿಖೆಯನ್ನು The Delhi Special Police Establishment Act ಪ್ರಕಾರವಾಗಿ ಮಾಡುತ್ತಾರೆ. ಅದು ಕೇವಲ ಕೇಂದ್ರಾಡಳಿತ ಪ್ರದೇಶಗಳು, ದೆಹಲಿ ಇದಕ್ಕೆ ಸಂಬಂಧಪಟ್ಟಿರುವಂತಹ ಅಧಿಕಾರಿಗಳಾಗಿರಲಿ ಅಥವಾ ಸಂಸ್ಥೆಗಳಿಗೆ ಒಳಪಟ್ಟಂತೆ ಕೇವಲ ತನಿಖೆ ನಡೆಸಬಹುದೇ ಹೊರತು, ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಯಾವುದೇ

ರೀತಿಯ ತನಿಖೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದಲ್ಲದೆ, ಈ ಪ್ರಕರಣದಲ್ಲಿ ಮೂರು ಚಾರ್ಜ್‌ಶೀಟ್ ಹಾಕಲಾಗಿದೆ. ಒಂದನೆಯದು, ಎಸ್.ಐ.ಟಿ.ಯವರು ಚಾರ್ಜ್‌ಶೀಟ್ ಹಾಕುತ್ತಾರೆ, ಎರಡನೆಯದು, ಸಿ.ಬಿ.ಐ.ನವರು ಚಾರ್ಜ್‌ಶೀಟ್ ಹಾಕುತ್ತಾರೆ, ಮೂರನೆಯದು, Enforcement Directorate ಚಾರ್ಜ್‌ಶೀಟ್ ಹಾಕುತ್ತಾರೆ. ಯಾವುದೇ ಆರೋಪಿತ ಮೂರು ತನಿಖಾ ತಂಡಗಳ ಮುಂದೆ ಹಾಜರಾಗಿ, ಯಾವ ರೀತಿಯಾಗಿ ಆತ ತನ್ನನ್ನು ತಾನು ನಿರ್ದೋಷಿ ಎಂದು ಸಾಬೀತುಪಡಿಸಿಕೊಳ್ಳಬಹುದು ಎಂಬುದು ಅರ್ಥವಾಗುತ್ತಿಲ್ಲ. ಒಂದು ವೇಳೆ ಯಾರಾದರೂ ಕೂಡ ಈ ರೀತಿಯ ತನಿಖೆಗಳಾವೆ, ಗೊಂದಲಮಯವಾಗಿದೆ, ಸರಿಯಾದ ರೀತಿಯಲ್ಲಿ ತನಿಖೆಯಾಗುತ್ತಿಲ್ಲ, ತನಿಖೆ ದಾರಿ ತಪ್ಪುತ್ತಿದೆ ಎಂದು ನ್ಯಾಯಾಲಯದಲ್ಲಿ ಏನಾದರೂ ದಾವೆ ಹೂಡಿದರೆ ನ್ಯಾಯಾಲಯ monitor ಮಾಡಿ ಈ ತನಿಖೆಯನ್ನು ಮಾಡುವಂತಹ ವ್ಯವಸ್ಥೆಯಾಗಬಹುದು. ಅವತ್ತು ಬಹುಶಃ ರಾಜ್ಯ ಸರ್ಕಾರ ತುಂಬಾ ಸಂಕಷ್ಟಕ್ಕೆ ಬರುವ ಸನ್ನಿವೇಶಗಳಾವೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈಗಲೇ ಎಚ್ಚೆತ್ತುಕೊಳ್ಳಬೇಕು. ಎಲ್ಲಾ ಪ್ರಕರಣಗಳನ್ನು ಹೊಂದಿಕೊಂಡಂತೆ ಇರುವ ದೃಷ್ಟಿಯಲ್ಲಿ ನ್ಯಾಯಾಲಯ ನಿರ್ದೇಶನ ಕೊಡುವುದಕ್ಕಿಂತ ಮುಂಚೆ ಇಡೀ ಪ್ರಕರಣವನ್ನು Central Bureau of Investigation ಗೆ ವಹಿಸಬೇಕು. ಏಕೆಂದರೆ, ಇ.ಡಿ ಮಾಡುವಂತಹ ತನಿಖೆ ಇರಬಹುದು ಅಥವಾ ಎಸ್.ಐ.ಟಿ. ಮಾಡುವಂತಹ ತನಿಖೆ ಇರಬಹುದು ಅಥವಾ ಬೇರೆ ಬೇರೆ ರೂಪದಲ್ಲಿರುವಂತಹ ಹಲವಾರು ಪ್ರಕರಣಗಳನ್ನು ತನಿಖೆ ಮಾಡುವಂಥದ್ದು ಆಗುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಒಂದು ನಿಮಿಷ yield ಆಗಲಿ. ಇವತ್ತು ಮಾನ್ಯ ತಿಪ್ಪೇಸ್ವಾಮಿಯವರು ಸಿ.ಬಿ.ಐ. ತನಿಖೆಗೆ ವಹಿಸಬೇಕೆಂದು ಹೇಳಿದ್ದಾರೆ, ಅದು ಒಳ್ಳೆಯದೇ, ನಾವು ಅದನ್ನು ಬೇಡ ಎಂದು ಹೇಳುವುದಿಲ್ಲ. ಆದರೆ ನಾನು ಐದು ವರ್ಷ ಈ ಸದನದಲ್ಲಿ ಶ್ರೀ ಗುರು ರಾಘವೇಂದ್ರ ಬ್ಯಾಂಕ್‌ನಲ್ಲಿ ೩,೦೦೦ ಕೋಟಿ ರೂಪಾಯಿ ಹಗರಣವಾಗಿದೆ, ಅವರು ೮೦ ಕೋಟಿ ಹಗರಣಕ್ಕೆ ಸಿ.ಬಿ.ಐ.,ಗೆ ವಹಿಸಿ ಎಂದು ಹೇಳುತ್ತಿದ್ದಾರೆ. ನಾನು ಇಲ್ಲಿ ಅತ್ತುಕೊಂಡೆ, ಕಾಲು ಹಿಡಿದುಕೊಂಡೆ, ಮಲಗಿಕೊಂಡೆ, ಅವರು ಯಾರು ಸಿ.ಬಿ.ಐ.,ಗೆ ಕೊಡಿ ಎಂದು ನನ್ನ ಸಹಾಯಕ್ಕೆ ಬರಲಿಲ್ಲ. ಇವತ್ತು ಸಿ.ಬಿ.ಐ.,ಗೆ ಕೊಡಿ ಎಂದು ಹೇಳುತ್ತಾರಲ್ಲಾ, ಅವತ್ತು ಯಾರಿಗೂ ಕನಿಕರ ಬರಲಿಲ್ಲ. ತಾವು ಇದಕ್ಕೆ ಸಾಕ್ಷಿ ಇದ್ದೀರಿ. ಶ್ರೀ ಗುರು ರಾಘವೇಂದ್ರ ಬ್ಯಾಂಕ್ ಹಗರಣವನ್ನು ಸದನದಲ್ಲಿ ಸಿ.ಬಿ.ಐ. ತನಿಖೆಗೆ ಕೊಡುತ್ತೇನೆಂದು ಹೇಳಿದರು. ಆದರೆ, ಆ ಸರ್ಕಾರ ಸಿ.ಬಿ.ಐ. ತನಿಖೆಗೆ ಕೊಡಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಸಿದ್ದರಾಮಯ್ಯನವರ ಹತ್ತಿರ ಹೇಳಿದೆ, ಇದು ಆಗಬೇಕು ಸರ್ ಎಂದು ಹೇಳಿದೆ. ಬಡ ಬ್ರಾಹ್ಮಣರು ಭಿಕ್ಷೆ ಬೇಡುತ್ತಿದ್ದಾರೆ ಎಂದು ಹೇಳಿದೆ. ಮಾನ್ಯ ಸಿದ್ದರಾಮಯ್ಯನವರು ಸಿ.ಬಿ.ಐ.,ಗೆ ಕೊಟ್ಟರು. ಈಗ ಅವರು ಸಿ.ಬಿ.ಐ. ತನಿಖೆಗೆ ಕೊಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರ ನೋವು ನನಗೆ ಅರ್ಥವಾಗುತ್ತಿದೆ. ನಾವು ಅವರಿಗೆ ಬೆಂಬಲ ಕೊಟ್ಟು ಕೈಜೋಡಿಸಿದ್ದೇವೆ. ನಾವೇನು ಸಿ.ಬಿ.ಐ.,ಗೆ ವಹಿಸುವುದು ಬೇಡ ಎಂದು ಹೇಳಲಿಲ್ಲ ಅಥವಾ ಅಡ್ಡ ಬರಲಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇವತ್ತು ಅವರ ಜೊತೆಯಲ್ಲಿ ಯಾರಿದ್ದಾರೆ ಅವರು ಸಿ.ಬಿ.ಐ., ತನಿಖೆಗೆ ಕೊಡಲೇ ಇಲ್ಲ. ಸುಳ್ಳು ಹೇಳಿದರು. ೩,೦೦೦ ಕೋಟಿ ರೂಪಾಯಿ ಹಗರಣವಾಗಿದೆ, ಅವರು ೮೦ ಕೋಟಿ ರೂಪಾಯಿಗಳಿಗೆ ಅಜಗಜಾಂತರ ಹೇಳುತ್ತಿದ್ದಾರೆ. ಮಾನ್ಯ ಭೋಜೇಗೌಡರವರು ಪದ್ಯ ಹೇಳಿದ್ದೂ ಹೇಳಿದ್ದೇ? ೩,೦೦೦ ಕೋಟಿ ರೂಪಾಯಿ ಹಗರಣವಾಗಿದೆ. ಸ್ವಲ್ಪ ನಮ್ಮ ಕಡೆಯೂ ಗಮನಹರಿಸಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರಿಗೆ ಮಾತನಾಡುವುದಕ್ಕೆ ಬಿಡಿ. ಯಾರು ಅವರಿಗೆ disturb ಮಾಡಬೇಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಿರುವುದು ಬಿಟ್ಟು ಬೇರೆ ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಮಾತನಾಡಿದ್ದನ್ನು ಹೊರತುಪಡಿಸಿ ಬೇರೆ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನು ಮೃತರ ಕುಟುಂಬಕ್ಕೆ ನ್ಯಾಯ ದೊರಕಬೇಕು. ಆ ಕುಟುಂಬಕ್ಕೆ ಅನ್ಯಾಯವಾಗಿದೆ, ಹಿಂಸೆ ಮಾಡಬಾರದು. ಆ ಕುಟುಂಬಕ್ಕೆ ಸರ್ಕಾರ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡಬೇಕು. ಯಾರಿಗೆ ಉದ್ಯೋಗ ಕೊಡುವ ಅರ್ಹತೆ ಇದೆ, ಅವರಿಗೆ ಉದ್ಯೋಗ ಕೊಡಬೇಕು ಮತ್ತು ಅವರಿಗೆ ಪುನರ್ವಸತಿ ದೊರಕಿಸಿ ಕೊಡಬೇಕೆಂದು ನಾನು ತಮ್ಮ ಮೂಲಕ ಕೋರುತ್ತಿದ್ದೇನೆ.

(ಮುಂದು)

(534) 18/07/2024 4:20/ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಸದನದ ಸಾಕಷ್ಟು ಸದಸ್ಯರು ಈ ಅವ್ಯವಹಾರದ ಬಗ್ಗೆ ಮಾತನಾಡಿದ್ದಾರೆ. ಸಂವಿಧಾನವನ್ನು ಅರ್ಥಮಾಡಿಕೊಳ್ಳಬೇಕಾದರೆ, ಡಾ॥ಬಿ.ಆರ್.ಅಂಬೇಡ್ಕರ್‌ರವರನ್ನು ಅರ್ಥಮಾಡಿಕೊಳ್ಳಬೇಕಂತೆ. ಸಂವಿಧಾನ ಮತ್ತು ಡಾ॥ಬಿ.ಆರ್.ಅಂಬೇಡ್ಕರ್ ಒಂದೇ ನಾಣ್ಯದ ಎರಡು ಮುಖ ಎಂದು ಹೇಳುತ್ತಾರೆ. ಇವತ್ತಿನ ದಿವಸ ಶ್ರೀ ಎಸ್.ಎಲ್.ಭೋಜೇಗೌಡ ರವರು ಮಾತನಾಡುವ ಸಂದರ್ಭದಲ್ಲಿ ಭಗವದ್ಗೀತೆ ಆದಿಯಾಗಿ ಅನೇಕ ವಿಷಯಗಳ ಬಗ್ಗೆ

ಉಲ್ಲೇಖಿಸಿದರು. ಸಂವಿಧಾನ ಎನ್ನುವುದು ಒಂದು ಗ್ರಂಥವಲ್ಲ; ಅದು ನಮ್ಮ ಬದುಕಿನಲ್ಲಿ ಬಂದಂತಹ ಸಮಸ್ಯೆಗಳನ್ನು ಹೋಗಲಾಡಿಸುವ ಒಂದು ಸಾಧನವಾಗಿದೆ. ನಮ್ಮ ದೇಶ ನಡೆಯುವುದೇ ಸಂವಿಧಾನದ ಆಧಾರದ ಮೇಲೆ. ನಾನು ಈ ಮಾತನ್ನು ಇವತ್ತಿನ ದಿವಸ ಏಕೆ ಹೇಳುತ್ತಿದ್ದೇನೆಂದರೆ, ನಾನು ಏನು ವಿಷಯಗಳನ್ನು ಪ್ರಸ್ತಾಪಿಸಬೇಕೆಂದುಕೊಂಡಿದ್ದೆನೆಯೋ, ಅವುಗಳನ್ನೆಲ್ಲಾ ಅನೇಕರು ಈಗಾಗಲೇ ಪ್ರಸ್ತಾಪಿಸಿದರು. ನಾನು ಪುನಃ ಅದೇ ವಿಷಯಗಳನ್ನು ಪ್ರಸ್ತಾಪಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಇವತ್ತಿನ ದಿವಸ ಅವ್ಯವಹಾರವಾದ ಹಣ ಯಾವ ಸಮುದಾಯಕ್ಕೆ ಸೇರಬೇಕಾಗಿತ್ತು? ಈ ಹಿಂದೆ ಒಂದು ಕಾಲವಿತ್ತು; ಅದೇನೆಂದರೆ, ಸಮಾಜದಲ್ಲಿರುವ ಒಂದು ವರ್ಗ ಇನ್ನೊಂದು ವರ್ಗದ ಮೇಲೆ ಶೋಷಣೆ, ಅನ್ಯಾಯಗಳನ್ನು ಮಾಡಿದ್ದರೆ? ಇವತ್ತಿನ ದಿವಸ ನಾವುಗಳೆಲ್ಲರೂ ಸಾಕ್ಷಿಗಳಾಗಿದ್ದೇವೆ. ಕೆಲವರು ಶೋಷಣೆ ಆದಾಗ ಇದ್ದವರು ಇರಬಹುದು, ಅಥವಾ ಕೆಲವರು ಶೋಷಣೆಯನ್ನು ಅನುಭವಿಸಿದವರ ಪರವಾಗಿ ಇದ್ದವರು ಇರಬಹುದು. ಆಗ ನಾವೆಲ್ಲಾ ಸಣ್ಣವರಿದ್ದೆವು. ಆ ಒಂದು ಜನಾಂಗ ಈ ಹಿಂದೆ ಬಹಳ ಕಷ್ಟದಲ್ಲಿತ್ತು. ಅಸ್ಪೃಶ್ಯತೆ ನಿವಾರಣೆಯಾಗಬೇಕೆಂದು ನಾವೆಲ್ಲರೂ ಹೇಳುತ್ತೇವೆ. ಈ ಹಿಂದೆ ಆ ಜನಾಂಗದವರನ್ನು ದೇವಸ್ಥಾನದೊಳಗೆ ಬಿಡುತ್ತಿರಲಿಲ್ಲ. ದಲಿತರನ್ನು ನೋಡಿದಾಗ, ಇವತ್ತಿಗೂ ಸಹ ನಮಗೆ ಮೈ ಝುಂ ಎಂದೆನಿಸುತ್ತದೆ. ದಲಿತ ಸಮಾಜ ....

**ಸಭಾಪತಿಯವರು:-** ಶ್ರೀಮತಿ ಭಾರತಿ ಶೆಟ್ಟಿಯವರೇ, ದಲಿತರು ಎನ್ನುವ ಬದಲಾಗಿ ಪರಿಶಿಷ್ಟ ಜಾತಿ ಎಂದು ಹೇಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಕ್ಷಮಿಸಿ. ಮದುವೆ ಇತ್ಯಾದಿ ಸಮಾರಂಭಗಳಲ್ಲಿ ನಾವು ಊಟ ಮಾಡಿದ ಎಲೆಗಳನ್ನು ಹೊರಗೆ ಬಿಸಾಡುತ್ತಿದ್ದರು. ಆಗ ಪರಿಶಿಷ್ಟ ಪಂಗಡದ ಜನರು ಪಾತ್ರೆಗಳನ್ನು ಹಿಡಿದುಕೊಂಡು ಬರುತ್ತಿದ್ದರು. ಅದನ್ನು ನೋಡಿದಾಗ ಕಣ್ಣೀರು ಬರುತ್ತಿತ್ತು. ಊಟ ಮಾಡಿದ ನಂತರ ಉಳಿದ ಅನ್ನ, ಸಾರು ಇತ್ಯಾದಿ ಪದಾರ್ಥಗಳನ್ನು ಒಂದೊಂದು ಪಾತ್ರೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಇದನ್ನೆಲ್ಲಾ ನೋಡಿದಾಗ, ಇವತ್ತಿನ ದಿವಸ ನನಗೆ ನನ್ನ ಬಗ್ಗೆಯೇ ಅಸಹ್ಯವೆಂದೆನಿಸುತ್ತದೆ. ಅಂತಹ ದೃಶ್ಯಗಳನ್ನು ನಾನು ನೋಡಿದ್ದೇನೆ. ಆ ಪಂಗಡದವರು ಪಟ್ಟ ಕಷ್ಟವನ್ನು ನಾನು ನೋಡಿದ್ದೇನೆ. ಆಗಿನ ಕಾಲದಲ್ಲಿ ಚಿಪ್ಪಿನಲ್ಲಿ ಆಹಾರ ಪದಾರ್ಥಗಳನ್ನು ಕೊಡುತ್ತಿದ್ದೆವು; ಅವರುಗಳು ಮನೆಯ ಒಳಗಡೆ ಬರುವುದಕ್ಕೆ ಅವಕಾಶವಿರಲಿಲ್ಲ; ಮನೆಯ ಹೊರಗಡೆಯೇ ನಿಲ್ಲಬೇಕಾಗಿತ್ತು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಡೆಸ್ನಾನ ಎನ್ನುವ ಪದ್ಧತಿಯೂ ಸಹ ಇತ್ತು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ಬಿ.ಪಾಟೀಲ್‌ರವರು ಯಾವಾಗಲೂ ದಾರಿ ತಪ್ಪಿಸುತ್ತಾರೆ. ಈ ವಿಚಾರದ ಬಗ್ಗೆ ನಾನು ಮತ್ತೆ ಮಾತನಾಡುತ್ತೇನೆ; ಏಕೆಂದರೆ ಬಹಳಷ್ಟು ಮಾತನಾಡುವುದು ಇದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ಬಿ.ಪಾಟೀಲ್ ರವರು ಕೇವಲ ದಾರಿಯನ್ನು ತಪ್ಪಿಸುವುದಿಲ್ಲ; ಬದಲಾಗಿ ಅವರೇ ತಮ್ಮ ದಾರಿ ತಪ್ಪಿ, ನಮ್ಮ ದಾರಿಯನ್ನು ತಪ್ಪಿಸುತ್ತಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅವರು ದಾರಿಯನ್ನು ಹೇಳಿಕೊಡುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಪ್ರತಿಪಕ್ಷದ ಸ್ಥಾನದಲ್ಲಿದ್ದೇನೆ. ಹೀಗಾಗಿ ಇಲ್ಲಿ ಕುಳಿತುಕೊಂಡು ನನ್ನ ಜವಾಬ್ದಾರಿ ಏನೆಂದರೆ ಸಮಾಜಕ್ಕೆ ಆದ ಅನ್ಯಾಯದ ವಿರುದ್ಧವಾಗಿ ಹಾಗೂ ಸರ್ಕಾರ ತಪ್ಪು ಮಾಡಿದಾಗ ಅದರ ವಿರುದ್ಧ ನಾನು ಮಾತನಾಡಬೇಕಾದ್ದು ನನ್ನ ಜವಾಬ್ದಾರಿಯಾಗಿದೆ. ಸರ್ಕಾರವು ತಪ್ಪು ಮಾಡಿದೆಯೋ ಅಥವಾ ಇಲ್ಲವೋ ಎನ್ನುವುದನ್ನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಲಿ. ಸರ್ಕಾರವು ಯಾವ ಸ್ಥಾನದ ಬಗ್ಗೆ ಹೇಳುತ್ತದೆಯೋ; ಹೇಳಲಿ. ಇವತ್ತಿನ ದಿವಸ ನಾನು ಹೇಳುವುದೇನೆಂದರೆ, ಆ ಒಂದು ಸಮಾಜ, ಸಮುದಾಯಕ್ಕೆ ಆದ ಅನ್ಯಾಯವನ್ನು ಸರಿಪಡಿಸಬೇಕು. ಅವರುಗಳು ಹಂತ ಹಂತವಾಗಿ ಸಮಾಜದ ಮುಖ್ಯ ವಾಹಿನಿಗೆ ಬರುವ ಪ್ರಯತ್ನಗಳನ್ನು ಮಾಡಬೇಕು. ಇವತ್ತಿನ ದಿವಸ ಅಸ್ಪೃಶ್ಯತೆ ನಿವಾರಣೆಯಾಗಿರಬಹುದು. ಈ ಜನಾಂಗದ ಪರಿಸ್ಥಿತಿಯನ್ನು ಶ್ರೀ ಬಿ.ಕೆ.ಹರಿಪ್ರಸಾದ್ ರವರೂ ಸಹ ನೋಡಿರಬಹುದು. ಈ ಹಿಂದೆ ಅಸ್ತಿತ್ವದಲ್ಲಿದ್ದ ಮಲವನ್ನು ಹೊರುವ ವ್ಯವಸ್ಥೆಯನ್ನು ಕಂಡವರು ನಾವು. ಇಂತಹ ಸಮುದಾಯದ ಬಗ್ಗೆ ಅಂಬೇಡ್ಕರ್‌ರವರು..., ಅಂಬೇಡ್ಕರ್ ರವರು ಪ್ರಾಯಶಃ ತಮ್ಮ ಜೀವನದ ಸಂಗತಿಗಳನ್ನು ಸಂವಿಧಾನದ ಮುಖಾಂತರ ಉತ್ತರಿಸಿದ್ದಾರೆ. ಆ ಸಮುದಾಯಕ್ಕೆ ಮತ್ತು ಅಂತಹ ಬದುಕಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ವ್ಯವಸ್ಥೆಯನ್ನು ಅವರು ಮಾಡಿಕೊಟ್ಟಿದ್ದಾರೆ. ಇವತ್ತಿನ ದಿವಸ ಅಂತಹ ಸಮುದಾಯಕ್ಕೆ ಮೀಸಲಾಗಿ ಇಟ್ಟಿದ್ದ ಹಣವನ್ನು..., ಆ ಜನಾಂಗದ ಆರ್ಥಿಕ ಪರಿಸ್ಥಿತಿಯನ್ನು..., ಅವರು ಮತ್ತು ಹಣ ಎಲ್ಲೆಲ್ಲಿ ಹೋಗಿತ್ತು ಎನ್ನುವುದರ ಬಗ್ಗೆ ಹೇಳಿದರು. ಈ ಬಗ್ಗೆ ನಾನು ವಿವರಣೆಯನ್ನು ಹೇಳಿದರೆ, ಹೇಳಿದ್ದನ್ನೇ ಪುನರುಚ್ಚರಿಸಿದಂತಾಗುತ್ತದೆ. ಗಂಗಾ ಕಲ್ಯಾಣ ಯೋಜನೆಗಾಗಿ ಮೀಸಲಿಟ್ಟ ಹಣ ಟಕಾಟಕ್ ಆಗಿ ಬಾರ್‌ಗೆ ಹೋಗುತ್ತದೆ. ಮನೆ ಹಾಗೂ ಸಣ್ಣ ಸಣ್ಣ ವಾಹನಗಳ ಅಂದರೆ ತಳ್ಳುವ ಗಾಡಿ ಇತ್ಯಾದಿಗಳ ಖರೀದಿಗಾಗಿ ನೀಡಿದ ಅನುದಾನವು ಟಕಾಟಕ್ ಆಗಿ ದೊಡ್ಡ ದೊಡ್ಡ ಐಷಾರಾಮಿ ಕಾರುಗಳ ಖರೀದಿಗಾಗಿ ಹಾಗೂ ಬಂಗಾರದ ಅಂಗಡಿಗಳಲ್ಲಿ ವಿನಿಯೋಗಿಸುವ ಪರಿಸ್ಥಿತಿ ಆಗುತ್ತದೆ.

**ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಲ ಹೊರುವ ಜನಾಂಗದಲ್ಲಿ ಪರಿಶಿಷ್ಟ ಪಂಗಡವು ಸೇರುವುದಿಲ್ಲ. ಇದು ಬೇರೆ ಜನಾಂಗವಾಗಿದೆ. S.T.'s (Scheduled Tribes) are not considered as untouchables. The Hon'ble Member should not be confused by all those things. ವಾಸ್ತವವಾಗಿ ಪರಿಶಿಷ್ಟ ಜಾತಿ ಬೇರೆ ಪರಿಶಿಷ್ಟ ಪಂಗಡ ಬೇರೆಯದ್ದಾಗಿವೆ. ಒಟ್ಟಾರೆಯಾಗಿ ಪರಿಶಿಷ್ಟ ಪಂಗಡದ ಜನಾಂಗವೇ ಬೇರೆಯದ್ದಾಗಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಈ ಹಿಂದೆ ಚಿಪ್ಪುಗಳಲ್ಲಿ ಅವರಿಗೆ ಆಹಾರವನ್ನು ನೀಡಲಾಗುತ್ತಿತ್ತು. ಇವತ್ತಿನ ದಿವಸ ಈ ಜನಾಂಗಕ್ಕೆ ಮೀಸಲಿಟ್ಟ ಹಣ ಅಂದರೆ, ಅನೇಕ ಸ್ವಸಹಾಯದ ಗುಂಪುಗಳ ಹೆಣ್ಣುಮಕ್ಕಳಿಗೆ ನೀಡುವ ಹಣವಾಗಿತ್ತು. ಅದು ಸಹಾಯಧನಕ್ಕಾಗಿ ಮೀಸಲಿಟ್ಟ ಹಣವಾಗಿತ್ತು. 25,000 ರೂಪಾಯಿಗಳನ್ನು ಸಹಾಯಧನದ ರೂಪದಲ್ಲಿ ನೀಡಲಾಗುತ್ತಿದ್ದ ಹಣವಾಗಿದೆ. ತಳ್ಳುವ ಗಾಡಿಗಳನ್ನು ಖರೀದಿಸಲು

ನೀಡುವ ಹಣವಾಗಿತ್ತು. ಅವರ ಮನೆ, ರಸ್ತೆ ಇತ್ಯಾದಿ ಅವರಿಗೆ ಅವಕಶ್ಯಕವಾಗಿದ್ದ ಅನುಕೂಲಗಳನ್ನು ಕಲ್ಪಿಸಲು ನೀಡುವ ಹಣವಾಗಿತ್ತು. ಆದರೆ, ಈ ಹಣವು ಟಕಾಟಕ್ ಆಗಿ ಒಂದೇ ಬಾರಿಗೆ ಎತ್ತುಕೊಂಡು ಹೋಗಿದ್ದಾರೆ. ನನಗೆ ಬಹಳ ಬೇಸರವಾಗುವ ಸಂಗತಿ ಏನೆಂದರೆ, ಇವತ್ತಿನ ದಿವಸ ಮಾತನಾಡುವ ಸಂದರ್ಭದಲ್ಲಿ ಉಲ್ಲೇಖಿಸಿದಂತೆ, ಸದರಿ ಹಣವು recovery ಆಗಲಿಲ್ಲ. ಒಂದು ಕಡೆ ಹಣ ದರೋಡೆಯಾಗುತ್ತದೆ; ಮತ್ತೊಂದೆಡೆ ಅದೇ ಹಣ recovery ಆಗುತ್ತದೆ. ಇದು ಯಾವ ನ್ಯಾಯವೆಂದು ನಾನು ಕೇಳಬಯಸುತ್ತೇನೆ. ಅವ್ಯವಹಾರವಾಗಿದ್ದು 187 ಕೋಟಿ ರೂಪಾಯಿಗಳಷ್ಟು ಅಲ್ಲ; ಕೇವಲ 87 ಕೋಟಿ ರೂಪಾಯಿಗಳು ಮಾತ್ರವೇ ಎಂಬುದಾಗಿ ಹೇಳುತ್ತಾರೆ. ಅಂದರೆ, 187 ಕೋಟಿ ರೂಪಾಯಿಗಳನ್ನು ತಿನ್ನಬೇಕೆಂಬ ಸ್ಕೆಚ್ ಅನ್ನು ಹಾಕಲಾಗಿತ್ತು. ಆದರೆ, ಈ ಪೈಕಿ ಕೇವಲ 87 ಕೋಟಿ ರೂಪಾಯಿಗಳಷ್ಟು ಮಾತ್ರವೇ ತಿನ್ನುವುದಕ್ಕೆ ಸಾಧ್ಯವಾಯಿತು. ಈ ಎಲ್ಲಾ ಕಾರಣಕ್ಕಾಗಿ, ಇವತ್ತಿನ ದಿವಸ ಒಬ್ಬ ದಲಿತನ ಸಾವು ಆಗಿದೆ. ಈ ಬಗ್ಗೆ ಸದಸ್ಯರೊಬ್ಬರು ಉಲ್ಲೇಖಿಸಿದರು. ನಾನೂ ಸಹ ಮೃತರ ಮನೆಗೆ ಭೇಟಿ ನೀಡಿದ್ದೆನು. ಅಂದು ನಾವು ಶಾಸಕರುಗಳೆಲ್ಲರೂ ಅವರ ಮನೆಗೆ ಹೋಗದಿದ್ದರೆ, ಶೇಕಡಾ ನೂರಕ್ಕೆ ನೂರರಷ್ಟು, ಅವರು ಬರೆದಿಟ್ಟ 'Death Note' ಮಾಯವಾಗಿ ಹೋಗುತ್ತಿತ್ತು. ಅವತ್ತಿನ ದಿವಸ ಎಷ್ಟು ಜನ ಅವರ ಮನೆಗೆ ಬಂದರೋ, ಅವರುಗಳೆಲ್ಲರೂ...., ಮೃತರ ಹೆಂಡತಿ ನನ್ನ ಬಳಿ ಅವರ ಅಳಲನ್ನು ತೋಡಿಕೊಂಡು ಕಣ್ಣೀರು ಇಡುತ್ತಿದ್ದರು. ಆಗ ಅವರನ್ನು ಯಾವ ರೀತಿಯಾಗಿ ಸಮಾಧಾನ ಮಾಡಬೇಕೆಂದು ಹಾಗೂ ಅವರಿಗೆ ಏನು ಹೇಳಬೇಕೆಂದು ನನಗೆ ಗೊತ್ತಾಗಲಿಲ್ಲ. ಅಲ್ಲಿಗೆ ಬಂದ ಒಬ್ಬೊಬ್ಬ ಅಧಿಕಾರಿಗಳು ಮೃತರ ಪೆನ್‌ಡ್ರೈವ್ ಮತ್ತು ಲ್ಯಾಪ್‌ಟಾಪ್‌ಗಳು ಇಲಾಖೆಗೆ ಸಂಬಂಧಪಟ್ಟಿದ್ದಾಗಿದ್ದು, ಅವುಗಳನ್ನು ಕೊಡಿ ಎಂದು ಕೇಳಿ ಪಡೆದುಕೊಂಡು ಹೋಗಿದ್ದರು. ಹೀಗೆ ಅವರುಗಳು ಪಡೆದುಕೊಂಡ ವಸ್ತುಗಳಿಗೆ ಯಾವುದೇ ರೀತಿಯಾಗಿ ಬರವಣಿಗೆಯಲ್ಲಿ ಸ್ವೀಕೃತಿ ನೀಡಿರುವುದಿಲ್ಲ. ಈ ರೀತಿಯಾಗಿ ಅವರ ಬಳಿಯಿದ್ದ ಎಲ್ಲಾ ವಸ್ತುಗಳನ್ನು ಪಡೆದುಕೊಂಡು ಹೋಗಿದ್ದಾರೆ. ಅವರಿಗೆ ಏನು ಆಗಿದೆ ಎನ್ನುವುದನ್ನು ಯಾರೂ ಸಹ ಕೇಳಲಿಲ್ಲ. ಮೃತರ ಕುಟುಂಬಸ್ಥರು ಯಾವ ಸ್ಥಿತಿಯಲ್ಲಿದ್ದಾರೆ; ಅವರಿಗೆ ಸ್ವಾಂತನ ಕೊಡುವ ಕೆಲಸಗಳನ್ನು ಮಾಡಲಿಲ್ಲ. ಅವರ ಹುಳುಕು ಎಲ್ಲಿ ಹೊರಗೆ ಹೋಗುತ್ತದೆ ಅದಕ್ಕೆ ಸಂಬಂಧಪಟ್ಟಂತಿರುವುದನ್ನೆಲ್ಲಾ ಬಾಚಿ ಬಳೆದುಕೊಂಡು ಎತ್ತಿಕೊಂಡು ಓಡಿ ಹೋದರು. ಈ ವಿಚಾರದಲ್ಲಿ recovery ಆಗಬೇಕು ಎನ್ನುವ ನನ್ನ ಕಳಕಳಿಯ ಜೊತೆಗೆ ಆ ಹೆಣ್ಣುಮಗಳಿಗೆ ಸಹಾಯ ಮಾಡಬೇಕು. ಇವತ್ತಿನ ದಿವಸ ಆ ಹೆಣ್ಣುಮಗಳು ಕೇವಲ 8-10 ಸಾವಿರ ರೂಪಾಯಿಗಳಿಗೆ ದುಡಿಯುತ್ತಿದ್ದಾಳೆ. ಅವರ ಮನೆಯು ಮಹಡಿಯಲ್ಲಿದ್ದು, ಅದಕ್ಕೆ ಪುಟ್ಟ ಪುಟ್ಟ ಮೆಟ್ಟಿಲುಗಳಿವೆ. ಅವರು ಬಹಳ ಕಷ್ಟದಲ್ಲಿದ್ದಾರೆ. ಇವತ್ತಿನ ದಿವಸ ಅಲ್ಲಿ 187 ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿದೆ. ಅಲ್ಲಿನ ಹಣ ಟಕಾಟಕ್ ಆಗಿ ಹೋಗಿದೆ; ಆತನ ಮರಣವೇ ಇದಕ್ಕೆ ಕಾರಣವಾಗಿದೆ. ಒಂದು ವೇಳೆ, ಆ ವ್ಯಕ್ತಿಯು ಸಾಯದಿದ್ದರೆ, ಇವತ್ತಿನ ದಿವಸ ಆ ಹಣವೂ ಸಹ ಬರುತ್ತಿರಲಿಲ್ಲ; ಅದನ್ನು ಯಾರೋ ನುಂಗಿ, ನೀರು ಕುಡಿದು ಹೋಗುತ್ತಿದ್ದರು. ಲಪಟಾಯಿಸಿದ್ದ ಹಣ ಜೀರ್ಣವಾಗದಿದ್ದಾಗ, ಸ್ವಲ್ಪ ಮಟ್ಟಿನಲ್ಲಿ ವಾಂತಿ ಮಾಡಿದ್ದಾರೆ. ಈ ವಿಚಾರದಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ...ಇದರಲ್ಲಿನ ಇನ್ನೂ

ಆಶ್ಚರ್ಯಕರವಾದ ಸಂಗತಿ ಏನೆಂದರೆ, "ಅಂಗೈ ಹುಣ್ಣಿಗೆ ಕನ್ನಡಿ ಬೇಡ" ಎಂಬ ನಾಣ್ಣುಡಿಯಂತೆ ಆಡಳಿತ ಪಕ್ಷದವರು ಮಾತನಾಡುವ ಸಂದರ್ಭದಲ್ಲಿ, ಅದು ನಮ್ಮದಲ್ಲ ಎಂದು ಸಮರ್ಥನೆ ಮಾಡುವ ರೀತಿಯಲ್ಲಿ ಮಾತನಾಡುತ್ತಾರೆ. ನಾವು ಯಾವ ಕಾರಣಕ್ಕಾಗಿ ವಿಶೇಷ ತನಿಖಾ ದಳವನ್ನು ನಂಬಬೇಕು? ಮೃತರ ಡೆತ್ ನೋಟ್ ನೋಡಿದ ಕೂಡಲೇ ಇವರು ಯಾರನ್ನಾದರೂ ದಸ್ತಗಿರಿ ಮಾಡಿದರೆ? ವಿಶೇಷ ತನಿಖಾ ದಳಕ್ಕೆ ವಹಿಸಿದ ಅನೇಕ ಪ್ರಕರಣಗಳನ್ನು ನಾನು ನೋಡಿದ್ದೇನೆ. ಕೆಲವೊಂದು ಪ್ರಕರಣಗಳಲ್ಲಿ ತಮಗೆ ತನಿಖೆಗೆ ವಹಿಸಿದ ತಕ್ಷಣವೇ ತಪ್ಪಿತಸ್ಥರನ್ನು ದಸ್ತಗಿರಿ ಮಾಡಿದ್ದಾರೆ. ಆದರೆ, ಪ್ರಸ್ತುತ ಪ್ರಕರಣದಲ್ಲಿ ಯಾವಾಗ ಯಾರನ್ನು ದಸ್ತಗಿರಿ ಮಾಡಿದರು? ಸರ್ಕಾರದಿಂದಲೇ ಇಲ್ಲಿ ಗೋಲ್‌ಮಾಲ್ ಆಗಿದೆ ಎಂದರ್ಥವಲ್ಲವೇ? ದೂರು ಕೊಟ್ಟಿರುವ ವಿಷಯದ ಬಗ್ಗೆಯೂ ಸಹ ಪ್ರಸ್ತಾಪಿಸಲಾಯಿತು. ಸರ್ಕಾರ ಮುಜುಗರ ಪಡಬಾರದು ಎಂಬುದಾಗಿ ಹೇಳಿದರು. ಇದರರ್ಥವೇನೆಂದು ನಾನು ಕೇಳಬಯಸುತ್ತೇನೆ. ಇವರುಗಳು ಮತ್ತು ಮಂತ್ರಿಗಳು ಯಾರ ಕೈ ಕೆಳಗೆ ಇದ್ದಾರೆಂದು ನಾನು ಪ್ರಶ್ನಿಸಬಯಸುತ್ತೇನೆ. ರಾಜ್ಯದ ಹಣಕಾಸು ವ್ಯವಸ್ಥೆ ಯಾರ ಕೈ ಕೆಳಗಿದೆ? ಈ ಅವ್ಯವಹಾರಕ್ಕೆ ಕಾರಣಕರ್ತರು ಯಾರು? ಇದರ ಜವಾಬ್ದಾರಿ ಯಾರದ್ದು? ಎಲ್ಲದಕ್ಕೂ ರಾಜ್ಯದ ಮುಖ್ಯಮಂತ್ರಿಗಳು ತಾನೇ? ಇಷ್ಟು ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವಾಗಿದೆಯಲ್ಲ ಹೀಗಾಗಿ ಜವಾಬ್ದಾರಿ ಸ್ಥಾನದಲ್ಲಿರುವ ಮುಖ್ಯಮಂತ್ರಿಗಳು ರಾಜಿನಾಮೆಯನ್ನು ಕೊಡಬೇಕು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳಿಗೂ ಇದಕ್ಕೂ ಸಂಬಂಧವಿಲ್ಲ. ಇಲಾಖೆಯ ಮಂತ್ರಿಗಳ ಬಳಿ ಸದಸ್ಯರು ಮಾತನಾಡಬೇಕು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ನಾನೇನು ತಪ್ಪು ಹೇಳಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮುಖ್ಯಮಂತ್ರಿಗಳಿಗೂ, ಈ ಭಾಷಣಕ್ಕೂ ಏನು ಸಂಬಂಧ?

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್ ಮತ್ತು ಶ್ರೀ ಐವನ್ ಡಿ'ಸೋಜಾ ರವರೇ ಶ್ರೀಮತಿ ಭಾರತಿ ಶೆಟ್ಟಿಯವರು ಯೀಲ್ಡ್ ಆಗಿಲ್ಲ. ಹೀಗಾಗಿ ನೀವುಗಳು ಮಧ್ಯೆ ಮಾತನಾಡಬೇಡಿ. **(ಗೊಂದಲ)** ಶ್ರೀಮತಿ ಭಾರತಿ ಶೆಟ್ಟಿಯವರನ್ನು ಹೊರತು ಪಡಿಸಿ, ಬೇರೆಯವರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ನಿರ್ದೇಶನದಂತೆ ಈ ಹಂತದಲ್ಲಿ ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಿದ್ದನ್ನು ಹೊರತುಪಡಿಸಿ, ಇನ್ನುಳಿದ ಮಾನ್ಯ ಸದಸ್ಯರು ಮಾತನಾಡಿರುವುದನ್ನು ನಡವಳಿಕೆಗಳಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಶ್ರೀಮತಿ ಭಾರತಿ ಶೆಟ್ಟಿಯವರು ಯೀಲ್ಡ್ ಆಗಿಲ್ಲ ಹೀಗಾಗಿ ಇನ್ನುಳಿದವರು ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಒಂದು ಆಲೂಗಡ್ಡೆ ಮತ್ತು ಒಂದು ಈರುಳ್ಳಿಯನ್ನು ಇವರು ಹಿಡಿದುಕೊಂಡು ದೆಹಲಿಯನ್ನೇ ಅಲುಗಾಡಿಸಿದರು. ಹಾಗೆ ನೋಡಿದರೆ ಚುನಾವಣೆಯನ್ನು ಬೀಳಿಸಿದರು.

ಚುನಾವಣೆಯ ನಂತರ ನೋಡಿದರೆ, ಈರುಳ್ಳಿ ಮತ್ತು ಆಲೂಗಡ್ಡೆಯನ್ನು ಕಾಂಗ್ರೆಸ್ ಪಕ್ಷದ ನಾಯಕರೊಬ್ಬರು ದಾಸ್ತಾನು ಇಟ್ಟುಕೊಂಡು, ಮಾರುಕಟ್ಟೆಗೆ ಬಿಡದೇ, ಬೆಲೆ ಏರಿಕೆಗೆ ಕಾರಣರಾದರು. ಕಳೆದ ಬಾರಿ ಶೇಕಡಾ 40 ಎಂದು ಹೇಳಿ ಸ್ವಲ್ಪ ಪ್ರಮಾಣವನ್ನು ಇಟ್ಟುಕೊಂಡರು. ಆದರೆ, ಈಗ ಇದು ಶೇಕಡಾ ಅಲ್ಲ; ನಮ್ಮ ರಾಜ್ಯದ ಖಜಾನೆಗೆ ಪೂರ್ತಿಯಾಗಿ ಅಂದರೆ ಶೇಕಡಾ ನೂರರಷ್ಟು ಕನ್ನವನ್ನೇ ಹಾಕಿದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಈಶ್ವರಪ್ಪರವರ ಪ್ರಕರಣದಲ್ಲಿ...

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಈ ಅವ್ಯವಹಾರದ ಬಗ್ಗೆ ತನಿಖೆಯಾಗಲಿ. ಇದರಲ್ಲಿ ಯಾವುದೇ ರಾಜಕೀಯ ಪಕ್ಷವಾಗಿರಲಿ; ಅದು ಭಾರತೀಯ ಜನತಾ ಪಾರ್ಟಿ, ಕಾಂಗ್ರೆಸ್ ಅಥವಾ ಜನತಾದಳ ಆಗಿರಲಿ. ಯಾರು ತಪ್ಪು ಮಾಡಿದ್ದಾರೆ ತನಿಖೆಯಾಗಲಿ.

**(ಗೊಂದಲ)**

(ಮುಂದು)

(535) 18.07.2024 04.30 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು yield ಆಗಿಲ್ಲ. ಆದ್ದರಿಂದ ಬೇರೆ ಯಾರೇ ಸದಸ್ಯರು ಮಾತನಾಡಿದರೂ ಕಡತಕ್ಕೆ ಹೋಗಬಾರದು.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, 200 ಖಾತೆಗಳಿಗೆ ಹಣ ಹೋಗಿದೆ ಎಂದು ಹೇಳುತ್ತಾರೆ. ಒಂದೇ ಕುಟುಂಬದ ನಾಲ್ಕು ಜನರಿಗೆ ಹಣ ಹೋಗಿದೆ. ಆದ್ದರಿಂದ ಇದು ಸಣ್ಣ ದರೋಡೆಯಲ್ಲ. ಇದು ಬಹಳ ದೊಡ್ಡ ಹಗಲು ದರೋಡೆ. 100% ದರೋಡೆ. ದರೋಡೆ ಮಾಡಿದವರು ಯಾರು, ಜವಾಬ್ದಾರಿ ಯಾರು? ಈ ದರೋಡೆಗೆ ಕಾರಣಕರ್ತರು ಯಾರು? ಇದೆಲ್ಲಾ ತನಿಖೆ ಆಗುತ್ತದೆ ಎಂದು ಹೇಳುತ್ತಾರೆ. ಅಲ್ಲಿ ಕುಳಿತವರು ಯಾರು ಸಿಐಡಿಯನ್ನು ಕೇಳುವುದಿಲ್ಲ. ಕೇಂದ್ರದಲ್ಲಿ ಯಾವ ಸರ್ಕಾರ ಇದೆಯೋ ಅವರೆಲ್ಲಾ ಸಿ.ಐ.ಡಿ. ತನಿಖೆಯನ್ನೇ ಕೇಳುವುದು.

**ಶ್ರೀ ಯು.ಬಿ.ವೆಂಕಟೇಶ್:-** ಸಿ.ಐ.ಡಿ. ಅಲ್ಲ, ಸಿ.ಬಿ.ಐ.

**ಶ್ರೀಮತಿ ಭಾರತಿ ಶೆಟ್ಟಿ:-** ನೀವು ಕೊಡಬಹುದಿತ್ತಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ನಾವು ಏಕೆ ಕೊಡಬೇಕು? ನೀವು ಒಂದೂ ಕೊಡದೆ ಹೋದ ಮೇಲೆ ನಾವು ಏಕೆ ಕೊಡಬೇಕು?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ಹಣ ಯಾರ ಯಾರ ಜೇಬಿಗೆ ಹೋಗಿದೆಯೋ, ಯಾರ ಜೇಬಿಗೆ ಹೋಗಿಲ್ಲವೋ ಯಾರು ತಿಂದಿದ್ದಾರೆಯೋ ಯಾರು ತಿಂದಿಲ್ಲವೋ ಇದರ ಪೂರ್ಣ ಜವಾಬ್ದಾರಿ

ಹಣಕಾಸು ಸಚಿವರದ್ದು. ಈ ರಾಜ್ಯದಲ್ಲಿ 14 ಬಾರಿ ಬಜೆಟ್ ಅನ್ನು ಮಂಡನೆ ಮಾಡಿದಂತಹ ಮುಖ್ಯಮಂತ್ರಿಯವರದ್ದಾಗಿದ್ದು, ಅವರು ರಾಜೀನಾಮೆಯನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡುತ್ತೇನೆ. ಅದರಲ್ಲಿ ಅವರ ಭಾಗ ಇರದಿದ್ದರೆ ಅವರು ಪುನಃ ಬಂದು ಕುಳಿತುಕೊಳ್ಳಿ. ಆದರೆ ಇಂದು ರಾಜೀನಾಮೆ ಕೊಟ್ಟು ನಿಷ್ಪಕ್ಷಪಾತವಾದ ತನಿಖೆಯಾಗಿ ಇದರ ನೇರ ಹೊಣೆಯನ್ನು ಅವರು ಹೊರಬೇಕೆಂದು ನನ್ನ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

**ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ।**
**ಆರುಹ್ಯ ಕವಿತಾಶಾಖಂ ವಂದೇ ವಾಲ್ಮೀಕಿ ಕೋಕಿಲಂ॥**

ನನ್ನ ಸಮಾಜದ ಬಗ್ಗೆ ಸ್ವಲ್ಪ ಉಲ್ಲೇಖ ನೀಡಬಯಸುತ್ತೇನೆ. ಗುರುಭಕ್ತಿಗೆ ಬೆರಳು ಕೊಟ್ಟಂತಹ ಸಮಾಜ, ದೈವಭಕ್ತಿಗೆ ಕಣ್ಣು ಕೊಟ್ಟಂತಹ ಸಮಾಜ, ಇಂದು ಬೆಳಗ್ಗೆ ಮಾನ್ಯ ಭೋಜೇಗೌಡರು ಮಾತನಾಡುತ್ತಾ "ವಾಲ್ಮೀಕಿ **XXX** ಎನ್ನುವ ಮಾತನ್ನು ಹೇಳಿದರು. ಇದನ್ನು ಕಡತದಿಂದ ತೆಗೆದುಹಾಕಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಪಂಜಾಬ್ ಹೈಕೋರ್ಟ್‌ನ ನ್ಯಾಯಮೂರ್ತಿಗಳಾಗಿದ್ದ ನ್ಯಾಯಮೂರ್ತಿ ಶ್ರೀ ರಾಜೀವ್ ಭಲ್ಲ ಅವರ ಪೀಠವು ದಿನಾಂಕ 12.10.2009ರಂದು ನೀಡಿದ ತೀರ್ಪಿನಲ್ಲಿ ಮಹರ್ಷಿ ವಾಲ್ಮೀಕಿ ಕಳ್ಳನಾಗಿರಲಿಲ್ಲ, **XXX** ಎಂದು ಸ್ಪಷ್ಟವಾಗಿ ಹೇಳಿದೆ. ಪಟಿಯಾಲದಲ್ಲಿರುವ ಪಂಜಾಬ್ ವಿಶ್ವವಿದ್ಯಾಲಯದ ಮಹರ್ಷಿ ವಾಲ್ಮೀಕಿ ಪೀಠದ ನಿರ್ದೇಶಕಿಯಾಗಿರುವ ಡಾ:ಮಂಜುಳಾ ಸಹದೇವ್ ಅವರು ಸಹ ಇದರ ಬಗ್ಗೆ ಸಾಕಷ್ಟು ಆಧಾರಗಳನ್ನು ಸಹ ಒದಗಿಸಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀಮತಿ ಭಾರತಿ ಶೆಟ್ಟಿಯವರು ಪೀಠವನ್ನು ಅಲಂಕರಿಸಿದರು)**

ವೇದಗಳ ಕಾಲದಿಂದ ಹಿಡಿದು 9ನೇ ಶತಮಾನದವರೆಗೆ ಮಹರ್ಷಿ ವಾಲ್ಮೀಕಿ ಕಳ್ಳನಾಗಿದ್ದ, **XXX** ಎಂಬ ಉಲ್ಲೇಖ ಎಲ್ಲಿಯೂ ವ್ಯಕ್ತವಾಗಿಲ್ಲ. ಅದಕ್ಕಾಗಿ ಮಾನ್ಯ ಭೋಜೇಗೌಡರು ಮಾತನಾಡುತ್ತಾ ಹೇಳಿದಂತಹ **XXX** ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, **XXX** ಎನ್ನುವ ಪದವನ್ನು ಕಡತದಿಂದ ತೆಗೆದುಹಾಕಬೇಕು.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೆ, ಆ ಪ್ರತಿಯು ನನ್ನ ಬಳ ಇದೆ. ಗದ್ದಲದಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಆಗಲಿಲ್ಲ. ದಯವಿಟ್ಟು ಆ ಪದವನ್ನು ತೆಗೆಯಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಅದಕ್ಕೆ ಆಧಾರವೂ ಇದೆ.

**ವೈಸ್ ಛೇರ್ಮನ್:- XXX ಎನ್ನುವ ಪದವನ್ನು ಕಡತದಿಂದ ತೆಗೆದುಹಾಕಿ.**

---

**[XXX] ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ.**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬೆಳಗ್ಗೆಯಿಂದ ಸದನದಲ್ಲಿ ವಾಲ್ಮೀಕಿ ನಿಗಮದ ಅವ್ಯವಹಾರಗಳ ಬಗ್ಗೆ ಮಾತನಾಡಲಾಗುತ್ತಿದೆ. ಬಹಳಷ್ಟು ಮಾತುಗಳು ಕೇಳಬರುತ್ತಿವೆ. ಎಲ್ಲಾ ಸರ್ಕಾರಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಾದ ನಮ್ಮನ್ನು ಮಾನ್ಯತೆ ಮಾಡಿದೆ. ಎಲ್ಲಾ ಕಾಲದಲ್ಲಿಯೂ ನಮಗೆ ಅವಕಾಶಗಳನ್ನು ಕೊಟ್ಟಿದೆ. ಅದೇ ರೀತಿ ಬಡವರ ಅಭಿವೃದ್ಧಿಗಾಗಿ ಇಟ್ಟಂತಹ ಸಾವಿರಾರು ಕೋಟಿ ರೂಪಾಯಿಗಳ ಹಣವು ಈ ರೀತಿ ಪೋಲಾಗಿರುವುದಕ್ಕೆ ನನಗೆ ಬಹಳಷ್ಟು ಖೇದವೆನಿಸುತ್ತದೆ. ಏಕೆಂದರೆ ನಮ್ಮ ಜನಾಂಗ ಅತಿ ಮುಗ್ಧರು. ಈ ಜನಾಂಗದ ಬಗ್ಗೆ ಒಂದು ಉಲ್ಲೇಖ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಮಂಗಳೂರಿನ ದಿವಂಗತ ಕನಗಲ್ ರಂಗರಾವ್ ಅವರು ಈ ರೀತಿ ಹೇಳುತ್ತಾರೆ. "ನನ್ನ ಶಾಲೆಯಲ್ಲಿ ಕಲಿತ ಒಬ್ಬ ದಲಿತ" – ಇದು ಉಲ್ಲೇಖವಿದೆ. ದಯವಿಟ್ಟು ದಲಿತ ಎನ್ನುವ ಶಬ್ದ ಇಲ್ಲ. ಆದರೆ ಕನಗಲ್ ರಂಗರಾವ್ ಅವರು ಆ ವ್ಯಕ್ತಿಯ ಕುರಿತು ತಮ್ಮ ಕಳಕಳಿಯನ್ನು ವ್ಯಕ್ತ ಪಡಿಸುವಂಥದ್ದು ಇದೆ. "ನನ್ನ ಶಾಲೆಯಲ್ಲಿ ಕಲಿತ ಒಬ್ಬ ದಲಿತ ಜನಾಂಗದ ಹುಡುಗ ಸರ್ಕಾರಿ ನೌಕರಿಗೆ ಸೇರಿ ನಮ್ಮೂರ ರಸ್ತೆಯಲ್ಲಿ ಕಾರಿನಲ್ಲಿ ಓಡಾಡಬೇಕು. ಆಗ ಎದ್ದ ಧೂಳು ನನ್ನ ತಲೆಗೆ ತಾಗಬೇಕು. ನನ್ನ ಜನ್ಮ ಸಾರ್ಥಕ." ಇವರು ಬಹು ದೊಡ್ಡ ದಾರ್ಶನಿಕರು, ಸಮಾಜ ಸುಧಾರಕರು ಮತ್ತು ದಲಿತರ ಏಳಿಗೆಗೋಸ್ಕರ ಬಹಳಷ್ಟು ಕೆಲಸ ಮಾಡಿದಂತಹ ವ್ಯಕ್ತಿ ಇವರು. ಈ ಒಂದು ಮಾತು ಅವರ ಸಮಾಧಿ ಮೇಲಿದೆ. ಇವತ್ತಿಗೂ ಕಾಣಿಸುತ್ತದೆ.

ಮಾತೆತ್ತಿದರೆ ಅಭಿವೃದ್ಧಿ ನಿಗಮ, ಅಭಿವೃದ್ಧಿ ನಿಗಮ ಎಂದು ಹೇಳುತ್ತಾರೆ. ಕಳೆದ ಒಂದು ವರ್ಷದಿಂದ ಆ ಇಲಾಖೆಗೆ ಹೋದಾಗ ಎಷ್ಟು ಅಭಿವೃದ್ಧಿಯಾಗಿದೆ, ಕೊಟ್ಟಿರತಕ್ಕಂತಹ ಯೋಜನೆಗಳು ಯಾವುವು? ನನ್ನ ಸಮುದಾಯಕ್ಕೆ ಕೊಟ್ಟಿರುವ ಶೇರು ಎಷ್ಟು ಎಂಬುದನ್ನು ನಾನು ವಿಚಾರ ಮಾಡಿ ನನಗೆ ಬಹಳ ಬೇಜಾರೆನ್ನಿಸಿತು. ಏಕೆಂದರೆ ಪರಿಶಿಷ್ಟ ಪಂಗಡದ ಉಪಯೋಗಕ್ಕೆಂದು ಸಾಕಷ್ಟು ಯೋಜನೆಗಳಿವೆ. ನೇರಸಾಲ, ಐರಾವತ, ಸಮೃದ್ಧಿ ಎನ್ನುವಂಥದ್ದನ್ನು ಕೊಟ್ಟಿದ್ದಾರೆ. ಇಂತಹ ಯೋಜನೆಗಳು ಪರಿಶಿಷ್ಟ ವರ್ಗದ ಜನರಿಗೆ ಎಡತಾಕಿಲ್ಲ. ಅದು ನನಗೆ ಬಹಳ ದೊಡ್ಡ ದುಃಖವೆನಿಸುತ್ತದೆ. ಒಂದು ನೂರ ಎಂಭತ್ತೇಳು ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎಂದು ಕೇಳ್ಪಟ್ಟಿದ್ದೇವೆ. ಅದಕ್ಕಿಂತ ಮುಂಚೆ ಹನ್ನೊಂದು ಸಾವಿರದ ನೂರನಲವತ್ತನಾಲ್ಕು ಕೋಟಿ ರೂಪಾಯಿಗಳ ಅವ್ಯವಹಾರ ಕಳೆದ ವರ್ಷ SCP-TSP (Special Component Plan and Tribal Sub Plan) ಯಲ್ಲಿ ಆಗಿತ್ತು. ಈ ನಿಗಮದಿಂದಲೇ ಏಕಿಷ್ಟು ದುಡ್ಡು ಪೋಲಾಗುತ್ತಿದೆ? ಏಕಿಷ್ಟು ನಿಕೃಷ್ಟವಾಗಿ ಕಾಣಲಾಗುತ್ತಿದೆ? ಏಕೆ ಅಭಿವೃದ್ಧಿಯಾಗುತ್ತಿಲ್ಲ? ಭೂ ಒಡೆತನ ಯೋಜನೆಯಲ್ಲಿ ಭೂಮಿ ಕೊಟ್ಟರೆ ಆ ವ್ಯಕ್ತಿಗಳು ಬದುಕುತ್ತಾರೆ. ಈ ವಾಲ್ಮೀಕಿ ಸಮುದಾಯದಲ್ಲಿ ಬರುವ ಬಡವರು ಎಂತಹ ಪರಿಸ್ಥಿತಿಯಲ್ಲಿದ್ದಾರೆ? "ಆಕಾಶವೇ ಹೊದಿಕೆ, ನೆಲವೇ ಹಾಸಿಗೆ". ಈ ಸ್ಥಿತಿಯಲ್ಲಿರುವ ಕುಟುಂಬಗಳು ಇವತ್ತಿಗೂ ಸಿಗುತ್ತವೆ. ಏಕೆಂದರೆ ಆ ಯೋಜನೆಗಳಿಗೆ ಶಾಪಗ್ರಸ್ತರಾಗಿ ಬದುಕುತ್ತಿರುವವರು ಈ ವಾಲ್ಮೀಕಿ ಸಮುದಾಯ. ಇಲ್ಲಿಯವರೆಗೂ scholarship ಸರಿಯಾಗಿ ಸಿಕ್ಕಿಲ್ಲ. ಉನ್ನತ ಶಿಕ್ಷಣಕ್ಕೆ ಅವಕಾಶ ಸಿಕ್ಕಿಲ್ಲ. ಭೂ ಒಡೆತನ ಯೋಜನೆ ಸಿಕ್ಕಿಲ್ಲ. ನೇರ ಸಾಲ ಸಿಕ್ಕಿಲ್ಲ. ಯಾವ ಯೋಜನೆಗಳೂ ಇಲ್ಲ

ಎಂದ ಮೇಲೆ ಇದು ಏಕೆ ಬೇಕು? ಇಷ್ಟು ದುಡ್ಡನ್ನು ಅವರ ಹೆಸರಿನಲ್ಲಿಟ್ಟು ಏಕೆ ಪೋಲು ಮಾಡುತ್ತೀರಿ? ಏಕೆ ತಿಂದು ಹಾಕುತ್ತೀರಿ?

ನಾನು ಅದೇ ವಾಲ್ಮೀಕಿ ಸಮುದಾಯದಿಂದ ಬಂದಿರುವವಳು. ಯಾರಾದರೂ ಒಬ್ಬ ವ್ಯಕ್ತಿ ಚುನಾವಣೆಗೆ ನಿಂತರೆ ನನ್ನ ಅಣ್ಣ ನಿಂತಿದ್ದಾನೆ ಎಂದು ಹೊತ್ತು, ಮೆರೆಸಿ, ಗೆಲ್ಲಿಸಿ ಅವರ ಮನೆಯ ಬಾಗಿಲಿಗೆ ಇಳಿಸಿ ಬರುವಂತಹ ಜನಾಂಗ ನಮ್ಮದು. ಅವರಿಂದ ನಾವು ಏನು ನಿರೀಕ್ಷೆ ಮಾಡುತ್ತೇವೆ? ಉದ್ಯೋಗ, ಸಾಲ, ಮನೆ, ಬಡತನ ನಿವಾರಣೆ. ಇದಕ್ಕಾಗಿ ನನ್ನ ಸಮಾಜ ಕಷ್ಟ ಪಡುತ್ತಿದೆ. ಆದರೆ ಈ ಕೆಲಸ ಎಲ್ಲಿ ಆಗಿದೆ? ಮೇಲಿನಿಂದ ಕೆಳಗಿನವರೆಗೆ ಬಂದರೂ ಎಲ್ಲಿಯೂ ಒಂದು ಪೈಸೆ ಅಭಿವೃದ್ಧಿ ಕೆಲಸವಾಗಿಲ್ಲ ಎಂದು ಸಮೀಕ್ಷೆಗಳು ಹೇಳುತ್ತಿವೆ. ಏಕೆ ಆಗಿಲ್ಲ? ಒಂದು ಅರ್ಜಿ ತೆಗೆದುಕೊಂಡು ಹೋದರೆ ಆನ್‌ಲೈನ್‌ನಲ್ಲಿ ಬುಕ್ ಮಾಡಿ ಆಯಿತು ಎಂದು ಕಳಿಸುತ್ತಾರೆ. ಅವರು ಡಿ.ಸಿ. ಆಫೀಸಿಗೆ ಚಪ್ಪಲಿ ಹರಿಯುವವರೆಗೂ ತಿರುಗಾಡಬೇಕು. ಆ ವ್ಯಕ್ತಿಗೆ ಏನೂ ಅನುಕೂಲವಿಲ್ಲ. ಇಷ್ಟು ಕೋಟಿ ದುಡ್ಡಿದ್ದರೂ ಅದು ಬಿಸಿತುಪ್ಪವಾಗಿದೆ. ಉಗುಳುವಂತಿಲ್ಲ, ನುಂಗುವಂತಿಲ್ಲ. ಸರ್ಕಾರ ಬಳಸುತ್ತದೆಯೋ, ಇಲ್ಲವೋ? ಉದ್ಧಾರ ಆಗುತ್ತಾರೆಯೋ ಇಲ್ಲವೋ? ಈ ಪರಿಸ್ಥಿತಿಯಲ್ಲಿ ನಮ್ಮ ಜನಾಂಗ ಇರುವಾಗ ಇಷ್ಟು ಕೋಟಿ ದುಡ್ಡು ಅವ್ಯವಹಾರ ಮಾಡುವುದು ನಮ್ಮ ಜನಾಂಗದ ನಾಯಕರಿಗೆ ಏಕೆ ಬೇಕು? ನಾನು ಮುಖ್ಯಮಂತ್ರಿಗಳಿಗೆ ನೇರವಾಗಿ ಪ್ರಶ್ನೆ ಹಾಕುತ್ತೇನೆ.

(ಮುಂದು)

(536) 18-07-2024 (4.40) ಕೆಜಿ-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀಮತಿ ಹೇಮಲತಾ ನಾಯಕ್ (ಮುಂದು):-**

ಇವತ್ತು ನಮ್ಮ ಸಮುದಾಯದ ನಾಯಕರು ಬೆಂಗಳೂರಿಗೆ ಬಂದು Freedom Park ನಲ್ಲಿ ಪ್ರತಿಭಟನೆ ಮಾಡಿದರು. ಇದಕ್ಕೆ ಸರ್ಕಾರ ಏನು ಸ್ಪಷ್ಟನೆ ಕೊಡುತ್ತದೆ? ಸರ್ಕಾರ ಏಕೆ ನಮ್ಮ ಸಮುದಾಯವನ್ನು ಇಷ್ಟೊಂದು ಕಡೆಗಣಿಸುತ್ತಿದೆ? ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಹಕ್ಕು ಇದೆ. ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಸಿಗುವಂತಹ ಸೌಲಭ್ಯದ ಹಕ್ಕು ಇದೆ. ಆದರೆ, ಎಲ್ಲಿ ಕೊಟ್ಟಿದೆ? ಇವತ್ತು ಸಮುದಾಯದಲ್ಲಿರುವಂತಹ ವ್ಯಕ್ತಿಗಳಿಗೂ ಸಹ ಅಣ್ಣ, "ನಿನಗೆ ಮತ ಹಾಕಿದ್ದೇನೆ, ನನ್ನನ್ನು ಉದ್ಧಾರ ಮಾಡು ಅಣ್ಣ, ನಿನ್ನನ್ನು ಆರಿಸಿದ್ದೇವೆ, ನಮ್ಮನ್ನು ಉದ್ಧಾರ ಮಾಡು", ಎಂದು ನನ್ನ ಯುವಕರು, ನನ್ನ ಸಹೋದರರು, ನನ್ನ ಬಂಧು-ಬಳಗದವರು ಇವತ್ತು ಅವರ ಮನೆಯ ಬಾಗಿಲಿಗೆ ಹೋಗಿ ನಿಂತುಕೊಂಡು ಇಷ್ಟೊಂದು ಕೆಟ್ಟ ಪರಿಸ್ಥಿತಿಯಲ್ಲಿ ಕೇಳಿದರೂ ಸಹ, ಅವರಿಗೆ ಕಣ್ಣಿಗೆ ಕಾಣಲಾರದಂತೆ ಇಷ್ಟೊಂದು ಹಣವನ್ನು ಪೋಲು ಮಾಡುವಂತಹ ವ್ಯವದಾನ ಅವರಿಗೆ ಏನಿತ್ತು? ಇದೇ ಇಲಾಖೆಯಲ್ಲಿ ಹಣವನ್ನು ಏಕೆ ತೆಗೆದುಕೊಳ್ಳಬೇಕಾಗಿತ್ತು? ಈ ಒಂದೇ ಇಲಾಖೆಯ ಅಲ್ಲ. ಇವತ್ತಿನ ದಿವಸ ಎಲ್ಲಾ ಇಲಾಖೆಯಲ್ಲಿಯೂ ಸಹ ಹಣ ಪೋಲು ಆಗುವಂತಹ ಕೆಲಸ ಆಗುತ್ತಿದೆ. ಅವರು 5 ಗ್ಯಾರಂಟಿಗಳನ್ನು ಕೊಡಲಿ. ಅದಕ್ಕೆ ನಮ್ಮ ತಕರಾರು ಇಲ್ಲ. ಸಮಾಜದಲ್ಲಿ ಬದುಕುವವರಿಗೆ ಎಲ್ಲರಿಗೂ ಹಕ್ಕು ಇದೆ. ಒಬ್ಬ ಮಹಿಳೆಯನ್ನು ಮೇಲಕ್ಕೆ ಎತ್ತಬೇಕು. ಒಬ್ಬ ಮಹಿಳೆ

ಬಡತನದಿಂದ ಹೊರಬರಬೇಕು. ಆದರೆ, ಒಂದು ಸಮಾಜದ ನೆತ್ತಿಗೆ ಬಡಿದು, ಇನ್ನೊಂದನ್ನು ಉದ್ಧಾರ ಮಾಡುತ್ತೇನೆ ಎಂದರೆ, ಅದು ಎಷ್ಟು ಸರಿ? ನಾನು ಇವತ್ತು ನೇರವಾಗಿ ಸರ್ಕಾರಕ್ಕೆ ಪ್ರಶ್ನೆ ಕೇಳುತ್ತೇನೆ? ನಮ್ಮ ವಾಲ್ಮೀಕಿ ಸಮುದಾಯದ ಎಷ್ಟು ಜನ ಯುವಕರನ್ನು ವಿದೇಶಕ್ಕೆ ಕಳುಹಿಸಿ ಕೊಟ್ಟಿದ್ದಾರೆ? ಹೈದರಬಾದ್ ಕರ್ನಾಟಕದ ಭಾಗದಲ್ಲಿ ಮಾತ್ರವಲ್ಲ, ಚಾಮರಾಜನಗರದಿಂದ ಹಿಡಿದು ಬೀದರ್‌ವರೆಗೆ ನಮ್ಮ ಸಮುದಾಯದ ಜನರು ಯಾವ ರೀತಿ ಇದ್ದಾರೆ ಎಂಬುದನ್ನು ನೋಡಿ. ಒಂದು ಕಾಲದಲ್ಲಿ ಹಲಗಅಬೇಡ ಜನಾಂಗದವರು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ಗೆ ಯುದ್ಧದಲ್ಲಿ ಸಾಥ್ ಕೊಟ್ಟಿದ್ದಾರೆ. ಆ ಜನಾಂಗ ಇವತ್ತು ಎಂತಹ ಪರಿಸ್ಥಿತಿಯಲ್ಲಿ ಇದ್ದಾರೆಂದರೆ, ಮನೆಗಳಿಲ್ಲದೆ ಗುಡಿಸಲುಗಳಲ್ಲಿ ಇದ್ದಾರೆ. ಅವರ ಮಕ್ಕಳನ್ನು ಶಾಲೆಗೆ ಕಳುಹಿಸಿ ವ್ಯಾಸಂಗ ಮಾಡಿಸಲು ಅವರಿಗೆ ಶಕ್ತಿ ಇಲ್ಲ. ಅವರು ಹೊಲ ಉಳುಮೆ ಮಾಡಲು ಭೂಮಿ ಇಲ್ಲ. ಅವರಿಗೆ ಯಾರು ಕೆಲಸ ಕೊಡುತ್ತಿಲ್ಲ. ಅವರು ಪೂರ್ತಿ ತಳಮಟ್ಟದಲ್ಲಿದ್ದಾರೆ. ತಾವು ಅವರನ್ನು ಹೋಗಿ ನೋಡಿ. ಬರಿ ಮಾತು ಎತ್ತಿದರೆ, ವಾಲ್ಮೀಕಿ ಜನಾಂಗ ಎಂದು ಹೇಳುತ್ತಾರೆ ಅಲ್ಲವೇ; ವಾಲ್ಮೀಕಿ ಹೆಸರನ್ನು ಇಟ್ಟುಕೊಂಡು, ವಾಲ್ಮೀಕಿಯ ಒಂದು ಪುತ್ಥಳಿ ಮಾಡಿ, ಒಂದು ದಿವಸ ಅವರ ಜಯಂತಿ ಮಾಡಿ, ಹೂವಿನ ಹಾರ ಹಾಕಿ ದೊಡ್ಡದಾಗಿ ಸಮಾರಂಭ ಮಾಡಿಬಿಟ್ಟರೆ ಸಾಕಾಗುವುದಿಲ್ಲ.

ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ಧರಾಮಯ್ಯನವರು ನಮ್ಮ ಕೊಪ್ಪಳ ಜಿಲ್ಲೆಗೆ ಬಂದಿದ್ದರು. ನಮ್ಮ ಸಮುದಾಯದ ಜನರು ಅವರ ಪಕ್ಷಕ್ಕೆ ಮತ ಹಾಕಿ ಅವರನ್ನು ಆರಿಸಿ ತಂದಿರುವಂತಹ ವ್ಯಕ್ತಿಗಳನ್ನು ಎಷ್ಟು ಉದ್ಧಾರ ಮಾಡಿದ್ದಾರೆಂದು ಕೇಳುತ್ತೇನೆ? ಇಲ್ಲಿ ಎಲ್ಲಾ ದಾಖಲೆಗಳು ಇವೆ. ಇವತ್ತು ಬೆಳಗ್ಗೆಯಿಂದ ಸಂಜೆಯವರೆಗೂ ಮಾತನಾಡಿದರೂ ಸಹ ಅಷ್ಟೇ. ಇನ್ನೂ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ರೈತರಿಗೆ ಸ್ವಂತ ಎರಡು ಎಕರೆ ಜಮೀನು ಇದ್ದರೆ, ಅವರಿಗೆ ಕೊಳವೆ ಬಾವಿ ಕೊಡಬೇಕು. ರೈತರು ಅದನ್ನು ಕೊಡಿ ಎಂದು ಅರ್ಜಿಗಳನ್ನು ಹಿಡಿದುಕೊಂಡು ತಿರುಗಾಡಿದರೂ ಸಹ, ಆ ಯೋಜನೆ ಪಾಸ್ ಆಗಲಿಲ್ಲ. ಒಂದು ಬಾರಿ ಹಾಕಿದ ಅರ್ಜಿಗಳಿಗೆ ಬಿಟ್ಟು ಬೇರೆಯವರಿಗೆ ಕೊಟ್ಟಿದ್ದಾರೆ. ಅದನ್ನು ಯಾರಿಗೆ ಕೊಟ್ಟಿದ್ದಾರೆಂದರೆ, ಬೇಕಿದ್ದವರಿಗೆ ಕೊಟ್ಟಿದ್ದಾರೆ. ಅವರಿಗೆ ಅವಶ್ಯಕತೆ ಇರುವಂತಹ ಒಬ್ಬ ವಾಲ್ಮೀಕಿ ಸಮುದಾಯದ ಬೇಡನಿಗೆ ಸಿಗಲಿಲ್ಲವೆಂದರೆ, ಈ ಯೋಜನೆ ಎಲ್ಲಿ ಹೋಯಿತು? ನಾನು ಕೇಳುವಂತಹ ಪ್ರಶ್ನೆ ಇದು. ನಾವು ಬಡವರಿಗೋಸ್ಕರ, ಬಡವರ ಸಲುವಾಗಿ, ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ, ನುಡಿದಂತೆ ನಡೆಯುತ್ತೇವೆ ಎಂದರೆ, ಎಲ್ಲಿ ನಡೆದಿದ್ದಾರೆ? ಈ ಸರ್ಕಾರ ಬಂದ ಒಂದು ವರ್ಷದಿಂದ ನೋಡುತ್ತಿದ್ದೇನೆ. ನಾನು ಕೊಪ್ಪಳ ಜಿಲ್ಲೆಯ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ರಾಜ್ಯದ ಬಗ್ಗೆ ಹೇಳುತ್ತಿಲ್ಲ. ಒಂದು ಲಕ್ಷ ರೂಪಾಯಿಗಳು ಕೊಡುವಂತಹ ನೇರ ಸಾಲಕ್ಕೆ 43 ಜನ ಅರ್ಜಿ ಹಾಕಿದ್ದರು. ನಾನೇ ನೇರವಾಗಿ ಹೋಗಿ ಖುದ್ದಾಗಿ ಅರ್ಜಿಗಳನ್ನು ಕೊಟ್ಟಿದ್ದೇನೆ. ಇದು ಆಗಿಲ್ಲ. ಸಣ್ಣ ವ್ಯಾಪಾರಕ್ಕಾಗಿ 04 ಜನರು 02 ಲಕ್ಷ ರೂಪಾಯಿಗಳ ಲೋನ್‌ಗೆ ಅರ್ಜಿ ಹಾಕಿದ್ದರು. ಅವರಿಗೂ ಆಗಿಲ್ಲ. "ಸ್ವಾವಲಂಬಿ ಸಾರಥಿ ಯೋಜನೆ"ಯಡಿ 04 ಲಕ್ಷ ರೂಪಾಯಿಗಳ ಲೋನ್‌ಗೆ 11 ಜನರು ಅರ್ಜಿ ಹಾಕಿದ್ದರು. ಇದಕ್ಕೂ ಇಲ್ಲ. ಗಂಗಾಕಲ್ಯಾಣ ಯೋಜನೆ 36 ಜನರಿಗೆ ಬಂದಿದೆ. ಇದಕ್ಕೆ ಇಡೀ ಕೊಪ್ಪಳ ಜಿಲ್ಲೆಯಲ್ಲಿ 36 ಜನರು ಅರ್ಜಿ ಸಲ್ಲಿಸಿದ್ದರು. ಈ 36 ಜನರಿಗೂ ಕೊಟ್ಟಿಲ್ಲ.

Micro Credit Finance ನಲ್ಲಿ 2.5 ಲಕ್ಷ ರೂ. ಕೊಡುತ್ತಾರೆ. ಇದರಲ್ಲಿ ತಾಲ್ಲೂಕಿಗೆ 10 ಜನರು ಇದ್ದಾರೆ. ಇದನ್ನು ಯಾರಿಗೂ ಕೊಟ್ಟಿಲ್ಲ. ಇನ್ನೂ 2023-24 ನೇ ಸಾಲಿನ ಬಗ್ಗೆ ಮಾತನಾಡುವಂತಿಲ್ಲ. ಹಾಗಾದರೆ, 187 ಕೋಟಿ ರೂಪಾಯಿಗಳು ಎಲ್ಲಿಗೆ ಹೋಯಿತು? ಈ ಹಣವನ್ನು ಯಾರು ನುಂಗಿ ಹಾಕಿದರು? ಈ ನಿಗಮದ ಅಧ್ಯಕ್ಷನ್ನು ಬಂಧಿಸಿಲ್ಲ. ಉಪಾಧ್ಯಕ್ಷನ್ನು ಬಂಧಿಸಿದ್ದಾರೆ. ಇವತ್ತು ನಮ್ಮ ಸಮುದಾಯದ ಸಹೋದರರಿಗೆ ಅರ್ಥವಾಗಲಿಲ್ಲವೇ? ನಾನು ಇವತ್ತು ನೇರವಾಗಿ ಪ್ರಶ್ನೆಯನ್ನು ಹಾಕುತ್ತೇನೆ? ನಾನು ಒಂದು ಸಾಮಾನ್ಯ ಕುಟುಂಬದಿಂದ ಬಂದಿರುವಂತಹವಳು. ನಾನು ಎಲ್ಲಾ ಕಷ್ಟ ನಷ್ಟಗಳನ್ನು ಅನುಭವಿಸಿ ಬಂದಿರುವವಳು. ನಾವು ಏನಿಲ್ಲದೇ ಇವತ್ತು ಒಂದು ಮಟ್ಟಕ್ಕೆ ಬಂದಿದ್ದೇವೆಂದರೆ, ಅದು ಡಾ॥ ಬಿ.ಆರ್.ಅಂಬೇಡ್ಕರ್‌ರವರ ಒಂದು ನ್ಯಾಯ ನಮ್ಮನ್ನು ಕಾಪಾಡಿಕೊಂಡು ಬಂದಿದೆ. ಆ ಒಂದು ನೆಲೆಗಟ್ಟಿನಲ್ಲಿ ಒಬ್ಬ ವ್ಯಕ್ತಿಯಾಗಿ ಇಲ್ಲಿಗೆ ಬಂದಿದ್ದೇವೆ. ನನಗೆ ನಮ್ಮ ಸಮುದಾಯದ ಬಗ್ಗೆ ಎಷ್ಟು ನೋವು ಅನಿಸುತ್ತದೆ ಹೇಳಿ? ನನಗೆ ಸುಮಾರು 15 ದಿವಸಗಳಿಂದ ಈ ವಿಷಯವನ್ನು ಮಾಧ್ಯಮದಲ್ಲಿ ಮತ್ತು 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಬಂದಿರುವ ವರದಿಯನ್ನು ನೋಡಿ ಸಾಕಾಗಿಬಿಟ್ಟಿದೆ.

ಸಭಾಪತಿಯವರೇ, ಎಲ್ಲಾದಕ್ಕೂ ಒಂದು ದಾರಿ ಇರುತ್ತದೆ. ನಾನು ಸ್ಪಷ್ಟ ಮಾಡುವುದು ಇಷ್ಟೇ, ಇವತ್ತು ಯಾವುದೇ ಒಂದು ಆರೋಪ ಬರಲಿ, ಇಲ್ಲಿಯವರೆಗೆ ಸರ್ಕಾರದಲ್ಲಿ ಯಾವುದೇ allegation ಬಂದರೆ, ಮೊದಲು ರಾಜೀನಾಮೆ ಕೊಟ್ಟು ಆಮೇಲೆ ತನಿಖೆಯನ್ನು ಎದುರಿಸಬೇಕು. ಅದೇರೀತಿ ಮಾನ್ಯ ಮುಖ್ಯಮಂತ್ರಿಯವರು, ಈಗಾಗಲೇ ಸರ್ಕಾರದಲ್ಲಿ ಶ್ರೀ ನಾಗೇಂದ್ರರವರು ರಾಜಿನಾಮೆ ಕೊಟ್ಟಿದ್ದಾರೆ. ಶ್ರೀ ಬಸವನಗೌಡ ದದ್ದಲ್ ರವರು ಏನು ಮಾಡುತ್ತಿದ್ದಾರೆ? ಅವರನ್ನು ಏಕೆ arrest ಮಾಡುತ್ತಿಲ್ಲ? ನನಗೆ ಇರಲಿ, ನನ್ನ ಮಕ್ಕಳಿಗೆ ಇರಲಿ, ನನ್ನ ಹೆಂಡತಿಗೆ ಇರಲಿ ಎನ್ನುವಂತಿದ್ದರೆ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಆ ಸಮುದಾಯಕ್ಕೆ ಏಕೆ ಇಡಬೇಕು? ಅವರ ಹೆಸರಿಗೆ direct ಆಗಿ ಮಾಡಿಬಿಡಲಿ. ಮತ್ತೆ ನಾವು ಏಕೆ ಇರಬೇಕು? ನಮ್ಮ ಜನಾಂಗ ಏಕೆ ಇರಬೇಕು? ಇವತ್ತು ನಿಗಮದ ಅಧ್ಯಕ್ಷರನ್ನು ಬಂಧಿಸುವುದಕ್ಕೆ ಆಗುತ್ತಿಲ್ಲ. ಅವರು ಎಷ್ಟು ಆಸ್ತಿ ತೆಗೆದುಕೊಂಡಿದ್ದಾರೆಂದು ಗೊತ್ತಾಗಿದೆ. ಇವತ್ತು ಸಿಂಧನೂರಿನಲ್ಲಿ 04 ಜನ. ಒಬ್ಬ ಶ್ರೀ ವೆಂಕಟರಾವ್ ಎನ್ನುವಂತಹವರಿಗೆ, ಅವರ ಮಕ್ಕಳಿಗೆ, ಅವರ ಮನೆಯಲ್ಲಿರುವಂತಹವರಿಗೆ ಅವರ ಹೆಸರಿನಲ್ಲಿ ಹಣ ಹೋಗಿದೆ. ಕೇಳಿದರೆ ಸಾಲ ಕೊಟ್ಟಿದ್ದಾರೆ, ಅದು ಸಾಲದ್ದು ಎಂದು ಹೇಳುತ್ತಾರೆ. ವಿವರಣೆ ಕೊಟ್ಟರೆ ಕೇಳಲಿಕ್ಕೆ ಇಲ್ಲ. ಈ ಸರ್ಕಾರದಲ್ಲಿ ಹಗಲು ದರೋಡೆಯಾಗುತ್ತಿದೆ. ಇಷ್ಟು ಕಣ್ಣಿಗೆ ಕಾಣುತ್ತಿದೆ. ಇವತ್ತು ಇಷ್ಟೆಲ್ಲಾ ಅವ್ಯವಹಾರ ಆಗಿದೆ ಎಂದು ಹೇಳುತ್ತಿದ್ದೇವೆ. ನಾವು ನಿಷ್ಪಕ್ಷಪಾತವಾಗಿ ಹೇಳುತ್ತೇವೆ. ಯಾವುದೇ ನಿಗಮದ ಜನರೇ ಇರಲಿ, ಅವರು ಭೋವಿ ನಿಗಮದ್ದು ಎಂದು ಹೇಳುತ್ತಾರೆ, ಅಲ್ಲವೇ; ಅದನ್ನು ಹಾಕಿ. ಸರ್ಕಾರದ ಹಣ ತಿನ್ನುವುದಕ್ಕಲ್ಲ. ಇದು ಬಡವರ ಹಣ. ಅವರೆಲ್ಲರೂ ಆಶೀರ್ವಾದ ಮಾಡಿರುವುದಕ್ಕೆ ಅವರು ಇಲ್ಲಿ ಬಂದು ಕುಳಿತ್ತಿದ್ದಾರೆ. ಅವರ ಸರ್ಕಾರ ಆಗಿದೆ. ಅವರು ನಿಷ್ಪಕ್ಷಪಾತವಾಗಿದ್ದರೆ, ತನಿಖೆಯನ್ನು ಎದುರಿಸಲಿ. ಈ ರೀತಿ ಏಕೆ ಅವರು ನಮಗೆ ಕಣ್ಣಾಮುಚ್ಚಾಲೆ ಆಟ ಆಡಿಸುವಂತಹ ಕೆಲಸವನ್ನು ಮಾಡುತ್ತಾರೆ? ಇವತ್ತು ವಾಲ್ಮೀಕಿ ನಿಗಮದಲ್ಲಿ ಈ ರೀತಿಯ ಅನ್ಯಾಯವಾಗಿದೆ ಎಂದರೆ, ಉಳಿದ ನಿಗಮಗಳ ಬಗ್ಗೆ ಯೋಚನೆ ಮಾಡಿ. ಅದಕ್ಕೆ ನಾನು

ನೇರವಾಗಿ ಹೇಳುತ್ತಿದ್ದೇನೆ. ಶ್ರೀ ಬಸವನಗೌಡ ದದ್ದಲ್‌ರವರನ್ನು ED (Enforcement Directorate) ಗೆ ವಶಪಡಿಸಿ ಕೊಡಬೇಕು. ಅವರನ್ನು arrest ಮಾಡಬೇಕು. ಇನ್ನೂ ಒಳಗಿನ ತನಿಖೆಗಳು ಬರುತ್ತವೆ. ಅವರು ಶ್ರೀ ನೆಕ್ಕುಂಟಿ ನಾಗರಾಜು ರವರ ಬಗ್ಗೆ ದೊಡ್ಡದಾಗಿ wall poster ಹಿಡಿದಿದ್ದರು. ಶ್ರೀ ನೆಕ್ಕುಂಟಿ ನಾಗರಾಜು permanent ಆಗಿ ಇರುವಂತಹ, ಒಂದು ಪಕ್ಷದಲ್ಲಿರುವಂತಹ ವ್ಯಕ್ತಿಯೇ? **(ಗೊಂದಲ)** ನಾನು ಇನ್ನು ನನ್ನ ಮಾತುಗಳನ್ನು ಮುಗಿಸಿಲ್ಲ. ನಾನು ಅವರಿಗೆ yield ಆಗಿಲ್ಲ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಮತ್ತು ಶ್ರೀ ಐವನ್ ಡಿ' ಸೋಜಾರವರು ಎದ್ದುನಿಂತು ಒಂದೇ ಬಾರಿಗೆ ಮಾತನಾಡತೊಡಗಿದರು)**

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಅವರು ಅವರ ಪಕ್ಷದ ದೋಸ್ತು.,

(ಗೊಂದಲ)

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಆ ವ್ಯಕ್ತಿ ಚುನಾವಣೆಗೆ ನಿಂತುಕೊಂಡಿದ್ದರು. ಇವತ್ತು ಆ ವ್ಯಕ್ತಿ ಏನು ಗೊತ್ತಿಲ್ಲದಂತೆ ಮಾಡಿದ್ದಾನೆ. ಆತ ಸರ್ಕಾರಕ್ಕೆ ಬೇಕಾದಂತಹ ವ್ಯಕ್ತಿ. ಅವರು ಮಾಡಿದ್ದಂತಹ ಎಲ್ಲವನ್ನು ಮನ್ನಿಸಿದ್ದಾರೆ. ಈ ಹಿಂದೆ ಅವರು ಬಿಜೆಪಿಯಲ್ಲಿದ್ದರು. ಈಗ ಅವರು ಈ ಪಕ್ಷದಲ್ಲಿ ಇಲ್ಲ. ನಮ್ಮ ನಾಯಕರು ಬಕೆಟ್ ಹಿಡಿದರು ಎಂದು ಹೇಳುತ್ತಾರೆ ಅಲ್ಲವೇ.,

(ಗೊಂದಲ)

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ತಾವು conclude ಮಾಡಿ.

(ಗೊಂದಲ)

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಶ್ರೀ ನೆಕ್ಕುಂಟಿ ನಾಗರಾಜು ರವರ ಬಗ್ಗೆ ಗೊತ್ತಿದೆ. ಏಕೆಂದರೆ, ನಾನು ಅದೇ ಜಿಲ್ಲೆಯವಳು. **(ಗೊಂದಲ)** ಅವರು ನಮ್ಮ ಸರ್ಕಾರದ ಮೇಲೆ ಅಪಾದನೆ ಮಾಡುತ್ತಾರೆ? ಇವತ್ತು ಅವರು ಯಾರ ಕಡೆ ಇದ್ದಾರೆ? ಮಾನ್ಯ ಮುಖ್ಯ ಮಂತ್ರಿಯಯವರ ಬಾಜು, ಉಪ ಮುಖ್ಯಮಂತ್ರಿಯವರ ಬಾಜು ಇರುತ್ತಾರೆ. ಶ್ರೀ ರಾಮಲಿಂಗ ರೆಡ್ಡಿರವರ ಜೊತೆಗೆ ಟೀ ಕುಡಿಯುವಂತಹ ಸನ್ನಿವೇಶಗಳು ಯಾವಾಗ ಬಂದವು? ಈ ಸರ್ಕಾರ ಬಂದ ಮೇಲೆ ಆಗಿದೆ. ಮೊದಲು ಅವರನ್ನು ಯಾರು arrest ಮಾಡಿದ್ದರು? ಅವರು ಏನೆಂದು ನನಗೆ ಗೊತ್ತಿದೆ. ಅವರು ನಮ್ಮ ಜಿಲ್ಲೆಯವರು, ಅವರ ಬಗ್ಗೆ ನನಗೆ ಅವರು ಹೇಳಬೇಕೇ? ಎಷ್ಟು fraud ಇದ್ದಾರೆಂದು ಏನು ಗೊತ್ತಿದೆ? ಈಗ ತನಿಖೆ ನಡೆಯುತ್ತಿದೆ. ಅದು ನಿಜ ಅಥವಾ ಸುಳ್ಳಾ ಎಂದು ಒಂದು ದಿವಸ ಗೊತ್ತಾಗುತ್ತದೆ. ಇವತ್ತು ತನಿಖೆ ನಡೆಯುತ್ತಿದೆ, ನಾನು ಅದರ ಬಗ್ಗೆ ಮಾತನಾಡುತ್ತೇನೆ. ಅವರು ಒಬ್ಬ ವ್ಯಕ್ತಿಯದ್ದು ಹಿಡಿದುಕೊಂಡು ದೊಡ್ಡದಾಗಿ poster ನ್ನು ತೋರಿಸುತ್ತಾರೆ ಅಲ್ಲವೇ;

(ಗೊಂದಲ)

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಮತ್ತು ಶ್ರೀ ಐವನ್ ಡಿ' ಸೋಜಾರವರು ಎದ್ದುನಿಂತು ಒಂದೇ ಬಾರಿಗೆ ಮಾತನಾಡತೊಡಗಿದರು)**

**ವೈಸ್ ಛೇರ್ಮನ್:-** ಶ್ರೀ ಐವನ್ ಡಿ' ಸೋಜಾರವರೇ, ತಾವು ಕುಳಿತುಕೊಳ್ಳಿ. ಅವರು ಮಾತನಾಡಲಿ. ಶ್ರೀಮತಿ ಹೇಮಲತಾ ನಾಯಕ್‌ರವರೇ, ತಾವು conclude ಮಾಡಿ.

(ಗೊಂದಲ)

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿದ್ದೇನೆ.,

(ಗೊಂದಲ)

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರನ್ನು ಮೊದಲು ಯಾರು ಕಳುಹಿಸಿದರು ಎಂದು ಹೇಳಬೇಕು? ಸುಮ್ಮನೆ ಆರೋಪ ಮಾಡುವುದಲ್ಲ. ಕಳುಹಿಸಿದವರು ಅವರು.,

(ಗೊಂದಲ)

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರಾದ ಹೇಮಲತಾ ನಾಯಕ್‌ರವರೇ, ತಾವು 2 ನಿಮಿಷಗಳಲ್ಲಿ conclude ಮಾಡಿ. ದಯಮಾಡಿ ಬೇರೆ ಸದಸ್ಯರು ಕುಳಿತುಕೊಳ್ಳಿ.

(ಗೊಂದಲ)

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಆಯಿತು. ನಾನು ಮಾತನಾಡಿ ಮುಗಿಸುತ್ತೇನೆ. ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಎಸ್‌ಸಿ/ಎಎಸ್‌ಟಿಗೆ ಇಟ್ಟಿರುವಂತಹ ಹಣದಲ್ಲಿ ಆ ಸಮುದಾಯ ಅಭಿವೃದ್ಧಿಯಾಗಬೇಕು (ಗೊಂದಲ).,

(ಗೊಂದಲ)

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರಾದ ಗೋವಿಂದರಾಜುರವರೇ, ತಾವು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ...

(ಗೊಂದಲ)

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ನಮ್ಮ ಜನಾಂಗಕ್ಕೆ ರಾಜಕೀಯ ಪ್ರಾತಿನಿಧ್ಯ ಸಿಗಬೇಕಾಗಿತ್ತು. ಅದು ಸಿಕ್ಕಿಲ್ಲ. ಇವತ್ತಿನ ದಿವಸ ಸಾಮಾಜಿಕ ವ್ಯವಸ್ಥೆಯಲ್ಲಿ ಹಣ ಪೋಲು ಆಗುತ್ತಿದೆ. ಅದಕ್ಕೆ ಒಂದು ಹದ್ದುಬಸ್ತು ಬರಬೇಕು. ಇವತ್ತು ರಾಜ್ಯದಲ್ಲಿ ಏನಾಗುತ್ತಿದೆ, ಯಾವ ಹಂತ ತಲುಪಿದೆ, ನಮ್ಮ ವಾಲ್ಮೀಕಿ ನಿಗಮದ ಹಣ ಎಲ್ಲೆಲ್ಲಿ ಹೋಯಿತು ಎನ್ನುವುದಕ್ಕೆ ಸ್ಪಷ್ಟೀಕರಣ ಕೊಡಬೇಕು. ಇದನ್ನು ಕೊಡಬೇಕೆಂದರೆ, ಮಾನ್ಯ

ಮುಖ್ಯಮಂತ್ರಿಯವರು ರಾಜಿನಾಮೆ ಕೊಟ್ಟು ತನಿಖೆಯನ್ನು ಎದುರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಧನ್ಯವಾದಗಳು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಯಾರು ರಾಜಿನಾಮೆ ಕೊಡಬೇಕಾಗಿತ್ತೋ, ಅವರು ಕೊಟ್ಟಿದ್ದಾರೆ, ಅರ್ಥವಾಯಿತು ಅಲ್ಲವೇ? ಇವರೆಲ್ಲರೂ ಹೋಗುವ time ಬಂದಿದೆ. ಅದಕ್ಕೆ ಇವರು ಹೇಳುತ್ತಿದ್ದಾರೆ ಅಷ್ಟೇ.

(ಮುಂದು)

(537) 18-07-2024 (4.50) ಎಂವಿ-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, Point of Order ಇದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ನಿಯಮ 70ರಲ್ಲಿ ಏನು ಇದೆ ಎಂದರೆ, "ಯಾವುದೇ ವಿಧ್ಯುಕ್ತ ಪ್ರಸ್ತಾವವನ್ನು ಮಂಡಿಸಬಾರದು; ಸದನದ ಮುಂದೆ ಯಾವುದೇ ವಿಧ್ಯುಕ್ತ ಪ್ರಸ್ತಾವವನ್ನು ಮಂಡಿಸಬಾರದು ಅಥವಾ ಅದನ್ನು ಮತಕ್ಕೆ ಹಾಕಬಾರದು, ಸೂಚನೆಯನ್ನು ಕೊಟ್ಟಿರುವ ಸದಸ್ಯನು ಒಂದು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು ಮತ್ತು ಸಚಿವರು ಸಂಕ್ಷಿಪ್ತವಾಗಿ ಉತ್ತರ ನೀಡಬೇಕು. ಸಭಾಪತಿಯವರಿಗೆ ಮುಂಚಿತವಾಗಿ ತಿಳಿಸಿ ಅನುಮತಿ ಪಡೆದ ಯಾರೇ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬಹುದು ಎಂದು clear ಆಗಿ ಇದೆ." ತಾವು ಕೇವಲ ಒಂದೇ ಕಡೆ ತೋರಿಸಿ, ಒಂದೇ ಕಡೆ ಕೊಟ್ಟರೆ, ನಾವು ಉಳಿದ ಸದಸ್ಯರು ಏನು ಮಾಡುವುದು? It is the property of the House.

**(ಗೊಂದಲ)**

**ವೈಸ್ ಛೇರ್ಮನ್:-** ಈಗಾಗಲೇ ತಮಗೆ ಈ ಪೀಠದಿಂದ ಉತ್ತರವನ್ನು ನೀಡಿದ್ದಾರೆ. ಮತ್ತೆ ತಮಗೆ ತಿಳಿಸಿದ್ದಾರೆ. ಇದರ ಬಗ್ಗೆ ಮಾತನಾಡುವುದಾದರೆ ಮಾತನಾಡಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರುಗಳೇ ಮಾತನಾಡಿದ್ದಾರೆ.

**(ಗೊಂದಲ)**

**ವೈಸ್ ಛೇರ್ಮನ್:-** ಅದು Point of Order ಅಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇಲ್ಲಿ ಯಾರೂ ಅವಕಾಶ ಕೊಡುವುದಿಲ್ಲವೆಂದು ಹೇಳಿಲ್ಲ. ಆ ರೀತಿ ಪೀಠದಿಂದಲೂ ಹೇಳಿಲ್ಲ. ಅವರು ಆ ರೀತಿ ಎಲ್ಲಿ ಹೇಳಿದ್ದಾರೆ.

**(ಗೊಂದಲ)**

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಇಲ್ಲಿ ಸಾಕಷ್ಟು ವಿಚಾರಗಳನ್ನು ಬೆಳಕು ಚೆಲ್ಲಿದ್ದಾರೆ. ಮತ್ತೆ ಅದರ ಬಗ್ಗೆ ಮಾತನಾಡಿದ್ದಾರೆ. ಅದಕ್ಕೆ ನಾನು ಸಹ ಅದೇ ವಿಚಾರ ಮಾತನಾಡಬಾರದು ಎಂದು ಸುಮ್ಮನೆ ಇದ್ದೆ. ಆದರೆ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಸಾಹೇಬರು ಹಿರಿಯ ಸದಸ್ಯರು. ಅವರು ಹೇಳಿದಂತಹ ಒಂದು ಮಾತನ್ನು ಕೇಳಿಸಿಕೊಂಡು, ನಾನೂ ಸಹ ಮಾತನಾಡಬೇಕೆಂದು ಅನಿಸಿದೆ. ಈ ಒಂದು ಪ್ರಕರಣದ ಬಗ್ಗೆ ನಮ್ಮ ಸ್ನೇಹಿತರು ಕೇಳಿದ್ದಾರೆ. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆಗಿರುವಂತಹ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ನೇರ ಹೊಣೆ ಎಂದು ಮತ್ತೆ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಕೇಳಿದಾಗ, ಅದಕ್ಕೆ ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಮತ್ತು ಶ್ರೀ ಐವನ್ ಡಿ'ಸೋಜಾ ರವರು ಮಾನ್ಯ ಮುಖ್ಯಮಂತ್ರಿಗಳು ಏಕೆ ರಾಜೀನಾಮೆ ಕೊಡಬೇಕು? ಅವರಿಗೂ ಇದಕ್ಕೂ ಏನು ಸಂಬಂಧ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಾನೂ ಸಹ ಕೊಡಬೇಕೆಂದು ಎದ್ದು ನಿಂತಿದ್ದೆ. ಏಕೆಂದರೆ, ಲೈಸನ್ಸ್ ಇಲ್ಲದೇ ಇರುವಂತಹ ಹುಡುಗ, ಒಂದು ವಾಹನವನ್ನು ಓಡಿಸಿ, ಅದರಿಂದ ಯಾರಿಗಾದರೂ ಅಪಾಯವಾದಾಗ, ಅವರ ಅಪ್ಪ ಮತ್ತು ಅಮ್ಮನ ಮೇಲೆ ಪ್ರಕರಣ ದಾಖಲಿಸುವುದು ಎಂದು ಕಾನೂನು ಇದೆ. ಹೌದಲ್ಲವೇ? ಇದೇ ರೀತಿ ಪುಣೆಯಲ್ಲಿ ಒಂದು ಪ್ರಕರಣವಾಯಿತು. ಪುಣೆಯಲ್ಲಿ ಲೈಸನ್ಸ್ ಇಲ್ಲದೇ ಇರುವ ಹುಡುಗ ಕಾರನ್ನು ಓಡಿಸಿ ಒಬ್ಬರನ್ನು ಸಾಯಿಸಿದ್ದಕ್ಕೆ ಅವರ ಅಮ್ಮ ಮತ್ತು ಅಪ್ಪನನ್ನು ಅರೆಸ್ಟ್ ಮಾಡಿದರು. ಇದನ್ನು ಅವರು ದಯವಿಟ್ಟು ಗಮನಿಸಬೇಕು. ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಅಪಾರವಾದಂತಹ ಗೌರವವಿದೆ. ಅವರು ನಮ್ಮ ರಾಜ್ಯದ ಒಡೆಯರು. ಅವರು ನಮ್ಮ ನಾಡಿನ ದೊರೆ. ಅವರ ಬಗ್ಗೆ ಗೌರವ ಕೊಟ್ಟು ಮಾತನಾಡುವುದು ನಮ್ಮ ಧರ್ಮ. ಆದರೆ, ಹಣಕಾಸಿನ ಮಂತ್ರಿಗಳು ಅವರೇ ಆಗಿರುವುದರಿಂದ ಮತ್ತೆ ನಮ್ಮ ರಾಜ್ಯದ ಮುಂಗಡಪತ್ರವನ್ನು ಅವರೇ ಮಂಡಿಸುವುದರಿಂದ, ಯಾವ್ಯಾವ ನಿಗಮಕ್ಕೆ ಎಷ್ಟೆಷ್ಟು ಹಣ ಕೊಡಬೇಕು ಮತ್ತು ಆ ನಿಗಮದಲ್ಲಿ ಬರುವಂತಹ ಜಾತಿಗಳಿಗೆ ಎಷ್ಟು ಪ್ರಾತನಿಧ್ಯ ಕೊಡಬೇಕಾದರೆ ಎಷ್ಟೆಷ್ಟು ಹಣ ಕೊಡಬೇಕೆಂದು ಅವರೇ ತೀರ್ಮಾನ ಮಾಡುವುದು. ಆ ರೀತಿ ತೀರ್ಮಾನ ಮಾಡಿದ ಮೇಲೆ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ 189 ಅಥವಾ 200 ಕೋಟಿ ರೂಪಾಯಿಗಳ ಹಣವನ್ನು ನೀಡಿರುತ್ತಾರೆ. ಅವರು ಹಣವನ್ನು ನೀಡಿದ ನಂತರ ಆ ಹಣ ಸರಿಯಾಗಿ ಸದ್ವಿನಿಯೋಗವಾಗುತ್ತಿದೆಯೇ ಎಂದು, ಅಂದರೆ ನಮ್ಮ ರಾಜ್ಯದ ಎಲ್ಲಾ ಭಾಗದಲ್ಲೂ ವಿನಿಯೋಗವಾಗುತ್ತಿದೆಯೇ ಎಂದು ಸಹ ಅವರು ಕಾಲಕಾಲಕ್ಕೆ ನೋಡಬೇಕು. ಅವರ ಕಛೇರಿಯಲ್ಲಿ ಜಂಟಿ ಕಾರ್ಯದರ್ಶಿ ಮತ್ತು ಸಾಕಷ್ಟು ಜನ ಸಿಬ್ಬಂದಿಯವರು ಇರುತ್ತಾರೆ. ಅವರು ಕಾಲಕಾಲಕ್ಕೆ ಅವರಿಗೆ ಮಾಹಿತಿ ಕೊಡುತ್ತಿರುತ್ತಾರೆ. ಇದಕ್ಕೆ ಪೂರಕವಾಗಿ ಒಂದು ಘಟನೆಯನ್ನು ಹೇಳುತ್ತೇನೆ. ಕಳೆದ ಅವಧಿಯಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ ಅವ್ಯವಹಾರವಾಗಿದೆ ಎಂದು ಒಂದು ವಿಶೇಷ ಸದನ ಸಮಿತಿಯನ್ನು ರಚನೆ ಮಾಡಿದ್ದರು. ಅದು ಎಲ್ಲರಿಗೂ ಸಹ ಗೊತ್ತಿದೆ. ಅದರಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ಸಹ ಸದಸ್ಯರಾಗಿದ್ದಾರೆ. ಆ

ಗಂಗಾಕಲ್ಯಾಣ ಯೋಜನೆಯಲ್ಲಿ ಆದಂತಹ ಅವ್ಯವಹಾರವನ್ನು ನಾವೆಲ್ಲರೂ ಪೂರ್ತಿ ಕೂಲಂಕಷವಾಗಿ field visit ಮಾಡಿದಾಗ, ಅದರ ಬಗ್ಗೆ clear ಆಗಿ ಗೊತ್ತಾಯಿತು. ಆಗಿನ ಮಂತ್ರಿಗಳು, ತಾವು ಅವರ ಹೆಸರನ್ನು ಹೇಳಬಾರದು ಎಂದು ಹೇಳಿದ್ದೀರಿ. ನಾನು ಅವರ ಹೆಸರನ್ನು ಹೇಳುವುದಿಲ್ಲ. ಆಗ ಅವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದರು. ಅಲ್ಲಿ ಶೇಕಡಾ 70ಕ್ಕೂ ಹೆಚ್ಚಿನ ಹಣವನ್ನು ಅವರು ಪ್ರತಿನಿಧಿಸುವಂತಹ ಜಿಲ್ಲೆ ಮತ್ತು ಕ್ಷೇತ್ರಕ್ಕೆ ತೆಗೆದುಕೊಂಡಿದ್ದಾರೆ ಎಂಬುದು evident ಆಯಿತು. ಆಗಿನ ಕಾಂಗ್ರೆಸ್ ಸರ್ಕಾರದಲ್ಲಿ ಅವರು ಮಂತ್ರಿಯಾಗಿದ್ದರು. ಹಾಗಾಗಿ, ಈ ರೀತಿಯ ಘಟನೆಯಲ್ಲಿ ಹಣ ಏಕೆ ದರುಪಯೋಗವಾಗುತ್ತಿದೆ? ಮಾನ್ಯ ಮುಖ್ಯಮಂತ್ರಿಗಳು ಹದಿನಾಲ್ಕು ಬಾರಿ ಬಜಟ್ ಮಂಡನೆ ಮಾಡಿರುವಂತಹವರು. ಅವರು ಎಲ್ಲಾ ಪ್ರಮುಖ ಖಾತೆಗಳನ್ನು ವಹಿಸಿಕೊಂಡಿರುವಂತಹವರು. ಅವರು ಇದನ್ನು ಸರಿಯಾದ ರೀತಿಯಲ್ಲಿ ಮಾನಿಟರ್ ಮಾಡಿಲ್ಲ. ಈ ಹಣ ಯಾರಿಗೆ ಸೇರಬೇಕಾಗಿತ್ತು? ನಾನು ಇವತ್ತು ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರನ್ನು ನೋಡಿದೆ. ಅವರು ಯಾವೊತ್ತು ಸಹ ಇಷ್ಟೊಂದು aggressive ಆಗಿ ಮಾತನಾಡಿರಲಿಲ್ಲ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜುರವರಿಗೆ ಒಂದು ನಿಮಿಷ ತಮ್ಮ ಮಾತನ್ನು ನಿಲ್ಲಿಸುವಂತೆ ಹೇಳಿ. ಮಾನ್ಯ ಸದಸ್ಯರು ನಿಜವಾಗಿ ಒಬ್ಬ businessman. ಅವರು ಈ ಸದನಕ್ಕೆ ಬಂದು ಐದು ವರ್ಷವಾಗಿರಬಹುದು. But, basically, he is a businessman. ಅವರಿಗೆ ಕಾರ್ಪೋರೇಷನ್‌ಗಳಲ್ಲಿ ಮತ್ತು ಬ್ಯಾಂಕ್‌ಗಳಲ್ಲಿ ವ್ಯವಹಾರಗಳು ಯಾವ ರೀತಿ ನಡೆಯುತ್ತದೆ ಎಂದು ಚೆನ್ನಾಗಿ ಗೊತ್ತಿದೆ. ಹೌದಲ್ಲವೇ? ಈಗ ಒಂದು ಬ್ಯಾಂಕ್‌ನಲ್ಲಿ R.T.G.S. ಮಾಡಬೇಕಾದರೆ, ಅದಕ್ಕೆ ಒಂದು application ಕೊಡಬೇಕು. ಅದನ್ನು ಕೊಟ್ಟ ನಂತರ ಅದನ್ನು ಯಾವ ಖಾತೆಗೆ ಕಳುಹಿಸುತ್ತೀರಾ ಎಂಬುದರ ಬಗ್ಗೆ ಅವರಿಗೆ ಚೆನ್ನಾಗಿ ಗೊತ್ತಿದೆ. ಆದರೆ, ಇಲ್ಲಿ ಆಗಿರತಕ್ಕಂಥದ್ದು ಏನೆಂದರೆ, ಡಿಪಾಸಿಟ್ ಮೇಲೆ ಓವರ್‌ಡ್ರಾಫ್ಟ್ ತೆಗೆದುಕೊಂಡಿರುವುದು. ಎಲ್ಲಾ ಕಾರ್ಪೋರೇಷನ್‌ನವರು ಡಿಪಾಸಿಟ್ ಇಟ್ಟಿರುತ್ತಾರೆ. ಅದರ ಮೇಲೆ ಯಾರಾದರೂ ಓವರ್‌ಡ್ರಾಫ್ಟ್ ತೆಗೆದುಕೊಳ್ಳುತ್ತಾರೆಯೇ? ಆದರೆ, ಇಲ್ಲಿ ಓವರ್‌ಡ್ರಾಫ್ಟ್ ತೆಗೆದುಕೊಂಡು, ಆ ಓವರ್‌ಡ್ರಾಫ್ಟ್ ದುಡ್ಡನ್ನು ವರ್ಗಾವಣೆ ಮಾಡಿ, ಅದನ್ನು ಎಲ್ಲಾ ಕಡೆಗೆ ಕಳುಹಿಸಿರತಕ್ಕಂಥದ್ದು. ಇವತ್ತಿನ ದಿವಸ ಆರ್.ಬಿ.ಐ.ನ ಹೊಸ ರೂಲ್ಸ್‌ನಲ್ಲಿ ಏನಿದೆ ಎಂದರೆ, ಅವರು ಒಂದು ಕಡೆ ಕೆ.ವೈ.ಸಿ. ಕೇಳುತ್ತಾರೆ. ಮತ್ತೊಂದು ಒಂದು ಕೋಟಿ ರೂಪಾಯಿಯನ್ನು ವರ್ಗಾವಣೆ ಮಾಡಬೇಕಾದರೆ ಅದಕ್ಕೆ ಕೆಲವೊಂದು details ಕೊಡಬೇಕಾಗುತ್ತದೆ. ಆದರೆ, ಇಲ್ಲಿ ಸುಮಾರು ನಲವತ್ತು ಕೋಟಿ ರೂಪಾಯಿ ಒಂದೇ ದಿವಸದಲ್ಲಿ ವರ್ಗಾವಣೆಯಾಗುತ್ತದೆಂದು ಹೇಳಿದರೆ, ಬ್ಯಾಂಕ್‌ನವರು ಯಾವುದೇ ರೀತಿಯ details ಅನ್ನು ಕೇಳಿಲ್ಲವೇ? ಇದರಲ್ಲಿ ಬ್ಯಾಂಕ್‌ನವರ involvement ಇಲ್ಲವೇ?

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ನಾನು ಅದರ ಬಗ್ಗೆಯೂ ಸಹ ಮಾತನಾಡುತ್ತೇನೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೆ, ಕಾರ್ಪೋರೇಷನ್‌ನಲ್ಲಿ ತಪ್ಪಾಗಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅದನ್ನು ಕೇವಲ ಕಾರ್ಪೋರೇಷನ್‌ನವರು ಮಾತ್ರ ಮಾಡುವುದಕ್ಕೆ ಆಗುವುದಿಲ್ಲ. ಅದರ ಜೊತೆಗೆ ಬ್ಯಾಂಕ್‌ನವರು ಸಹ ಸೇರಿಕೊಂಡಿದ್ದಾರೆ. So, let us speak about that also. ಅವರು ಅದರ ಬಗ್ಗೆ ಮಾತನಾಡಲಿ.

**ವೈಸ್ ಛೇರ್ಮನ್:-** ಮಾನ್ಯ ಗೋವಿಂದರಾಜು ರವರೆ ತಾವು yield ಆದರೆ, ಅವರು ಮಾತನಾಡುತ್ತಾರೆ. ಇಲ್ಲದೇ ಹೋದರೆ ತಾವು ಮಾತನಾಡಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ದಯವಿಟ್ಟು ನಾನು ಅದರ ಬಗ್ಗೆಯೂ ಸಹ ಹೇಳುತ್ತೇನೆ. ತಾವು ಹೇಳಿದಂತೆ ಮೂಲತಃ ನಾನು ಒಬ್ಬ businessman. Basically, I am not a public…

**(Interruptions)**

**ವೈಸ್ ಛೇರ್ಮನ್:-** ಮಾನ್ಯ ಗೋವಿಂದರಾಜು ರವರೆ ತಾವು ಮಾತನಾಡುವುದಕ್ಕೆ ಇನ್ನು ಕೇವಲ ಐದು ನಿಮಿಷಗಳು ಮಾತ್ರ ಇದೆ. ತಮ್ಮ ಸಮಯ ಮುಗಿದು ಹೋಗುತ್ತಿದೆ. ತಾವು ತಮ್ಮ ಮಾತನ್ನು ಇನ್ನು ಹತ್ತು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೆ, **(ಗೊಂದಲ)** ಶ್ರೀಮತಿ ನಿರ್ಮಲಾ ಸೀತಾರಾಮನ್…

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೂ ಇತ್ತು.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು…

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಗೋವಿಂದರಾಜು ರವರೆ ತಾವು yield ಆದರೆ ಅವರು ಮಾತನಾಡುತ್ತಾರೆ. ನಿಮಗೆ ಇನ್ನು ಹತ್ತು ನಿಮಿಷ ಸಮಯವಿದೆ. ತಾವು ಅಷ್ಟರಲ್ಲಿ ತಮ್ಮ ಮಾತನ್ನು ಮುಗಿಸಿ.

**(ಗೊಂದಲ)**

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ನಾನು ಇದಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಾರೆಂದು ಭಾವಿಸಿದ್ದೆ. ನಾನು ಒಬ್ಬ businessman ಎಂಬುದನ್ನು ಒಪ್ಪುತ್ತೇನೆ. ಮಾನ್ಯ ಸದಸ್ಯರು ಹೇಳಿರುವುದು ಸರಿಯಿದೆ. ರಾಜ್ಯ ಸರ್ಕಾರ ಲಕ್ಷಾಂತರ ಕೋಟಿ ಸಾಲ ಇಟ್ಟುಕೊಂಡು, ಅದಕ್ಕೆ ಸಾವಿರಾರು ಕೋಟಿ

ರೂಪಾಯಿಗಳ ಹಣವನ್ನು ಬಡ್ಡಿ ಕಟ್ಟಿಕೊಂಡು, ಬ್ಯಾಂಕ್‌ನಲ್ಲಿ ಡಿಪಾಸಿಟ್ ಇಟ್ಟುಕೊಂಡು, ಆ ಡಿಪಾಸಿಟ್ ಮೇಲೆ OD facility ತೆಗೆದುಕೊಂಡು ಮಾಡುತ್ತಿದ್ದರೆ. ಸರ್ಕಾರ ಮತ್ತು ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ? ತಮಗೆಲ್ಲಾ ಗೊತ್ತಿದೆ. ಆಯಾಕಟ್ಟಿನ ಮಂತ್ರಿ ಎಂದರೆ, ಅವರಿಗೆ ಅದೇ ಖಾತೆಯ ಮಂತ್ರಿ ಬೇಕು. ಏಕೆಂದರೆ, ಅಲ್ಲಿ ಹಣ ಜಾಸ್ತಿ ಇದೆ. ಅವರಿಗೆ ಆಯಾಕಟ್ಟಿನ ನಿಗಮ ಮತ್ತು ಮಂಡಳ ಬೇಕು. ಏಕೆಂದರೆ, ಅಲ್ಲಿ ಹಣ ಇರುತ್ತದೆ. ಇದು ಅವರಿಗೆ ಗೊತ್ತಿಲ್ಲವೇ? ನಾನು businessman ಇರಬಹುದು. ನಾನು fraud ಮಾಡಿ, business ಗೆ ಬಂದಿಲ್ಲ. ನಾನು ಕಷ್ಟಪಟ್ಟು ದುಡಿದು, business ಗೆ ಬಂದಿದ್ದೇನೆ. ಮಾನ್ಯ ಸದಸ್ಯರು ಒಂದು ಸತ್ಯ ಹೇಳಿದರು. ಈಗ ಐವತ್ತು ಲಕ್ಷ ರೂಪಾಯಿಗಳ ಮೇಲೆ R.T.G.S. ಮಾಡಬೇಕಾದರೆ, ನನಗೂ ಸಹ ಫೋನ್ ಮಾಡಿ ಕೇಳುತ್ತಾರೆ. ಮೊನ್ನೆಯ ದಿವಸ ನಾನು ಸುಮಾರು ಆರೂವರೆ ಕೋಟಿ ರೂಪಾಯಿಯನ್ನು ಟ್ರಾನ್ಸ್‌ಫರ್ ಮಾಡಬೇಕಾಗಿತ್ತು. ಆಗ ನಾನು ಅಧಿವೇಶನದಲ್ಲಿದೆ. ಆದುದರಿಂದ ನಾನು ಅವರ ಫೋನ್‌ಗೆ ಸಿಗಲಿಲ್ಲ. ನನ್ನ ಪಿ.ಎ.ಗೆ ಮಾಡಿ confirm ಮಾಡಿದ ಮೇಲೆ ಅದನ್ನು ಟ್ರಾನ್ಸ್‌ಫರ್ ಮಾಡಿದರು. ಇಷ್ಟೆಲ್ಲಾ ವ್ಯವಸ್ಥೆ ಇದೆ. ಈಗ ತಾವು ಆರ್ಥಿಕ ಇಲಾಖೆಗೆ ಹೋದರೆ, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ತಮ್ಮನ್ನು ಎಷ್ಟು ಬಾರಿ ಓಡಾಡಿಸುತ್ತಾರೆಂದು ಹೇಳಲಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾಗ ನನಗೆ ಮೂವತ್ತು ಲಕ್ಷ ರೂಪಾಯಿ ನೀಡಿದರು. ನಾನು ಮೂವತ್ತು ಲಕ್ಷವನ್ನು ಭಿಕ್ಷೆ ಬೇಡಿದ್ದಕ್ಕಿಂತ ಜಾಸ್ತಿ ಕೊಟ್ಟುಬಿಟ್ಟರು. ಆದರೆ, ಆ ಹಣಕ್ಕೆ ಅದಕ್ಕಿಂತ ಹೆಚ್ಚಿನ ಬಾರಿ ನನ್ನನ್ನು ಓಡಾಡಿಸಿದರು. ಈ ಪರಿಶಿಷ್ಟ ವರ್ಗ ಏನಿದೆ, ಅವರಿಗೆ ಮೂವತ್ತು ಲಕ್ಷ ಹಣವನ್ನು ಖರ್ಚು ಮಾಡುವುದಕ್ಕೆ ಕೊಟ್ಟಿದ್ದು. ಅಧಿಕಾರಿಗಳು ಇಷ್ಟೆಲ್ಲಾ strict vigil ಮಾಡುತ್ತಾರಲ್ಲ. ಅವರು ಇದರಲ್ಲಿ ಏಕೆ ಮಾಡಲಿಲ್ಲ? ಇದು ಸರ್ಕಾರದ ಲೋಪವಲ್ಲವೇ? ಇದು ಸರ್ಕಾರದ ಲೋಪವಲ್ಲವೆಂದರೆ, ನಾನು ಮಾತನೇ ಆಡುವುದಿಲ್ಲ. ಹಾಗಾದರೆ, ಇದು ಯಾರ ಜವಾಬ್ದಾರಿ ಸ್ವಾಮಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸು ಇಲಾಖೆ ಇರಬಹುದು. They are the custodians of people's money. ತಾವು ನನಗೆ ಸಮಯ ಕೊಟ್ಟರೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇವತ್ತಿನ ದಿವಸ ನಾವುಗಳು ತೆರಿಗೆ ಕಟ್ಟುತ್ತೇವೆ. ಇದು ಕೇವಲ ಒಂದು sample ಅಷ್ಟೆ. ನನ್ನ ಕಣ್ಣಿಗೆ ಕಂಡ ಹಾಗೆ ಹೇಳುವುದಾದರೆ, ಮೊದಲು ಬಿ.ಬಿ.ಎಂ.ಪಿ.ಗೆ ಡಿ.ಡಿ.ಯ ಮುಖಾಂತರ ತೆರಿಗೆ ಕಟ್ಟುತ್ತಿದ್ದರು. ಇದು ತಮಗೆಲ್ಲಾ ಗೊತ್ತಿದೆ. ನಾನು ಒಂದು ಬಾರಿ ಮಹದೇವಪುರ ಬಿ.ಬಿ.ಎಂ.ಪಿ.ಯಲ್ಲಿ ನನ್ನ ಬಿಲ್ಡಿಂಗ್‌ನ ತೆರಿಗೆ ಕಟ್ಟುವುದಕ್ಕೆ ಹೋಗಿದ್ದೆ. ಅಲ್ಲಿ ಅವರು ಡಿ.ಡಿ. ತೆಗೆದುಕೊಂಡು ಹೋದರು, ಮತ್ತೆ ಡಿ.ಡಿ. ನಂಬರ್ ಅನ್ನು entry ಮಾಡಿ, ರಸೀದಿ ಕೊಟ್ಟರು. ಅವರು ನನಗೆ ಡಿ.ಡಿ.ಯನ್ನು ಪುನಃ ವಾಪಸ್ಸು ನೀಡಿದರು.

(538) 18.07.2024 05.00 LL-AK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಗೋವಿಂದ ರಾಜು (ಮುಂದು):-**

ನಾನು, "ಏನಪ್ಪಾ ಡಿ.ಡಿ. ತಂದು ವಾಪಸ್ಸು ಕೊಟ್ಟೆ" ಎಂದು ಕೇಳಿದೆನು. ಅದಕ್ಕೆ ಅವನು, "ಆ ಡಿ.ಡಿ.ಯನ್ನು ನಿನ್ನ ಅಕೌಂಟ್‌ಗೆ ಹಾಕೋ ಹೋಗಣ್ಣಾ" ಎಂದು ಹೇಳಿದನು. ಆನಂತರ ನನಗೆ ರಸೀದಿ ತೆಗೆದುಕೊಟ್ಟನು. ರಸೀದಿ ಬಂದಾಯಿತು, ಡಿ.ಡಿ. ವಾಪಸ್ಸು ತೆಗೆದುಕೊಂಡ. ಆ ಡಿ.ಡಿ. ಯನ್ನು ಕ್ಯಾನ್ಸಲ್ ಮಾಡಿ, ಆತನ ಅಕೌಂಟಿಗೆ ಕ್ರೆಡಿಟ್ ಮಾಡಿಕೊಂಡನು. ಈ ರೀತಿ ಬಹಳಷ್ಟು ಪ್ರಕರಣಗಳು ನಡೆಯುತ್ತಿವೆ. ಇದನ್ನು ನೋಡಿದರೆ ನಮಗೆ ಹೊಟ್ಟೆ ಉರಿಯುತ್ತದೆ. ಇವೊತ್ತಿನ ದಿವಸ ಸರಿಯಾಗಿ ತೆರಿಗೆ ಕಟ್ಟುವಂತಹವನಿಗೆ ಎಷ್ಟು ಹೊಟ್ಟೆ ಉರಿಯುತ್ತದೆಯೆಂದರೆ, ಆ ಹೊಟ್ಟೆ ಉರಿಯಿಂದ ಈ ಮಾತನ್ನು ಹೇಳುತ್ತಿದ್ದೇವೆ.

ಇವೊತ್ತಿನ ದಿವಸ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ವಾಲ್ಮೀಕಿ ಮಹರ್ಷಿಗಳ ಮೂರ್ತಿ ಮಾಡಿ ಇಟ್ಟಿದ್ದೇವೆ. ಅದು ಎಷ್ಟು ಚೆಂದವಾದ ಮೂರ್ತಿ, ಅದು ಎಷ್ಟು ಪ್ರಶಾಂತವಾಗಿ ಇರುವಂತಹ ಜಾಗ ಅದು. ಇವೊತ್ತಿನ ದಿವಸ ನಮ್ಮ ವಾಲ್ಮೀಕಿ ಮಹರ್ಷಿಗಳು ಪ್ರಶಾಂತವಾಗಿ ಕುಳಿತಿದ್ದಾರೆಯೇ? ನಾವು ಅಲ್ಲಿಂದಲೇ ನಮ್ಮ ಪ್ರತಿಭಟನೆಯನ್ನು ಪ್ರಾರಂಭ ಮಾಡುತ್ತೇವೆ. ಏಕೆಂದರೆ, ಅವೊತ್ತಿನ ದಿವಸ ಅವರನ್ನು ಅಲ್ಲಿ ಕೂರಿಸಿದ್ದು ನಾವೇ. ಇವೊತ್ತಿನ ದಿವಸ ಅಲ್ಲಿಂದ ಪ್ರತಿಭಟನೆ ಪ್ರಾರಂಭ ಮಾಡುವುದು ಕೂಡ ನಾವೇ. ಹಾಗಾಗಿ, ಆ ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಡಿದ್ದು ಏತಕ್ಕೆ, ಆ ನಿಗಮದಲ್ಲಿ ಹಣ ಇಟ್ಟಿದ್ದು ಏತಕ್ಕೆ ಮತ್ತು ಇಂತಹ ಹಗರಣಗಳು ಆಗುವುದು ಏತಕ್ಕೆ?

ಇವೊತ್ತಿನ ದಿವಸ ನಾವು ದಿವಂಗತ ದೇವರಾಜು ಅರಸುರವರನ್ನು ಹಿಂದುಳಿದ ವರ್ಗಗಳ ನಾಯಕರೆಂದು ನಾವೆಲ್ಲರೂ ನೆನಪಿಸಿಕೊಳ್ಳಬೇಕು. ಇವೊತ್ತಿನ ದಿವಸ ಸಂವಿಧಾನಕ್ಕೆ ಡಾ: ಬಿ.ಆರ್. ಅಂಬೇಡ್ಕರ್‌ರವರನ್ನು ಏನು ನೆನಪಿಸಿಕೊಳ್ಳುತ್ತಾರೆ, ಅದೇ ರೀತಿ ಹಿಂದುಳಿದ ವರ್ಗಗಳನ್ನು ಉದ್ಧಾರ ಮಾಡಿದಂತಹ ಆ ನಾಯಕರನ್ನು ಇಂದು ನೆನಪಿಸಿಕೊಳ್ಳಬೇಕು. ಅವರು ಈ ರೀತಿ ಯಾವುದು ಒಂದು ನಿಗಮಗಳನ್ನು ಮಾಡಿರಲಿಲ್ಲ. ಒಕ್ಕಲಿಗರಿಗೆ ಒಂದು ನಿಗಮ ಅಥವಾ ಲಿಂಗಾಯಿತರಿಗೆ ಒಂದು ನಿಗಮ ಎಂದು ಮಾಡಿರಲಿಲ್ಲ. ಆ ನಿಗಮಗಳಲ್ಲಿ ದುಡ್ಡೇ ಇಲ್ಲ. ಇತ್ತೀಚೆಗೆ ಶ್ರೀ ದೇವರಾಜು ಅರಸು ಟ್ರಕ್ ಟರ್ಮಿನಲ್ ಎಂದು ಮಾಡಿರುವುದನ್ನು ನಾವು ನೋಡಿದ್ದೇವೆ. ಈ ಬಗ್ಗೆ ನಾನು ಸುಮಾರು ಬಾರಿ ಅಂದುಕೊಳ್ಳುತ್ತಿದ್ದೇನೆಂದರೆ, ಎಲ್ಲಿದೆ ಈ ಟ್ರಕ್ ಟರ್ಮಿನಲ್, ಎಲ್ಲಿಗೆ ಹಣ ಕೊಡುತ್ತಿದ್ದಾರೆ, ಏತಕ್ಕೆ ಇದಕ್ಕೆ ಅಧ್ಯಕ್ಷರನ್ನು ನೇಮಕ ಮಾಡುತ್ತಿದ್ದಾರೆ. ಅಲ್ಲಿ ಟ್ರಕ್ ಇಲ್ಲ, ಟರ್ಮಿನಲ್ ಕೂಡ ಇಲ್ಲ. ಆದರೆ, ಹಣ ಮಾತ್ರ ಬಂದು, ನಂತರ ಹೋಯಿತು. ಹೀಗೆ ನಾನು ಉದಾಹರಣೆಗೆ ಹೇಳುತ್ತಿರುವುದು. ಅದಕ್ಕೆ ಸರ್ಕಾರದವರು ನಾನು ಬಿಜೆಪಿ ಎಂ.ಎಲ್.ಸಿ. ಎಂದು ಹೇಳಬಹುದು. ಆದರೆ, ಬಿಜೆಪಿಯಲ್ಲಿಯೂ ಇದ್ದಾರೆ. ಎಲ್ಲಾ ಪಕ್ಷದಲ್ಲಿಯೂ ಮತ್ತು ಎಲ್ಲಾ ಸರ್ಕಾರಗಳಲ್ಲಿಯೂ ಇದು ನಡೆಯುತ್ತಿರುತ್ತದೆ. ಆದರೂ ಸಹ, ಮಾನ್ಯ ಸಿದ್ದರಾಮಯ್ಯನವರು 14 ಬಾರಿ ಬಜೆಟ್ ಮಂಡನೆ ಮಾಡಿದಂತಹ ವ್ಯಕ್ತಿ. ಆರ್ಥಿಕ ಇಲಾಖೆ ಬಗ್ಗೆ ಹೆಚ್ಚಿನ ಮಾಹಿತಿ ಇರುವಂತಹ ವ್ಯಕ್ತಿ. ಇದೇ ಸರ್ಕಾರದಲ್ಲಿ ಶ್ರೀ ಕೃಷ್ಣಭೈರೇಗೌಡರವರಂತಹ ವ್ಯಕ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗಿಂತಲೂ ಬಹಳ ಬುದ್ಧಿವಂತರೆಂದು ಅವರನ್ನು

ಜಿ.ಎಸ್.ಟಿ. ಕೌನ್ಸಿಲ್ ಮೀಟಿಂಗ್ ಕಳುಹಿಸುತ್ತಾರೆ. ಈ ರೀತಿ ಎಲ್ಲಾ ಕಡೆ ತಮ್ಮ ಪ್ರಾವಿಣ್ಯತೆಯನ್ನು ಪ್ರದರ್ಶನ ಮಾಡುತ್ತಾರಲ್ಲವೇ, ಈ ಸರ್ಕಾರದಲ್ಲಿ ಏನಾಗುತ್ತಿದೆ ಎಂದು ನಾವು ಯಾರನ್ನು ಕೇಳಬೇಕು? ನಾವು ಬರುತ್ತೇವೆ, ನೀವು ನಮಗೆ ಟಿ.ಎ./ಡಿ.ಎ. ಕೊಡುತ್ತೀರಿ, ಊಟ ಕೊಡಿಸುತ್ತೀರಿ ಅದನ್ನು ಮಾಡಿಕೊಂಡು ನಾವು ಸುಮ್ಮನೆ ಹೋಗಬೇಕೇ? ನೀವು ಏನು ಕೇಳಬೇಡಿ. ನಾವು ಏನು ಬೇಕು ಅದನ್ನು ಮಾಡಿಕೊಳ್ಳುತ್ತೇವೆ. ನಮಗೆ ಸರ್ಕಾರ ನಡೆಸುವುದಕ್ಕೆ ನಮಗೆ ಗೊತ್ತಿದೆ ಎಂದು ಹೇಳಲಿ. ನಾವೆಲ್ಲರೂ ಖಾಲಿ ಮಾಡಿಕೊಂಡು ಹೋಗುತ್ತೇವೆ. ಆ ಸಮುದಾಯವನ್ನು ಪ್ರತಿನಿಧಿಸಿರುವಂತಹ ಹೆಣ್ಣುಮಗಳು ಇವೊತ್ತಿನ ದಿವಸ ಹೇಳುತ್ತಿರುವುದನ್ನು ನೋಡಿದಾಗ, ಇವರಿಗೆ ಅಯ್ಯೋ ಅನ್ನಿಸಿಲ್ಲವೇ? ನಾನು ನಿನ್ನೆಯ ದಿವಸ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡುವಾಗ ಈ ವಿಚಾರ ಮಾತನಾಡಿದೆ. ಆಗ ನನ್ನ ಪ್ರಶ್ನೆಗೆ ಮಾನ್ಯ ಸಭಾನಾಯಕರು ಉತ್ತರ ನೀಡಿರುತ್ತಾರೆ.

ಇವೊತ್ತಿನ ದಿವಸ ಮಲೆನಾಡು ಭಾಗದಲ್ಲಿ ಹೋಗಿ ಬುಡಕಟ್ಟು ಸಮುದಾಯ ಎಂದು ಏನು ಹೇಳುತ್ತಿದ್ದಾರೆ, ಆ ಬುಡಕಟ್ಟು ಸಮುದಾಯದಲ್ಲಿರುವಂತಹ ಹೆಚ್ಚಿನ ಕುಟುಂಬಗಳು ಎಸ್‌ಟಿ ಸಮುದಾಯಕ್ಕೆ ಸೇರಿದವರು.

**ಶ್ರೀ ಎನ್. ರವಿಕುಮಾರ್ (ತಮ್ಮ ಸ್ಥಾನದಲ್ಲಿ ಕುಳಿತುಕೊಂಡು):-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಅವರನ್ನು ಬುಡ ಸಮೇತ ಮುಳುಗಿಸಿದ್ದಾರೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಹೌದು. ಆ ಬುಡನೂ ಇಲ್ಲ. ಅವರು ಬದುಕುವುದಕ್ಕೆ ಜಾಗ ಕೂಡ ಇಲ್ಲ. ಈ ಬಗ್ಗೆ ದಿನಪತ್ರಿಕೆಯಲ್ಲಿ ತಾವು ಕೂಡ ನೋಡುತ್ತಿರುತ್ತೀರಿ. ಅವರಿಗೆ ಆರೋಗ್ಯ ಸಮಸ್ಯೆಯಾದಾಗ, ಅವರನ್ನು ಯಾವ ರೀತಿ ಚಟ್ಟ ಮಾದರಿ ಕಟ್ಟಿ ಅವರನ್ನು ಹೊತ್ತುಕೊಂಡು ಬರುತ್ತಾರೆ.

**ಶ್ರೀ ಐವನ್ ಡಿ ಸೋಜಾ:-** ಮಾನ್ಯ ಸಭಾಪತಿಯವರೇ, ಬೋವಿ ಅಭಿವೃದ್ಧಿ ನಿಗಮದಲ್ಲಿ ಮುಳುಗಿಸಿದ್ದಾರೆ. ದಯಮಾಡಿ, ಅದರ ಬಗ್ಗೆಯೂ ಸಹ ಮಾತನಾಡಿ.

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ ಸೋಜಾರವರೇ ದಯಮಾಡಿ ಕುಳಿತುಕೊಳ್ಳಿ. ಅವರು ತಮ್ಮ ಮಾತನ್ನು ಪೂರ್ಣಗೊಳಿಸಲಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬುಡಕಟ್ಟು ಸಮುದಾಯದವರನ್ನು ಬುಡಸಮೇತ ಮುಳುಗಿಸಿದ್ದಾರೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಐವನ್ ಡಿ ಸೋಜಾರವರೇ, ತಾವು ಮಲೆನಾಡು ಭಾಗವನ್ನು ಪ್ರತಿನಿಧಿಸುವವರಾಗಿದ್ದು, ತಾವು ಸತ್ಯ ಹೇಳಬೇಕು. ನಿಮ್ಮ ಮಲೆನಾಡು ಭಾಗದಲ್ಲಿ ಬುಡಕಟ್ಟು ಜನಾಂಗದ ಜನರ ಪರಿಸ್ಥಿತಿ ಇವೊತ್ತಿನ ದಿವಸ ಯಾವ ರೀತಿ ಇದೆ. ಅವರು ಯಾವ ಸಮುದಾಯಕ್ಕೆ ಸೇರಿದವರು? ಅವರಿಗೆ ಸರ್ಕಾರದಿಂದ ಯಾವೆಲ್ಲಾ ಸೌಲಭ್ಯಗಳು ನೀಡಲಾಗುತ್ತಿದೆ ಮತ್ತು ಅವು ಎಷ್ಟರಮಟ್ಟಿಗೆ ಜನರ ಕೈ ಸೇರುತ್ತಿದೆ ಮತ್ತು ಇದರ ಮಧ್ಯದಲ್ಲಿ ಹಣ ಎಲ್ಲಿ ಹೋಗುತ್ತಿದೆ. ಇದರ ಬಗ್ಗೆ ತಾವು ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳಬೇಕು ಮತ್ತು

ಮುಂದಿನ ಕೆಡಿಪಿ ಸಭೆಗೆ ತಾವು ಹೋದಾಗ ತಮ್ಮ ಭಾಗದಲ್ಲಿ ತಾವು ಈ ವಿಷಯದ ಬಗ್ಗೆ ಪ್ರಶ್ನೆ ಮಾಡಬೇಕು. ನಾನು ಈ ವಿಷಯವನ್ನು ಸಮಾಜದ ಒಳಿತಿಗಾಗಿ ಮಾತನಾಡುತ್ತಿರುವುದು. ಬದಲಾಗಿ, ನಿಮ್ಮ ಸರ್ಕಾರ, ನಮ್ಮ ಸರ್ಕಾರ ಎಂದು ಅಲ್ಲ. ಎಲ್ಲಾ ಸರ್ಕಾರದಲ್ಲಿಯೂ ಕೂಡ ಇದು ಆಗಿದೆ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ಈ ಹಂತದಲ್ಲಿನ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**ವೈಸ್ ಛೇರ್ಮನ್:-** ಮಾನ್ಯ ಗೋವಿಂದ ರಾಜುರವರೇ ತಾವು ಮಾತ್ರ ಮಾತನಾಡಿ. ಅವರು ಯೀಲ್ಡ್ ಆಗಿರುವುದಿಲ್ಲ.

**(ಗೊಂದಲ)**

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ನಾನು ಏತಕ್ಕೆ ಈ ಮಾತನ್ನು ಹೇಳಿದ್ದೇನೆಂದರೆ, ಹಗರಣ ಎಂದರೆ ನಾನು ಮತ್ತೊಂದು ಮಾತನ್ನು ಹೇಳುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಗೋವಿಂದ ರಾಜುರವರೇ, ಇನ್ನು 2 ನಿಮಿಷದಲ್ಲಿ ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಇನ್ನು 10 ನಿಮಿಷ ಕಾಲಾವಕಾಶ ನೀಡಿ ಸಾಕು.

**ವೈಸ್ ಛೇರ್ಮನ್:-** 10 ನಿಮಿಷ ಇಲ್ಲ. ಕೇವಲ 2 ನಿಮಿಷದಲ್ಲಿ ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ರಾಮನಗರದಲ್ಲಿ ನಡೆದಂತಹ ಒಂದು ಸತ್ಯ ಘಟನೆಯನ್ನು ನಾನು ಹೇಳುತ್ತೇನೆ. ಅಲ್ಲಿನ ಜಿಲ್ಲಾ ಪಂಚಾಯತಿಯ ಒಬ್ಬ ಅಕೌಂಟ್ಸ್ ಆಫೀಸರ್ 7 ಕೋಟಿ ರೂಪಾಯಿ ಹಣವನ್ನು ಡ್ರಾ ಮಾಡಿರುವುದು ತಮಗೆಲ್ಲಾ ಗೊತ್ತಿರುತ್ತದೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಗೋವಿಂದ ರಾಜುರವರೇ, ತಾವು ಪೀಠದ ಕಡೆ ತಿರುಗಿ ಮಾತನಾಡಿ ಮತ್ತು ಬೇಗ ಮುಗಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಆತ 7 ಕೋಟಿ ರೂಪಾಯಿ ಹಣವನ್ನು ಇದೇ ರೀತಿ ಓಪನ್ ಆಗಿ ಡ್ರಾ ಮಾಡಿಕೊಂಡಿರುತ್ತಾನೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಗೋವಿಂದ ರಾಜುರವರೇ, ತಾವು ಪೀಠದ ಕಡೆ ತಿರುಗಿ ಮಾತನಾಡಿ ಮತ್ತು 2 ನಿಮಿಷದಲ್ಲಿಯೇ ಮುಗಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಆ 7 ಕೋಟಿ ರೂಪಾಯಿ ಹಣ ಏನಾಗಿದೆ ಎಂಬುದು ಇವೊತ್ತಿಗೂ ಸಹ ಯಾರಿಗೂ ಗೊತ್ತಿರುವುದಿಲ್ಲ. ಏತಕ್ಕಾಗಿ ನಾವೆಲ್ಲರೂ ಈ ರೀತಿ ಒತ್ತಾಯ ಮಾಡುತ್ತಿದ್ದೇವೆಂದರೆ, ಸರ್ಕಾರದ ಕೋಟಿಗಟ್ಟಲೆ ಹಣ ಈ ನಮೂನೆ ಅಕೌಂಟ್‌ನಿಂದ ಅಕೌಂಟ್‌ಗೆ ವರ್ಗಾವಣೆ ಆದಾಗ, ಅಕೌಂಟೇ ಇಲ್ಲದೇ ಸರ್ಕಾರಕ್ಕೆ ಬರುವಂತಹ ಹಣ ಎಲ್ಲಿ ಜಮೆ ಆಗುತ್ತದೆ. ಆ ಹಣ ಯಾವ ರೀತಿ ದುರುಪಯೋಗ ಆಗುತ್ತಿರಬಹುದು. ಇದಕ್ಕೆ ಪೂರಕವಾಗಿ ಒಂದು ಘಟನೆ ಕೋಲಾರದಲ್ಲಿ ಆಗಿದ್ದನ್ನು ನಾನು ತಮಗೆ ಹೇಳುತ್ತೇನೆ. ಇನ್ನು ಆ ಪ್ರಕರಣದ ತನಿಖೆ ನಡೆಯುತ್ತಿದ್ದು, ಮೊನ್ನೆಯ ದಿವಸ ಸಬ್-ರಿಜಿಸ್ಟ್ರಾರ್‌ಗೆ reinstate ಆಯಿತು. ಈ ಹಿಂದೆ ಸಬ್-ರಿಜಿಸ್ಟ್ರಾರ್ ಕಛೇರಿಯಲ್ಲಿ ಹಣವನ್ನು ಡಿ.ಡಿ. ಹಣ ಬಿಟ್ಟು, ಉಳಿದ ಹಣವನ್ನು ನಗದು ರೂಪದಲ್ಲಿ ಕಟ್ಟಿಸಿಕೊಳ್ಳುತ್ತಿದ್ದರು. ಅಲ್ಲಿ ಓರ್ವ ಮಹಿಳೆ ಅನುಕಂಪದ ಆಧಾರದ ಮೇರೆಗೆ ಡಿ ಗ್ರೂಪ್ ನೌಕರಳಾಗಿ ಕೆಲಸ ಮಾಡುತ್ತಿದ್ದರು. ಪ್ರತಿದಿನ ನಗದು ರೂಪದಲ್ಲಿ ಪಡೆದಂತಹ ಹಣವನ್ನು ತುಂಬಲು ಚಲನ್ ಎಂಟ್ರಿ ಮಾಡಿ ಕೊಟ್ಟಿದ್ದನ್ನು ಆಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಪಾವತಿ ಮಾಡಿ ಬರುತ್ತಿದ್ದರು. ಸಬ್-ರಿಜಿಸ್ಟ್ರಾರ್‌ರವರು ಎಲ್ಲಾ ವಿಷಯಗಳ ಬಗ್ಗೆ ಗಮನಹರಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಇದನ್ನು ದುರುಪಯೋಗಪಡಿಸಿಕೊಂಡ ಆ ಮಹಿಳೆ ಪ್ರತಿದಿನ ಹಣ ತೆಗೆದುಕೊಂಡು ಬ್ಯಾಂಕ್‌ಗೆ ಹೋಗಿ, ಆ ಬ್ಯಾಂಕ್‌ನ ಕ್ಲರ್ಕ್‌ನ ಜೊತೆ ಹೊಂದಾಣಿಕೆ ಮಾಡಿಕೊಂಡು, ಹಣ ಪಾವತಿ ಮಾಡದೆಯೇ ಚಲನ್‌ಗೆ ಸೀಲ್ ಹಾಕಿಸಿಕೊಂಡು ಬರುತ್ತಿದ್ದಳು. ಇದರಿಂದಾಗಿ, ಸುಮಾರು 52 ಲಕ್ಷ ರೂಪಾಯಿ ಹಣ ಬ್ಯಾಂಕ್ ಖಾತೆಗೆ ಜಮಾ ಆಗಿರುವುದಿಲ್ಲ. ಸದರಿ ಪ್ರಕರಣ ಇನ್ನೂ ಬಾಕಿ ಇರುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ಗೋವಿಂದರಾಜುರವರೇ, ಬೇಗ ತಮ್ಮ ಮಾತನ್ನು ಮುಗಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ನಾನು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈಗ ನಾನು ನಮ್ಮ ಮನೆಗೆ ಯಜಮಾನ. ಎಲ್ಲಾ ಆಸ್ತಿಯನ್ನು ನಾನೇ ಸಂಪಾದನೆ ಮಾಡಿರುವುದು. ನಮ್ಮ ಅಪ್ಪನ ಆಸ್ತಿ ನನ್ನ ಹತ್ತಿರ ಏನೂ ಇರುವುದಿಲ್ಲ. ಆದರೂ ಸಹ, ನಮ್ಮ ಮಕ್ಕಳು ಕೆಟ್ಟು, ದಾರಿ ತಪ್ಪಿ ಮನೆಯಿಂದ ಆಚೆ ಹೋದಾಗ ಜನ ಏನು ಹೇಳುತ್ತಾರೆಂದರೆ, "ಈತ ಇಷ್ಟೊಂದು ಆಸ್ತಿ ಮಾತ್ರ ಮಾಡಿದ್ದಾನೆ, ಮಕ್ಕಳನ್ನು ಸರಿ ದಾರಿಯಲ್ಲಿ ನಡೆಸಲಿಲ್ಲ" ಎಂದು ನಮ್ಮನ್ನು ಕೇಳುವುದಿಲ್ಲವೇ? ಅದೇ ರೀತಿಯಾಗಿ, ನಾವು ನಿಮ್ಮ ಈ ಸರ್ಕಾರದ ಮುಖ್ಯಮಂತ್ರಿಗಳನ್ನು ಕೇಳುತ್ತಿರುವುದು.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಬೆಂಬಲ ಸೂಚಿಸಿದರು)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ನಡವಳಿಯನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, ನಾನು ಯಾವುದಾದರೂ ಒಂದು ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡು, ನಾನು ಅಪರಾಧಿ ಮನೋಭಾವದಿಂದ ರಾಜೀನಾಮೆ ಕೊಟ್ಟಾಗ ಮನುಷ್ಯ ಯಾವ ರೀತಿ ಇರುತ್ತಾನೆ, ಪಟಾಲಂ ಸಮೇತ ಹೋಗಿ ರಾಜೀನಾಮೆ ಕೊಟ್ಟಾಗ ಯಾವ ರೀತಿ

ಇರುತ್ತಾನೆ ಎಂಬುದನ್ನು ಟಿ.ವಿ. ಯವರು ವಿಶ್ಲೇಷಣೆ ಮಾಡುತ್ತಿದ್ದನ್ನು ನಾನು ನೋಡಿದೆನು. ಅದನ್ನು ನಾವು ವಿಶ್ಲೇಷಣೆ ಮಾಡಿದ್ದಲ್ಲ. ಹಾಗಾಗಿ, ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸರಿ ಇದ್ದರೆ, ಅವರ ಸಚಿವ ಸಂಪುಟ ಸರಿ ಇರುತ್ತದೆ. ಸಚಿವ ಸಂಪುಟ ಚೆನ್ನಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟ ಚೆನ್ನಾಗಿದ್ದರೆ, ನಾವು ಮತ್ತು ನೀವೆಲ್ಲರೂ ಚೆನ್ನಾಗಿರುತ್ತೇವೆ. ಹೌದು, ತಪ್ಪಾಗಿದೆ. ಆ ತಪ್ಪನ್ನು ಒಪ್ಪಿಕೊಳ್ಳಬೇಕು.

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಯಡಿಯೂರಪ್ಪನವರು ಜೈಲಿನಿಂದ ಹೊರಗೆ ಬರುವಾಗ ಕೈಯಿಂದ ವಿಜಯದ ಸಂಕೇತ ತೋರಿಸಿಕೊಂಡು ಬಂದರು.

**(ಗೊಂದಲ)**

**ವೈಸ್ ಛೇರ್ಮನ್:-** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ತಪ್ಪಾಗಿದೆ. ಆಗಿರುವ ತಪ್ಪನ್ನು ಒಪ್ಪಿಕೊಳ್ಳಿ. ಅದನ್ನು ತಿದ್ದಿಕೊಂಡು, ಮುಂದೆ ಈ ರೀತಿಯ ತಪ್ಪುಗಳ ಆಗದ ರೀತಿ ನೋಡಿಕೊಂಡು, ಜನರ ಹಣವನ್ನು ಉಳಿಸಿಕೊಳ್ಳಿ ಎನ್ನುವುದು ನನ್ನ ಒಂದು ಸವಿನಯ ಪ್ರಾರ್ಥನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆಗಳನ್ನು ತಿಳಿಸಿ, ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ. ನಾನು ಪ್ರಾರಂಭದಿಂದ ಈ ಚರ್ಚೆಯನ್ನು ಬಹಳ ತಾಳ್ಮೆಯಿಂದ ಕೇಳಿದ್ದೇನೆ. ಆದರೆ, ಈಗ ಒಬ್ಬರಲ್ಲ ಇಬ್ಬಿಬ್ಬರು ಅಂದರೆ, ಮಾನ್ಯ ಯು.ಬಿ. ವೆಂಕಟೇಶ್‌ರವರು ಮತ್ತು ಮಾನ್ಯ ಐವನ್ ಡಿ ಸೋಜಾರವರು ನನ್ನ ವಿರುದ್ಧ ಮಾತನಾಡಲು ತಯಾರಾಗಿದ್ದಾರೆ. ದಯಮಾಡಿ ಅವರಿಬ್ಬರೂ ಸಹ ನನ್ನ ಮಾತನ್ನು ತಾಳ್ಮೆಯಿಂದ ಕೇಳಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ಇಡೀ ರಾಜ್ಯವೇ ಒಂದರ್ಥದಲ್ಲಿ ದಿಗ್ಭ್ರಮೆ ಪಡುವಂತಹ ರೀತಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಇಡೀ ಸರ್ಕಾರದ ವ್ಯವಸ್ಥೆಯನ್ನೇ ಉಪಯೋಗ ಮಾಡಿ, 187 ಕೋಟಿ ರೂಪಾಯಿಗಳ ಒಂದು ಹಗರಣ ನಡೆದಿದೆ.

(ಮುಂದು)

(539) 18-07-2024 (5.10) ವೈಎಲ್-ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ರೂ. 89.00 ಕೋಟಿಯಾಗಿದೆ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಮಗೆ ಯಾವ ರೀತಿ ಹೇಳಬೇಕೆಂದು ಅರ್ಥವಾಗುತ್ತಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು ಎಂದು ಹೇಳಿದ್ದೆನು.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಹೇಳುತ್ತೇನೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾತನಾಡುವಾಗ ಅವರು ಮಾತನಾಡಲಿ. ಏತಕ್ಕೆ ರೂ.187.00 ಕೋಟಿ ಎಂಬುದನ್ನು ನಾನು ಹೇಳುತ್ತಿದ್ದು, ರೂ. 187.00 ಕೋಟಿಗಳನ್ನು ಬೇರೆ ಖಾತೆಗೆ ಹಾಕಿದ್ದು ಹೌದಲ್ಲವೇ? ಅದರಲ್ಲಿ ರೂ.87.00 ಕೋಟಿ ದುರುಪಯೋಗ ಮಾಡಲಿಕ್ಕೆ ಸಾಧ್ಯವಾಗಿದ್ದು. ಅದರ ಮಧ್ಯೆ ವಿಷಯ ಬಯಲಾಗಿತ್ತು. ಹಾಗಾಗಿ, ಆ ಪಾಪದವರ ಹಣ ಉಳಿದಿದೆ. ಬಹುಶಃ ಈ ಸದನವು ಅದರ ಆತ್ಮಸಾಕ್ಷಿಗೆ ಪ್ರಶ್ನೆ ಮಾಡಿಕೊಳ್ಳಬೇಕಾದಂಥ ಹಗರಣವಾಗಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭ್ಯುದಯಕ್ಕೆ ಇಟ್ಟಂತಹ ದುಡ್ಡನ್ನು, ಗುಡ್ಡಗಾಡು-ಪರಿಶಿಷ್ಟ ಪಂಗಡದ ದುಡ್ಡನ್ನು, ತಮ್ಮ ಬದುಕು ಕಟ್ಟಿಕೊಳ್ಳಲಿಕ್ಕೆ ಕಷ್ಟಪಡುತ್ತಿರುವಂಥ ಆ ಸಮಾಜದ ಹಣವನ್ನು ಈ ರೀತಿಯಾಗಿ ನುಂಗಿ ನೀರು ಕುಡಿದು ಈಗ ಆ ಹಗರಣ ಹೊರಗೆ ಬಂದಾಗ ನಿಜವಾಗಿಯೂ ಇಡೀ ಸದನದ ಸದಸ್ಯರೆಲ್ಲರೂ ಒಂದಾಗಿ ಖಂಡನೆ ಮಾಡಬೇಕಾಗಿತ್ತು ಮತ್ತು ಪ್ರಶ್ನೆ ಮಾಡಿಕೊಳ್ಳಬೇಕಾಗಿತ್ತು. ಇಲ್ಲಿ ಮಂತ್ರಿಗಳಾಗಿ ಕುಳಿತುಕೊಂಡು ಅವರ ಮಾತು, ನಡವಳಿಕೆ ಗಮನಿಸಿದಾಗ ಇದೊಂದು ಹಗರಣವೇ ಅಲ್ಲ ಎನ್ನುವ ರೀತಿಯಲ್ಲಿ ಹಗುರವಾಗಿ ಮಾತನಾಡುವುದನ್ನು ನೋಡಿದರೆ ಬೇಸರವಾಗುತ್ತದೆ. ಅವರು ಈ ಹಗರಣದ ಜವಾಬ್ದಾರಿ ತೆಗೆದುಕೊಳ್ಳಬೇಕಾಗಿತ್ತು. ಯಾವುದೇ ಆಧಾರ ಇಲ್ಲದೇ ಪರ್ಸೆಂಟೇಜ್ ಹೆಸರನ್ನು ಹಾಕಿ,... ಇವತ್ತು ಆಡಳಿತಕ್ಕೆ ಬಂದಿದ್ದಾರೆ. ಸರ್ಕಾರಕ್ಕೆ ಯಾವ ಆಧಾರ ಇತ್ತು? ಪೋಸ್ಟರ್‌ಗಳನ್ನು ಅಂಟಿಸುವಾಗ ಯಾವ ಆಧಾರ ಇತ್ತು?

ಇಡೀ ವ್ಯವಸ್ಥೆ ಯಾವ ಆಧಾರದ ಮೇಲೆ ಹೇಗೆ ಆಗಿದೆ ಎಂದು ಹೇಳುವಂಥ ಪ್ರತಿಯೊಂದು ವಿವರ ಇವತ್ತು ಸಾರ್ವಜನಿಕರ ಮುಂದೆ ಇದೆ. ಸಾರ್ವಜನಿಕರು ಬಹಳ ಆಸಕ್ತಿಯಿಂದ "ಅಧಿವೇಶನ ನಡೆಯುತ್ತಿದ್ದು, ಇಷ್ಟೊಂದು ದೊಡ್ಡದಾಗಿ ಆಗಿರುವ ಹಗರಣದ ಬಗ್ಗೆ ನಮ್ಮ ಮತವನ್ನು ಪಡೆದುಕೊಂಡು ಬಂದಿರುವಂತಹ ಆಡಳಿತವನ್ನು ನಡೆಸುತ್ತಿರುವ, ಜನರು ಜವಾಬ್ದಾರಿಯುತ ಸ್ಥಾನದಲ್ಲಿ ಕೂರಿಸಿರುವ ಸರ್ಕಾರವು ಈ ಹಗರಣವನ್ನು ಯಾವ ರೀತಿಯಲ್ಲಿ ನೋಡುತ್ತದೆ" ಎಂಬುದನ್ನು ಕಾತುರದಿಂದ ಕಾಯುತ್ತಿದ್ದಾರೆ. ಆದರೆ, ಇಲ್ಲಿ ಸರ್ಕಾರದವರು ಆ ತಪ್ಪು ಮಾಡಲಿಲ್ಲವೋ, ಈ ತಪ್ಪು ಮಾಡಲಿಲ್ಲವೋ ಎಂದು ಹೇಳುತ್ತಿದ್ದು, ಒಂದು ತಪ್ಪು ಇನ್ನೊಂದು ತಪ್ಪಿಗೆ ಸಮರ್ಥನೆಯಾಗುವುದಿಲ್ಲ. ತಪ್ಪಾಗಿದೆ ಎಂದರೆ, ಆ ತಪ್ಪನ್ನು ಯಾರೇ ಮಾಡಲಿ, ಅವರ ಮೇಲೆ ಕ್ರಮ ತೆಗೆದುಕೊಂಡು ಜನರ ವಿಶ್ವಾಸ ಗಳಿಸುವಂಥ ಸ್ಥಾನದಲ್ಲಿ ಆಡಳಿತ ಪಕ್ಷದವರು ಕುಳಿತಿದ್ದಾರೆ. ಹಾಗೆಯೇ ನಾವು ಪ್ರತಿಪಕ್ಷದಲ್ಲಿ ಕುಳಿತಿದ್ದು, ಈ ಹಗರಣದ ಬಗ್ಗೆ ಸರ್ಕಾರ ಏನು ಮಾಡುತ್ತದೆ, ಎಷ್ಟು ಎಚ್ಚರಿಕೆಯಿಂದ ನಡೆದುಕೊಳ್ಳುತ್ತದೆ, ಯಾವ ರೀತಿ ಇದಕ್ಕೆ ಪರಿಹಾರ ಕೊಡುತ್ತದೆ ಎಂದು ಕೇಳುವಂಥ ಜವಾಬ್ದಾರಿಯುತ ಸ್ಥಾನದಲ್ಲಿ ನಮ್ಮನ್ನು ಕೂರಿಸಿದ್ದಾರೆ. ಆದರೆ, ಸರ್ಕಾರ ನಡೆದುಕೊಳ್ಳುವಂಥ ರೀತಿಯನ್ನು ನೋಡಿದಾಗ ಸಹಜವಾಗಿ ಇದರಲ್ಲಿ ಏನೋ ಮುಚ್ಚಿಡುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಎಂದು ನಮ್ಮಗಲ್ಲ, ಜನರಿಗೆ ಸಂಶಯ ಬರುತ್ತಿದೆ. ಈ ಸದನದಲ್ಲಿ ಒಂದು ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರುವ ಪ್ರಸ್ತಾವವನ್ನು ಮಂಡನೆ ಮಾಡಿದ್ದು, ಆ ನಿಲುವಳಿ ಮಂಡನೆಯೇ ಚರ್ಚೆಗೆ

ಬರಬಾರದು. ಆ ರೀತಿಯಾಗಿ ಅದಕ್ಕೆ ಕಾನೂನಿನ, ನಿಯಮದ ಲೇಪನ ಕೊಟ್ಟು ಅಲ್ಲಿಂದಲೇ ಚರ್ಚೆಯಾಗಬಾರದೆಂದು ಪ್ರಾರಂಭ ಮಾಡುತ್ತಾರೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಪ್ಪು ಅಭಿಪ್ರಾಯ,...

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ.ಸೋಜಾರವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಪ್ರತಾಪಸಿಂಹ ನಾಯಕ್‌ರವರು ಮಾತನ್ನು ಮುಂದುವರೆಸಲಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇದು ಪೀಠ ಕೊಟ್ಟ ಆದೇಶ. ತಮ್ಮ ಆದೇಶದಂತೆ ನಡೆಯುತ್ತಿದ್ದೇವೆ. ನಿಮಗೆ insult ಮಾಡುತ್ತಾರೆ ಇವರು.

**(ಗೊಂದಲ)**

**ವೈಸ್ ಛೇರ್ಮನ್:-** ಈಗ ಪೀಠ ಆದೇಶ ಕೊಡುತ್ತದೆ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರತಾಪಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ನಾನು ಬೆಳಗಿನ ಜಾವ ವಿಧಾನಸೌಧಕ್ಕೆ ವಾಕಿಂಗ್ ಬರುತ್ತೇನೆ. ವಿಧಾನಸೌಧ ಮತ್ತು ವಿಕಾಸಸೌಧ ಮಧ್ಯದಲ್ಲಿ ಮಹಾತ್ಮಗಾಂಧಿಜೀಯವರ ಮೂರ್ತಿ ಇದೆ. ಕೇವಲ ಅವರ ಮೂರ್ತಿಯನ್ನು ಕೂರಿಸಿದರೆ ಸಾಕಾಗುವುದಿಲ್ಲ. ಅದರ ಕೆಳಗೆ ಅವರ ಮಾತುಗಳನ್ನು ಬರೆದಿದ್ದು, ಅದನ್ನು ಎಷ್ಟು ಮಂದಿ ಓದಿದ್ದಾರೆ ಎಂಬುದು ನನಗೆ ಗೊತ್ತಿಲ್ಲ, ನಾನಂತೂ ಓದಿದ್ದೇನೆ. ರಾಜಕೀಯ ಎಂದರೆ, ಒಂದು ಅಧ್ಯಾತ್ಮಿಕ ಪರಿಪಾಲನೆ. ನಮ್ಮ ಜವಾಬ್ದಾರಿ ಎಂಥದ್ದು? ಒಮ್ಮೊಮ್ಮೆ ಎಲ್ಲರ ನಡವಳಿಕೆ ನೋಡಿದಾಗ ಕಾಣಿಸುತ್ತದೆ. ಭ್ರಷ್ಟಾಚಾರ ಎನ್ನುವಂಥದು ಇದ್ದಿದ್ದೇ, ಇದಕ್ಕೆ ಪರಿಹಾರವೇ ಇಲ್ಲ ಎಂದು ಹೇಳುವಂಥ ನಿಷ್ಕರ್ಷೆಗೆ ಬಂದ ರೀತಿಯಲ್ಲಿ ನಾವು ವರ್ತಿಸುತ್ತಿದ್ದೇವೆ. ಎಷ್ಟೇ ಕತ್ತಲೆ ಇದ್ದರೂ, ಆ ಕತ್ತಲೆ ಮಧ್ಯೆ ಬೆಳಕನ್ನು ಹುಡುಕುವುದಕ್ಕೆ ನಮ್ಮನ್ನು ಇಲ್ಲಿಗೆ ಕಳುಹಿಸಿರುವಂಥದು. ಈ ವ್ಯವಸ್ಥೆಯನ್ನು ಏನಾದರೂ ಮಾಡಿ ಸರಿಪಡಿಸಲಿಕ್ಕೇ ನಮ್ಮನ್ನು ಇಲ್ಲಿಗೆ ಕಳುಹಿಸಿರುವುದು. ನಮ್ಮ ಜವಾಬ್ದಾರಿಯುತ ಸ್ಥಾನಕ್ಕೆ ನ್ಯಾಯ ಕೊಡಬೇಕು ಎಂದಾದರೆ ಅದರ ಕಡೆಗೆ ನಾವು ಗಮನಹರಿಸಬೇಕಲ್ಲವೇ? ಅದಕ್ಕಾಗಿಯೇ ನಾನು ಕೇಳಿದ್ದು, ನಮ್ಮಲ್ಲಿ ಆತ್ಮಸಾಕ್ಷಿ ಎಂಬುದು ಇಲ್ಲವೇ? ಪರಿಶಿಷ್ಟ ಪಂಗಡದ ಜನರ ರೂ.187.00 ಕೋಟಿ ಹಣವನ್ನು ಕೊಂಡು ಹೋಗುವ ರೀತಿಯಲ್ಲಿ ಮಾನಸಿಕವಾಗಿ ತಯಾರಾಗಿದ್ದೇವೆ ಎಂದಾದರೆ, ನಾವು ಎಲ್ಲಿಗೆ ಹೋಗಿ ತಲುಪುತ್ತಿದ್ದೇವೆ? ಇದು ಆಲೋಚನೆ ಮಾಡಬೇಕಾಗಿರುವ ವಿಷಯ ಅಲ್ಲವೇ? ಈ ದೇಶದ ಪ್ರಧಾನ ಮಂತ್ರಿಗಳೊಬ್ಬರು "ಕೇಂದ್ರದಿಂದ 100 ರೂಪಾಯಿಗಳನ್ನು ಕಳುಹಿಸಿದರೆ, ರಾಜ್ಯಕ್ಕೆ ಕೇವಲ 15 ರೂಪಾಯಿ ಮಾತ್ರ ಬರುತ್ತದೆ" ಎನ್ನುವಂಥ ಮಾತನ್ನು ಹೇಳಿದ್ದರು. ಅವರು ಹೇಳಿದಂಥ ಮಾತಿನಲ್ಲಿ ಒಂದು ಕಳಕಳಿ ಇರಬಹುದೆಂದು ನಾನು ತಿಳಿದುಕೊಳ್ಳುತ್ತೇನೆ. 100 ರೂಪಾಯಿಗಳನ್ನು ಕಳುಹಿಸಿರುವುದರಲ್ಲಿ 15 ರೂಪಾಯಿಗಳು ಬರುತ್ತದೆ ಎಂದಾದರೆ, ಉಳಿದ 85 ರೂಪಾಯಿಗಳನ್ನು

ಬೇರೆಡೆಗೆ ಹೋಗದ ರೀತಿಯಲ್ಲಿ ಏನು ಮಾಡಬೇಕು? ಈ ವ್ಯವಸ್ಥೆಯಲ್ಲಿ ಏನನ್ನು ಸರಿ ಮಾಡಬೇಕೆನ್ನುವಂಥ ಪ್ರಶ್ನೆಯೂ ಆ ಉತ್ತರದಲ್ಲಿತ್ತು. ಇವತ್ತು ಒಂದು ಸಣ್ಣ ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರು ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್‌ಗಾಂಧಿಯವರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ನಾನು ಯಾರೆಂದು ಹೆಸರನ್ನು ಹೇಳಲಿಲ್ಲ. ನಾನು ಮಾಜಿ ಪ್ರಧಾನಮಂತ್ರಿಗಳು ಹೇಳಿದಂಥ ಅಭಿಪ್ರಾಯವನ್ನು ಮಾತ್ರ ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಜನಸಾಮಾನ್ಯರಿಗೆ ತಪ್ಪು ಅಭಿಪ್ರಾಯ ಹೋಗಬಾರದೆಂದು ಹೇಳುತ್ತಿದ್ದೇನೆ. ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್‌ಗಾಂಧಿಯವರು 1986ನೇ ಸಾಲಿನಲ್ಲಿ ಹೇಳಿದ್ದು... Local Bodies ಎಲ್ಲಾ ಆ ಸಂದರ್ಭದಲ್ಲಿಯೇ ಆಗಿದ್ದು, 1973-74ನೇ ಸಾಲಿನಲ್ಲಿ amendment ಮಾಡಿ, ಏತಕ್ಕಾಗಿ ಮಾಡಿದರು ಎಂದು ಭಾಷಣ ಮಾಡುವಂಥ ಸಂದರ್ಭದಲ್ಲಿ "ದೆಹಲಿಯಿಂದ 100 ರೂಪಾಯಿಗಳನ್ನು ಕಳುಹಿಸಿದರೆ, ಗ್ರಾಮ ಪಂಚಾಯಿತಿಗೆ ಹೋಗುವಷ್ಟರಲ್ಲಿ 15 ರೂಪಾಯಿ ಆಗಿರುತ್ತದೆ" ಎಂದು ಹೇಳಿದ್ದರು. ನಮಗೂ ಕೂಡಾ ಬಹಳಷ್ಟು ಎಂ.ಎಲ್.ಸಿ. ಅನುದಾನ ಬರುತ್ತದೆ. ಸುಮಾರು ರೂ. 5,00,000 ಅನುದಾನವನ್ನು ನಾವು ಯಾರಿಗಾದರೂ ಕೊಟ್ಟರೆ, ಅದರಲ್ಲಿ ಜಿ.ಎಸ್.ಟಿ. ಸುಮಾರು ರೂ.1,50,000 ಹೋಗುತ್ತದೆ. ನಾನು ಎಂ.ಪಿ. ಅನುದಾನ ಪಡೆಯುತ್ತಿದ್ದಾಗ, ಆ ಎಂ.ಪಿ. ಅನುದಾನ ಕಳುಹಿಸಿದರೆ, ಇಲ್ಲಿಗೆ ಬರುವಷ್ಟರೊಳಗೆ ರೂ.2,00,000 ಆಗಿರುತ್ತದೆ. ಆ ರೀತಿ ಆಗಬಾರದು, direct ಆಗಿ ಹಣ ಬರಬೇಕು ಎಂದು ಅದರ ಅರ್ಥ. ಮಾನ್ಯ ಸದಸ್ಯರು ಹೇಳಿದ ವಿಚಾರಕ್ಕೆ ವಿರುದ್ಧವಾಗಿ ಹೇಳುತ್ತಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, administrative ನಲ್ಲಿ ಆಗುವುದನ್ನು ಆ ರೀತಿ ಆಗಬಾರದೆಂದು ಹೇಳಿದ್ದು.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಅವರ ಅಭಿಪ್ರಾಯವನ್ನು ಅವರು ಆ ರೀತಿ ಸಮರ್ಥನೆ ಮಾಡಿ ಹೇಳಿದ್ದಾರೆ. ಇದರ ಅರ್ಥ ಜನಸಾಮಾನ್ಯರಿಗೆ ಈ ರೀತಿಯಾಗಿ ನೇರ ಶಬ್ಧಗಳಲ್ಲಿ ಬಂದಿರುವಂಥ ಭಾವನೆ ಖಂಡಿತವಾಗಿ ಸುಳ್ಳಲ್ಲ. ಎಲ್ಲರಿಗೂ ಅವರವರ ಅಭಿಪ್ರಾಯ ಇಟ್ಟುಕೊಳ್ಳುವ ಸ್ವಾತಂತ್ರ್ಯ ಇದೆ. ಇದರ ಜೊತೆಗೆ ಒಟ್ಟು ವ್ಯವಸ್ಥೆಯನ್ನು ನೋಡಿದಾಗ ಇಲ್ಲಿ ಎರಡೂ ಸಂಗತಿಗಳ ಕುರಿತು ಈ ಸದನದಲ್ಲಿ ವಿಶೇಷವಾಗಿ ಚರ್ಚೆಯಾಗಬೇಕಾಗಿದೆ. ಅದು ಯಾವುದೆಂದರೆ, ಮೊದಲನೆಯದಾಗಿ ಯಾರೂ ತಪ್ಪು ಮಾಡಿದ್ದಾರೆ, ಅಂಥವರಿಗೆ ಇನ್ನು ಮುಂದೆ ಬೇರೆ ಯಾರಾದರೂ ತಪ್ಪು ಮಾಡಿದರೆ, ಅಂಥವರಿಗೂ ಕೂಡಾ ಎಚ್ಚರಿಕೆ ಮತ್ತು ಹೆದರಿಕೆ ಹುಟ್ಟಿಸುವ ರೀತಿಯಲ್ಲಿ ಕಾನೂನು ಕ್ರಮವಾಗಬೇಕು. ಆದರೆ, ಸರ್ಕಾರದವರ ನಡವಳಿಕೆ ನೋಡಿ, ಇಲ್ಲಿ ಚರ್ಚೆ ಮಾಡಬಾರದು ಎಂದು ಹೇಳುತ್ತಾರೆ. ಸರ್ಕಾರದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರೇ ನಾಗೇಂದ್ರರವರ ಹೆಸರನ್ನು ತೆಗೆಯಬಾರದು ಎಂದು ಹೇಳಿದರೆ, ಅವರ ಸಚಿವ ಸಂಪುಟದವರು ಕೂಡಾ ಏನೂ ತಪ್ಪು ಮಾಡಲಿಲ್ಲ ಎಂದು

ಹೇಳುತ್ತಾರೆ. ಹಾಗೆಯೇ ಹೊರಗೆ ವಿಚಾರಣೆ ನಡೆಯುತ್ತಿರುವಾಗಲೇ ಅವರಿಗೆ ಸರ್ಟಿಫಿಕೇಟ್ ಕೊಡುತ್ತಾರೆ. ಇದು ಏನನ್ನು ಸೂಚಿಸುತ್ತದೆ? ಸದನದಲ್ಲಿಯೇ ಒಬ್ಬರು ಅವರ ಹೆಸರನ್ನು ಎಫ್.ಐ.ಆರ್. ನಲ್ಲಿ ನಮೂದಿಸಿಲ್ಲ ಎಂದು ಹೇಳಿದ್ದರು. ಹಾಗಾದರೆ, ಯಾರು ಎಫ್.ಐ.ಆರ್.ನಲ್ಲಿ ಹೆಸರನ್ನು ನಮೂದಿಸಬೇಕಾಗಿತ್ತು? ಏತಕ್ಕಾಗಿ ಎಸ್.ಐ.ಟಿ. ರವರು ತಡಮಾಡಿದರು? ಇವತ್ತು ಅವರಾಗಲಿ, ಅವರ ನಂತರದ ನಿಗಮದ ಅಧ್ಯಕ್ಷರಾಗಲಿ ಆ ಹಣವನ್ನು ದುರುಪಯೋಗ ಮಾಡಿದ್ದಾರೆ ಎಂದು ಹೇಳುವಷ್ಟರ ಮಟ್ಟಿಗೆ ಬೆಳ್ಳಂಬೆಳಕಾಗುವ ರೀತಿ ಮತ್ತು ಇಡೀ ಜನಸಾಮಾನ್ಯರಿಗೂ ಅರ್ಥವಾಗುವಂಥ ರೀತಿ ಅವ್ಯವಹಾರ ನಡೆದಿದೆ. ಇಲ್ಲಿ ಸಮರ್ಥನೆ ಮಾಡಿದ ಹಾಗೆ ಮಾನ್ಯ ಮುಖ್ಯಮಂತ್ರಿಯವರು ಸಹ ಸಮರ್ಥನೆ ಮಾಡಿದರು.

(ಮುಂದು)

(540) 18.07.2024/5.20/ಎಸ್‌ಕೆ-ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ಮುಂದು):-**

187 ಕೋಟಿ ರೂಪಾಯಿಗಳಲ್ಲ, ಬರೀ 84 ಕೋಟಿ ರೂಪಾಯಿಗಳು ಎಂದು ಇಲ್ಲಿ ಸಮರ್ಥನೆ ಮಾಡಿದರು. ಅದು 84 ಕೋಟಿ ರೂಪಾಯಿಗಳಾದರೇ, ಅದು ಹಣವಲ್ಲವೇ? ಆ ಹಣ ದುರಪಯೋಗವಾಗಿದ್ದಲ್ಲವೇ?

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅದು ಏನೆಂದರೆ, ಒಂದಕ್ಕೆ ಎರಡು ಸುಳ್ಳು ಹೇಳುವುದು.

**ವೈಸ್ ಛೇರ್ಮನ್:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ಅವರು yield ಆಗಿಲ್ಲ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದ್ದು, ಯಾವುದು ಕೂಡ ಕಡತಕ್ಕೆ ಹೋಗಬಾರದು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಎಷ್ಟು ಹಣ ಹೋಗಿದೆ ಎಂದು ಹೇಳಿರುವುದನ್ನು ಬಿಟ್ಟರೆ, ಬಿ.ಜೆ.ಪಿ.ಯವರು ಒಂದಕ್ಕೆ ಹತ್ತು ಸುಳ್ಳು ಸೇರಿಸಿ, ಸುಳ್ಳು ಹೇಳುವುದು. ಅದನ್ನು ಆಮೇಲೆ ನಿಜ ಎಂದು ಹೇಳುವುದು. ...

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಕಾಂಗ್ರೆಸ್ ಪಕ್ಷದ ಹಾಗೇ ಸುಳ್ಳು ಹೇಳಿ, ಚುನಾವಣೆ ಗೆಲ್ಲುವಂತಹ ಪ್ರಾವಿಣ್ಯತೆ ನಮಗೆ ಇಲ್ಲ. ಸುಳ್ಳು ಹೇಳಿಯೇ....…

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ನೀವು account freeze ಮಾಡಿದಿರಿ. ಕೈ ಕಾಲು ಕಟ್ಟಿ ಹಾಕಿದಿರಿ ಮತ್ತು ದುಡ್ಡು ಇಲ್ಲದಂತೆ ಮಾಡಿದಿರಿ.

**(ಗೊಂದಲ)**

**ವೈಸ್ ಛೇರ್ಮನ್:-** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಐವನ್ ಡಿ' ಸೋಜಾರವರೇ, ಎಷ್ಟು ಬಾರಿ ಎದ್ದು ನಿಂತು ಮಾತನಾಡುತ್ತೀರಿ? ತಾವು ಕುಳಿತುಕೊಳ್ಳಿ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ನಿಯಮಗಳಲ್ಲಿ ಒಂದು ಕ್ರಮವಿದೆ. ಮಾನ್ಯ ಬಿ.ಕೆ. ಹರಿಪ್ರಸಾದ್‌ರವರೇ ಎದ್ದು ನಿಂತು, ನೀವು yield ಆಗುತ್ತೀರಾ ಎಂದು ಕೇಳಿದ ನಂತರ ಅವರು ಉತ್ತರವನ್ನು ಕೊಟ್ಟರು. ಇವರಿಗೆ ಯಾರಿಗಾದರೂ ನಿಯಮವನ್ನು ಅನುಸರಿಸುವ ಒಂದು ಕ್ರಮ ಗೊತ್ತಿದೆಯೆ?

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನದೊಂದು ಮಾತು ಇದೆ. ತಪ್ಪು ಎತ್ತಿಕೊಂಡು ಬಂದಾಗ, ತಾವು ನಿಬಂಧನೆ ಹೇಳಿದ್ದೀರಿ. ಈ ನಿಬಂಧನೆಯೊಳಗೆ ಅವರು ಮಾತನಾಡಲಿಲ್ಲ. ಈ ನಿಬಂಧನೆಗಳನ್ನು ಬಿಟ್ಟು ಮಾತನಾಡಿದಾಗ, ನಾವು ಏನು ಬೇಕಾದರೂ ಮಾತನಾಡಬಹುದು. ಆ ನಿಬಂಧನೆಯೊಳಗೆ ಮಾತನಾಡಿದಾಗ, ನಾವು ಮಾತನಾಡುವುದಿಲ್ಲ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಹೇಳುತ್ತಿದ್ದೇನೆ. ನನಗೆ ಗೊತ್ತಾಗಿರುವ ಒಬ್ಬರ ಹೆಸರನ್ನು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಿಬಂಧನೆಯಲ್ಲಿ ಹೀಗೆ ಮಾತನಾಡಬೇಕು. ಅದರ ಪ್ರಕಾರ ಮಾತನಾಡಬೇಕು. ...

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ವೆಂಕಟೇಶ್‌ರವರೇ, ಮಾನ್ಯ ಪ್ರತಾಪ ಸಿಂಹ ನಾಯಕ್‌ರವರು yield ಆಗಿಲ್ಲ. ತಾವು ಕುಳಿತುಕೊಳ್ಳಿ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ತಾವು ಬರೆದುಕೊಡಿ. ನಾನು ಅದೇ ರೀತಿಯಲ್ಲಿ ಮಾತನಾಡುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಅದು ಬೇಕಿಲ್ಲ. ಮಾನ್ಯ ಸಭಾಪತಿಯವರು ಏನು ಹೇಳಿದ್ದಾರೋ, ಅದನ್ನು ತಾವು ಫಾಲೋ ಮಾಡಿ. ತಾವು ಫಾಲೋ ಮಾಡಿದರೆ, ಆಗ ನಾವು ಮಾತನಾಡುವುದಿಲ್ಲ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

**ವೈಸ್ ಛೇರ್ಮನ್:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ನನಗೆ ಕೊಟ್ಟಿರುವಂತಹ ಸ್ವಲ್ಪ ಸಮಯದಲ್ಲಿ ನಾನು ಹೇಳಬೇಕಾಗಿರುವಂತಹದ್ದನ್ನು ಹೇಳುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪಸಿಂಹ ನಾಯಕ್‌ರವರೇ, ತಮ್ಮ ಮಾತನ್ನು ಎರಡು ನಿಮಿಷಗಳಲ್ಲಿ ಮುಗಿಸಿ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಇದರ ಬಗ್ಗೆ ವಿಶೇಷವಾಗಿ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಅದಕ್ಕೋಸ್ಕರವಾಗಿ ಹೇಳಿದೆ. ಎಸ್.ಐ.ಟಿ., ಯ ಪ್ರತಿಯೊಂದರ ಮೇಲೆ ಅಪನಂಬಿಕೆ ಏಕೆ ಎಂದು ಹೇಳಿದರೆ, ಈ ರೀತಿಯ ಸಣ್ಣ ಸಣ್ಣ ಸಂಗತಿಗಳು ನಡೆದಾಗ, ನಂಬಿಕೆ ಬರುವುದಕ್ಕೆ ಹೇಗೆ ಸಾಧ್ಯ? ಜವಾಬ್ದಾರಿ ಸ್ಥಾನದಲ್ಲಿರುವವರೇ ತಪ್ಪು ಮಾಡಲಿಲ್ಲ ಎಂದು ಹೇಳುತ್ತಾರೆ. ಎಫ್.ಐ.ಆರ್. ನಲ್ಲಿ ಅವರ ಹೆಸರನ್ನು ಸೇರಿಸುವುದಿಲ್ಲ. ಇದಕ್ಕೆ ಒತ್ತಡ ಬಂದಾಗ ರಾಜೀನಾಮೆಗಳನ್ನು ಕೊಡಿಸುತ್ತಾರೆ. ರಾಜೀನಾಮೆ ಕೊಡಿಸಿದ ಮೇಲೆಯೂ ಕೂಡ ಅವರ ಹೆಸರನ್ನು ಇನ್ನೂ ಎಫ್.ಐ.ಆರ್.ಗೆ ಸೇರಿಸಲಿಲ್ಲ.

**ಶ್ರೀ ಬಿ. ಝಡ್. ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಅವರನ್ನು ಯಾರು ಒತ್ತಡ ಮಾಡಿಲ್ಲ. ಅವರಾಗಿಯೇ ಅವರು ರಾಜೀನಾಮೆ ಕೊಟ್ಟಿರುವುದು. ಯಾರು ಒತ್ತಡ ಮಾಡಿಲ್ಲ ಮತ್ತು ಯಾರು ರಾಜೀನಾಮೆ ಕೇಳಿಲ್ಲ.

**ವೈಸ್ ಛೇರ್ಮನ್:-** ಕೊನೆಯದಾಗಿ, ಮಂತ್ರಿಗಳು ಉತ್ತರ ಕೊಡುತ್ತಾರೆ. ಆಗ ಹೇಳಿ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಅದು ಗೊತ್ತಾಗುತ್ತದೆ. ಏಕೆಂದರೆ, ಅವರು ರಾಜೀನಾಮೆ ಕೊಡದಿದ್ದರೆ, ಯಾರ ಬುಡಕ್ಕೆ ಬರುತ್ತದೆ ಎಂದು ಹೇಳುವಂತಹ ಹೆದರಿಕೆಯಲ್ಲಿಯೇ ಮೊದಲ ಬಲಿಪಶುವಾಗಿ ಅವರು ಒಂದು ರಾಜೀನಾಮೆ ಕೊಟ್ಟಿದ್ದು. ಏಕೆಂದರೆ, ಇಷ್ಟೊಂದು ದೊಡ್ಡ ಮೊತ್ತವನ್ನು ಒಬ್ಬರು ಈ ರೀತಿಯಲ್ಲಿ ದುರಪಯೋಗ ಮಾಡುತ್ತಾರೆಂದು ಹೇಳುವುದಾದರೆ, ಅವರಿಗಿಂತ ಮೇಲಿನವರು ಮತ್ತು ಆ ಸಂದರ್ಭದ ಕುರಿತಾಗಿ ಎಲ್ಲರೂ ಅದನ್ನು ಹೇಳಿದರು. ನಾನು ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇಲ್ಲಿ ಕುಳಿತಿರುವವರೆಲ್ಲಾ ಬಾಂಡ್‌ನ ಬಗ್ಗೆ ಸಮರ್ಥನೆ ಮಾಡಿ ಎಂದು ಹೇಳುತ್ತಾರೆ. ಲೋಕಸಭೆಯೊಳಗೆ ಮಸೂದೆಯನ್ನು ಮಾಡಿ, ಎಲ್ಲರೂ ಒಂದು ಪಾರ್ಟಿಯನ್ನು ಹೊರತುಪಡಿಸಿ, ...

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ಸರ್ವೋಚ್ಚ ನ್ಯಾಯಾಲಯ ಏನು ಹೇಳಿತು ಹೇಳಿ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ. :-** ಕಮ್ಯೂನಿಸ್ಟ್ ಪಾರ್ಟಿಯನ್ನು ಹೊರತುಪಡಿಸಿ, ಎಲ್ಲರೂ ಈ ಬಾಂಡ್ ವ್ಯವಸ್ಥೆಗೆ ಒಪ್ಪಿರುವಂತಹವರು. ಮಾನ್ಯ ಸರ್ವೋಚ್ಚ ನ್ಯಾಯಾಲಯ ಹೇಳಿರುವುದು, ಅದು ಸರಿಯಲ್ಲ ಎಂದು ಹೇಳುತ್ತಾರೆ ಎನ್ನುವುದಾದರೆ, ದಾಖಲೆಗೆ ಹೋಗುವ ದೃಷ್ಟಿಯಲ್ಲಿ ಹೇಳುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಅವರದು 38 percent share ಇದೆ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಎಲ್ಲಾ ಪಕ್ಷದವರು ಬಾಂಡ್‌ನ್ನು ತೆಗೆದುಕೊಂಡಿದ್ದಾರೆ. ಬಾಂಡ್ ತೆಗೆದುಕೊಳ್ಳದ ಪಾರ್ಟಿ ಇಲ್ಲಿ ಕುಳಿತವರಲ್ಲಿ ಯಾರು ಹೇಳಿ? ಎಲ್ಲರೂ ತೆಗೆದುಕೊಂಡಿದ್ದೀರಿ.

**ಶ್ರೀ ಐವನ್ ಡಿ' ಸೋಜಾ:-** ಅದನ್ನು ದುರಪಯೋಗ ಮಾಡಿದ್ದರಲ್ಲ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾತನಾಡುವಾಗ, ಬಾಂಡ್‌ನ ಹಣವನ್ನು ಏನಾದರೂ ನೀವು ವಾಪಸ್ಸು ಕೊಟ್ಟಿದ್ದೀರಾ?

**ಶ್ರೀ ಐವನ್ ಡಿ' ಸೋಜಾ:-** ಅವರು ED ಅನ್ನು ಮಾಡಿ. ....

**(ಗೊಂದಲ)**

**ವೈಸ್ ಛೇರ್ಮನ್:-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪ್ರತಾಪ ಸಿಂಹ ನಾಯಕ್‌ರವರು ಮಾತನಾಡಿದ್ದನ್ನು ಹೊರತುಪಡಿಸಿ, ಬೇರೆ ಯಾರದು ಕಡತಕ್ಕೆ ಹೋಗಬಾರದು. ದಯವಿಟ್ಟು, ಕುಳಿತುಕೊಳ್ಳಿ. ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ತಮಗೆ ಮಾತನಾಡಲು ಎಷ್ಟು ನಿಮಿಷ ಸಮಯ ಬೇಕು ಹೇಳಿ. ಇನ್ನು ತಮ್ಮ ಮಾತನ್ನು ಎರಡು ನಿಮಿಷದಲ್ಲಿ ಮುಗಿಸಿ

**(ಈ ಹಂತದಲ್ಲಿ ಮಾನ್ಯ ವೈಸ್ ಛೇರ್ಮನ್‌ರವರ ಆದೇಶದ ಮೇರೆಗೆ ಮಾನ್ಯ ಪ್ರತಾಪಸಿಂಹ ನಾಯಕ್‌ರವರು ಮಾತನಾಡಿದ್ದನ್ನು ಹೊರತುಪಡಿಸಿ ಇನ್ನುಳಿದ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಸಮೀಪದಲ್ಲಿಯೇ ಮುಗಿಸುತ್ತೇನೆ. ಮಾನ್ಯ ವೆಂಕಟೇಶಣ್ಣನವರೇ, ತಮ್ಮ ಆತ್ಮಸಾಕ್ಷಿ ಅಥವಾ ನಮ್ಮೆಲ್ಲರ ಆತ್ಮಸಾಕ್ಷಿಯನ್ನು ಪ್ರಶ್ನೆ ಮಾಡಿಕೊಳ್ಳುವುದೇನೆಂದರೆ, ಹಣವಿಲ್ಲದೇ ಇವತ್ತಿನ ಚುನಾವಣೆಗಳು ನಡೆಯುತ್ತದೆಯೇ? ಆ ತರಹದಲ್ಲಿ ಯಾವುದಾದರೂ ದಾರಿಯನ್ನು ಹುಡುಕಿತು. ಇಡೀ ಲೋಕಸಭೆಯಲ್ಲಿ ಮಸೂದೆಯನ್ನು ಮಂಡನೆ ಮಾಡಿ, ಕಾನೂನಾತ್ಮಕವಾಗಿ ಅಕೌಂಟ್ ಮೂಲಕವೇ ಬಂದಂತಹ ಹಣವಿದು. ಎಲ್ಲಾ ರಾಜಕೀಯ ಪಕ್ಷದವರು ತೆಗೆದುಕೊಂಡಿದ್ದಾರೆ. ಎಲ್ಲ ರಾಜಕೀಯ ಪಕ್ಷದವರು ಚುನಾವಣೆಯಲ್ಲಿ... **(ಗೊಂದಲ) ....**

**ಶ್ರೀ ಐವನ್ ಡಿ" ಸೋಜಾ:-** ಅರೆಸ್ಟ್ ಮಾಡಿಸಿ ಒಳಗಾಕಿಸಿ,

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ, ಕುಳಿತುಕೊಳ್ಳಿ. ತಾವು ಎಷ್ಟು ಬಾರಿ ಎದ್ದು ನಿಂತು ಮಾತನಾಡುತ್ತೀರಾ. ಯಾರು ಮಾತನಾಡಿದ್ದೂ ಕಡತಕ್ಕೆ ಹೋಗಬಾರದು.

**(ಮಾನ್ಯ ವೈಸ್ ಛೇರ್ಮನ್‌ರವರ ಆದೇಶದ ಮೇರೆಗೆ ಸದನದ ಈ ಹಂತದಲ್ಲಿನ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಎಲ್ಲಾ ಅಕೌಂಟ್‌ಗಳಲ್ಲಿ ಬಂದಂತಹ white ಹಣವನ್ನು ಕಾಂಗ್ರೆಸ್‌ನವರು ಚುನಾವಣೆಯಲ್ಲಿ ಸಂಗ್ರಹ ಮಾಡಿರುವುದನ್ನು ನಾನು ಹತ್ತಿರದಿಂದ

ನೋಡಿದ್ದೇನೆ. ಇದು ಹೇಗೆ ನಡೆಯಿತು ಎಂಬುದು ನನಗೆ ಗೊತ್ತಿದೆ. ಯಾವ್ಯಾವ ಕಂಪನಿಗಳಿಂದ ಎಷ್ಟು ಹಣವನ್ನು ತೆಗೆದುಕೊಂಡರು? ಆ ದುಡ್ಡು ಎಲ್ಲವೂ ಪಾರ್ಟಿಗೆ ಹೋಗುತ್ತದೆ ಎಂದು ಹೇಳುವಂತಹ ಪರಿಸ್ಥಿತಿ ಇರಲಿಲ್ಲ. ಇವತ್ತು ಬಾಂಡ್ ಬಂದಿದ್ದರಿಂದಾಗಿ, ಯಾವ ಹಣ ಬಂದಿದೆ? ಅದು ನೇರವಾಗಿ ಪಾರ್ಟಿಗೆ ಹೋಗಿದೆ. ಯಾರದಾದರೂ ಕಿಸೆಗೆ ಹೋಗಲಿಲ್ಲ. **(ಗೊಂದಲ)** ಯಾವುದೇ ಊರಿಗೆ ಹೋಗಿ, ಬಿ.ಜೆ.ಪಿ., ಅಫೀಸ್ ಇರುವುದನ್ನು ಬಿಟ್ಟು, ಕಾಂಗ್ರೆಸ್‌ನವರದ್ದು ಎಲ್ಲಾ ವೈಯಕ್ತಿಕ ಅಫೀಸ್‌ಗಳು ಇರುವಂತಹದ್ದು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋವಿಡ್ ಸಮಯದಲ್ಲಿ **(ಗೊಂದಲ)** ಪ್ರೈಮ್ ಮಿನಿಸ್ಟರ್ ಫಂಡ್ ಏನಾಯಿತು?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ಪೀಠದ ಕಡೆ ನೋಡಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ನಾಲ್ಕು ಕಾಂಗ್ರೆಸ್ ಆಫೀಸ್‌ಗಳು, ಪಾರ್ಟಿಯ ಅಫೀಸ್‌ಗಳು ಇಲ್ಲ. ಅವರವರ ಎಲ್ಲಾ ವೈಯಕ್ತಿಕ ಆಫೀಸ್‌ಗಳು.

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ತಮ್ಮ ಮಾತನ್ನು ಮುಗಿಸಿ.

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ. :-** ಮಾನ್ಯ ಸಭಾಪತಿಯವರೇ, ಯಾವಾಗ ಪಾರ್ಟಿ ಆಫೀಸ್ ಆಗುತ್ತಿತ್ತು ಎಂದರೆ, ಪಾರ್ಟಿಯ ಬದ್ಧತೆ ಜೊತೆಗಿದ್ದಾಗ ಮಾತ್ರ ಆಗುತ್ತಿತ್ತು. ಈ ಒಂದು ದೃಷ್ಟಿಯಲ್ಲಿ ಭಾರತೀಯ ಜನತಾ ಪಾರ್ಟಿಯು ಬದಲಾವಣೆಯನ್ನು ತರುವುದಕ್ಕೆ ಬಾಂಡ್ ತಂದಿತು. ಸರಿಯಲ್ಲ.

**ಶ್ರೀ ನಸೀರ್ ಅಹ್ಮದ್:-** ಪಿ.ಎಂ., ಕೇರ್ ಫಂಡ್ ಏತಕ್ಕೆ ತಂದಿದ್ದು?

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ನಸೀರ್ ಅಹ್ಮದ್‌ರವರೇ, ದಯವಿಟ್ಟು ತಾವು ಕುಳಿತುಕೊಳ್ಳಿ

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ತಾವು ಈ ಪೀಠವನ್ನು ನೋಡಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಲೂಟಿ ಮಾಡಿ ಹೋದವರು ಈಗ ನಮಗೆ ಪಾಠ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಸಿ.ಬಿ.ಐ.. ನಿಂದ ಹಿಡಿದು ಇ.ಡಿ., ಹೇಗೆ ಉಪಯೋಗಿಸಿದೆ ಎಂಬುದನ್ನು ಹೇಳುವಂತಹದ್ದು ನಮಗೂ ಗೊತ್ತಿದೆ. **(ಗೊಂದಲ)** ದೆಹಲಿಯ ಆಮ್ ಆದ್ಮಿ ಪಾರ್ಟಿಯ ಬಗ್ಗೆ ನಾವು ದೂರು ಕೊಟ್ಟಿಲ್ಲ, ದೂರು ಕೊಟ್ಟಿದ್ದು ಇದೇ ಕಾಂಗ್ರೆಸ್‌ನವರು. ಕಾಂಗ್ರೆಸ್‌ನವರಿಂದಲೇ ಎಫ್.ಐ.ಆರ್., ಆಗಿದ್ದು. ಅದು ಕಾಂಗ್ರೆಸ್‌ನವರಿಂದಾಗಿಯೇ ಇವತ್ತಿನ ದೆಹಲಿಯ ಮುಖ್ಯಮಂತ್ರಿಗಳು ಜೈಲಿನೊಳಗೆ ಹೋಗಿ ಕುಳಿತಿದ್ದು. ಆದರೆ ನ್ಯಾಯಾಂಗ ಅವರನ್ನು ಒಳಗೆ ಕಳುಹಿಸಿದೆ. ದೂರು ಮಾತ್ರ ನಮಗೆ ಇ.ಡಿ., ಇವರು ಮಾಡಿದಂತಹ ಅಪಚಾರಗಳಿಗೆ ಭ್ರಷ್ಟಾಚಾರದ ವಿರುದ್ಧ ಒಂದು ವೇಳೆ ಹೋರಾಟವಾದರೆ ತಪ್ಪೇನು? ಮಾನ್ಯ ಪ್ರಧಾನ ಮಂತ್ರಿಯವರು ಕಳೆದ ಹತ್ತು ವರ್ಷಗಳಲ್ಲಿ ಭ್ರಷ್ಟಾಚಾರದ ದೃಷ್ಟಿಯಿಂದ ತುಂಬಾ ಕಠಿಣವಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುವಂತಹದ್ದು. ಅಂಕಿ-ಸಂಖ್ಯೆಯ ಜೊತೆಗೆ ಇನ್ನೊಂದು ದಿನ ಚರ್ಚೆ ಮಾಡಬಹುದು.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ನಮ್ಮ ಪಾರ್ಟಿಯ ಮೇಲೆ . . .

**(ಗೊಂದಲ)**

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮತ್ತೆ ಏಕೆ **(ಗೊಂದಲ)** ಅವರನ್ನು arrest ಮಾಡುತ್ತಿದ್ದಾರೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ತಮ್ಮ ಮಾತನ್ನು ಬೇಗ ಮುಗಿಸಿ.

**(ಗೊಂದಲ)**

**ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ ಕಳೆದ ಹತ್ತು ವರ್ಷಗಳಲ್ಲಿ ಒಬ್ಬರು ಬಿ.ಜೆ.ಪಿ., ಮುಖಂಡರ ಮೇಲೆ ಇ.ಡಿ., ರೈಡ್ ಆಗಲೀ, ಸಿ.ಬಿ.ಐ., ರೈಡ್ ಆಗಲಿ ಆಗಿರುವುದನ್ನು ತೋರಿಸಿ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ತಮ್ಮ ಮಾತನ್ನು conclude ಮಾಡಿ. **(ಗೊಂದಲ)** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪ ಸಿಂಹ ನಾಯಕ್‌ರವರು ಮಾತನಾಡಿದ್ದು ಹೊರತುಪಡಿಸಿ, ಬೇರೆ ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ವೈಸ್ ಛೇರ್ಮನ್‌ರವರ ಆದೇಶದ ಮೇರೆಗೆ ಮಾನ್ಯ ಪ್ರತಾಪಸಿಂಹ ನಾಯಕ್‌ರವರು ಮಾತನಾಡಿದ್ದನ್ನು ಹೊರತುಪಡಿಸಿ ಇನ್ನುಳಿದವರು ಮಾತನಾಡಿದ್ದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ರಾಮ ಮಂದಿರದ ಉದ್ಘಾಟನೆಗೆ ಕರೆದಾಗ ಬರದವರು, ತಿಲಕ ಹಾಕುವಾಗ ತಿಲಕವನ್ನು ಒರೆಸುವವರು. "ರಾಮ" ಎಂದು ಹೆಸರು ಇಟ್ಟರೂ ಕೂಡ ರಾಮನ ಬಗ್ಗೆ ಲವಲೇಶವೂ ಭಕ್ತಿ ಇಲ್ಲದಂತಹವರು ನೀವು ಎದ್ದು ನಿಂತು ಏನು ಮಾತನಾಡುತ್ತೀದ್ದೀರಿ? ನಿಮಗೆ ರಾಮನ ಬಗ್ಗೆ ನಂಬಿಕೆ ಇಲ್ಲ. ನೀವು ರಾಮನ ವಿರೋಧಿಗಳು. ನೀವು ರಾಮನ ದ್ರೋಹಿಗಳು.

**ಶ್ರೀ ಎಸ್. ರವಿ:-** ಆ ಶ್ರೀರಾಮನ ...

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಇವರು ಶ್ರೀರಾಮನ ಮಂದಿರವನ್ನು ಕಟ್ಟುವುದು ಬೇಡ ಎಂದು ಹೇಳಿದವರು. ನಿಮಗಿಂತ **(ಗೊಂದಲ)** ನಮಗೂ ಮಾತನಾಡಲು ಬರುತ್ತದೆ. ಶ್ರೀರಾಮನ ಬಗ್ಗೆ ಬೈಯುವುದಕ್ಕಾಗಿಯಾದರೂ ಇವರು ಶ್ರೀರಾಮನ ಹೆಸರು ತೆಗೆದುಕೊಳ್ಳುತ್ತಿದ್ದಾರೆ. **(ಗೊಂದಲ)** ಶ್ರೀರಾಮನ ಬಗ್ಗೆ ನಾವು ಸಾಕಷ್ಟು ಪಾಠಗಳನ್ನು ಕೇಳಿದ್ದೇವೆ. ಶ್ರೀರಾಮ ಮಂದಿರವನ್ನು ನಾವು ....

**(ಗೊಂದಲ)**

**ವೈಸ್ ಛೇರ್ಮನ್:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ,... **(ಗೊಂದಲ)** ಜನ ನಿಮ್ಮನ್ನು ಸೋಲಿಸಿದ್ದಾರೆ.

**(ಗೊಂದಲ)**

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ನಾಲ್ಕುನೂರ ಇಪ್ಪತ್ತು. . . .

**(ಗೊಂದಲ)**

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅದು ಕೊಲೆ. ಈ ರೀತಿಯ ಬ್ರಹ್ಮಾಂಡ ಭ್ರಷ್ಟಾಚಾರ ಆಗಿರುವ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕಾಗಿರುವಂತಹದ್ದು.

(ಮುಂದು)

(541) 18.07.2024, 5.30, ಟಿಸಿಹೆಚ್-ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಮುಂದು):**

ಇನ್ನು ಮುಂದೆ ಈ ರೀತಿಯ ಭ್ರಷ್ಟಾಚಾರ ಆಗದ ರೀತಿಯಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುವಂತಹ ಯೋಚನೆ ಮತ್ತು ಯೋಜನೆಗಳು ಇಲ್ಲಿ ಚರ್ಚೆ ಆಗಬೇಕು. **(ಗೊಂದಲ)** ಬ್ರಹ್ಮಾಂಡ ಭ್ರಷ್ಟಾಚಾರ ಮಾಡಿ ಜೈಲಿಗೆ ಕಳುಹಿಸಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. Cheque ನಲ್ಲಿ ದುಡ್ಡು ತೆಗೆದುಕೊಂಡು ಜೈಲಿಗೆ ಹೋದವರು ನೀವು. . .

**(ಗೊಂದಲ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯಾಗಿರುವ ಶ್ರೀ ಡಿ.ಕೆ. ಶಿವಕುಮಾರ್ ರವರು ಜೈಲಿಗೆ ಹೋಗಿಲ್ಲವೇ? ಅವರು ಜೈಲಿನಲ್ಲಿ ಮುದ್ದೆ ಮುರಿಯಲಿಲ್ಲವೇ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ, ಅವರು ಮಾತನಾಡಲಿ. ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಅದನ್ನೆಲ್ಲಾ ಹೇಳುತ್ತಾರೆ. ಈಗ ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಉಪ ಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್ ರವರನ್ನು ನೀವು ಅಧಿಕಾರದಿಂದ ಇಳಿಸಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರು)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು . . . **(ಗೊಂದಲ)** ನಿಮಗೆ ನಾಚಿಕೆ ಆಗಬೇಕು.

**(ಗೊಂದಲ)**

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, . . **(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಶ್ರೀ ತಿಮ್ಮಾಪುರವರೇ ಹಾಗೂ ಶ್ರೀ ಪಿ.ಹೆಚ್.ಪೂಜಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, the House is not in order. ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ ಈ ರೀತಿ ಅವರಿಗೆ disturb ಮಾಡಿದರೆ ಯಾವ ರೀತಿ ಅವರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುತ್ತದೆಯೇ?

**(ಗೊಂದಲ)**

**ವೈಸ್ ಛೇರ್ಮನ್:-** ಶ್ರೀ ಪ್ರಕಾಶ್ ಕೆ.ರಾಥೋಡ್ ಹಾಗೂ ಶ್ರೀ ಎಸ್.ಎಲ್.ಭೋಜೇಗೌಡರವರೇ ತಾವು ಕುಳಿತುಕೊಳ್ಳಿ. **(ಗೊಂದಲ)** ಶ್ರೀ ಪ್ರತಾಪ್ ಸಿಂಹ ನಾಯಕ್‌ರವರೇ, ತಾವು ಒಂದೇ ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

**(ಗೊಂದಲ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಒಂದೇ ವಾಕ್ಯದಲ್ಲಿ ಮುಗಿಸುತ್ತೇನೆ., *'Caesar's wife should be above Suspicion,'* ಎಂಬ ಒಂದು ಮಾತಿದೆ.

**(ಗೊಂದಲ)**

**ಶ್ರೀ ನಸೀರ್ ಆಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಮಿತ್ ಶಾ ಗಡಿಪಾರು....

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ನಸೀರ್ ಆಹ್ಮದ್ ರವರೇ, ತಾವು ಏನು ಹೇಳುತ್ತಿದ್ದೀರಿ? ತಾವು ದಯವಿಟ್ಟು ಕುಳಿತುಕೊಳ್ಳಿ. ಅವರು ತಮ್ಮ ಮಾತನ್ನು ಮುಗಿಸಲಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಇಡೀ ಈ ವ್ಯವಸ್ಥೆಯ custodian ಎಂದು ಹೇಳುವಂತಹ ಶಬ್ದ ತುಂಬಾ ಬಾರಿ, trust ಅಥವಾ ವಿಶ್ವಸ್ಥರು ಯಾರು ಎಂದರೆ ಅದು ಸನ್ಮಾನ್ಯ ಮುಖ್ಯಮಂತ್ರಿಗಳು. ಅವರ ಕೈಕೆಳಗೆ ಆರ್ಥಿಕ ವ್ಯವಸ್ಥೆ ಇದೆ. ಅವರ ಕೈಕೆಳಗೆ ಎಲ್ಲಾ ಸಂಗತಿಗಳು ನಡೆಯುತ್ತಿವೆ ಮತ್ತು ಭ್ರಷ್ಟಾಚಾರದ ಬಗ್ಗೆ ಪರಿಶಿಷ್ಟ ಪಂಗಡದವರ ಬಗ್ಗೆ ಬಹಳ ಉದ್ದುದ್ದದ ಮಾತುಗಳನ್ನಾಡುತ್ತಾ, ನಾನು ಬಹಳ ಸತ್ಯಹರಿಶ್ಚಂದ್ರ **(ಗೊಂದಲ)** ಎಂದು ಹೇಳುತ್ತಾರೆ. "ಸಂವಿಧಾನ" ಎಂದು ಮಾತನಾಡುವಂಥವರು ಇದರ ನೈತಿಕ ಜವಾಬ್ದಾರಿಯ ಜೊತೆಗೆ ಎಲ್ಲಾ ರೀತಿಯಿಂದಲೂ ಈ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ಧರಾಮಯ್ಯನವರೇ ಹೊಣೆ ಎಂದು ಹೇಳುವಂಥದ್ದನ್ನು ಹೇಳುತ್ತಾ, ಸನ್ಮಾನ್ಯ ಸಿದ್ಧರಾಮಯ್ಯನವರು ಅವರ ಮಾತಿನಲ್ಲೇ ಹೇಳುವುದಾದರೆ ಸ್ವಲ್ಪವಾದರೂ ಅದೇನೋ ಹೇಳುತ್ತಾರೆ . . . ಇದ್ದರೆ **(ಗೊಂದಲ)** ಅವರು ರಾಜೀನಾಮೆ ಕೊಡಬೇಕೆಂದು ನಾನು ತಮ್ಮ ಮೂಲಕ ಆಗ್ರಹಿಸುತ್ತೇನೆ.

**(ಗೊಂದಲ)**

**ಶ್ರೀ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀ ಅಮಿತ್‌ಶಾ ಸಾಹೇಬರನ್ನು ಭ್ರಷ್ಟಾಚಾರಕ್ಕಾಗಿ ಸುಮ್ಮನೆ ಜೈಲಿಗೆ ಕಳುಹಿಸುತ್ತೀರಾ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. . .

**(ಗೊಂದಲ)**

**ವೈಸ್ ಛೇರ್ಮನ್:-** ಶ್ರೀ ಎನ್.ರವಿಕುಮಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಶ್ರೀ ಅಮಿತ್‌ಶಾ ರವರು ಮಿಠಾಯಿ ತಿಂದುಬಿಟ್ಟು ಜೈಲಿಗೆ ಹೋಗಿದ್ದರೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀಮತಿ ಇಂದಿರಾ ಗಾಂಧಿ ಮತ್ತು ಪಂಡಿತ್ ಜವಾಹರ್ ಲಾಲ್ ನೆಹರು ರವರೇ ಜೈಲಿಗೆ ಹೋಗಿದ್ದರು. ಅವರು ಏಕೆ ಹೋಗಿದ್ದರು? ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗಿದ್ದರು.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರು)**

**ವೈಸ್ ಛೇರ್ಮನ್:-** ಶ್ರೀ ಎನ್.ರವಿಕುಮಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ . . .

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, POCSO (Protection of Children from Sexual Offences) case……

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಕೆ.ಶಿವಕುಮಾರ್ ರವರು ಸ್ವಾತಂತ್ರ್ಯ ಹೋರಾಟ ಮಾಡಿ ಜೈಲಿಗೆ ಹೋಗಿದ್ದರೇ? ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗಿದ್ದರು.

**(ಗೊಂದಲ)**

**ವೈಸ್ ಛೇರ್ಮನ್:-** ಶ್ರೀ ಎನ್.ರವಿಕುಮಾರ್ ರವರೇ, ಹಾಗೂ ಐವನ್ ಡಿ'ಸೋಜಾ ರವರೇ ತಾವುಗಳು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಎನ್.ರವಿಕುಮಾರ್ ರವರು ಶ್ರೀಮತಿ ಇಂದಿರಾ ಗಾಂಧಿಯವರ ಹೆಸರನ್ನು ತೆಗೆದುಕೊಂಡಿದ್ದಾರೆ. ಇವರಿಗೆ ಅವರ ಹೆಸರು ಹೇಳುವುದಕ್ಕೆ ಯೋಗ್ಯತೆ ಇದೆಯೇ? How can the hon'ble member take the name of Smt. Indira Gandhi?

**(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದುನಿಂತು ಮಾತನಾಡಿದರು)**

**ವೈಸ್ ಛೇರ್ಮನ್:-** ಶ್ರೀ ಸಲೀಂ ಅಹಮದ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಇವರ ನಾಯಕರಾಗಿದ್ದಂತಹ ಶ್ರೀ ಅಟಲ್‌ಬಿಹಾರಿ ವಾಜಪೇಯಿಯವರು Parliament ನಲ್ಲಿ ಏನು ಹೇಳಿದ್ದಾರೆಂದು ತಿಳಿದುಕೊಳ್ಳಲಿ. **(ಗೊಂದಲ)** ಅವರು ಏನು ಹೇಳಿದ್ದಾರೆಂದು ಇವರಿಗೆ ಗೊತ್ತಿಲ್ಲ. ಅವರು ಏನು ಹೇಳಿದ್ದಾರೆಂದು ಮೊದಲು ತಿಳಿದುಕೊಳ್ಳಲಿ. ಅದರ ಎ,ಬಿ,ಸಿ,ಡಿ,...ನೂ ಗೊತ್ತಿಲ್ಲ ಇವರಿಗೆ.

**(ಗೊಂದಲ)**

**ವೈಸ್ ಛೇರ್ಮನ್:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ... .

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಬಗ್ಗೆ ಮೊನ್ನೆಯಿಂದ ನಮ್ಮ ಪಕ್ಷದ ಮುಖಂಡರಾದ ಮಾನ್ಯ ಸಿ.ಟಿ. ರವಿಯವರಿಂದ ಹಿಡಿದು, ಇಷ್ಟೊತ್ತಿನವರೆಗೆ ಮಾತನಾಡಿದಂತಹ ಅನೇಕ ಮಾನ್ಯ ಸದಸ್ಯರುಗಳು ಕಳೆದ ಒಂದೂವರೆ ತಿಂಗಳ ಅವಧಿಯಲ್ಲಿ ನಡೆದಂತಹ ಘಟನಾವಳಿಗಳ ಕುರಿತು ಅಂಕಿ-ಅಂಶಗಳ ಸಮೇತ ಸವಿಸ್ತಾರವಾದ ಮಾಹಿತಿಯನ್ನು ನೀಡಿದ್ದಾರೆ. ಮತ್ತೊಮ್ಮೆ ಆ ವಿಷಯಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕೇವಲ ಎರಡು-ಮೂರು ವಿಷಯಗಳ ಬಗ್ಗೆ ಸದನದ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಯವರಾದ ಶ್ರೀ ಚಂದ್ರಶೇಖರ್ ಎಂಬುವರು ಆತ್ಮಹತ್ಯೆ ಮಾಡಿಕೊಂಡಿರುವ ಜೊತೆಗೆ ಡೆತ್‌ನೋಟ್ ಬರೆದಿಡದೇ ಇದ್ದಿದ್ದರೆ, ಈ ಹಗರಣ ಹೊರಗೆ ಬರುತ್ತಿರಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದು. ಅಷ್ಟೇ ಏಕೆ, ಅದರ ಬಗ್ಗೆ ಹೊಗೆ ಕೂಡ ಆಡುತ್ತಿರಲಿಲ್ಲ. ಈ ರೀತಿಯಾಗಿ ಅವೆಲ್ಲಾ ಹಣದ ಬಗ್ಗೆ Work Done Certificate ಹಾಗೂ Well-Done Certificate ಆಗಿಂದಾಗ್ಗೆ ಮಂಜೂರಾಗಿ ಹೋಗಿಬಿಡುತ್ತಿತ್ತು. ಸನ್ಮಾನ್ಯ ಶ್ರೀ ಯಡಿಯೂರಪ್ಪನವರ ಕಾಲದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮವನ್ನು ಈ ಸಮುದಾಯದವರ ಬಗ್ಗೆ ವಿಶೇಷ ಕಳಕಳಿ ಹೊಂದಿ ಹಲವಾರು ವರ್ಷಗಳಿಂದಲೂ ತುಳಿತಕ್ಕೆ ಒಳಗಾದಂತಹ ಆ ಪಂಗಡದ ಜನಕ್ಕೆ ಸಮಬಾಳು, ಸಮಪಾಲು ಸಿಗಬೇಕು; ಅವರ ಅಭಿವೃದ್ಧಿ ಆ ಹಣದ ಮುಖಾಂತರ ಆಗಿ ಅವರು ಕೂಡ ಎಲ್ಲರಂತೆ ಮುಖ್ಯವಾಹಿನಿಯಲ್ಲಿ ಬರಬೇಕು ಎಂದು ಉದ್ದೇಶಿಸಲಾಗಿತ್ತು. ಆದರೆ ಇವತ್ತಿನ ದಿವಸ ಆ ದಿಸೆಯಲ್ಲಿ

ಈ ಹಣ ನೇರ ಸಾಲ, LPS (Land Purchase Scheme), ಉದ್ಯಮ ಮಾಡತಕ್ಕಂಥ ಬಡವರಿಗೆ, ಹೊರ ದೇಶಗಳಿಗೆ ವ್ಯಾಸಂಗಕ್ಕೆ ಹೋಗತಕ್ಕಂಥ ವಿದ್ಯಾರ್ಥಿಗಳಿಗೂ ಕೂಡ ಸಹಾಯ ಮಾಡುವುದು ಇಂತಹವುಗಳಿಗೆ ವಿನಿಯೋಗವಾಗದೆ, ಇವತ್ತಿನ ದಿವಸ ಬಡ ವಿದ್ಯಾರ್ಥಿಗಳ scholarship ಹಣಕ್ಕೂ ಕೂಡ ಕುತ್ತು ತಂದಿದ್ದಾರೆ. ಎಸ್.ಸಿ., ಎಸ್.ಟಿ., ಹಾಸ್ಟೆಲ್‌ಗಳಿಗೂ ಕೂಡ ಇದರಲ್ಲಿ ಪಾಲು ಸಿಗಬೇಕಾಗಿತ್ತು. ಹೊಸ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಮಾಡುವ ದಿಸೆಯಲ್ಲೂ ಕೂಡ ಈ ಹಣ ವಿನಿಯೋಗ ಆಗಬೇಕಾಗಿತ್ತು. ಆದರೆ ಇವತ್ತಿನ ದಿವಸ ಸರ್ಕಾರ ಶಿಕ್ಷಣದ ಬಗ್ಗೆ ಅನೇಕ ರೀತಿಯ ಭರವಸೆಗಳನ್ನು ಕೊಟ್ಟಿದ್ದರೂ ಕೂಡ ಉದ್ದುದ್ದ ಭಾಷಣ ಮಾಡಿಕೊಂಡು ಬಂದಂತಹ ಮಾನ್ಯ ಶಿಕ್ಷಣ ಸಚಿವರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳ ಆದಿಯಾಗಿ ಬಡ ವಿದ್ಯಾರ್ಥಿಗಳ ಕೋಟ್ಯಂತರ ರೂಪಾಯಿ ಹಣ ದುರ್ವಿನಿಯೋಗ ಆಗಿದೆಯೆಂದರೆ ತಪ್ಪಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

(ಮುಂದು)

(542)18.7.2024/5.40/ಎಂ.ಎಂ-ಕೆ.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್. ಪೂಜಾರ್ (ಮುಂದು):-**

ಬಾಬಾ ಸಾಹೇಬ್ ಡಾ: ಬಿ.ಆರ್.ಅಂಬೇಡ್ಕರ್‌ರವರು ರಚಿಸಿದ ನಮ್ಮ ಸಂವಿಧಾನದ ಆಶಯದಂತೆ ಎಲ್ಲರಿಗೂ ಸಮಬಾಳು ಸಮಪಾಲು ಸಿಗಬೇಕು, ಕನಸನ್ನು ನನಸಾಗಿಸಬೇಕು. ಶತಮಾನಗಳಿಂದ ತುಳಿತಕ್ಕೊಳಗಾದ ಆ ಪಂಗಡದ ಜನರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲಕ್ಕೆತ್ತಬೇಕು ಎನ್ನುವ ಉದ್ದೇಶದಿಂದ ಸಂವಿಧಾನದಲ್ಲಿ ಅನೇಕ ಅಂಶಗಳನ್ನು ಸೇರ್ಪಡೆ ಮಾಡಲಾಗಿದೆ. ಅದರ ಅನ್ವಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ "The Representation of the People Act, 1951" ಅಡಿಯಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಜನರಿಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮೀಸಲು ಸ್ಥಾನಗಳನ್ನು ಕೂಡ ಕಲ್ಪಿಸಲಾಗಿದೆ. ಅದರ ಉದ್ದೇಶ ಆ ಮೂಲಕ ಆ ಜನಾಂಗಗಳ ಜನರು ತಮ್ಮ ಕುಂದುಕೊರತೆಗಳ ಬಗ್ಗೆ ಶಾಸನಸಭೆಯಲ್ಲಿ ಮಂಡಿಸಬೇಕು ತನ್ಮೂಲಕ ತಮ್ಮ ಸಮುದಾಯಗಳ ಜನರಿಗೆ ನಾಯ ದೊರಕಿಸಬೇಕೆಂಬುದಾಗಿದೆ. ಸಹೋದರಿಯಾದ ಹೇಮಲತಾ ನಾಯಕ್‌ರವರು ಬಹಳ ದುಃಖದಿಂದ ಹೇಳಿದರು. ಆ ಸಮುದಾಯದ ಜನರಿಗೆ ನ್ಯಾಯ ಸಿಗಬೇಕು, ಅವರು ಕೂಡ ಮುಂದುವರೆದ ಜನರ ಜೊತೆಗೆ ಸ್ಪರ್ಧಾತ್ಮಕವಾಗಿ ಬದುಕಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಅದನ್ನು ಸೇರಿಸಲಾಗಿದೆ. ನಮ್ಮಲ್ಲಿ 'ನಂಬಿದ ಎಮ್ಮೆ ಕೋಣ ಹಾಕಿತು' ಎಂಬ ಒಂದು ಗಾದೆ ಮಾತಿದೆ. ತಮ್ಮ ಜನಾಂಗದ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷದಿಂದ ಆ ಶಾಸಕರು ಆಯ್ಕೆಯಾದರೆ ಸರ್ಕಾರ ಬಂದರೆ ತಮ್ಮ ಅನೇಕ ಕಷ್ಟ ಕಾರ್ಪಣ್ಯಗಳು ದೂರವಾಗಬಹುದೇನೋ, ತಮ್ಮ ಮಕ್ಕಳು ಭವಿಷ್ಯದಲ್ಲಿ ಸತ್ಪ್ರಜೆಗಳಾಗಿ ಒಳ್ಳೆಯ ನಾಗರಿಕ ಬದುಕನ್ನು ಸಾಗಿಸುವುದಕ್ಕೆ

ಅನುವಾಗಬಹುದೇನೋ ಎನ್ನುವಂತಹ ಕನಸನ್ನು ಹೊತ್ತುಕೊಂಡಂತಹ ವರ್ಗದ ಜನರು ಪರಿಶಿಷ್ಟ ಪಂಗಡಕ್ಕೆ ಮೀಸಲಾದಂತಹ 15 ಸ್ಥಾನಗಳಿಂದ 15 ಸೀಟುಗಳಲ್ಲಿಯೂ ಕೂಡ ಕಾಂಗ್ರೆಸ್‌ಗೆ ಗೆಲುವನ್ನು ತಂದು ಕೊಟ್ಟಿದ್ದಾರೆ. ಇದೊಂದು ವಿಪರ್ಯಾಸ ಎಂದು ಹೇಳಬಹುದು. ಆದರೆ ಮತ ಹಾಕಿ ಆರಿಸಿ ಕಳುಹಿಸಿದಂತಹ ಪಂಗಡದ ಜನರಿಗೆ ಎಷ್ಟೊಂದು ನಿರಾಸೆಯಾಗಿರಬಹುದು? ಭರವಸೆಯಿಟ್ಟು ತಮಗಾಗಿ ತಮ್ಮ ಅಭಿವೃದ್ಧಿಗಾಗಿ ಮೀಸಲಿಟ್ಟಂತಹ ಹಣ ತಮ್ಮ ಮಕ್ಕಳಿಗಾಗಿ, ತಮ್ಮ ಅನ್ನಕ್ಕಾಗಿ ಅನುಕೂಲವಾಗಬೇಕಾದಂತಹ ಹಣ ಯಾವುದೋ ರಾಜ್ಯಕ್ಕೆ ಯಾರದೋ ಖಾತೆಗೆ ಕೊಳ್ಳೆ ಹೊಡೆಯುವಂತಹದ್ದು ಹಣಕಾಸಿನ ಹೊಣೆ ಹೊತ್ತುಕೊಂಡಂತಹ ಮುಖ್ಯಮಂತ್ರಿಗಳ ಅಧೀನದಲ್ಲಿರುವ ಇಲಾಖೆಯಡಿಯಲ್ಲಿ ನಡೆದಿರುವಂತಹದ್ದು. ದೌರ್ಭಾಗ್ಯದಿಂದ ಸಂಬಂಧಿಸಿದಂತಹ ಸಚಿವರು ಕೂಡ ಆ ಪಂಗಡದವರಾದದ್ದು ತಲೆತಗ್ಗಿಸುವಂತಹದ್ದು. ಇದು ವಿಶ್ವಾಸವಿಟ್ಟು ಮತ ಹಾಕಿದ ಆ ಪರಿಶಿಷ್ಟ ಪಂಗಡದ ಜನರ ಜೊತೆಗೆ ವಿಶ್ವಾಸಘಾತದ ಕೆಲಸವನ್ನು ಕಾಂಗ್ರೆಸ್ ಮಾಡಿದೆ. It is a mere betrayal of trust. ವಿಶ್ವಾಸವಿಟ್ಟಂತಹ ವ್ಯಕ್ತಿಯೇ ಕೊಡಲಿಯೇಟು ಹಾಕುವಂತಹದ್ದು, ಉದಾರಪ್ರಾಯವಾಗಿ ಕತ್ತು ಕೊಯ್ಯುವಂತಹ ಕೆಲಸವನ್ನು ಇವತ್ತು ಕಾಂಗ್ರೆಸ್ ಸರ್ಕಾರ ಮಾಡಿದೆ. ಇವತ್ತಿನವರೆಗೂ ಕಳೆದ ಒಂದೂವರೆ ತಿಂಗಳಿನಿಂದ ಈ ಪ್ರಹಸನ ನಡೆದಿದ್ದರೂ ಕೂಡ ಪರ್ಯಾಯವಾಗಿ ಆ ಪಂಗಡದ ಅಭಿವೃದ್ಧಿಗಾಗಿ ಬೇರೆ ಹಣವನ್ನು ಈ ಕಡೆಯಿಂದ ಆ ಕಡೆಗೆ ತೆಗೆದು ಇಡುವುದಕ್ಕೆ ಆಗಿಲ್ಲ. ಆ ಎಲ್ಲಾ ಕೆಲಸ ಕಾರ್ಯಗಳೂ ಕೂಡ ಅಲ್ಲಲ್ಲಿಯೇ ನಿಂತು ಹೋಗಿವೆ. ಇನ್ನೊಂದು ವಿಚಾರವನ್ನು ಹೇಳಲೇಬೇಕು. ಈ ಸರ್ಕಾರಕ್ಕೆ ಮಾನ್ಯ ಸದಸ್ಯರಾದ ಪ್ರತಾಪ್‌ಸಿಂಹ ನಾಯಕ್‌ರವರು ಬಹಳಷ್ಟು ಚುಚ್ಚಿ-ಚುಚ್ಚಿ ಹೇಳಿದರು. ಪಾಪ ಪ್ರಜ್ಞೆ;

**ಶ್ರೀ ಐವನ್ ಡಿ'ಸೋಜಾ:-** ಅವರು ಚುಚ್ಚಲಿಲ್ಲ.

**ಶ್ರೀ ಪಿ.ಹೆಚ್. ಪೂಜಾರ್:-** ಇಲ್ಲ, ಆರಾಮವಾಗಿ ಮಾತನಾಡಿ ಹೇಳಿದರು. ಪಾಪಪ್ರಜ್ಞೆಯೇ ಇಲ್ಲ. ಕಿಂಚಿತ್ತಾದರೂ ಪ್ರಾಪಪ್ರಜ್ಞೆ ಇದ್ದಿದ್ದರೆ ಮೇಲಿಂದ ಮೇಲೆ ಎದ್ದೆದ್ದು ನಿಂತು ಮಾತನಾಡುವಂತಹ ಕೆಲಸಕ್ಕೆ ನೀವು ಕೈ ಹಾಕುತ್ತಿರಲಿಲ್ಲ. ನೀವು ಮಾಡಿದ್ದೀರಿ ಎಂದು ಹೇಳುವಂತಹ ಕೆಲಸವನ್ನು ನಾನು ಆ ಕಡೆ treasury bench ನಲ್ಲಿದ್ದರೂ ಮಾಡುತ್ತಿದ್ದೆ ಹೊರತಾಗಿ ನೀವು ಆಗ ಇಷ್ಟು ಹೊಡೆದಿದ್ದಿರಿ, ಅದನ್ನು ತಿಂದಿದ್ದಿರಿ, ಈಗ ನಾವು ತಿಂದಿದ್ದೇವೆ ಎಂದರೆ ಇದು ಸಮಜಾಯಿಷಿ ಕೊಡುವ ವಿಚಾರವಲ್ಲ. ನೀವು ಮಾಡಿದಿರಿ, ನಾವು ಮಾಡಿದೆವು ಎಂಬುದು ಗೌರವದ ಪ್ರಶ್ನೆಯೂ ಅಲ್ಲ. ಯಾವ ಸರ್ಕಾರ ಮಾಡಿದರೂ ತಪ್ಪು ತಪ್ಪೇ. ಇದು ಸಾರ್ವಜನಿಕರ ಹಣ. ವಿಶ್ವಾಸದಿಂದ ಕೊಟ್ಟಂತಹ ತೆರಿಗೆದಾರರ ಹಣ. ಸರಿಯಾಗಿ, ಸಮರ್ಥವಾಗಿ, ಸಮರ್ಪಕವಾಗಿ ಆ ಪಂಗಡದ ಜನರ ಅಭಿವೃದ್ಧಿಗೆ, ಆ ಜನರನ್ನು ಮೇಲಕ್ಕೆತ್ತುವುದಕ್ಕೆ ಮಾಡಬೇಕಾದ ಪ್ರಯತ್ನ ಈ ಸದನದ ಮುಖಾಂತರ ಮತ್ತು ಸರ್ಕಾರದ ಮುಖಾಂತರ ಆಗಬೇಕು. ದೌರ್ಭಾಗ್ಯದ ಸಂಗತಿಯೆಂದರೆ, ಕಳೆದ ಒಂದೂವರೆ, ಎರಡು ವರ್ಷಗಳಿಂದ ನಾನು ನೋಡುತ್ತಿದ್ದೇನೆ. ಯಾವುದನ್ನಾದರೂ ಹೇಳುವುದಕ್ಕೆ ಹೋದರೆ ಆ ಕಡೆ treasury bench ನಿಂದ ಬಂದು ಮೇಲಿಂದ ಮೇಲೆ ಮಾತನಾಡುವಂತಹದ್ದು, ಕನಿಷ್ಟ ಇಂತಹ ವಿಷಯಗಳಲ್ಲಾದರೂ ಕೂಡ ಸಹಮತ ವ್ಯಕ್ತಪಡಿಸದೇ; ಹೌದು, ತಪ್ಪಾಗಿದೆ,

ಸರಿಪಡಿಸಿಕೊಳ್ಳುತ್ತಿದ್ದೇವೆ, ಸರಿಪಡಿಸುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎನ್ನುವ ಭರವಸೆ ಕೊಟ್ಟರೆ ನಾವ್ಯಾರೂ ಮಾತನಾಡುವಂತಹ ಪ್ರಶ್ನೆಯೇ ಬರುವುದಿಲ್ಲ. ತಪ್ಪು ನಿಮ್ಮಿಂದಾಗಿದೆಯೋ, ವ್ಯವಸ್ಥೆಯಿಂದಾಗಿದೆಯೋ, ಯಾರು ಮಾಡಿದರೋ ಆಗ ಉಪ್ಪು ತಿಂದವರು ಈಗ ನೀರು ಕುಡಿಯಲೇಬೇಕು. ಆ ಜವಾಬ್ದಾರಿ ಸರ್ಕಾರಕ್ಕೆ ಬರಲೇಬೇಕು. ಸಾರ್ವಜನಿಕ ವಲಯದಲ್ಲಿ ಯಾವ ರೀತಿಯ ಭಾವನೆ ವ್ಯಕ್ತವಾಗುತ್ತಿದೆ; ಕಳೆದ ಒಂದೂವರೆ ತಿಂಗಳಿನಿಂದ, ಈಗ ನಾಲ್ಕು ದಿವಸದಿಂದ ಅಧಿವೇಶನ ಪ್ರಾರಂಭವಾದಾಗಿನಿಂದ ಇದರ ಪ್ರತಿಧ್ವನಿ ಸಮಾಜದಲ್ಲಿ ಯಾವ ರೀತಿ ಆಗುತ್ತಿದೆಯೋ ಅದನ್ನು ಪರಿಗಣಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆ ಭಾಗ, ಈ ಭಾಗ ಎನ್ನುವುದಲ್ಲ. ಯಾವುದಕ್ಕೆ ಧ್ವನಿ ಎತ್ತಬೇಕು, ಯಾವುದಕ್ಕೆ ಧ್ವನಿ ಎತ್ತಬಾರದು, ಯಾವುದು ಸರಿ, ಯಾವುದು ತಪ್ಪು ಎನ್ನುವಂತಹ ಜವಾಬ್ದಾರಿಯನ್ನು ನಾವ್ಯಾರೂ ವಹಿಸಿಕೊಳ್ಳದೇ ಇದ್ದರೆ ಈ ನಾಡಿನ ಜನಕ್ಕೆ ನಾವು ಏನು ಸಂದೇಶ ಕೊಡಬಹುದು? ಆ ಸಂದೇಶದಿಂದ ಆ ಜನರ ಮನಸ್ಸಿನಲ್ಲಿ ಯಾವ ರೀತಿಯ ಪರಿಣಾಮ ಬೀರಬಹುದು? ಮತ ಹಾಕಿ ತಮ್ಮನ್ನು ರಕ್ಷಣೆ ಮಾಡುತ್ತಾರೆ, ತಮ್ಮನ್ನು ಅಭಿವೃದ್ಧಿ ಮಾಡುತ್ತಾರೆ, ನಾಡನ್ನು ಅಭಿವೃದ್ಧಿ ಮಾಡಿ ಇಡೀ ದೇಶದಲ್ಲಿ ನಾಡನ್ನು ನಂಬರ್ ಒನ್ ಮಾಡುತ್ತಾರೆ ಎಂದು ವಿಶ್ವಾಸವಿಟ್ಟಂತಹ ಜನ; ಈ ಪಕ್ಷ ಬರಬಹುದು ಅಥವಾ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರಬಹುದು, ಇರಲಿ. ಜನಕ್ಕೆ ಯಾವ ರೀತಿಯ ಘಾಸಿಯಾಗುತ್ತದೆ ಎಂಬುದನ್ನು ನಾವೆಲ್ಲರೂ ಕೂಡ ಅರ್ಥಮಾಡಿಕೊಳ್ಳಬೇಕಲ್ಲವೇ? ಅನೇಕ ಜನರು ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ಮೇಲಿಂದ ಮೇಲೆ ಅದಕ್ಕೆ ಅಡ್ಡಿಪಡಿಸುವಂತಹ ಕೆಲಸ ಯಾರಿಗೂ ಶೋಭೆ ತರುವಂತಹದ್ದಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಪೂಜಾರ್‌ರವರೇ, ನೀವು ಈ ಕಡೆ ಇದ್ದಾಗ ಇದಕ್ಕಿಂತ ಜಾಸ್ತಿ ಮಾಡುತ್ತಿದ್ದಿರಿ.

**ಶ್ರೀ ಐವನ್ ಡಿ'ಸೋಜಾ:-** ನೀವು ಇದಕ್ಕಿಂತ ಜಾಸ್ತಿ ಮಾಡುತ್ತಿದ್ದಿರಿ, ಆಗ ನೀವು ಇರಲಿಲ್ಲ.

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪೂಜಾರ್‌ರವರು ಉತ್ತಮ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಮಾತನಾಡುವಂತಹ ಸಂದರ್ಭದಲ್ಲಿ ಯಾವುದನ್ನು ಮಾತನಾಡಬೇಕೋ ಅದನ್ನು ಇವರು ಅರ್ಥಮಾಡಿಕೊಳ್ಳಬೇಕಲ್ಲವೇ?

**ಶ್ರೀ ಪಿ.ಹೆಚ್. ಪೂಜಾರ್:-** (**ಗೊಂದಲ**) ನಾನು ನಿಮಗೆ ಹೇಳಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು:-** ಯಾವುದನ್ನು ಮಾತನಾಡಬೇಕೆಂದು ಇವರು ಅರ್ಥಮಾಡಿಕೊಳ್ಳಬೇಕಲ್ಲವೇ; ಯಾವ್ಯಾವುದೋ ವಿಷಯಗಳನ್ನು ಹೇಳಿ ದಾರಿ ತಪ್ಪಿಸಿದರೆ ಸುಮ್ಮನಿರಬೇಕೇ?

**ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ನೀವು ಇಲ್ಲದ್ದಾಗ ಯಾವುದನ್ನೂ ಕೇಳುತ್ತಿರಲಿಲ್ಲ (**ಗೊಂದಲ**) ನೀವು ಮಾತನಾಡುವುದಕ್ಕೇ ಬಿಡುತ್ತಿರಲಿಲ್ಲ. ತಾವು ಹೇಳುತ್ತಿರುವುದನ್ನು ನಾವು ತಾಳ್ಮೆಯಾಗಿ ಕೇಳುತ್ತಿದ್ದೇವೆ (**ಗೊಂದಲ**) ನೀವು ಆ ರೀತಿ ಕೇಳಿದ್ದೀರಾ?

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಪೂಜಾರ್‌ರವರು ಒಳ್ಳೆಯ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಅವರು ನಮಗೆ ಬುದ್ಧಿ ಹೇಳುತ್ತಿದ್ದಾರೆ. ಅವರು ಮಾತನಾಡುವಂತಹ ಸಂದರ್ಭದಲ್ಲಿ ಯಾವ ರೀತಿ ದಾರಿ ತಪ್ಪಿಸುತ್ತಿದ್ದಾರೆ ಎಂದು ಅವರಿಗೂ ಸಹ ಬುದ್ಧಿ ಹೇಳಬೇಕಲ್ಲವೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಪೂಜಾರ್‌ರವರು ಆರಾಮವಾಗಿ ಮಾತನಾಡುತ್ತಿದ್ದಾರೆ ಅವರಿಗೂ ತೊಂದರೆ ಮಾಡುತ್ತೀರಲ್ಲಾ!

**ಶ್ರೀ ಎನ್.ಎಸ್. ಬೋಸರಾಜು:-** ಅವರು ಏನು ಮಾತನಾಡುತ್ತಿದ್ದಾರೆ? ನಮಗೆ ಹೇಳುತ್ತಿದ್ದಾರೆ.

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ತಾವು ಸಭಾನಾಯಕರು . . .

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಏನು ಬೇಕಾದರೂ ಮಾತನಾಡಬಹುದೇ? ಸಂಬಂಧವಿಲ್ಲದ ವಿಷಯಗಳನ್ನೆತ್ತಿ ಅವರಿಗೂ ಇವರಿಗೂ connect ಮಾಡಬಹುದೇನು? ಅದಕ್ಕೂ ಸುಮ್ಮನೆ ಇರಬೇಕೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇವರು ಮಾತನಾಡಬೇಕಾದರೆ ನಾವು ಒಂದು ಚೂರೂ ಗಲಾಟೆ ಮಾಡುವುದಿಲ್ಲ.

**ಶ್ರೀ ಪಿ.ಹೆಚ್. ಪೂಜಾರ್:-** ಮಾತನಾಡುವವರು ನಾವು.

**ಶ್ರೀ ಎನ್.ಎಸ್. ಬೋಸರಾಜು:-** ನೀವು ಸಮಚಿತ್ತರಾಗಿದ್ದರೆ ನಾವೂ ಸಮಚಿತ್ತರಾಗಿರುತ್ತೇವೆ. ವಿರೋಧ ಪಕ್ಷದಲ್ಲಿ ಸಮಂಜಸವಾಗಿದ್ದರೆ ಈ ಭಾಗದಲ್ಲಿಯೂ ಸಮಂಜಸವಾಗಿರುತ್ತಾರೆ.

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಇನ್ನು ಮೂರು ನಿಮಿಷವಿದೆ.

**ಶ್ರೀ ಪಿ.ಹೆಚ್. ಪೂಜಾರ್:-** ಆಯಿತು. ಕಳ್ಳನಿಗೂ ಕೂಡ ಸಾಕ್ಷಿ ಪ್ರಜ್ಞೆ ಇರುತ್ತದೆ. ಕಳ್ಳತನ ಮಾಡುವುದಕ್ಕೆ ಹೋದಂತಹ ವ್ಯಕ್ತಿ ಇದು ನನ್ನದಲ್ಲ, ಮತ್ತೊಬ್ಬರದ್ದು ಕದಿಯುತ್ತಿದ್ದೇನೆ, ಮತ್ತೊಬ್ಬರದ್ದು pickpocket ಮಾಡುತ್ತಿದ್ದೇನೆ, ಇದು ನನ್ನ ಹಣವಲ್ಲ, ಇದನ್ನು ಮಾಡಬಾರದಾಗಿತ್ತು. ಇದರಿಂದ ಅವರಿಗೆ ಏನು ನೋವಾಗುತ್ತದೆಯೋ ಏನೋ, ನನ್ನ ಬದುಕನ್ನು ಕಟ್ಟಿಕೊಳ್ಳೋಣ ಎನ್ನುವಂತಹ ಭಾವನೆ ಮಾತ್ರ ಅವನಿಗಿರುತ್ತದೆ. ನಾಲ್ಕು ಜನರ ಜೊತೆ ಹಂಚಿಕೊಂಡರೂ ಕೂಡ ನಾಲ್ಕೂ ಜನರಲ್ಲಿ ಕೂಡ ಆ ಭಾವನೆ ಇರುತ್ತದೆ. ನಾನು ಸರಿ ಇದ್ದೇನೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಹೋಗುವುದಿಲ್ಲ. ದೌರ್ಭಾಗ್ಯ, ಅಂತಹ ಪರಿಸ್ಥಿತಿ ನಿಮಗೆ ಬಂದಿದೆ ಎಂಬುದನ್ನು ಹೇಳಲೇಬೇಕಾಗಿದೆ. ನಿನ್ನೆ ದಿವಸ ಪತ್ರಿಕೆಯಲ್ಲಿ ಮಧ್ಯಪ್ರದೇಶದ ಒಂದು ವರದಿಯನ್ನು ಓದಿದೆ. ಒಬ್ಬ ಕಳ್ಳನು ಒಬ್ಬರ ಮನೆಗೆ ಹೋಗಿ ಕನ್ನ ಹಾಕಿ ಕಳ್ಳತನ ಮಾಡಿ ತನಗೆ ಬೇಕಾದ ಸಾಮಾನುಗಳನ್ನು ಹೊತ್ತುಕೊಂಡು ಬಂದನು. ಅಲ್ಲಿ ಅವನು ಒಂದು ಫೋಟೋ ಅನ್ನು ನೋಡುತ್ತಾನೆ. ಅದು ಮರುದಿವಸ ಪತ್ರಿಕೆಯಲ್ಲಿ ಬರುತ್ತದೆ.

(543) 18.7.2024 5.50 ಕೆಹೆಚ್(ಪಿಕೆ);ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್(ಮುಂದು)**

ಮರುದಿವಸ ಆತ, ಇಂಥವರ ಮನೆಯಲ್ಲಿ ಕಳ್ಳತನವಾಗಿದೆ ಎಂದು ಪತ್ರಿಕೆಯಲ್ಲಿ ಬಂದಿರುವುದನ್ನು ನೋಡುತ್ತಾನೆ. ಆ ಮನೆ ಒಬ್ಬ ಸಾಹಿತಿಯ ಮನೆಯಾಗಿರುತ್ತದೆ; ಆತ ಸಂಭಾವಿತ ವ್ಯಕ್ತಿಯಾಗಿರುತ್ತಾನೆ. ಆ ನಾಡಿಗೆ ಬೇಕಾದ ವ್ಯಕ್ತಿಯಾಗಿರುತ್ತಾನೆ. ಆತ ತೀರಿ ಹೋಗಿರುತ್ತಾನೆ. ಕಳ್ಳನಿಗೆ ಆಗ ಪಾಪಪ್ರಜ್ಞೆ ಕಾಡುತ್ತದೆ. ಮುಂದಿನ ದಿನ ಸಾಯಂಕಾಲ ಅದೇ ಸಮಯಕ್ಕೆ ಹೋಗಿ ಕಳ್ಳತನ ಮಾಡಿದ್ದ ವಸ್ತುಗಳನ್ನು ಇಟ್ಟು, ನಾನು ಮಾಡಿದ್ದು ತಪ್ಪು, ಕ್ಷಮಿಸಿ ಎಂದು ಒಂದು ಪತ್ರವನ್ನು ಬರೆದಿಡುತ್ತಾನೆ. ಅಂದರೆ ಕಳ್ಳನಿಗೂ ಪಾಪಪ್ರಜ್ಞೆ ಕಾಡುತ್ತದೆ. Treasury Bench ನಲ್ಲಿರುವ ಜನಕ್ಕೆ ಏನಾಗಿದೆಯೋ ಗೊತ್ತಾಗುತ್ತಿಲ್ಲ. ಮೇಲಿಂದ ಮೇಲೆ ಎದ್ದು ಮಾತನಾಡುತ್ತಿದ್ದಾರೆ. ಇಷ್ಟೊಂದು ಕೋಟಿ ಹಣ ದರೋಡೆ ಆಗಿರುವಂಥದ್ದು ಸುಳ್ಳಲ್ಲ. ಯಾರ ಕಡೆಯಿಂದ ಎಷ್ಟು ವಸೂಲು ಮಾಡಿದ್ದೀರೋ, ಎಷ್ಟರಮಟ್ಟಿಗೆ ಇನ್ನೂ ವಸೂಲು ಆಗಬೇಕಾಗಿದೆ, ಇನ್ನೂ ಏಕೆ ಆಗಬೇಕಾಗಿಲ್ಲ, ಯಾರು ಯಾರು ಭಾಗಿಯಾಗಿದ್ದಾರೆ ಎನ್ನುವುದರ ಬಗ್ಗೆ ತಿಳಿಸಬೇಕು. ಇದರ ಬಗ್ಗೆ ಬೇಕಾಗಿದೆ. ನಮ್ಮ ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ತಿಮ್ಮಾಪುರರವರು ಸದನದಲ್ಲಿ ಇದ್ದಾರೆ. ಮೊನ್ನೆ ಒಂದು ಹಗರಣವಾಯಿತು. ಗ್ರಂಥಾಲಯಕ್ಕೆ ಸಂಬಂಧಪಟ್ಟಂತೆ ಎರಡೂವರೆ ಕೋಟಿ ರೂಪಾಯಿಗಳ ಹಗರಣ, ಕಾರ್ಮಿಕ ಇಲಾಖೆಯಲ್ಲಿ ರೂ. 2.80 ಕೋಟಿ ಹಗರಣವಾಯಿತು. ಲ್ಯಾಪ್‌ಟಾಪ್ ಹಗರಣವಾಯಿತು. ನಮ್ಮ ಬಾಗಲಕೋಟೆ ಜಿಲ್ಲೆಯ ಎಲ್ಲಾ ನಿಗಮಗಳಲ್ಲಿ ಹಗರಣಗಳ ಬಗ್ಗೆ ದಿನಾಗಲೂ ಪತ್ರಿಕೆಗಳಲ್ಲಿ ಬರುತ್ತಿದೆ.

**ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಗಳೆ, ಯಾರ ಕಾಲದಲ್ಲಿ ಹಗರಣವಾಯಿತು ಎಂಬುದನ್ನೂ ಹೇಳಲಿ. ಯಾವ ಇಸವಿಯಿಂದ ಪ್ರಾರಂಭವಾಯಿತು ಎನ್ನುವುದನ್ನೂ ಹೇಳಿಬಿಡಿ.

**ಶ್ರೀ ಪಿ.ಹೆಚ್.ಪೂಜಾರ್:-** ಅದು ಯಾವಾಗಲಾದರೂ ಆಗಿರಲಿ. ಇಲ್ಲಿ ಸರ್ಕಾರದ ಜವಾಬ್ದಾರಿ ಬರುತ್ತದೆ. ನಿಮ್ಮ ಸರ್ಕಾರ ಬಂದು ಒಂದು ವರ್ಷಕ್ಕಿಂತ ಹೆಚ್ಚು ಅವಧಿಯಾಗಿದೆ. ನೀವು ಏಕೆ ಇಂಥದ್ದರ ಕಡೆ ಗಮನಿಸಲಿಲ್ಲ? ಇದರಲ್ಲಿ ನಾವು-ನೀವು ಎಂಬುದಿಲ್ಲ. ಕಳ್ಳ ಕಳ್ಳನೇ ಆಗಿರುತ್ತಾನೆ; ಅವನನ್ನು ಹಿಡಿದು ಒಳಗೆ ಹಾಕುವುದು ಸರ್ಕಾರದ ಜವಾಬ್ದಾರಿ ಆಗಿರುತ್ತದೆ. ಇಂಥದ್ದಕ್ಕೆ ಮುಕ್ತಿಯನ್ನು ಕೊಡುತ್ತಾರೆ ಎಂದು ಜನ ನಿಮ್ಮನ್ನು ಆರಿಸಿ ಕಳುಹಿಸಿದ್ದಾರೆ. ನೀವು ಅಧಿಕಾರಕ್ಕೆ ಬಂದು ಒಂದು ವರ್ಷಕ್ಕೂ ಮೇಲಾಯಿತು.

ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳ ಮೂಗಿನ ನೇರಕ್ಕೆ ನಡೆದಂತಹ ಈ ಹಗರಣವಾಗಿದೆ. ಈ ವರ್ಷದಲ್ಲಿ ಇಂತಹ ಹಗರಣಗಳು ಬಹಳ ಬರುತ್ತವೆ. ಇಂಥದ್ದಕ್ಕೆ ಮುಕ್ತಿ ಹಾಡಬೇಕು. ಜನ ಏನು ಇವರಲ್ಲಿ ವಿಶ್ವಾಸವನ್ನಿಟ್ಟುಕೊಂಡು ಆರಿಸಿ ಕಳುಹಿಸಿದ್ದರೋ ಆ ವಿಶ್ವಾಸಕ್ಕೆ ಇವರು ದ್ರೋಹ ಮಾಡಿದ್ದಾರೆ; ಆ ವಿಶ್ವಾಸಕ್ಕೆ ಕೊಡಲಿ ಏಟು ಹಾಕಿದ್ದಾರೆ. ಹಾಗಾಗಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು; ಮತ್ತೊಂದು ವ್ಯವಸ್ಥೆಗೆ ಅನುವು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ"ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಇವತ್ತು ಮಾನ್ಯ ಎನ್.ರವಿಕುಮಾರ್‌ರವರು ನಿಲುವಳಿ ಸೂಚನೆಯನ್ನು ತರುವುದರ ಮೂಲಕ, ಈ ಸದನದಲ್ಲಿ ಸದರಿ ವಿಷಯ ಚರ್ಚೆ ಆಗುತ್ತಿದೆ. ಈ ಚರ್ಚೆಯ ಸಂದರ್ಭದಲ್ಲಿ ಬಹಳಷ್ಟು ಮಂದಿ ಸದಸ್ಯರು ತಮ್ಮ ವಿಚಾರಗಳನ್ನು ಮಂಡನೆ ಮಾಡಿದ್ದಾರೆ. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ಆಗಿದೆ ಮತ್ತು ಅದರ ಅಧೀಕ್ಷಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವ ವಿಚಾರವನ್ನು ಇಲ್ಲಿ ಮುಖ್ಯವಾಗಿ ಚರ್ಚೆ ಆಗುತ್ತಿದೆ. ಈ ಒಂದು ವಿಚಾರದಲ್ಲಿ ಸರ್ಕಾರ ಯಾವರೀತಿ ಕೆಲಸವನ್ನು ಮಾಡಿದೆ ಎನ್ನುವುದು ಮುಖ್ಯವಾದುದಾಗಿದೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದ ತಕ್ಷಣ ಅಥವಾ ಈ ವಿಚಾರದಲ್ಲಿ ಲೆಕ್ಕ ಅಧೀಕ್ಷಕರು ಆತ್ಯಹತ್ಯೆ ಮಾಡಿಕೊಂಡ ಮೇಲೆ ಅಲ್ಲಿ ಸಿಕ್ಕಿದಂತಹ Death Note ಏನಿತ್ತು ಅದನ್ನು ಪರಿಶೀಲನೆ ಮಾಡಿ, ಆನಂತರ ಆದಂಥ ಬೆಳವಣಿಗೆಗಳ ಚರ್ಚೆ ಮಾಡಿತು. ಆ Death Note ನಲ್ಲಿ, ಯಾರು ಆರೋಪಿಗಳಾಗಿದ್ದಾರೋ ಅವರು ನನ್ನ ಸಾವಿಗೆ ಕಾರಣರಾಗಿದ್ದಾರೆ ಎಂದು ಶ್ರೀ ಚಂದ್ರಶೇಖರ್‌ರವರು ಬರೆದಿದ್ದಾರೆ. ಅದರ ಬಗ್ಗೆ ತನಿಖೆಯನ್ನು ಮಾಡುವುದಕ್ಕೋಸ್ಕರ, ರಾಜ್ಯದ ಮುಖ್ಯಮಂತ್ರಿಗಳು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಆ ಇಲಾಖೆಯ ಸಚಿವರ ರಾಜೀನಾಮೆ ಪಡೆದರು. ಪಾರದರ್ಶಕವಾಗಿ ತನಿಖೆ ಆಗಬೇಕು ಎನ್ನುವ ದೃಷ್ಟಿಯಿಂದ ಒಳ್ಳೆಯ ಅಧಿಕಾರಿಗಳ ನೇತೃತ್ವದಲ್ಲಿ SIT (Special Investigation Team) ಯನ್ನು ರಚನೆ ಮಾಡಿದರು. ಆ SIT ಮೂಲಕ ಬಹುಶಃ ಯಾರು ದುಡ್ಡನ್ನು ಲೂಟಿ ಮಾಡಿದ್ದಾರೋ ಆ ದುಡ್ಡನ್ನು ವಸೂಲು ಮಾಡಬೇಕಾದ ದೃಷ್ಟಿಯಿಂದ, ಯಾರೆಲ್ಲಾ ಇದಕ್ಕೆ ಕಾರಣರಾಗಿದ್ದಾರೆ ಎನ್ನುವುದನ್ನು ಚಂದ್ರಶೇಖರ್‌ರವರು ತಮ್ಮ Death Note ನಲ್ಲಿ ಬರೆದಿದ್ದರೋ ಅವರನ್ನು ಅರೆಸ್ಟ್ ಮಾಡಿ, ಎಲ್ಲಿಗೆ ಹೋಗಬೇಕೋ ಅಲ್ಲಿ ಹೋಗಿ, ಬ್ಯಾಂಕುಗಳ ವಿಚಾರಣೆ ಮಾಡಿ, ಬ್ಯಾಂಕಿನ ಅಧಿಕಾರಿಗಳನ್ನು arrest ಮಾಡಿದರು. ಲೂಟಿಯಾಗಿರುವ ಹಣವನ್ನು ವಸೂಲು ಮಾಡುವುದು ಪ್ರಥಮ ಆದ್ಯತೆ ಎನ್ನುವ ದೃಷ್ಟಿಯಿಂದ ಇವತ್ತು SIT ಯನ್ನು ರಚನೆ ಮಾಡಿದ್ದಕ್ಕಾಗಿ ಮತ್ತು ತನಿಖೆಯನ್ನು ಇಷ್ಟೊಂದು ತೀವ್ರಗೊಳಿಸಿದಕ್ಕಾಗಿ ನಾನು ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯರವರನ್ನು ಮತ್ತು ಉಪ ಮುಖ್ಯಮಂತ್ರಿಗಳಾದ ಮಾನ್ಯ ಡಿ.ಕೆ.ಶಿವಕುಮಾರ್‌ರವರನ್ನು ತಮ್ಮೆಲ್ಲರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ಇಂತಹ ಅನೇಕ ಘಟನೆಗಳು ನಡೆದಿವೆ.

**ಶ್ರೀ ಎನ್.ರವಿಕುಮಾರ್:-** ಅಭಿನಂದನೆ ಹೇಳುವುದಕ್ಕೆ ನಿಮಗೆ ನಾಚಿಕೆ ಆಗಬೇಕು. ದುಡ್ಡು ಲೂಟಿ ಆದರೂ ಕೂಡ ಅಭಿನಂದನೆ ಹೇಳುತ್ತಿದ್ದೀರಿ. ನಿಮಗೆ ನಾಚಿಕೆ ಆಗಬೇಕು.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಸದಸ್ಯರನ್ನು ಮಾತನಾಡುವುದಕ್ಕೆ ಬಿಡಿ. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಏನಾಯಿತು?

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಕೂದಲೆಳೆಯ ಅಂತರದಲ್ಲಿದ್ದ ಪೊಲೀಸ್ ಸ್ಟೇಷನ್‌ನಲ್ಲಿ ದೂರು ಕೊಡಲು ಇವರಿಗೆ 125 ಗಂಟೆಗಳು ಬೇಕಾಯಿತು. 'ತಕ್ಷಣ' ಎಂದು ಅವರು ಹೇಳುತ್ತಾರೆ. ಅವರು 'ತಕ್ಷಣ' ಎಂದು ಹೇಳಿದ್ದು ರೆಕಾರ್ಡ್ ಆಗಿದೆ. ಇವರಿಗೆ ನಾಚಿಕೆ ಆಗುವುದಿಲ್ಲವೇ? ಸರ್ಕಾರಕ್ಕೆ ನಾಚಿಕೆ ಆಗಬೇಕು. ಈ ವಿಚಾರದ ಬಗ್ಗೆ ಇವರಿಗೆ ಎಷ್ಟು ಗಂಭೀರತೆ ಇದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

**(ಗೊಂದಲ)**

**ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-** ಈ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಹೇಳಿಲ್ಲವೇ? ಕ್ರಮ ತೆಗೆದುಕೊಂಡಿದ್ದೇವೆ, ತನಿಖೆ ನಡೆಯುತ್ತಿದೆ, ರಿಕವರಿ ಆಗಿದೆ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೆ, ಮೊದಲು ನೀವು ಪೀಠಕ್ಕೆ ಗೌರವ ಕೊಡುವುದನ್ನು ಕಲಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ನಾನು ಯಾವಾಗಲೂ ಪೀಠಕ್ಕೆ ಗೌರವ ಕೊಟ್ಟಿದ್ದೇನೆ.

**ಸಭಾಪತಿಯವರು:-** ಇದು ಮೇಲ್ಮನೆಯಾಗಿದೆ. ಬೇರೆಯವರು ಮಾತನಾಡುತ್ತಿರುವಾಗ ಅವರು yield ಆಗದೇ ಇದ್ದರೂ ಮಧ್ಯದಲ್ಲಿ ನೀವೇಕೆ ಎದ್ದು ನಿಂತು ಮಾತನಾಡುತ್ತೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:-** ನಾವು ಮಾತನಾಡುವಾಗಲೂ ಅವರು ಹಾಗೆಯೇ ಮಾತನಾಡಿದ್ದಾರೆ. ನಮಗೆ ಮಾತನಾಡುವುದಕ್ಕೆ ಕೊಡಲಿಲ್ಲ.

**ಸಭಾಪತಿಯವರು:-** ಅವರು ಹಾಗೆ ಮಾಡಿದರೆ ನೀವೂ ಕೂಡ ಹಾಗೆಯೇ ಮಾಡುತ್ತೀರಾ? ಏನು ಬೇಕಾದರೂ ಮಾತನಾಡಬಹುದೇ? ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಬಹಳ ದೊಡ್ಡ ಮಾತುಗಳನ್ನು ನಮ್ಮ ಅನೇಕ ಸದಸ್ಯರು ಮಾತನಾಡಿದ್ದನ್ನು ಕೇಳಿದೆ. ನನಗೂ ಸಂತೋಷವಾಯಿತು. ಆದರೆ ಈ ಸಮುದಾಯಕ್ಕೆ ಒಂದು ನ್ಯಾಯವನ್ನು ಕೊಟ್ಟು, ಜನಸಂಖ್ಯೆಯ ಆಧಾರದ ಮೇಲೆ 27% ದುಡ್ಡನ್ನು ಬಜೆಟ್‌ನಲ್ಲಿ ಮೀಸಲಿಟ್ಟು, ಅದನ್ನು ಕಾರ್ಯಗತ ಮಾಡಿಸಿದ್ದು one and the only Chief Minister in India, that is Sri Siddaramaiah.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಲೂಟಿ ಮಾಡುವುದಕ್ಕೋಸ್ಕರ Scheduled Tribes Nigama ಮಾಡಿರುವಂಥದ್ದು, Scheduled Tribes Nigama ವನ್ನು ಪ್ರತ್ಯೇಕ ಮಾಡಿರುವಂಥದ್ದು . . .

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯರು):-** ಎಸ್.ಸಿ/ಎಸ್.ಟಿ ಜನಾಂಗಕ್ಕೆ ಮೀಸಲಿಟ್ಟ ಹಣವನ್ನು ಅವರಿಗೆಂದೇ ಖರ್ಚು ಮಾಡಬೇಕು ಎನ್ನುವ ನಿಯಮವನ್ನು ಮಾನ್ಯ ಸಿದ್ದರಾಮಯ್ಯನವರು ಮಾಡಿದರು. ಈ ನಿಯಮವನ್ನು ಇಡೀ ದೇಶದಲ್ಲೇ ಮಾಡಬೇಕು ಎಂದು ಒತ್ತಾಯ ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಸದನವನ್ನು ಮುಂದೂಡಬೇಕೇ? ಏಕೆ ಹೀಗೆ ಮಾತನಾಡುತ್ತಿದ್ದೀರಿ? ನಾನು ಹೇಳುತ್ತಿರುವುದು ಸದನಕ್ಕೆ ಗೊತ್ತಾಗುತ್ತಿಲ್ಲವೇ? ನೀವು ಮಾತನಾಡುತ್ತಿರುವುದನ್ನು ಜನ ನೋಡುತ್ತಿರುತ್ತಾರೆ.

**ಶ್ರೀ ಎನ್.ಎಸ್.ಬೋಸರಾಜು:-** 27% 24% ಹಣವನ್ನು ಎಸ್.ಸಿ/ಎಸ್.ಟಿ. ಜನಾಂಗಕ್ಕೆ ಮೀಸಲಿಟ್ಟು, ಆ ಹಣವನ್ನು ಅವರಿಗೋಸ್ಕರವೇ ಖರ್ಚು ಮಾಡಬೇಕು ಎಂದು ಕರ್ನಾಟಕದ ಮುಖ್ಯಮಂತ್ರಿಗಳು ಮಾತ್ರ ಹೇಳಿದ್ದಾರೆ. ದೇಶದಲ್ಲಿ ಎಲ್ಲಿಯೂ ಮಾಡಿಲ್ಲ. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಪ್ರಧಾನ ಮಂತ್ರಿಗಳಿಗೂ ಒತ್ತಾಯ ಮಾಡಿದ್ದಾರೆ.

ಶ್ರೀ ಕೆ.ಎಸ್.ನವೀನ್:- ಇಟ್ಟಿರುವ ದುಡ್ಡನ್ನೆಲ್ಲಾ ತಿಂದು ಹಾಕಿಬಿಟ್ಟರಲ್ಲಾ, ಇಟ್ಟಿರುವುದು ಖರ್ಚಾಗಿಬಿಟ್ಟಿತಲ್ಲಾ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇಟ್ಟಿರುವಂತಹ ಹಣವನ್ನು ತಿಂದು ಹಾಕುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಒಂದು ಸೂಚನೆ ಕೊಡುತ್ತೇನೆ. ಯಾರು ಮಧ್ಯದಲ್ಲಿ ಎದ್ದುನಿಂತು ಮಾತನಾಡುತ್ತಾರೋ ಅದು ಕಡತಕ್ಕೆ ಹೋಗಬಾರದು. ಯಾರಿಗೆ ಮಾತನಾಡಲು ಅನುಮತಿ ಕೊಟ್ಟಿರುತ್ತೇನೆಯೋ ಅವರು ಮಾತನಾಡುವುದು ಮಾತ್ರ ಕಡತಕ್ಕೆ ಹೋಗಬೇಕು. ಇದು standing instruction ಆಗಿದೆ.

(ಮುಂದು)

(544) 18.7.2024 6.00 ಪಿಕೆ:ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೇ, ಎಸ್.ಸಿ/ಎಸ್.ಟಿ.ಗಳಿಗೆ ದುಡ್ಡನ್ನು ಮೀಸಲಿಡುವುದು ಮಾತ್ರವಲ್ಲ, ಆ ಹಣವನ್ನು ಖರ್ಚು ಮಾಡದೇ ಇದ್ದರೆ ಮುಂದಿನ ವರ್ಷಕ್ಕೆ ಆ ಹಣ carry forward ಆಗುವ ರೀತಿಯಲ್ಲಿ ಕಾನೂನು ತಂದರು. ಈ ದುಡ್ಡು ಖರ್ಚು ಮಾಡದೇ ಇದ್ದರೆ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಬೇಕು ಎಂಬ ಕಾನೂನನ್ನು ಮಾಡಿದ್ದು ಕರ್ನಾಟಕದ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಇದ್ದ ಮಾನ್ಯ ಬಸವರಾಜ ಬೊಮ್ಮಾಯಿಯವರ ಸರ್ಕಾರ, ಬಿಜೆಪಿಯವರ ಸರ್ಕಾರ ಪರಿಶಿಷ್ಟ ಜಾತಿಯವರಿಗೆ ಭೋವಿ ಅಭಿವೃದ್ಧಿ ನಿಗಮದಲ್ಲಿ ಮೀಸಲಿಟ್ಟ ರೂ. 80 ಕೋಟಿ ದುಡ್ಡನ್ನು . . .

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಅದರ ಬಗ್ಗೆ ನೀವು ಅರ್ಜಿ ಕೊಡಿ, ದೂರು ಕೊಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕೆಳಮನೆಯಲ್ಲಿ ಕೊಟ್ಟಿರುವಂತಹ reply copy ಯನ್ನು ಕೊಡುತ್ತಿದ್ದೇನೆ. **(ಗೊಂದಲ)** ಕೇವಲ ಒಂದೆರಡು ಕಂಪನಿಗಳಗಲ್ಲಾ, ಶ್ರೀರಾಮುಲು ಅವರ ಕಾಲದಲ್ಲಿ ಅನಿತಾ ಕ್ರಿಯೇಷನ್ ಎನ್ನುವ ಸಂಸ್ಥೆಗೆ ರೂ. 5.98 ಕೋಟಿ, ಶ್ರೀ ಸಾಯಿ ಫಿಸಿಯೋಥೆರಪಿ ಕಂಪನಿಗೆ ರೂ.1.28 ಕೋಟಿ, ಸೋಮನಾಥೇಶ್ವರ ಎಂಟರ್‌ಪ್ರೈಸಸ್ ಕಂಪನಿಗೆ ರೂ. 11.80 ಕೋಟಿ, ಅನೀತ್ ಎಂಟರ್‌ಪ್ರೈಸಸ್ ಎನ್ನುವ ಕಂಪನಿಗೆ ರೂ. 30 ಕೋಟಿ, ಹೀಗೆ ಒಟ್ಟಿಗೆ ರೂ. 48 ಕೋಟಿ ಹಣವನ್ನು ಇವರು . . . . **(ಗೊಂದಲ)** ಈಗ ಕಣ್ಣೀರು ಸುರಿಸುತ್ತಿದ್ದೀರಲ್ಲಾ. ಅದು ನನ್ನ ಪ್ರಶ್ನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಗಳೆ,** ವಿಷಯಾಂತರವಾಗುತ್ತಿದೆ, ನಿರ್ದಿಷ್ಟ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೇಳಬೇಕು.

**ಸಭಾಪತಿಯವರು:-** ನಾನು ಇಂಥವರಿಗೆ ಹೀಗೆಯೇ ಮಾತನಾಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅವರು ಏನು ಬೇಕಾದರೂ ಮಾತನಾಡುತ್ತಾರೆ. ನಾನು ಹೇಗೆ ಹೇಳುವುದಕ್ಕೆ ಆಗುತ್ತದೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಅವರು ಮಾತನಾಡುವಾಗ ಏನೇನು ಹೇಳಿದರು ಎಂಬುದನ್ನು ಗಮನಿಸಲಿ. **(ಗೊಂದಲ)** ಸಂಬಂಧವಿಲ್ಲದ ಅನೇಕ ವಿಷಯಗಳನ್ನು ಎತ್ತಿದ್ದರು. ನೀವು ಮಾತನಾಡಬೇಕಾದರೆ ಅವಕಾಶ ಕೊಡಬೇಕು; ನಾವು ಮಾತನಾಡಬೇಕಾದರೆ restrictions ಹಾಕಬೇಕೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಬೇರೆ ವಿಷಯದ ಬಗ್ಗೆ ಮಾತನಾಡಬೇಕಾದರೆ ನೋಟಿಸ್ ಕೊಡಿ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ನೀವು ವಿಷಯಾಂತರ ಮಾಡಿಲ್ಲವೇ, ನೀವು ವಿಷಯಾಂತರ ಮಾಡಿ ಓದಲಿಲ್ಲವೇ? ಅವರು ಮಾತನಾಡಬೇಕಾದರೆ ನಾವು ಸುಮ್ಮನೆ ಕುಳಿತಿದ್ದೆವು.

**ಶ್ರೀ ಎಸ್.ಎಲ್.ಭೋಜೇಗೌಡ:-** ಇನ್ನೊಂದು ನೋಟಿಸ್ ಕೊಡಿ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ ವಿಷಯದ ಬಗ್ಗೆ ಮಾತನಾಡಿ.

**Sri IVAN D'SOUZA**:- Sir, I am coming to the point.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, Point of Order. ನಾವು ಮೊನ್ನೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಆಗಿರುವಂತಹ ಹಗರಣಗಳ ಸಂಬಂಧ

ನಿಲುವಳಿ ಸೂಚನೆ ಕೊಟ್ಟಿದ್ದೆವು. ಮಾನ್ಯ ಸದಸ್ಯರು ಈ ವಿಷಯವನ್ನು ಬದಲಾಯಿಸಿ ಬೇರೆ ವಿಷಯವನ್ನು ತೆಗೆದುಕೊಳ್ಳುತ್ತಿದ್ದಾರೆ.

**Sri IVAN D'SOUZA**:- No, no. I never said like that.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸದಸ್ಯರು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಾಗಿರುವ ಹಗರಣಗಳ ಬಗ್ಗೆ ಮಾತನಾಡಲಿ. ಅದಕ್ಕೆ ನಮ್ಮ ವಿರೋಧ ಇಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೇ, ಅವರು ಮಾತನಾಡುವಾಗ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಮಾತನಾಡಲಿಲ್ಲವೇ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಇವರು ಏನು ಬೇಕಾದರೂ ಮಾತನಾಡಬಹುದೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೇ, ನಾನು ಕ್ರಿಯಾಲೋಪಕ್ಕೆ ಸಂಬಂಧಪಟ್ಟಂತೆ ನಮ್ಮ "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕದಲ್ಲಿರುವ ನಿಯಮ 329ನ್ನು ಸದನದ ಗಮನಕ್ಕೆ ತರಬಯಸುತ್ತೇನೆ:

**"ಒಂದು ಕ್ರಿಯಾಲೋಪವು ಈ ನಿಯಮಗಳ ಅರ್ಥಾನ್ವಯಕ್ಕೆ ಅಥವಾ ಈ ನಿಯಮಗಳನ್ನು ಜಾರಿಗೆ ತರುವುದಕ್ಕೆ..."**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ ಆ ಅಂಶ ಪುಸ್ತಕದಲ್ಲಿ ಇದೆ. ದಯವಿಟ್ಟು ಕುಳಿತುಕೊಳ್ಳಿ. ದಯವಿಟ್ಟು ಇರುವ ವಿಷಯದ ಬಗ್ಗೆ ಚರ್ಚೆ ಮಾಡಬೇಕು. ನಿಮ್ಮ Point of Order ನ್ನು ಗಮನಿಸಿದ್ದೇನೆ. ಅವರಿಗೆ ವಿಷಯದ ಬಗ್ಗೆ ಮಾತ್ರ ಮಾತನಾಡಬೇಕೆಂದು ಹೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೇ, ತಾವು ಪ್ರಾರಂಭದಲ್ಲಿ ಈ ಮಾತುಗಳನ್ನು ಹೇಳಿದ್ದರೂ ಕೂಡ ಬೇರೆ ವಿಷಯವನ್ನು ಮಾತನಾಡಿದರು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೇ, ಅವರು ಮಾತನಾಡಿರುವ ಬೇರೆ ವಿಷಯಗಳನ್ನು ಕಡತದಿಂದ ತೆಗೆಸಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ರಾಥೋಡ್‌ರವರೇ, ಮಾನ್ಯ ರವಿಕುಮಾರ್‌ರವರು Point of Order ಎತ್ತಿದರು. ಅದಕ್ಕೆ ಅವರಿಗೆ ಅವಕಾಶ ಕೊಟ್ಟೆ. ನೀವು raise ಮಾಡಿದ್ದರೆ ನಿಮಗೂ ಅವಕಾಶ ಕೊಡುತ್ತಿದ್ದೆ. ಆಯಿತು; ಈಗ ವಿಷಯದ ಮೇಲೆ ಮಾತನಾಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ನಾವು ಕೂಡ ಹಿಂದೆ Point of Order ಎತ್ತಿದ್ದೆವು. ನೀವು ಈಗ ಕಡತದಿಂದ ತೆಗೆದರೆ, ಅವರು ಮಾತಾನಾಡಿದ್ದನ್ನೂ ಕೂಡ ಕಡತದಿಂದ ತೆಗೆಯಬೇಕು.

**ಸಭಾಪತಿಯವರು:-** ಹಿಂದೆ ಮಾಡಿದ್ದೀರಿ; ಈಗಿಲ್ಲ. ಈಗ ನಾನು ಕಡತದಿಂದ ತೆಗೆಯಿರಿ ಎಂದು ಹೇಳಿಲ್ಲ. ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ಇದು ಮೇಲ್ಮನೆ; ದಯವಿಟ್ಟು ಎಲ್ಲರೂ ಅರ್ಥ ಮಾಡಿಕೊಳ್ಳಿ. ಹೀಗೆಯೇ ಮಾತನಾಡಬೇಕು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅವರು Point of Order ಎತ್ತಿದ್ದರು. ಅದು ಸರಿಯಾಗಿತ್ತು. ಹಾಗಾಗಿ, ಈಗ ಎಲ್ಲರೂ ವಿಷಯದ ಬಗ್ಗೆ ಮಾತನಾಡಬೇಕೆಂದು ಹೇಳುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೇ, ಇವತ್ತು ಯಾವುದೇ ಒಂದು ನಿಗಮ ಯಾವ ದಿಕ್ಕಿನಲ್ಲಿ ಕಾರ್ಯನಿರ್ವಹಣೆ ಮಾಡುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ನಾನೂ ಕೂಡ 1996ರಲ್ಲಿ ಒಂದು ನಿಗಮದ ಛೇರ್ಮನ್ ಆಗಿದ್ದೆ.

**ಸಭಾಪತಿಯವರು:-** ಈಗ ನೀವು ವಿಷಯದ ಬಗ್ಗೆ ಮಾತನಾಡಿ. ಮತ್ತೆ ಬೇರೆ ವಿಷಯ ಮಾತನಾಡಬೇಡಿ.

**ಶ್ರೀ ಐವನ್ ಡಿ'ಸೋಜಾ:-** ಯಾವುದೇ ಒಂದು ನಿಗಮಕ್ಕೆ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಹಣ ಹೋಗುತ್ತದೆಯೋ ಆ ನಿಮಗದಲ್ಲಿ ಎಂ.ಡಿ., ಅಧ್ಯಕ್ಷರು ಮತ್ತು ಡೈರೆಕ್ಟರ್‌ಗಳು ಆ ದುಡ್ಡನ್ನು ಆ ನಿಗಮದ ನಿಯಮದಂತೆ ಫಲಾನುಭವಿಗಳಿಗೆ ಹಂಚುವ ಜವಾಬ್ದಾರಿ ಹೊಂದಿರುತ್ತಾರೆ.

**ಸಭಾಪತಿಯವರು:-** ಅದು ಎಲ್ಲರಿಗೂ ಗೊತ್ತಿರುವ ವಿಷಯ. ಗೊತ್ತಿರುವ ವಿಷಯನ್ನು ಏಕೆ ಹೇಳುತ್ತಿದ್ದೀರಿ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಎಷ್ಟು ಜನ ಎಸ್.ಟಿ.ಗಳಿಗೆ ಹಣವನ್ನು ಹಂಚಿದ್ದಾರೆ. ಎಷ್ಟು ಜನಕ್ಕೆ ಹಂಚಿದ್ದಾರೆಂದು ಲೆಕ್ಕ ಕೊಡಲಿ. ಆ ಸಮುದಾಯಕ್ಕೆ ಎಷ್ಟು ಕೊಟ್ಟಿದ್ದೀರಿ? ಏನೇನೋ ಬೋಗಸ್ ಮಾತನಾಡಬೇಡಿ.

(**ಗೊಂದಲ**)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೇ, ಈ ಹಗರಣದಲ್ಲಿ ಬ್ಯಾಂಕಿನ ಪಾತ್ರವೂ ಇದೆ. ಒಮ್ಮೆ ರಾಜ್ಯದ ಮುಖ್ಯಮಂತ್ರಿಗಳು ಒಂದು ನಿಗಮಕ್ಕೆ ದುಡ್ಡನ್ನು allot ಮಾಡಿದ ಮೇಲೆ, ಆ ದುಡ್ಡನ್ನು . . . .. **(ಗೊಂದಲ)**

(ಮುಂದು)

(545) 18-7-2024 6.10 ಡಿಎಸ್-ಎಕೆ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಒಟ್ಟಿಗೆ ಸೇರಿ ಮಾತನಾಡುತ್ತಿದ್ದರು)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ರೂ. 187 ಕೋಟಿಗಳು ಎಲ್ಲಿ ಹೋಯಿತು ಎಂಬುದನ್ನು ಲೆಕ್ಕ ಕೊಡಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಅವರು ಲೆಕ್ಕ ಕೊಡಲಿ.

**(ಈ ಹಂತದಲ್ಲಿ ವಿರೋಧ ಪಕ್ಷದವರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನವೀನ್‌ರವರೇ, ಮಾನ್ಯ ಅರುಣ್‌ರವರೇ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಎಸ್.ಟಿ. ನಿಗಮದವರು ಯಾರಿಗೆ ಎಷ್ಟು ಹಣ ಕೊಟ್ಟಿದ್ದಾರೆ ಎಂಬುದನ್ನು ಲೆಕ್ಕ ಕೊಡಲಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ಅವರ ಮಾತನ್ನು ನಾವೆಲ್ಲಾ ಕೇಳಲಿಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು 10 ನಿಮಿಷ ಮುಂದೂಡುತ್ತಿದ್ದೇನೆ.

**(ಸದನವನ್ನು ಸಂಜೆ 6 ಗಂಟೆ 11 ನಿಮಿಷಕ್ಕೆ 10 ನಿಮಿಷಗಳ ಅವಧಿಗೆ ಮುಂದೂಡಲಾಯಿತು)**

(546) 18/07/2024 6:20/ಎಸ್‌ಪಿಆರ್/ಎಕೆ

**(ಸಂಜೆ 6 ಗಂಟೆ 11 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 6 ಗಂಟೆ 29 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ:- "ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು."**

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರೇ, ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಅವಕಾಶವನ್ನು ನೀಡಲಾಗಿತ್ತು.

**ಸಭಾಪತಿಯವರು:-** ನಿಮ್ಮ ಕಾಲಾವಕಾಶ ಮುಗಿಯಿತು.

**Sri IVAN D'SOUZA:** You cannot say like that. I have to conclude. I require at least five minutes. ತಾವು ನಾನು ನನ್ನ ಭಾಷಣವನ್ನು ಮುಗಿಸಲು ಕನಿಷ್ಠ ಐದು ನಿಮಿಷಗಳ ಕಾಲಾವಕಾಶವನ್ನು ನೀಡಬೇಕು.

**ಸಭಾಪತಿಯವರು:-** ನೀವು ಸಂಜೆ 5:30 ಗಂಟೆಯಿಂದ ಮಾತನಾಡಲು ಪ್ರಾರಂಭಿಸಿದ್ದೀರಿ.

**Sri IVAN D'SOUZA:** No, I have to say many things. ನಾನು ಈ ನಿಗಮದಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ನಿಮಗೆ ಇನ್ನೂ ಕಾಲಾವಕಾಶವನ್ನು ನೀಡುವುದಕ್ಕಾಗುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇದನ್ನು ಬುಡಸಮೇತವಾಗಿ ಕಿತ್ತು ಹಾಕಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಕೇವಲ ಇದೊಂದು ನಿಗಮದಲ್ಲಿ ಮಾತ್ರವೇ ಭ್ರಷ್ಟಾಚಾರವಾಗಿಲ್ಲ. ಬೇರೆ ಬೇರೆ ನಿಗಮಗಳಲ್ಲಿ ಸುಮಾರು 220 ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿದೆ.

**ಸಭಾಪತಿಯವರು:-** ಸಾಕು ಮಾಡಿ.

(ಮುಂದು)

(547) 18/07/2024 6:30/ಬಿಕೆಪಿ(ಎಸ್‌ಪಿಆರ್)/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಹಗರಣಕ್ಕೆ ಸಂಬಂಧಪಟ್ಟಂತೆ ಮಾತ್ರವೇ ಜಾರಿ ನಿರ್ದೇಶನಾಲಯವು ಮಧ್ಯ ಪ್ರವೇಶಿಸಿದೆ ಹೊರತು ಬೇರೆ ಪ್ರಕರಣಗಳಲ್ಲಿ ಬಂದಿಲ್ಲ. ಈ ಪ್ರಕರಣದಲ್ಲಿ ಮಾತ್ರವೆ ಜಾರಿ ನಿರ್ದೇಶನಾಲಯ, ಸಿ.ಬಿ.ಐ. ಮತ್ತು ವಿಶೇಷ ತನಿಖಾ ಸಂಸ್ಥೆಗಳು ಮೂರು ಸಹ ಇಲ್ಲಿ ತನಿಖೆಯನ್ನು ವಹಿಸಿಕೊಂಡಿವೆ.

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರೇ ನೀವು ಮಾತನಾಡಲು ಪ್ರಾರಂಭಿಸಿ. ಶ್ರೀ ಐವನ್ ಡಿ'ಸೋಜಾ ರವರೇ ಎಷ್ಟು ಹೇಳುತ್ತೀರಿ? ಸಾಕು ಮಾಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಈ ಹಗರಣದಲ್ಲಿ ತೋರಿಸಿರುವ ಆಸಕ್ತಿಯನ್ನು ಬೇರೆ ನಿಗಮಗಳಲ್ಲಾದ ಅವ್ಯವಹಾರದಲ್ಲಿ ಏಕೆ ತೋರಿಸಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕೇವಲ ಇಷ್ಟು ಮಾತ್ರವಲ್ಲದೇ, ಇವತ್ತಿನ ದಿವಸ ಜಾರಿ ನಿರ್ದೇಶನಾಲಯದವರು ಎಲ್ಲಿಯವರೆಗೆ...

**ಸಭಾಪತಿಯವರು:-** ಸಾಕು ಮಾಡಿ; ನಿಮಗೆ ಅವಕಾಶವನ್ನು ನೀಡಿಲ್ಲ. ಶ್ರೀ ಐವನ್ ಡಿ'ಸೋಜಾ ರವರು ಮಾತನಾಡಿರುವುದು ಕಡತಕ್ಕೆ ಹೋಗಬಾರದು; ಕುಳಿತುಕೊಳ್ಳಿ.

**(ಮಾನ್ಯ ಸಭಾಪತಿಯವರ ನಿರ್ದೇಶನದಂತೆ ಈ ಹಂತದಲ್ಲಿ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಮಾತನಾಡಿರುವುದನ್ನು ನಡವಳಿಗಳಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್ ರವರೇ ನೀವು ಪ್ರಾರಂಭಿಸಿ.

**Sri IVAN D'SOUZA:-** It is my right Sir. ನೀವು ನನಗೆ ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದರೆ ಹೇಗೆ?

**ಸಭಾಪತಿಯವರು:-** ನೀವು ಎಷ್ಟು ಮಾತನಾಡುತ್ತೀರಿ; ಹೀಗಾಗಿ ನಿಮಗೆ ಅವಕಾಶವನ್ನು ನೀಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ನೀವು ಅವಕಾಶವನ್ನು ನೀಡುವುದಿಲ್ಲ ಎಂದರೆ, ನಾವೇನೂ ಮಾಡುವುದಕ್ಕೆ ಬರುವುದಿಲ್ಲ. ಆದರೆ, it is my right. You are curtailing my rights.

**ಸಭಾಪತಿಯವರು:-** ನೀವು 5:50 ಗಂಟೆಯಿಂದ ಮಾತನಾಡಲು ಪ್ರಾರಂಭಿಸಿದ್ದು; ಎಷ್ಟು ಹೊತ್ತು ಮಾತನಾಡುತ್ತೀರಿ?

**Sri IVAN D'SOUZA:-** I have not concluded. ಈ ವಿಷಯದ ಬಗ್ಗೆ ಮಾತನಾಡಬೇಕೆಂದು ನಾನು ಕೇಳಿಕೊಂಡಿದ್ದೇನೆ.

**ಸಭಾಪತಿಯವರು:-** ನೀವು ಈ ರೀತಿಯಾಗಿ ಮಾಡಿದರೆ, ನಾವು ಸದನವನ್ನು ಹೇಗೆ ನಡೆಸಬೇಕು? ಈಗ ನಾನು ಸದನವನ್ನು ನಡೆಸಬೇಕೋ ಅಥವಾ ಬೇಡವೋ?

**Sri IVAN D'SOUZA:-** It is my right which I am asking. ನನಗೆ ಇನ್ನೂ ಐದು ನಿಮಿಷಗಳ ಕಾಲಾವಕಾಶವನ್ನು ನೀಡಿ.

**ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾರವರೇ, ನೀವು 25 ನಿಮಿಷಗಳಷ್ಟು ಕಾಲ ಮಾತನಾಡಿದ್ದೀರಿ.

**Sri IVAN D'SOUZA:-** Sir, at least give me five minutes. ನೀವು ನನಗೆ ಎರಡು ನಿಮಿಷಗಳಷ್ಟು ಕಾಲವೂ ಸಹ ಮಾತನಾಡುವುದಕ್ಕೆ ಬಿಡಲಿಲ್ಲ. ಸದನವನ್ನು ನಿಯಂತ್ರಿಸುವುದು ನಿಮ್ಮ ಜವಾಬ್ದಾರಿಯಾಗಿದೆಯೇ ಹೊರತು ನನ್ನದಲ್ಲ. ಅವರುಗಳು ಮಾತನಾಡುವಾಗ ನಾನು ಮಾತನಾಡುವುದಕ್ಕೆ ಬರುವುದಿಲ್ಲ. If the House is not in order. …

**ಶ್ರೀ ಸುನೀಲ್ ವಲ್ಯಾಪುರ್ (ವಿರೋಧ ಪಕ್ಷದ ಉಪ ನಾಯಕರು):-** ಮಾನ್ಯ ಸಭಾಪತಿಯವರೆ, ಪೀಠದ ರಕ್ಷಣೆಗೆ ಯಾರು ಬರಬೇಕು?

**ಸಭಾಪತಿಯವರು:-** ಆಯಿತು ಶ್ರೀ ಐವನ್ ಡಿ'ಸೋಜಾರವರೇ ಎರಡು ನಿಮಿಷಗಳ ಕಾಲ ಮಾತನಾಡಿ. ಮಾತನಾಡಲು ಹೆಸರು ನೀಡಿದವರೆಲ್ಲರೂ ಮಾತನಾಡಬೇಕು; ಅಲ್ಲಿಯವರೆಗೆ ನಾನು ಸದನದ ಕಲಾಪಗಳನ್ನು ಮುಂದೂಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ವಂಚನೆಯಾಗಿರುವುದು ಕೇವಲ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದಲ್ಲಿ ಮಾತ್ರವಲ್ಲ. ಇನ್ನಿತರೆ ಹಲವು ಅಭಿವೃದ್ಧಿ ನಿಗಮಗಳಲ್ಲಿಯೂ ಸಹ ಅವ್ಯವಹಾರವಾಗಿದೆ. ಉದಾಹರಣೆಗೆ ಹೇಳುವುದಾದರೆ, ಬೋವಿ ಅಭಿವೃದ್ಧಿ ನಿಗಮ, ಕೃಷಿ ಮಾರುಕಟ್ಟೆ ಮಂಡಳಿ, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ದೇವರಾಜು ಅರಸು ಟ್ರಕ್ ಟರ್ಮಿನಲ್ ನಿಗಮ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ. ಇಷ್ಟೂ ನಿಗಮ ಮಂಡಳಿಗಳಲ್ಲಿ ಅವ್ಯವಹಾರ ನಡೆದಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇವುಗಳಲ್ಲಿಯೂ ಸಹ ಹಣಕಾಸಿನ ಅವ್ಯವಹಾರವಾಗಿದೆ. ಆದರೆ, ಎಲ್ಲಿಯೂ ಸಹ ಜಾರಿ ನಿರ್ದೇಶನಾಲಯ ಪ್ರವೇಶಿಸಿಲ್ಲ. ಆದರೆ, ಇವತ್ತಿನ ದಿವಸ ಕೇವಲ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ಮಂಡಳಿಯಲ್ಲಾದ ಅವ್ಯಹಾರಕ್ಕೆ ಸಂಬಂಧಪಟ್ಟಂತೆ ಮಾತ್ರವೇ ಜಾರಿ ನಿರ್ದೇಶನಾಲಯಕ್ಕೆ ತನಿಖೆಗೆ ವಹಿಸಿದೆ. **(ಗೊಂದಲ)** ಇದು ರಾಜಕೀಯ ಪ್ರೇರಿತವಾಗಿದೆ ಎಂದು ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯರೆ, ಎಲ್ಲಾ ನಿಗಮಗಳಲ್ಲಿ ಮಂತ್ರಿಗಳಿಗೆ ...

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ನೀಡಿರುವ ನಿಲುವಳಿ ಸೂಚನೆಯನ್ನು ಮಾತ್ರವೇ ಚರ್ಚೆಗೆ ತೆಗೆದುಕೊಳ್ಳಿ. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಸಂಬಂಧಪಟ್ಟಂತೆ ಮಾತ್ರವೇ ಮಾತನಾಡುವುದಾದರೆ, ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಕೋಟಿ ಕೋಟಿ ರೂಪಾಯಿಗಳಷ್ಟು ಹಣದ ಅವ್ಯವಹಾರವಾಗಿದೆ ಆದರೆ, ಜಾರಿ ನಿರ್ದೇಶನಾಲಯದವರು ಬಂದಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಶ್ರೀ ಐವನ್ ಡಿ'ಸೋಜಾ ರವರು ಪೇಪರ್ ಆರ್ಟಿಕಲ್‌ನ್ನು ಸದನಕ್ಕೆ ತೋರಿಸಿದರು)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇಷ್ಟು ದೊಡ್ಡ ಹಗರಣವಾದರೂ ವಿರೋಧ ಪಕ್ಷದವರಿಗೆ ನಾಚಿಕೆ ಇಲ್ಲ.

**(ಗೊಂದಲ)**

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಾದ ಹಗರಣದ ಬಗ್ಗೆ ಮಾತ್ರವೇ ಮಾತನಾಡಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದವರಿಗೆ ನೈತಿಕತೆ ಇದ್ದರೆ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಾದ 187 ಕೋಟಿ ರೂಪಾಯಿಗಳ ಹಗರಣದ ಬಗ್ಗೆ ಮಾತ್ರವೇ ಮಾತನಾಡಲಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಭಾರತೀಯ ಜನತಾ ಪಾರ್ಟಿಯವರು ರಾಜಕೀಯ ಪ್ರೇರಿತವಾಗಿ ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದವರನ್ನು (ಗೊಂದಲ) ಈ ಹಗರಣದ ಬಗ್ಗೆ ತನಿಖೆ ನಡೆಸಲು ನಾವು ಸಿದ್ಧರಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಒಂದು ಪೈಸೆಯನ್ನೂ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಲೋಕಸಭೆಗೆ ಸಾರ್ವತ್ರಿಕ ಚುನಾವಣೆಗಳು ಮುಗಿದು ಈಗ ಅರ್ಧ ಅಧಿವೇಶನದವರೆಗೆ ನಾವು ಬಂದಿದ್ದೇವೆ. ಹೀಗಾಗಿ ವಿರೋಧ ಪಕ್ಷದವರಿಗೆ ತಾವು ಏನನ್ನು ಪ್ರತಿಬಿಂಬಿಸಬೇಕು ಎನ್ನುವ ಮನಸ್ಥಿತಿಯುಂಟಾಗಿದೆ. ಆದರೆ, ವಸ್ತುಸ್ಥಿತಿಯನ್ನು ಹೇಳಬೇಕೋ ಅಥವಾ ಬೇರೆ ಇನ್ನೇನನ್ನೋ ಹೇಳಬೇಕೋ ಎನ್ನುವುದು ಅವರಿಗೆ ಅರ್ಥವಾಗುತ್ತಿಲ್ಲ. ಒಟ್ಟಾರೆಯಾಗಿ ಅವರು ಹೈಲೈಟ್ ಆಗಿರಬೇಕು ಎನ್ನುವ ಪರಿಸ್ಥಿತಿಯಲ್ಲಿ ಅವರುಗಳು ಬಹಳ ವೇಗವಾಗಿ ಹೋಗುತ್ತಿದ್ದಾರೆ. ಇದನ್ನು ನಾವು ಸ್ವಾಗತಿಸುತ್ತೇವೆ. ಸರ್ಕಾರ ತಪ್ಪು ಮಾಡಿದಾಗ, ಅದನ್ನು ಬೊಟ್ಟು ಮಾಡಿ ತೋರಿಸಿ, ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುವ ಜವಾಬ್ದಾರಿ ವಿರೋಧ ಪಕ್ಷದವರದ್ದಾಗಿದೆ. ಸರ್ಕಾರ ಎಂದರೆ, ಆಡಳಿತ ಮತ್ತು ವಿರೋಧ ಪಕ್ಷಗಳೆರೆಡೂ ಸೇರಿ ಜೊತೆಗೆ ಹೋಗಬೇಕು. ಆಗ ಮಾತ್ರವೇ ಈ ರಾಜ್ಯದ ಏಳು ಕೋಟಿ ಜನರಿಗೆ ಒಳ್ಳೆಯದಾಗುತ್ತದೆ. ಅದನ್ನು ಬಿಟ್ಟು ನಮ್ಮಷ್ಟಕ್ಕೆ ನಾವೇ ಹಾಗೂ ಅವರಷ್ಟಕ್ಕೆ ಅವರು ಇದ್ದರೆ, ಇದರಿಂದ ಯಾರಿಗೂ ಸಹ ಒಳ್ಳೆಯದಾಗುವುದಿಲ್ಲ. ಹಗರಣಗಳು ಬಂದಿವೆ; ಇದೇನೂ ಹೊಸದಲ್ಲ. ಇದನ್ನು ನಾವು ಯಾರೂ ಸಹ ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ನಮ್ಮ ಪಕ್ಷದ ಸದಸ್ಯರಾಗಲೀ ಅಥವಾ ರಾಜ್ಯದ ಮುಖ್ಯಮಂತ್ರಿಗಳಾಗಲೀ ಈ ನಿಗಮದಲ್ಲಾಗಿರುವ ಅವ್ಯವಹಾರವನ್ನು ಯಾರೂ ಸಹ ಸಮರ್ಥಿಸಿಕೊಂಡಿಲ್ಲ.

ಸರ್ಕಾರದ ಪರಿಮಿತಿ ಇಲ್ಲದೇ, ಸರ್ಕಾರಕ್ಕೆ ಗೊತ್ತಾಗದೇ, ಇಲಾಖೆಯ ಕೆಲವು ಅಧಿಕಾರಿಗಳು ಮಾಡಿರುವ ದುಷ್ಕೃತ್ಯವಿದು ಎಂದು ಮೊದಲನೇಯದಾಗಿ ಹೇಳುತ್ತೇನೆ. ಇನ್ನೊಬ್ಬರನ್ನು ಹೀಯಾಳಿಸುವುದು, ಅವಮಾನಿಸುವುದು ಶಾಸನ ಸಭೆಯ ಕಲಾಪದ ಪರಿಸ್ಥಿತಿಯಲ್ಲ. ಏಕೆಂದರೆ, ಶ್ರೀಮತಿ ಸ್ಮೃತಿ ಇರಾನಿಯವರನ್ನು ಟ್ರೋಲ್ ಮಾಡಿದಾಗ, ನಮ್ಮ ಪಕ್ಷದ ರಾಹುಲ್ ಗಾಂಧಿಯವರು ಈ ರೀತಿಯಾಗಿ ಯಾರೂ ಮಾಡಬಾರದು; ಇದು ನಮ್ಮ ದೌರ್ಬಲ್ಯವಾಗುತ್ತದೆ ಎಂದು ಹೇಳಿದರು. ಈ ರೀತಿಯ ನಡವಳಿಕೆಯನ್ನು ವಿರೋಧ ಪಕ್ಷದವರು ಇಟ್ಟುಕೊಳ್ಳಬೇಕು. ನಮ್ಮ ಪಕ್ಷದವರು ಏನು ಹೇಳಿದ್ದಾರೆ ಎನ್ನುವುದನ್ನು ವಿರೋಧ ಪಕ್ಷದವರು ತಿಳಿದುಕೊಳ್ಳಬೇಕು.

**ಶ್ರೀ ಕೇಶವ ಪ್ರಸಾದ್ ಎಸ್:-** ಮಾನ್ಯ ಸಭಾಪತಿಯವರೆ, ದೆಹಲಿಯಲ್ಲಿ ಏನು ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರಿಗೆ ನಾನೊಂದು ಮಾತನ್ನು ಹೇಳಬಯಸುತ್ತೇನೆ. ನಾನು ಮಾತನಾಡುವಾಗ ಅವರುಗಳು ಎಷ್ಟು ಅಡ್ಡ ಪಡಿಸುತ್ತಾರೆಯೋ, ಹಾಗೆಯೇ ಅವರಿಗೆ ಒಂದು ಮಾತನ್ನೂ ಆಡುವುದಕ್ಕೆ ನಾನು ಬಿಡುವುದಿಲ್ಲ. ಇದನ್ನು ಬೇಕಾದರೆ ಅವರುಗಳು ಬರೆದಿಟ್ಟುಕೊಳ್ಳಲಿ. **(ಗೊಂದಲ)** ಅದಕ್ಕೆಲ್ಲಾ ನಾನು ಹೆದರುವುದಿಲ್ಲ. **(ಗೊಂದಲ)** ನೀವುಗಳು ಮಾತನಾಡಿ, ನೋಡೋಣ; ಅವು ಯಾವುದಕ್ಕೂ ಸಹ ನಾನು ಭಯ ಬೀಳುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದು ಸದನ. ಇಲ್ಲಿ ಪೀಠ ಏನು ಹೇಳುತ್ತದೆಯೋ .... **(ಗೊಂದಲ)** ಅವರು ಬಿಡುವುದಿಲ್ಲ ಎಂದರೆ ಏನು?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಚುನಾವಣೆ ಬಂದಾಗ ಭಾಷಣ ಮಾಡುವುದು ವಾಡಿಕೆ. ಆದರೆ, ಚುನಾವಣೆಯಾದ ಮೇಲೆ ನಾವಿಬ್ಬರೂ ಜನರಿಗೋಸ್ಕರ ಕೆಲಸ ಮಾಡುವ ಪರಿಪಾಠವನ್ನು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಭಾರತೀಯ ಜನತಾ ಪಾರ್ಟಿ ಮತ್ತು ಜನತಾ ದಳ (ಜಾತ್ಯಾತೀತ) ಪಕ್ಷಗಳು ಸೋತ ಮೇಲೆ..., ಕುದುರೆಗಳು ಸೋತ ಮೇಲೆ ಯಾವ ಪರಿಸ್ಥಿತಿ ಆಗಿರುತ್ತದೆಯೋ ಅಂತಹ ಪರಿಸ್ಥಿತಿ ಇವರದ್ದಾಗಿದೆ. ಏನು ಮಾತನಾಡಿದರೂ ಅದು ಜನರಿಗೆ ಮುಟ್ಟಬೇಕು. ಆದರೆ, ಅದು ಹೇಗೆ ಮುಟ್ಟುತ್ತದೆ? ಇಲ್ಲಿ ಏನೂ ಸಹ ಇಲ್ಲ. ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು 136 ವಿಧಾನಸಭಾ ಸದಸ್ಯರನ್ನು ಇಟ್ಟುಕೊಂಡು ನಮ್ಮ ರಾಜ್ಯದ ಏಳು ಕೋಟಿ ಜನಸಂಖ್ಯೆಯ ಪೈಕಿ 4.5 ಕೋಟಿ ಜನರಿಗೆ ಗೃಹಲಕ್ಷ್ಮೀ, ಗೃಹಜ್ಯೋತಿ, ಶಕ್ತಿ ಯೋಜನೆ ಹಾಗೂ ನಿರುದ್ಯೋಗ ಭತ್ಯೆ ಯೋಜನೆಗಳಡಿ ಎಷ್ಟೆಲ್ಲಾ ಸೌಕರ್ಯಗಳನ್ನು ನೀಡುತ್ತಿದೆಯಲ್ಲವೇ. ಗ್ಯಾರಂಟಿ ಯೋಜನೆಗಳಿಗೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಈ ಗ್ಯಾರಂಟಿ ಯೋಜನೆಗಳಡಿ ವಿರೋಧ ಪಕ್ಷದವರು ಯಾರೂ ಸಹ ಸೌಲಭ್ಯಗಳನ್ನು ಪಡೆದುಕೊಂಡಿಲ್ಲವೇ? ಇದರಲ್ಲಿ ಯಾವುದೇ ಪಕ್ಷ ಬೇಧಗಳಿಲ್ಲ.

**(ಗೊಂದಲ)** ಮೊನ್ನೆಯ ದಿನ ವಿರೋಧ ಪಕ್ಷದ ಸಂಸದರಾದ ಮಾನ್ಯ ಜಿಗಜಿಗಣಿಯವರು 'ನಾನು ಏಳು ಬಾರಿ ಗೆದ್ದಿದ್ದೇನೆ; ನಾನು ಪರಿಶಿಷ್ಟ ಜಾತಿಗೆ ಸೇರಿದವನೆಂದು ನನ್ನನ್ನು ಪರಿಗಣಿಸಿಲ್ಲ' ಎಂಬುದಾಗಿ ಹೇಳಿದರು. ವಿರೋಧ ಪಕ್ಷದ ಬಸವರಾಜ ಯತ್ನಾಳ್ ರವರು 'ನನ್ನನ್ನು ನೀವು ಏನಾದರೂ expel ಮಾಡಿದರೆ, ಬಿ.ಜೆ.ಪಿ. ಕಾಲದ್ದು ನಲವತ್ತು ಸಾವಿರ ಕೋಟಿ ರೂಪಾಯಿಗಳ ಹಗರಣವನ್ನು ನಾನು ತೆಗೆದಿಡುತ್ತೇನೆ' ಎಂಬುದಾಗಿ ಹೇಳಿದರು. ಈ ಎಲ್ಲಾ ಸಂಗತಿಗಳನ್ನು ನಾವು ಹೇಳುತ್ತಿಲ್ಲ. ಅವರ ಪಕ್ಷದವರೇ ಹೇಳಿದ್ದು, ಪತ್ರಿಕೆಗಳಲ್ಲಿ ವರದಿಯಾಗಿದೆ. ಇದನ್ನು ನಾವು ಎಲ್ಲಿಯೋ ಹೋಗಿ ಕೇಳಿಸಿಕೊಂಡಿಲ್ಲ. ಆದರೆ, ನಾವು ಏನು ಮಾಡಿದ್ದೇವೆ. ಬೋವಿ ಅಭಿವೃದ್ಧಿ ನಿಗಮದಲ್ಲಿ ಅನ್ಯಾಯವಾಗಿದೆ; ಆ ಜನಾಂಗದ ಜನರಿಗೆ ಸವಲತ್ತು ದೊರೆಯಬೇಕಾಗಿತ್ತು, ಆದರೆ ಸಿಕ್ಕಿಲ್ಲ. ಕೆಲವು ಜನರು ಸೇರಿಕೊಂಡು, ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುವ ಕೆಲಸವನ್ನು ಮಾಡಿದ್ದಾರೆ. ಆದರೆ, ಇದು ಗೊತ್ತಾದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ಏನು ಕ್ರಮ ಕೈಗೊಳ್ಳಬೇಕಾಗಿತ್ತೋ ಅಂದರೆ, ವಿಶೇಷ ತನಿಖಾ ದಳದ ರಚನೆಯಾಗಿರಬಹುದು ಅಥವಾ ಆ ಹಣವನ್ನು ..., ಈ ಹಗರಣದಲ್ಲಿ ಎಷ್ಟು ಹಣದ ಅವ್ಯವಹಾರವಾಗಿದೆ ಎನ್ನುವ ಲೆಕ್ಕವನ್ನು ನಾನು ನೀಡುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೆ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಾದ ಅವ್ಯವಹಾರದ ಬಗ್ಗೆ ಮಾತ್ರವೇ ಸದಸ್ಯರು ಮಾತನಾಡಲಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ನಾನು ಇದೇ ವಿಷಯವನ್ನೇ ಮಾತನಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ಸಭಾಪತಿಯವರು:-** ಶ್ರೀ ಶಾಂತಾರಾಮ್ ಬುಡ್ನ ಸಿದ್ದು ಹಾಗೂ ಶ್ರೀ ಪುಟ್ಟಣ್ಣರವರೇ ಕುಳಿತುಕೊಳ್ಳಿ. ಶ್ರೀಮತಿ ಹೇಮಲತಾ ನಾಯಕ್ ರವರೇ ನೀವು ಏಕೆ ನಡುನಡುವೆ ಮಾತನಾಡುತ್ತೀರಿ; ನೀವೂ ಸಹ ಕುಳಿತುಕೊಳ್ಳಿ. ಶ್ರೀ ಯು.ಬಿ.ವೆಂಕಟೇಶ್ ರವರು ಮಾತನಾಡಲಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ನಾನು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಾದ ಹಗರಣದ ಬಗ್ಗೆ ಮಾತನಾಡುತ್ತಿದ್ದೇನೆ; ಇದನ್ನು ಬಿಟ್ಟು ಬೇರೆನೂ ಮಾತನಾಡುವುದಕ್ಕೆ ಹೋಗಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಬೇರೆ ನಿಗಮದ ವಿಷಯವನ್ನು ತೆಗೆದುಕೊಂಡರೆ, ವಿರೋಧ ಪಕ್ಷದವರಿಗೆ ಉರಿದುಬಿಡುತ್ತದೆ.

**ಸಭಾಪತಿಯವರು:-** ಶ್ರೀ ಪುಟ್ಟಣ್ಣರವರೇ ನೀವು ಹಿರಿಯ ಸದಸ್ಯರಿದ್ದೀರಿ. ಅವರಿಗೆ ಮಾತನಾಡಲು ಬಿಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ... **(ಗೊಂದಲ)** ಮಾನ್ಯ ಮೋದಿಯವರ ಹೆಸರನ್ನು ಆಡಳಿತ ಪಕ್ಷದವರು ತೆಗೆದುಕೊಳ್ಳುವುದಿಲ್ಲವೇ?

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಶ್ರೀ ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ; ನಾನೂ ಕಂಡಿದ್ದೇನೆ. **(ಗೊಂದಲ)** ಅಲ್ಲಿ ಏನೆಲ್ಲಾ ನಡೆಯುತ್ತದೆ ಎಂಬ ಬಗ್ಗೆ ಹೇಳಿದರೆ, ಇವರುಗಳು ಕುರ್ಚಿಯ ಮೇಲೆ ಕುಳಿತುಕೊಳ್ಳುವುದಿಲ್ಲ. ಅವರದ್ದು ಎಲ್ಲಾ ನನಗೆ ಗೊತ್ತಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರಿಗೆ ಎಲ್ಲಾ ಗೊತ್ತಿದೆ; ಆದರೆ, ನಮಗೇನೂ ಗೊತ್ತಿಲ್ಲವೇ? **(ಗೊಂದಲ)** ಕೇವಲ ಇವರೊಬ್ಬರಿಗೆ ಮಾತ್ರವಲ್ಲದೇ, ನಮಗೂ ಸಹ ಎಲ್ಲಾ ಗೊತ್ತಿದೆ.

**(ಗೊಂದಲ)**

**ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್:-** ಮಾನ್ಯ ಸಭಾಪತಿಯವರೆ, ಅಲ್ಲಿ ಏನು ಇದೆ ಎಂದು ನೋಡಿಕೊಂಡು ಬಂದು ಇಲ್ಲಿ ಹೇಳುತ್ತಿದ್ದಾರೆ. ಅಲ್ಲಿ ಒಳಗಡೆ ಏನು ನಡೆಯುತ್ತಿದೆ ಎನ್ನುವುದನ್ನು ಹೇಳಿದರೆ, ಇವರುಗಳು ಯಾರೂ ಸಹ ಇಲ್ಲಿ ಕೂಡುವುದಿಲ್ಲ ಎಂಬುದಾಗಿ ಸದಸ್ಯರು ಹೇಳುತ್ತಿದ್ದಾರೆ. ಈ ಮಾತನ್ನು ಶ್ರೀ ರವಿಕುಮಾರ್ ರವರು ಕೇಳಿಸಿಕೊಂಡರೇ?

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ಅವರು ಸುಮ್ಮನೆ ಹಾರಾಡುತ್ತಾರೆ. ಅವರು ಯಾರನ್ನೂ ಸಹ ಒಳಗಡೆ ಬಿಟ್ಟುಕೊಳ್ಳುವುದಿಲ್ಲ.

(ಮುಂದು)

(548) 18.07.2024 06.40 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ನಾನು ಮಾತನಾಡುತ್ತಿರುವುದು ಕರ್ನಾಟಕ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಗ್ಗೆ. ನಾನು ಅದನ್ನು ಬಿಟ್ಟು ಬೇರೆಯದನ್ನು ನಾನು ಮಾತನಾಡಿಲ್ಲ.

**ಸಭಾಪತಿಯವರು:–** ಇದನ್ನೇ ಮಾತನಾಡಿ ಎಂದು ಯಾರಿಗೂ ಹೇಳುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಬೇರೆಯವರು ಮಾತನಾಡಿದರೆ ಇವರಿಗೆ ಉರಿಯುತ್ತದೆ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣ ಅವರೇ, ನೀವು ಹಿರಿಯ ಸದಸ್ಯರು.

**(ಗೊಂದಲ)**

**ಶ್ರೀ ಛಲವಾದಿ ನಾರಾಯಣಸ್ವಾಮಿ:–** ದೇಶದ ಪ್ರಧಾನಮಂತ್ರಿ ಎಲ್ಲರಿಗೂ ಒಂದೇ. ಮೋದಿಯವರ ಹೆಸರನ್ನು ನೀವು ತೆಗೆದುಕೊಳ್ಳುವುದಿಲ್ಲವೇ? ಹಾಗೆ ನಾವು ಗೌರವದಿಂದ ತೆಗೆದುಕೊಳ್ಳುತ್ತೇವೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ. ಅಲ್ಲಿ ಏನೇನು ನಡೆಯುತ್ತದೆ ಎಂದು ಹೇಳಿದರೆ ನೀವು ಕೆಳಗಡೆ ಕುಳಿತುಕೊಳ್ಳುವುದಿಲ್ಲ. ಚೇರ್ ಮೇಲೆ ನಿಂತಿರುತ್ತೀರಿ. ಎಲ್ಲಾ ಗೊತ್ತು ನಮಗೆ.

**(ಗೊಂದಲ)**

**ಶ್ರೀ ಛಲವಾದಿ ನಾರಾಯಣಸ್ವಾಮಿ:–** ಹಾಗಾದರೆ ನಿಮಗೆ ಎಲ್ಲಾ ಗೊತ್ತು. ನಮಗೆ ಏನೂ ಗೊತ್ತಿಲ್ಲವೆ? ನಮಗೂ ಎಲ್ಲಾ ಗೊತ್ತಿದೆ. ನಿಮಗೊಬ್ಬರಿಗೆ ಅಲ್ಲ.

**(ಗೊಂದಲ)**

**ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):–** ಮಾನ್ಯ ರವಿಕುಮಾರ್ ಅವರೆ, ಮಾನ್ಯ ಪುಟ್ಟಣ್ಣ ಅವರು ನಿಮ್ಮಲ್ಲಿ ಏನೇನಿದೆ ಎಂಬುದನ್ನು ನೋಡಿಕೊಂಡು ಬಂದು ಹೇಳುತ್ತಿದ್ದಾರೆ. ಅಲ್ಲಿ ಒಳಗಡೆ ಏನು ನಡೆಯುತ್ತದೆ ಎಂಬುದನ್ನು ತಿಳಿದುಕೊಂಡರೆ ನೀವು ಯಾರೂ ಇಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ಹೇಳಿದರು. ನೀವು ಆ ಮಾತು ಕೇಳಿಸಿಕೊಂಡಿರಾ?

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಅವರು ನಿಮ್ಮನ್ನು ಅಲ್ಲ, ಯಾರನ್ನೂ ಅವರ ಮುಂದೆಯೇ ಬಿಟ್ಟುಕೊಳ್ಳುವುದಿಲ್ಲ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:–** ಇವರೆಲ್ಲಾ ಇಲ್ಲಿ ಬಹಳ ಹಾರಾಡುತ್ತಾರೆ. ಇವರು ಯಾರನ್ನೂ ಅವರ ಹತ್ತಿರಕ್ಕೆ ಬಿಟ್ಟುಕೊಳ್ಳುವುದಿಲ್ಲ.

**ಸಭಾಪತಿಯವರು:-** ಮಾನ್ಯ ಶಿವರಾಜ್ ತಂಗಡಗಿಯವರೇ, ನೀವು ಮಂತ್ರಿಯಾಗಿರುವವರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಗ್ಗೆಯೇ ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಅವರಿಗೆ ಏಕೆ ಕಿವಿ ಕೇಳಿಸುತ್ತಿಲ್ಲವೋ ಅಥವಾ ಬೇರೆ ಕಡೆ ಚಿಂತನೆಯಾಗಿದೆಯೋ ನನಗೆ ಗೊತ್ತಿಲ್ಲ. ನಾನು ಈ ನಿಗಮದ ಬಗ್ಗೆ ಬಿಟ್ಟು ಬೇರೆ ಯಾವುದರ ಬಗ್ಗೆಯೂ ಮಾತನಾಡಿಲ್ಲ. ಆ ತಾಯಿಗೆ ಏಕೆ ಕೇಳಿಸುತ್ತಿಲ್ಲವೋ ನನಗೆ ಅರ್ಥವಾಗಿಲ್ಲ.

**ಶ್ರೀ ಶಾಂತಾರಾಮ ಬುಡ್ನ ಸಿದ್ದಿ:-** ಮಾನ್ಯ ಯು.ಬಿ.ವೆಂಕಟೇಶ್ ಅವರೇ, ನೀವು ಉಲ್ಲೇಖ ಮಾಡುವಾಗ ಬೋವಿ ಎಂದು ಹೇಳಿದ್ದೀರಿ.

**ಶ್ರೀ ಯು.ಬಿ.ವೆಂಕಟೇಶ್:-** ಇಲ್ಲ, ನಾನು ಹೇಳಿಲ್ಲ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಸರಿ, ಈಗ ನಾನು ಹೇಳಿದ್ದರೆ ನಾನು ವಾಪಸ್ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣ ಅವರೆ, ಹೊಸದಾಗಿ ಸದಸ್ಯರು ಬಂದಿದ್ದಾರೆ. ಅವರು ನಿಮ್ಮಂತೆಯೇ ಕಲಿಯಬಾರದು. ಹೊಸದಾಗಿ ಬಂದವರು ತಿಳಿದುಕೊಳ್ಳಲಿ. ನಡುನಡುವೆ ಎದ್ದು ಏಕೆ ಮಾತನಾಡುತ್ತೀರಿ.

**ಸಭಾಪತಿಯವರು:-** ದಯಮಾಡಿ ಯಾರೂ ಏಳಬೇಡಿ. ಮಾನ್ಯ ವೆಂಕಟೇಶ್ ಅವರೇ, ನೀವು ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಒಂದು ನೂರ ಎಂಭತ್ತೇಳು ಕೋಟಿ ರೂಪಾಯಿಗಳನ್ನು ಈ ಬ್ಯಾಂಕ್‌ನಿಂದ ಇನ್ನೊಂದು ಬ್ಯಾಂಕ್‌ಗೆ ವರ್ಗಾವಣೆ ಮಾಡುತ್ತಾರೆ. ಅದರಲ್ಲಿ ತೊಂಭತ್ತಮೂರು ಕೋಟಿ ರೂಪಾಯಿಗಳ OD ತೆಗೆದುಕೊಳ್ಳುತ್ತಾರೆ. OD ತೆಗೆದುಕೊಂಡು ಬೇರೆ ಬೇರೆ ಅಕೌಂಟ್‌ಗಳಿಗೆ ಟ್ರಾನ್ಸ್‌ಫರ್ ಮಾಡಿಕೊಂಡು ಅವ್ಯವಹಾರ ಮಾಡಿದ್ದಾರೆ. ಇದು ಸರ್ಕಾರಕ್ಕೆ ತಿಳಿದ ತಕ್ಷಣ ಎಸ್‌ಐಟಿ ರಚನೆ ಮಾಡಿ 14ನೇ ತಾರೀಖು ರೂ.8.21 ಕೋಟಿ ವರ್ಮಾ ಅವರ ಹತ್ತಿರ seize ಮಾಡುತ್ತಾರೆ. 16ನೇ ತಾರೀಖು ರೂ.3,65,47,000/- ಗಳನ್ನು ಪದ್ಮನಾಭ ಅವರಿಂದ seize ಮಾಡುತ್ತಾರೆ. 17ನೇ ತಾರೀಖು ಮೂವತ್ತು ಲಕ್ಷ ರೂಪಾಯಿಗಳನ್ನು ಪದ್ಮನಾಭ ಅವರ ಬಳಿ seize ಮಾಡುತ್ತಾರೆ. 18ನೇ ತಾರೀಖು ರೂ.1.49 ಕೋಟಿ ಗಳನ್ನು ನಾಗೇಶ್ವರ ರಾವ್ ಅವರ ಬಳಿ seize ಮಾಡುತ್ತಾರೆ. 20ನೇ ತಾರೀಖು ಮೂವತ್ತು ಲಕ್ಷ ರೂಪಾಯಿಗಳನ್ನು ಚಂದ್ರಮೋಹನ್ ಅವರ ಬಳಿ seize ಮಾಡುತ್ತಾರೆ. 21 ನೇ ತಾರೀಖು ಹನ್ನೆರಡು ಲಕ್ಷ ಐವತ್ತು ಸಾವಿರ

ರೂಪಾಯಿಗಳನ್ನು ಜಗದೀಶ್ ಅವರ ಬಳಿ seize ಮಾಡುತ್ತಾರೆ. ಒಟ್ಟು ರೂ.14,33,35,000 ಕೋಟಿಗಳನ್ನು seize ಮಾಡಲಾಗುತ್ತದೆ. ರೂ.14.49 ಕೋಟಿ ಮೌಲ್ಯದ ಬಂಗಾರವನ್ನು seize ಮಾಡಲಾಗುತ್ತದೆ. ಇದು ಬಿಟ್ಟು ವಿವಿಧ ಬ್ಯಾಂಕ್‌ಗಳಲ್ಲಿ 217 ಅಕೌಂಟ್ ಇರುತ್ತವೆ.

**ಶ್ರೀ ಎನ್.ರವಿಕುಮಾರ್:-** ಬಂಗಾರ ಯಾವುದು ಎಂದು ಕೇಳುತ್ತೇನೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ನನ್ನನ್ನು ಕೇಳಲಿಕ್ಕೆ ನೀವು ಯಾರು? ಈಗ ನಾನು ಶುರು ಮಾಡಿದರೆ ಪುನಃ ನೀವೆಲ್ಲಾ ಏಳುತ್ತೀರಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ರವಿಕುಮಾರ್ ಅವರೇ, ನೀವು ಕುಳಿತುಕೊಳ್ಳಿ. ಮಾನ್ಯ ವೆಂಕಟೇಶ್ ಅವರೇ, ನೀವು ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ರೂ.14,49,400/- ಮೌಲ್ಯದ ಬಂಗಾರವನ್ನು seize ಮಾಡಿದ್ದಾರೆ. ರೂ.14,33,35,000/- ಹಣ seize ಮಾಡಿದ್ದಾರೆ. ವರ್ಮಾ ಎಂಬುವವರು ರೂ.3,31,19,166/- ಮೊತ್ತದ ಒಂದು ಕಾರ್ ತೆಗೆದುಕೊಂಡಿರುತ್ತಾರೆ. ಹೈದರಾಬಾದ್‌ಗೆ ಹೋಗಿ ಯಾರಿಗೆ ಆ ಕಾರನ್ನು ಮಾರಲಾಗಿತ್ತೋ ಅವನಿಗೆ ಕಾರ್ ವಾಪಸ್ ಕೊಟ್ಟು ಅವನ ಬಳಿಯಿಂದ ಹಣವನ್ನು seize ಮಾಡಲಾಗುತ್ತದೆ. ಇದೇ ಸತ್ಯನಾರಾಯಣ ಎನ್ನುವವರ ಬಳಿ ರೂ.1.21 ಕೋಟಿ ಸಿಗುತ್ತದೆ. First Credit Co-operative Society bank ನಿಂದ ಐದು ಕೋಟಿ ರೂಪಾಯಿ ವಾಪಸ್ ಬರುತ್ತದೆ. ಇದೆಲ್ಲಾ ಆದ ಮೇಲೆ ಯೂನಿಯನ್ ಬ್ಯಾಂಕ್‌ನಿಂದ ಅಕ್ರಮವಾಗಿ ವರ್ಗಾವಣೆಗೊಂಡು ಕೋ ಆಪರೇಟಿವ್ ಬ್ಯಾಂಕ್‌ನಲ್ಲಿದ್ದಂತಹ ರೂ. 46 ಲಕ್ಷಗಳ ಮೇಲೆ ಎಸ್.ಐ.ಟಿ ಅವರು ಕರ್ನಾಟಕ ಸರ್ಕಾರದ lean ಮಾಡಿದ್ದಾರೆ. ರೂ.85,25,07,698/-ಗಳನ್ನು ನಮ್ಮ ಸರ್ಕಾರ ಇಲ್ಲಿಯವರೆಗೂ seize ಮಾಡಿದೆ. ಇದು ನಿಮಗೆ ಕಡತದಲ್ಲಿ ಇರಲಿ. ಎಸ್.ಐ.ಟಿಯಲ್ಲಿ ಯಾರು ಬೇಕಾದರೂ ಪರಿಶೀಲಿಸಬಹುದು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಮೋಶಿಯವರೇ, ಅದು ನಿಮ್ಮ ಕೆಲಸವಲ್ಲ. ನನ್ನ ಕೆಲಸ. ಅವರು ಏನಾದರೂ ಹೇಳಲಿ, ನಿಮಗೆ ಯಾಕೆ ಬೇಕು? ಮಾತನಾಡುವುದಕ್ಕೆ ಅಧಿಕಾರವಿದೆ. ಮಾತನಾಡುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಪ್ರತಿಯೊಂದು ಎಸ್.ಐ.ಟಿ ರೆಕಾರ್ಡ್‌ನಲ್ಲಿದೆ. ನಾನು ಈಗ ಮಧ್ಯಾಹ್ನ ಹೋಗಿ ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದೇನೆ.

ರೂ.85,25,07,698/-ಗಳನ್ನು ಎಸ್.ಐ.ಟಿ ಯವರು seize ಮಾಡಿದ್ದಾರೆ. ಇದು public document. ನಾವು ಯಾರೂ ದುಡ್ಡು ಹಾಕುವುದಕ್ಕೆ ಆಗುವುದಿಲ್ಲ. ಎಲ್ಲೆಲ್ಲಿ seize ಮಾಡಿದ್ದಾರೆ, ಎಲ್ಲೆಲ್ಲಿ ಸಿಕ್ಕಿದೆ, ಯಾರು ಹುಡುಕಿದ್ದಾರೆ ಎಂಬುದನ್ನು ಯಾರು ಬೇಕಾದರೂ ನೋಡಬಹುದು.

ಮೊನ್ನೆ ಮಾನ್ಯ ಸಿ.ಟಿ.ರವಿಯವರು ಮಾತನಾಡುತ್ತಿದ್ದಾಗ ಹೊಸದಾಗಿ ಬಂದಿದ್ದೀರಿ. ಸ್ವಲ್ಪ ಏನು ಮಾಡಬೇಡಪ್ಪ ಎಂದು ಅವರಿಗೆ ಹೇಳಿದಿರಿ. ಅದಕ್ಕೆ ಅವರು ನಾನು ಕೆಳಮನೆಯಲ್ಲಿ 20 ವರ್ಷಗಳು ಶಾಸಕನಾಗಿ ಇದ್ದೆನು ಎಂದು ಹೇಳಿದರು. ಅವರು ಇವತ್ತು ಇಲ್ಲಿ ಇಲ್ಲ. ಹೇಳಬೇಕೆಂದಿದ್ದೆನು. ತಮಗೆ 44 ವರ್ಷ ಅವಧಿ ಮುಗಿದಿದೆ. ಭೀಷ್ಮ ದಯಮಾರಣಕ್ಕೆ ಕಾದಂತೆ 48,54,60,72 ಹಾಗೆ ನೀವೆಷ್ಟು ಬಾರಿ ಚುನಾವಣೆಗೆ ನಿಂತುಕೊಂಡಿದ್ದೀರಿ ಅಷ್ಟು ಬಾರಿ ಸದಸ್ಯರಾಗಿದ್ದೀರಿ. ಭೀಷ್ಮ ದಯಾಮರಣಕ್ಕಾಗಿ ಕಾಯುತ್ತಿದ್ದನು. ನೀವು ಇರುವವರೆಗೂ ಅಜರಾಮರರು.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು "ಅದು ಇಚ್ಛಾ ಮರಣ" ಎಂದು ಕೂಗಿದರು)**

**ಶ್ರೀ ಯು.ಬಿ.ವೆಂಕಟೇಶ್:-** ಆಯಿತು. ಅದು ಇಚ್ಛಾ ಮರಣನೇ. ಹಾಗೆಯೇ ಮಾನ್ಯ ಬಸವರಾಜ ಹೊರಟ್ಟಿಯವರು ಇಲ್ಲಿ ಇರುತ್ತಾರೆ. ಮಾನ್ಯ ಸಿ.ಟಿ.ರವಿಯವರು 24 ವರ್ಷ ವಿಧಾನಸಭೆ ಶಾಸಕರಾಗಿದ್ದರು. ನಾವು ಯಾವುದನ್ನೂ ಅಲ್ಲಗಳೆಯುವುದು ಬೇಡ. ಮಾನ್ಯ ಪುಟ್ಟಣ್ಣ ಅವರು ಇದ್ದಾರೆ. ಎರಡೆರಡು ವರ್ಷಕ್ಕೆ ಒಂದೊಂದು ಎಲೆಕ್ಷನ್. ಎಂಎಲ್‌ಸಿ, ಎಂಎಲ್ಎ, ಎಂಪಿ, ಪುನಃ ಎಂಎಲ್‌ಸಿ.

**(ಗೊಂದಲ)**

**ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್:-** ನಿಮ್ಮ ಪಕ್ಷ ಸರಿಯಿಲ್ಲವೆಂದು ಬಿಟ್ಟು ಬಂದಿದ್ದಾರೆ.

**ಶ್ರೀ ಪುಟ್ಟಣ್ಣ:-** ನಿಮ್ಮ ಸಹವಾಸ ಮಾಡಿ ಹೀಗಾಯಿತು ನಮ್ಮ ಪರಿಸ್ಥಿತಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣ ಅವರು ಬಿಜೆಪಿಯವರ ಫೋಟೋ ಹಾಕಿಕೊಳ್ಳಬೇಕು. ಬಿಜೆಪಿಯವರು ಈ ರಾಜ್ಯದಲ್ಲಿ ಒಂದು ಬಾರಿಯೂ ಸ್ವಂತ ಬಲದ ಮೇಲೆ ಬಂದಿಲ್ಲ. ಒಮ್ಮೆ ನಾನು ಮಾನ್ಯ ಪುಟ್ಟಣ್ಣ ಅವರಿಗೆ "ಬಿ.ಜೆ.ಪಿ.ಗೆ ಹೋಗಬೇಡ, ನನ್ನ ಮಾತು ಕೇಳು" ಎಂದು ಹೇಳಿದೆ. ಒಂದು ಬಾರಿಯೂ ಬಿಜೆಪಿಯವರು ಅವರ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲಿಲ್ಲ. ಯಾವಾಗಲೂ ಆಪರೇಷನ್ ಪಿತಾಮಹರು

"ಆಪರೇಷನ್ ಲೋಟಸ್" ಮಾಡಿ ವಿಶೇಷ ವಿಮಾನಗಳಲ್ಲಿ ಕರೆದುಕೊಂಡು ಹೋಗುತ್ತಾರೆ. "ಬಾಂಬೆ ಬ್ರದರ್ಸ್"... ನಮ್ಮ ಹಳ್ಳಿಹಕ್ಕಿ ಇಲ್ಲ. ಇದ್ದಿದ್ದರೆ ಅವರ ಕೈಯಲ್ಲಿ explain ಮಾಡಿಸುತ್ತಿದ್ದೆನು. ಇವರು ಇಷ್ಟೆಲ್ಲಾ ಹೇಳುತ್ತಾರೆ. ಆಗಲೇ ನನಗೆ ಕಣ್ಣಲ್ಲಿ ನೀರು ಬಂತು. ಮಾನ್ಯ ತಿಪ್ಪೇಸ್ವಾಮಿಯವರು....

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಚರ್ಚೆ ನಡೆಯುತ್ತಿರುವ ವಿಷಯ ಇದೇನಾ? ಆ ವಿಷಯದ ಬಗ್ಗೆ ನಾವು ಬೇಕಾದರೂ ಮಾತನಾಡುತ್ತೇವೆ. ನಾನು ಗಂಭೀರವಾಗಿ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಒಂದು ನಿಮಿಷ...ಮಾನ್ಯ ರವಿಕುಮಾರ್ ಅವರೇ, ಇದೇ ತರಹ ಮಾತನಾಡಬೇಕೆಂದು ಹೇಳುವುದಕ್ಕೆ ನನಗೇನೂ ಅಧಿಕಾರವಿಲ್ಲ. ವಿಷಯ ಬಿಟ್ಟಾದರೂ ಮಾತನಾಡುತ್ತಾರೆ. ಸಮಯ ನಿಗದಿ ಮಾಡಿದ್ದೇನೆ. ಮುಗಿಯಿತು. ಇನ್ನು ಅದರ ಬಗ್ಗೆ ನೀವು ಮಾತನಾಡುವಂತಿಲ್ಲ. ಸಭೆಯನ್ನು ನಡೆಸುವವನು ನಾನು.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ಎಲ್ಲಾ ವಿಷಯಗಳನ್ನೂ ಮಾತನಾಡಿದರು. ಹಾಗೆಯೇ ಬೇರೆಯವರು ಮಾತನಾಡುವಾಗ restrictions ಮಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸುನಿಲ್ ವಲ್ಯಾಪುರೆಯವರೆ, ನಾನು ಅವರಿಗೆ 15 ನಿಮಿಷ ಸಮಯ ಕೊಟ್ಟಿದ್ದೇನೆ. ಮಾತನಾಡುತ್ತಾರೆ. ನೀವು ಏಕೆ ತಲೆ ಕೆಡಿಸಿಕೊಳ್ಳುತ್ತೀರಿ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅವರು disturb ಮಾಡಬಾರದು.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣ ಅವರೇ, ನೀವು ಇಲ್ಲಿ ಕುಳಿತಿದ್ದಾಗ ಏನು ಮಾತನಾಡುತ್ತಿದ್ದೀರಿ ಎಂಬುದನ್ನು ನೆನಪಿಟ್ಟುಕೊಳ್ಳಿ.

**ಶ್ರೀ ಪುಟ್ಟಣ್ಣ:-** 4+4=8 ಎಂದೇ ಹೇಳಬೇಕಾ? 6+2=8 ಅಂತ ಹೇಳುತ್ತೇನೆ. 5+3=8 ಎಂದು ಹೇಳುತ್ತೇನೆ. ಅದು ನನಗೆ ಸೇರಿದ್ದಲ್ಲವೇ? ಹೀಗೆಯೇ ಮಾತನಾಡಬೇಕು ಎಂದರೆ ಹೇಗೆ? ಅವರಿಗೆ ಮಾತನಾಡಲಿಕ್ಕೆ ಬಿಟ್ಟರೆ 10 ನಿಮಿಷಗಳಲ್ಲಿ ಮುಗಿಸುತ್ತಾರೆ.

**ಸಭಾಪತಿಯವರು:-** ಅದನ್ನೇ ನಾನು ಹೇಳಿದ್ದೇನಲ್ಲವೆ? ಏಕೆ ನಡುವೆ interfere ಆಗುತ್ತೀರಿ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದೆ. ರೂ.89-90 ಕೋಟಿ ಅವ್ಯವಹಾರ ಆಗಿದೆ. ರೂ.85.25 ಕೋಟಿಗಳನ್ನು ಎಸ್ಐಟಿ ಅವರು seize ಮಾಡಿದ್ದಾರೆ. ಬೇರೆ ಬೇರೆ ಆಯಾಮಗಳಲ್ಲಿ ತನಿಖೆ ನಡೆಯುತ್ತಿದೆ. ಮಧ್ಯದಲ್ಲಿ ಇಡಿ ಬಂತು, ಸಿಬಿಐ ಬಂತು. Welcome Sir, ತಪ್ಪೇನಿಲ್ಲ. ಯಾವ ಇಲಾಖೆಯವರು ಬಂದು ಕಳ್ಳರನ್ನು ಹಿಡಿದರೂ ನಾವು ಅದನ್ನು ಸ್ವಾಗತ ಮಾಡುತ್ತೇವೆ. ನಾವು ಯಾರೂ ಅದನ್ನು ಬೇಡ ಎಂದು ಹೇಳುವುದಿಲ್ಲ. ಬೇಡ ಎಂದು ಹೇಳುವಂತಹ ಪರಿಸ್ಥಿತಿನೂ ಇಲ್ಲ. ಆಗಲೇ ನಾಯಕರು ಮಾತನಾಡುತ್ತಾ ಹೇಳಿದರು. ಇಂತಹ ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು. ಈ ದುಡ್ಡು ಹೊಡೆದವರಿಗೆ ಸಹಾಯ ಮಾಡಬೇಕೆಂದು ನಮಗ್ಯಾರಿಗೂ ಇಲ್ಲ. ಈ ಹಣ ಯಾವ ಬಡ ಜನರಿಗೆ ಸೇರಬೇಕಾಗಿತ್ತೋ ಅವರಿಗೆ ಸೇರಬೇಕೆನ್ನುವುದು ಸರ್ಕಾರದ ಸದುದ್ದೇಶ.

**ಶ್ರೀಮತಿ ಭಾರತಿ ಶೆಟ್ಟಿ:-** ಅಂತರ ರಾಜ್ಯಕ್ಕೆ ದುಡ್ಡು ಹೋದರೆ ಯಾರು ಬರುತ್ತಾರೆ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಬ್ಯಾಂಕ್‌ನವರು ಹಾಗೂ ಅಧಿಕಾರಿಗಳು ಸೇರಿಕೊಂಡು ಈ ಅವ್ಯವಹಾರ ಮಾಡಿದ್ದಾರೆ. ಇಬ್ಬರಿಗೂ ಜನ ಬಿಸಿ ಮುಟ್ಟಿಸುತ್ತಿದ್ದಾರೆ. ನೆಕ್ಕುಂಟಿ ನಾಗರಾಜ್ ಇವತ್ತು ನಮ್ಮ ಜೊತೆ ಇರಬಹುದು, ನಿನ್ನೆ ನಿಮ್ಮ ಜೊತೆಯಿದ್ದನು. ನೀವು ಫೋಟೋ ತೋರಿಸಿದಿರಿ, ನಾವು ಫೋಟೊ ತೋರಿಸಿದೆವು. ಅದರಲ್ಲಿ ತಪ್ಪೇನಿಲ್ಲ. ಏಕೆಂದರೆ ಯಾವುದೇ ಸರ್ಕಾರವಿದ್ದರೂ ಈ ತರಹದವರು ಒಂದಷ್ಟು ಜನ ಇರುತ್ತಾರೆ. ಅವರು ಎಲ್ಲಾ ಕಡೆ ಓಡಾಡುತ್ತಿರುತ್ತಾರೆ. ಅವರಿಗೆ ಇಂಥದ್ದೇ ಕೆಲಸ. ಅವನಿಗೆ ಈ experience ಹೇಗೆ ಬಂತೆಂದರೆ ಮೊದಲು ಈ ಇಲಾಖೆಗಳಲ್ಲಿ ಮಾಡಿದ್ದ. ಮುಂದೆ ನಾವು ಹಾಕಿರುವ ಪ್ರಶ್ನೆಗಳಲ್ಲಿ ಅದು ಬರುತ್ತದೆ.

(ಮುಂದು)

(549) 18-07-2024 (6.50) ಕೆಜಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್ (ಮುಂದು):**

ಇವರು ಏಕೆ ಮಾಡಿದರು ಎಂದರೆ, ಮೊದಲು ಇಂತಹವುಗಳನ್ನು ಮಾಡಿಕೊಂಡು ಬಂದಿದ್ದರು. ಅದನ್ನು ಮುಂದುವರಿಸಿರುವುದನ್ನು ಬಿಟ್ಟರೆ, ಅವರು ಹೊಸದಾಗಿ ಮಾಡಿಲ್ಲ. ಅವರಿಗೆ ಯಾರು ಹೇಳಿಕೊಡಲಿಲ್ಲ. ಮೊದಲು ಇವರ ಜೊತೆಯಲ್ಲಿ ಇದ್ದನಲ್ಲವೇ, ಅದರ ರೂಡಿಯನ್ನು ಮುಂದುವರಿಸಿಕೊಂಡು ಬಂದಿದ್ದಾನೆ. ಇದನ್ನು ಬಿಟ್ಟರೆ, ಅವನು ಹೊಸದಾಗಿ ಮಾಡುವುದಕ್ಕೆ ಹೋಗಲಿಲ್ಲ. ನಡೆಯುತ್ತದೆ, ಅವರ ಕಾಲದಲ್ಲಿ ನಡೆಯಿತು, ಈಗಲೂ ಅದೇತರಹ ನಡೆಯುತ್ತದೆ; ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆಯಿತು. Truck terminal ನಲ್ಲಿ ನಡೆಯಿತು. ಇದರಲ್ಲಿಯೂ ಅದೇತರಹ ನಡೆಯುತ್ತದೆ ಎಂದು ಅವರು ಲೆಕ್ಕ ಹಾಕಿದ್ದರು. ಆದರೆ, ಮಾನ್ಯ ಸಿದ್ದರಾಮಯ್ಯನವರ

ಇಚ್ಛಾಶಕ್ತಿಯಿಂದ ಅದು ನಿಂತು ಹೋಯಿತು. ಶ್ರೀ ಚಂದ್ರಶೇಖರನ್ ಏಕೆ ಸಹಿ ಹಾಕಿದ? ಇದೊಂದು ಹೇಳಿ. Why was he part of it? ಶ್ರೀ ಚಂದ್ರಶೇಖರನ್‌ರವರ ಬಗ್ಗೆ ಬಿಜೆಪಿಯವರಿಗೆ ಬಹಳ ಅನುಕಂಪ ಜಾಸ್ತಿ. ಏಕೆಂದರೆ, ನಾನು ಗುತ್ತಿಗೆ ಹಣ ಬರಲಿಲ್ಲವೆಂದು ಹೇಳಿ ಸಾಯುತ್ತಿದ್ದೇನೆಂದರೆ, ಮಾನ್ಯ ಈಶ್ವರಪ್ಪನವರು ಅಲ್ಲಿ ಇವರು ಯಾರು ಮಾತನಾಡಲಿಲ್ಲ. ಅವರ ಹೆಸರನ್ನೇ ಬರೆಯಲಿಲ್ಲ. ಬರಿ ಸಚಿವ ಎಂದು ಬರೆದ. ಅದಕ್ಕೆ ಇವರು. ಆಮೇಲೆ ಮಾನ್ಯ ಸದಸ್ಯರಾದ ಶ್ರೀ ಎಸ್.ಅರುಣ್‌ರವರು ಮಾತನಾಡುವಾಗ ಕೋವಿಡ್‌ನಲ್ಲಿ ಅವರಿಗೆ 8.50 ಲಕ್ಷ ಬಿಲ್ ಆಯಿತು ಎಂದು ಹೇಳಿದರು. ಕೋವಿಡ್ ಕಾಲದಲ್ಲಿ ಯಾರು ಇದ್ದರು ಸ್ವಾಮಿ? ಅವರು ಹೆಣಗಳ ಮೇಲೆ ದುಡ್ಡು ಮಾಡಿದರು. ಇವತ್ತು ಅವರಿಗೆ ಶಾಪ 66 ಸ್ಥಾನಗಳಿಗೆ ಕ್ಕೆ ಬಂದಿದ್ದಾರೆಂದರೆ, ಅದು ಕೋವಿಡ್‌ನಿಂದಾಗಿ. ನಾನು ಪ್ರತಿ ಸಾರಿ ಇದು ಅನ್ಯಾಯ ಆಗುತ್ತಿದೆ ಎಂದು ಹೇಳುತ್ತಿದ್ದೆ. ಈ ರೀತಿ ಮಾಡುತ್ತಿದ್ದಾರೆ, ಹೀಗೆ ಮಾಡಬೇಡಿ ಎಂದು ಹೇಳಿದ್ದೆ. ನನ್ನ ಮಾತನ್ನು ಕೇಳಲಿಲ್ಲ. ತಮಗೆ ಬೇಕಾದರೆ, ಒಂದು WhatsApp message ಅನ್ನು ತೋರಿಸುತ್ತೇನೆ. ನಿನ್ನೆ ದಿವಸ 30 ಕೋಟಿ ರೂಪಾಯಿಗಳದ್ದು ಬಿಬಿಎಂಪಿಗೆ ಕಳುಹಿಸಿದ್ದರೆ, ನನಗೆ ಮಾನ್ಯ ಸುಧಾಕರ್‌ರವರು 'please enlighten me' ಎಂದು ಒಂದು WhatsApp message ಕಳುಹಿಸಿದ್ದಾರೆ. ಅದಕ್ಕೆ ನಾನು, please go through the BBMP Audit Report' ಎಂದು ಹೇಳಿದೆ. ಅರ್ಥವಾಯಿತೇ? ಅವರು ಎಲ್ಲಾ ಬರಿ ಸುಳ್ಳು ಹೇಳಿ ಜನರನ್ನು ದಿಕ್ಕು ತಪ್ಪಿಸಿ ನಾವು ಶ್ರೀ ಸತ್ಯಹರಿಶ್ಚಂದ್ರರು ಎಂದು ಹೇಳುತ್ತಾರೆ. ಅವರಿಗೆ ದಲಿತರ ಬಗ್ಗೆ ಬಹಳ, ಮಾನ್ಯ ಶ್ರೀ ಜಿಗಜಿಣಗಿಯವರು ಏನು ಹೇಳಿದ್ದಾರೆ? **(ಗೊಂದಲ)** ಶ್ರೀ ಛಲವಾದಿ ನಾರಾಯಣಸ್ವಾಮಿಯವರು ನಮ್ಮ ಕಡೆ ಇದ್ದವರು. ಈಗ ಆ ಕಡೆಗೆ ಹೋಗಿ ಮಾತನಾಡುತ್ತಿದ್ದಾರೆ. ಮಾನ್ಯ ಶ್ರೀ ಜಿಗಜಿಣಗಿಯವರು, ನಾನು 7 ಬಾರಿ ಬಿಜಾಪುರದಿಂದ ಗೆದ್ದು ಬಂದಿದ್ದೇನೆ. ನಾನು ದಲಿತ ಎಂದು ನನ್ನನ್ನು ಮಂತ್ರಿ ಮಾಡಲಿಲ್ಲ ಎಂದು ಹೇಳಿದ್ದಾರೆ. ಇದನ್ನು ನಾವು ಹೇಳಿದ್ದೇವೆಯೇ? ಮಾನ್ಯ ಬಸವನಗೌಡ ಯತ್ನಾಳ್‌ರವರು ನನ್ನನ್ನು ಏನಾದರೂ expel ಮಾಡಿದರೆ, 40 ಸಾವಿರ ಕೋಟಿ ರೂಪಾಯಿಗಳ BJP scandal ಅನ್ನು ಹೊರಗೆ ಬಿಡುತ್ತೇನೆಂದು ಹೇಳಿದರು. ನಾವು ಇದನ್ನು ಹೇಳಿದ್ದೇವೆಯೇ? ಏಕೆ? ಆಯಿತು. ಮಾನ್ಯ ಸದಸ್ಯರಾದ, Gentleman ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ಮಾತನಾಡುವಂತಹ ಸಂದರ್ಭದಲ್ಲಿ yield ಆಗಿ ಎಂದರೆ, ಅವರು yield ಆದರು. ಅವರಿಗೆ ಕೈ ಮುಗಿಯುತ್ತೇನೆ.

**ಶ್ರೀ ಕೇಶವ ಪ್ರಸಾದ್.ಎಸ್:-** ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು Gentleman ಆಗಿ ಹೋದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಯಾರಿಗಾದರೂ ಒಳ್ಳೆಯದು ಇದ್ದರೆ, ಒಳ್ಳೆಯದು ಎಂದು ಹೇಳಲಿ. ಯಾವಾಗಲೂ ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಏಕೆ ಹೀಗೆ ಆಡುತ್ತಾರೆ? ಅವರು ಸ್ವಲ್ಪ attitude ಅನ್ನು change ಮಾಡಿಕೊಳ್ಳಬೇಕು.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಬಿಜೆಪಿಯಲ್ಲಿ ಮುಖ್ಯಮಂತ್ರಿಯಾಗಬೇಕಾದರೆ, ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಅವರು ಹೇಳಿದ್ದರು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಶ್ರೀ ಗುರುರಾಘವೇಂದ್ರ ಬ್ಯಾಂಕ್.,

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಬರಿ ಬಿಜೆಪಿಯವರದ್ದಲ್ಲ. **(ಗೊಂದಲ)** ಮಾನ್ಯ ಹಿರಿಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಏನು ಹೇಳಿದರು ಎಂಬುದನ್ನು ಸ್ವಲ್ಪ ಹೇಳಲಿ.,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಪುಟ್ಟಣ್ಣನವರೇ, ಮಾತನಾಡಿಬೇಡಿ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸುಮಾರು 89 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ. SIT (Special Investigation Team) 85 ಕೋಟಿ ರೂಪಾಯಿಗಳನ್ನು seize ಮಾಡಿದೆ. ಇವತ್ತಿನವರೆಗೂ 85.25 ಕೋಟಿ ರೂಪಾಯಿಗಳನ್ನು ಮಾಡಿದೆ. ಬಾಕಿ ಹಣವನ್ನು seize ಮಾಡುತ್ತಾರೆ. ಸರ್ಕಾರ ಪೈಸೆ, ಪೈಸೆಯನ್ನು ಯಾರಿಗೂ ಬಿಡುವುದಿಲ್ಲ. ಆದರೆ, ಇದೇ ನ್ಯಾಯ ಬೇರೆ ಕಡೆಗೂ ಇರಬೇಕಲ್ಲವೇ? ಇದೇ CBI ಆಗಲೂ ಬರಬೇಕಲ್ಲವೇ? ನಾನು ಶ್ರೀ ಗುರುರಾಘವೇಂದ್ರ ಬ್ಯಾಂಕಿನ ಬಗ್ಗೆ ಸುಮಾರು 5 ವರ್ಷಗಳ ಕಾಲ ಮಾತನಾಡಿದ್ದೇನೆ. ಶ್ರೀಮತಿ ಭಾರತಿ ಶೆಟ್ಟಿ ಅಕ್ಕನವರು ನಮ್ಮ ಜೊತೆಗೆ ಕೈಜೋಡಿಸಿದರು. ಆದರೆ, ಅವರು ಯಾರೂ ಬರಲಿಲ್ಲ. CBI, ED ಗೆ ಬನ್ನಿ ಎಂದರೆ, ಯಾರು ಬರಲಿಲ್ಲ, ಇದು ಏನು ಅನ್ಯಾಯ? **(ಗೊಂದಲ)** ಅವರು ಮಾತನಾಡಿದರು. ನಾನು ಇಲ್ಲವೆಂದು ಹೇಳಿಲ್ಲ. ಯಾರು ಬರಲಿಲ್ಲ. ಕೊನೆಗೆ ನಾನು ಈ ಸದನದಲ್ಲಿ ಮಾನ್ಯ ಸಚಿವರಾಗಿದ್ದ ಶ್ರೀ ಎಸ್.ಟಿ.ಸೋಮಶೇಖರ್‌ರವರ ಕಾಲು ಹಿಡಿದುಕೊಳ್ಳುತ್ತೇನೆಂದು ಹೇಳಿದೆ. ಇದಕ್ಕೆ ತಾವು ಸಾಕ್ಷಿ. ಆಗ ತಾವು ಏನಾದರೂ ಮಾಡಿ ಎಂದು ಸಚಿವರಿಗೆ ಹೇಳಿದ್ದೀರಿ. ನಂತರ ಒಂದು ಸಭೆಯನ್ನು ಕರೆದರು. ನಾನು ಆ ಸಭೆಗೆ ಹೋಗಿದ್ದೆ. ಅಲ್ಲಿ ಶ್ರೀ ರವಿಸುಬ್ರಮಣ್ಯ, ಶ್ರೀಮತಿ ಸೌಮ್ಯರೆಡ್ಡಿ, RBI, ED, CBI ROC, ಇವರೆಲ್ಲರೂ ಇದ್ದರು. ಮಾನ್ಯ ಸಚಿವರಾಗಿದ್ದ ಶ್ರೀ ಎಸ್.ಟಿ.ಸೋಮಶೇಖರ್‌ರವರು 'ಇಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಜಪ್ತಿ ಮಾಡಿದ್ದೇವೆ' ಎಂದು ಹೇಳುತ್ತಿದ್ದರು. ಅದಕ್ಕೆ 'ತಾವು ಸಾವಿರಾರು ಕೋಟಿ ರೂಪಾಯಿಗಳನ್ನು ಜಪ್ತಿ ಮಾಡಿದ್ದೇವೆಂದು ಹೇಳುತ್ತಿದ್ದೀರಿ, pro rata basis ನಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಬರುತ್ತದೆ ಅಷ್ಟು ಹಣ ಕೊಡಿಸಿ' ಎಂದು ಕೇಳಿದೆ. ಅದಕ್ಕೆ ಮಾನ್ಯ ಸಚಿವರು 'ಮಾತನಾಡೋಣ' ಎಂದು ಹೇಳಿದರು. ನಾನು ಯಾರನ್ನು ಮಾತನಾಡಬೇಕೆಂದು ಕೇಳಿದೆ. ಮಾನ್ಯ ಸಚಿವರು CID, CBI, ED, ರವರ ಬಳಿ ಮಾತನಾಡಬೇಕೆಂದು ಹೇಳಿದರು. ನಾನು ಎಷ್ಟು ಹಣ ಬರುತ್ತದೆ ಎಂದು ಕೇಳಿದೆ. ಅದಕ್ಕೆ ಅವರು ಒಂದು ರೂಪಾಯಿ

ಹಣ ಬರುವುದಿಲ್ಲವೆಂದು ಹೇಳಿದರು. ಏಕೆ ಎಂದು ಕೇಳಿದೆ. ಅದಕ್ಕೆ ಅವರು 'documents ಕೊಟ್ಟಿರುವುದೆಲ್ಲಾ duplicate' ಎಂದು ಹೇಳಿದರು. ನಾನು ನಂತರ ED ರವರನ್ನು ಕೇಳಿದೆ. ತಾವು ಹಣವನ್ನು seize ಮಾಡಿದ್ದೀರಿ ಅಲ್ಲವೇ, ತಮ್ಮದು ಏನು ಎಂದು ಕೇಳಿದೆ. ಅದಕ್ಕೆ ಇ.ಡಿ.ಯವರು ಅವರೆಲ್ಲರೂ loan ತೆಗೆದುಕೊಳ್ಳಬೇಕೆಂದು ಕೊಟ್ಟಿದ್ದರಂತೆ, ಆದರೆ, ಆ ಪೇಪರ್ಸ್ ಮೇಲೆ lien create ಆಗಿಲ್ಲವೆಂದು ಹೇಳಿದರು. ಈಗ ಎಷ್ಟು ಹಣ collection ಆಗುತ್ತದೆ ಎಂದು ಕೇಳಿದೆ, ಅದಕ್ಕೆ ಅವರು 40 ಲಕ್ಷ ರೂಪಾಯಿಗಳು ಆಗುತ್ತದೆ ಎಂದು ಹೇಳಿದರು. ಸುಮಾರು 2,765 ಕೋಟಿ ರೂಪಾಯಿಗಳಿಗೆ 40 ಲಕ್ಷ ರೂಪಾಯಿಗಳು ಸಿಗುತ್ತದೆ. ಅವರ ಪಕ್ಷದ ವಕ್ತಾರರು ಕೂಡ one of the defaulters ಅದರಲ್ಲಿ. ನಮ್ಮ ex MLC. ಆದರೆ, ನಮಗೆ ಇವರು ಎಲ್ಲರೂ ಬೋಧನೆ ಮಾಡುವುದಕ್ಕೆ ಬರುತ್ತಾರೆ. **(ಗೊಂದಲ)** ಅವರ ಕಡೆಯವರು ನಾವು ಜಾಸ್ತಿ ಶ್ರೀ ಸತ್ಯ ಹರಿಶ್ಚಂದ್ರರು ಎಂದು ಹೇಳುತ್ತಾರೆ. ಅದಕ್ಕೆ ನಾನು ಅವರಿಗೆ ಹೇಳುತ್ತಿದ್ದೇನೆ. ನಾನು ಇವತ್ತಿನವರೆಗೂ ಯಾರ ಹೆಸರನ್ನು ತೆಗೆದುಕೊಳ್ಳಲಿಲ್ಲ. ಸುಮಾರು 2,765 ಕೋಟಿ ರೂಪಾಯಿಗಳು. ಇದುವರೆಗೆ ಸುಮಾರು 200 ಜನರು ಸತ್ತು ಹೋಗಿದ್ದಾರೆ. **XXX** ಅವರು ಸಹಾಯ ಮಾಡಿದ್ದರೆ, ಆ ಬ್ಯಾಂಕ್ revival ಆಗುತ್ತಿತ್ತು. Central Government ಅವರ ಕೈಯಲ್ಲಿದೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಹಾಗೂ ಶ್ರೀ ಕೇಶವ ಪ್ರಸಾದ್.ಎಸ್ ರವರು ಎದ್ದುನಿಂತು ಒಟ್ಟಿಗೆ ಮಾತನಾಡತೊಡಗಿದರು)**

**(ಗೊಂದಲ)**

**ಸಭಾಪತಿಯವರು;-** ಮಾನ್ಯ ಸದಸ್ಯರೇ, ನಾನು ಅವರಿಗೆ ಹೇಳುತ್ತೇನೆ.,

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮನುಷ್ಯತ್ವ ಅವರಿಗೆ ಇದ್ದರೆ, ಮೊದಲು ಇದಕ್ಕೆ ಉತ್ತರ ಕೊಡಲಿ.,

**(ಗೊಂದಲ)**

**ಸಭಾಪತಿಯವರು;-** ಮಾನ್ಯ ಸದಸ್ಯರೇ, ನಾನು ಅವರಿಗೆ ಹೇಳುತ್ತೇನೆ. ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರೇ, ತಾವು ಹಿಂದಿನ ಸರ್ಕಾರ ಎಂದು ಹೇಳಿ. ತಾವು **XXX** ಎಂದು ಹೇಳಬೇಡಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು **XXX** ಅಧಿಕಾರದಲ್ಲಿ ಇದ್ದಾಗಲೇ ಅಲ್ಲವೇ ಕೇಳಿದ್ದು, ಈ ಹಿಂದಿನ **XXX** ನಾನು ಕೇಳಿದ್ದು,

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಸಭಾಪತಿಯವರು;-** ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರೇ, ತಾವು ಹಿಂದಿನ ಸರ್ಕಾರ ಎಂದು ಹೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರೇ Treasury Bench ನಲ್ಲಿದ್ದವರು.

**(ಗೊಂದಲ)**

**ಸಭಾಪತಿಯವರು;-** ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರೇ, ತಾವು ಹಿಂದಿನ ಸರ್ಕಾರ ಎಂದು ಹೇಳಿ. ತಾವು ಪಕ್ಷದ ಹೆಸರನ್ನು ಹೇಳಬೇಡಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಅವರು ಆ ತರಹದ bank ಗಳನ್ನು ಬಹಳಷ್ಟು ಮುಳುಗಿಸಿದ್ದಾರೆ.

**(ಗೊಂದಲ)**

**ಸಭಾಪತಿಯವರು;-** ಮಾನ್ಯ ಸದಸ್ಯರಾದ ಕೆ.ಎಸ್. ನವೀನ್‌ರವರೇ, ತಾವು ಕುಳಿತುಕೊಳ್ಳಿ. ಅವರಿಗೆ ಹೇಳಿದ್ದೇನೆ. **ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರು ಮಾತನಾಡಿದ ಆ ಪದವನ್ನು ಕಡತದಿಂದ ತೆಗೆಯಿರಿ.**

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರನ್ನು ಅವರ ಪಕ್ಷದವರು ಮಂತ್ರಿ ಮಾಡುವುದಿಲ್ಲ. ಈಗ ಎನ್.ರವಿಕುಮಾರ್‌ರವರು ವಿರೋಧ ಪಕ್ಷದ ನಾಯಕನಾಗಬೇಕೆಂದು ಹೊರಟಿದ್ದಾರೆ. ಅವರು ಎಷ್ಟು ಬಾಯಿ ಬಡಿದುಕೊಂಡರೂ ಸಹ, ಅವರನ್ನು ಮಾಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಆಯಿತು. ಹೇಳಿದ್ದೇನೆ. **ಆ ಪದವನ್ನು ಕಡತದಿಂದ ತೆಗೆದಿದ್ದೇನೆ.**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, **XXX** ಮಂಗಳಾರತಿ ಕೊಡುತ್ತಾರೆ. ಆದರೆ, ಇವರನ್ನೆಲ್ಲಾ ಗರ್ಭಗುಡಿಯಲ್ಲಿ ಬಿಟ್ಟುಕೊಳ್ಳುವುದಿಲ್ಲ. ಇವರು ಸುಮ್ಮನೆ ಒದ್ದಾಡುತ್ತಿದ್ದಾರೆ. ಅವರಿಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಾವು ಪಕ್ಷದ ಬಗ್ಗೆ ಏಕೆ ಮಾತನಾಡುತ್ತೀರಿ?

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಅವರನ್ನು ಬಿಟ್ಟುಕೊಂಡಿದ್ದಾರೆ ಅಲ್ಲವೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ಅಕ್ಟೋಬರ್ ತಿಂಗಳು ಆದ ಮೇಲೆ ಶ್ರೀ ಯು.ಬಿ.ವೆಂಕಟೇಶ್‌ರವರನ್ನು ಏನು ಮಾಡುತ್ತಾರೆ ನೋಡೋಣ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು conclude ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಶ್ರೀ ಪುಟ್ಟಣ್ಣನವರೇ, ಅವರಿಗೆ ಮಾತನಾಡುವುದಕ್ಕೆ ಬಿಡಿ. ಶ್ರೀ ಯು.ಬಿ.ವೆಂಕಟೇಶ್‌ರವರೇ, ತಾವು ಬೇಗ ಮಾತನಾಡಿ ಮುಗಿಸಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ಇನ್ನು ಹೇಳುವುದು ಬಹಳ ಇದೆ. ಹಿಂದಿನ ಸರ್ಕಾರದಲ್ಲಿ ಬೇರೆ ಬೇರೆ ನಿಗಮಗಳಲ್ಲಿ ಆಗಿದ್ದು. ನಾವು ಅದನ್ನು ತಮಗೆ ನೋಟಿಸ್ ಕೊಟ್ಟು ಹೇಳುತ್ತೇವೆ. ಉದಾಹರಣೆಗೆ ಭೋವಿ ನಿಗಮ, ಎಪಿಎಂಸಿ.,

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾರು ಸರ್ಕಾರ ಮಾಡುತ್ತಾರೋ, ಬಿಡುತ್ತಾರೋ ಗೊತ್ತಿಲ್ಲ. ಅವರಂತೂ ಇನ್ನೂ ಮುಂದೆ ಬರುವುದಿಲ್ಲ. ಅವರಂತೂ ಮುಂದೆ ಸರ್ಕಾರ ರಚನೆ ಮಾಡುವುದಿಲ್ಲ. ಏಕೆಂದರೆ, ಅವರದ್ದು ಈ ತರಹ main door entry ಇಲ್ಲ. ಅವರೆಲ್ಲಾ ನಮ್ಮಂತಹವರನ್ನು ಹಿಡಿದುಕೊಂಡು ಸರ್ಕಾರ ಮಾಡಿದವರು. ನಮ್ಮ ನಮ್ಮಂತಹವರ help ತೆಗೆದುಕೊಂಡು ಅಧಿಕಾರಕ್ಕೆ ಬಂದವರು. ಅವರಿಗೆ ಮಾನ ಮರ್ಯಾದೆ ಇಲ್ಲ. ನಾವೆಲ್ಲರೂ ಬಿಚ್ಚಿದರೆ ಅವರು ಆತ್ಮಹತ್ಯೆ ಮಾಡಿಕೊಳ್ಳಬೇಕು.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅದನ್ನು ಕಾಲ ನಿರ್ಣಯ ಮಾಡುತ್ತದೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅವರ ಜನ್ಮಕ್ಕೆ ಥೂ ಅವರು ಸುಮ್ಮನೆ ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ರೀತಿ ದುಡ್ಡು ಕೊಳ್ಳೆ ಹೊಡೆದರೆ.,

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಪುಸ್ತಕ ಬರೆಯುತ್ತಾರೆ ಅಲ್ಲವೇ, ಹಳ್ಳಿ ಹಕ್ಕಿಗಳು.,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಯು.ಬಿ.ವೆಂಕಟೇಶ್‌ರವರೇ, ತಾವು ಮಾತನಾಡಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರಾದ ಶ್ರೀ ಪುಟ್ಟಣ್ಣನವರು ಮತ್ತು ವಿರೋಧ ಪಕ್ಷದ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಶ್ರೀ ಪುಟ್ಟಣ್ಣನವರು ಅವತ್ತು ಇಲ್ಲ ಕುಳಿತು ಅವರಿಗೆ ಮಾತನಾಡಿದರು. ಈಗ ಅಲ್ಲಿ ಕುಳಿತಿದ್ದಾರೆ. ನಾವು ಅವರಿಗೆ ಏನು ಮಾಡುತ್ತಿದ್ದೆವು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಮಗೆ ಅವರದ್ದು ಪೂರ್ತಿ ಏನು ಗೊತ್ತಿಲ್ಲ ಅಂದುಕೊಂಡಿದ್ದಾರೆ,

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಮಗೆ ಅವರದ್ದು ಗೊತ್ತಿದೆ.,

**(ಗೊಂದಲ)**

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, ಅವರು ಏನಾದರೂ ನಿಲುವಳಿ ಸೂಚನೆಯನ್ನು ಮಂಡಿಸಲಿ.,

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅದು ಏನು ಬೇಡ. ನಾನು ಇಲ್ಲಿ ನಿಂತುಕೊಂಡು ಹೀಗೇ ಮಾತನಾಡುತ್ತೇನೆ. ಹೀಗೇ ಅವರ ಮರ್ಯಾದೆ ತೆಗೆಯುತ್ತೇನೆ. ಅವರದ್ದು ಎಲ್ಲವನ್ನು ತೆಗೆಯುತ್ತೇನೆ. ಅವರು ಏನು ಹೇಳಿಕೊಟ್ಟಿದ್ದಾರೆ, ಅದನ್ನು ಹೇಳುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಮಗೆ ಏನಾದರೂ ತಲೆ ಕೆಟ್ಟಿದೆಯೇ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಇನ್ನು ಎಲ್ಲಿಗೆ ಹೋಗುತ್ತಾರೆ? ಅವರಿಗೆ ಇನ್ನು ಎಲ್ಲಿ ಜಾಗ ಇಲ್ಲ. ಅವರು ಎಲ್ಲಾ ಕಡೆಗೆ ಹೋಗಿ ಆಗಿದೆ. ಇನ್ನು ಆಮ್ ಆದ್ಮಿ ಪಾರ್ಟಿಗೆ ಹೋಗಬೇಕು ಅಷ್ಟೇ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾವು ಬಕೀಟ್ ಹಿಡಿದು ಬಂದವರಲ್ಲ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪುಟ್ಟಣ್ಣನವರಿಗೆ ನಾಚಿಕೆ ಆಗಬೇಕು. ಯಾವ ಯಾವ ಪಕ್ಷದಲ್ಲಿದ್ದು ಏನೇನು ಮಾತನಾಡಿದ್ದಾರೆಂದು, ಎಲ್ಲಾ ಪಕ್ಷಕ್ಕೆ ಅವರು ಹೋಗಿ ಆಗಿದೆ,

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅವರು ಏನು ಮಾಡಿದ್ದಾರೆ? ಒಂದು ಬಾರಿಯಾದರೂ 113 ಸೀಟುಗಳನ್ನು ಗೆದ್ದು ಬಂದಿದ್ದಾರೆಯೇ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನೋಡೋಣ.,

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅವರು ಜೈಲಿಗೆ ಹೋಗಿ ಬಂದರೂ ಸಹ, ಅವರು ಮತ್ತೆ ಬರುವುದಕ್ಕೆ ಆಗಲಿಲ್ಲ. ಅವರು ಬರುವುದಕ್ಕೆ ಆಗಲಿಲ್ಲ. ಅವರ ಯೋಗ್ಯತೆಗೆ.

*(ಗೊಂದಲ)*

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ವಿಷಯಕ್ಕೆ ಬನ್ನಿ ಎಂದು ಹೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್;-** ಮಾನ್ಯ ಸಭಾಪತಿಯವರೇ, ಈಗ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 194 ಕೋಟಿ ರೂಪಾಯಿಗಳು ಹೋಗಿಲ್ಲ. ಸುಮಾರು 89.63 ಕೋಟಿ ರೂಪಾಯಿಗಳು ಹೋಗಿದೆ. ಈ 89.63 ಕೋಟಿ ರೂಪಾಯಿಗಳಲ್ಲಿ ಸುಮಾರು ರೂ. 85.25 ಕೋಟಿಗಳನ್ನು SIT ತನ್ನ ಹಿಡಿತಕ್ಕೆ ಇವತ್ತು ತೆಗೆದುಕೊಂಡಿದೆ.

(ಮುಂದು)

(550) 18-07-2024 (7.00) ಎಂವಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್ (ಮುಂದು):**

ನಾನು ಮಧ್ಯಾಹ್ನ ಹೋಗಿ ವರದಿ ತರುವವರೆಗೂ, ಈಗ ಯಾರೇ ತಪ್ಪನ್ನು ಮಾಡಿರಲಿ, ಶೇಕಡಾ 100ರಷ್ಟು ನಾವು ಅವರಿಗೆ ಸಹಾಯ ಮಾಡುವುದಿಲ್ಲ. ನಮ್ಮ ಸರ್ಕಾರದಲ್ಲಿ ಶ್ರೀ ಸಿದ್ದರಾಮಯ್ಯನವರು ಯಾರೇ ತಪ್ಪು ಮಾಡಿದ್ದರೂ ಅವರಿಗೆ ಶಿಕ್ಷೆ ಕೊಡುತ್ತಾರೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರ ಸಹಾಯದಿಂದಲೇ....

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವರ ಸಹಾಯದಿಂದ ಏನೇನು ಹಾಳಾಗಿ ಹೋಗಿದೆ ಎಂದು ಗೊತ್ತೇ? ಅವರು ಈ ದೇಶವನ್ನೇ ಮಾರಿಕೊಂಡು ಬಿಟ್ಟಿದ್ದಾರೆ. ಅವರಿಗೆ ಹಿಂದೆ ಮತ್ತು ಮುಂದೆ ಏನೂ ಇಲ್ಲ. ಅವರು ದೇಶವನ್ನೇ ಮಾರಿ ಕುಳಿತುಕೊಂಡಿದ್ದಾರೆ. ಅವರಿಗೆ ನಾಚಿಕೆ ಮತ್ತು ಮಾನ ಮರ್ಯಾದೆ ಏನೂ ಇಲ್ಲ. ಆದುದರಿಂದ ಜನರು ಅವರನ್ನು 66ಕ್ಕೆ ಕೂರಿಸಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಅವರ ಸಹಾಯದಿಂದ....

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಇವರು 66 ಸ್ಥಾನದಿಂದ 33 ಸ್ಥಾನಕ್ಕೆ ಹೋಗುತ್ತಾರೆ. ಇವರಿಗೆ ಏನಾಗಿದೆ ಎಂದರೆ, ಇವರಿಗೆ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನಾವು ದೇಶ ಉಳಿಸಿದಂತಹವರು.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರು 65 ವರ್ಷ ಲೂಟಿ ಮಾಡಿದಂತಹವರು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಅವರು ದೇಶವನ್ನು ಕೊಳ್ಳೆ ಹೊಡದಂತಹವರು. ನಾವು ದೇಶವನ್ನು ಉಳಿಸಿದಂತಹವರು.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, conclude ಮಾಡಿಸಿ.

**(ಗೊಂದಲ)**

**ಸಭಾಪತಿಯವರು:–** ಆಯಿತು.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್‌ನವರು ಹೇಳಿದ್ದಾರೆಯೇ?

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಈ ರೀತಿ ಮಾತನಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಹಾಗಾದರೆ, ಅವರು ಈ ಬಾರಿ ಏಕೆ ಸೋತಿದ್ದಾರೆ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಈ ದಮನಿತ ಸಮುದಾಯಕ್ಕೆ ಸೇರಿದ ಒಂದೂ ಪೈಸೆಯನ್ನು ಸಹ ಬಿಡುವುದಿಲ್ಲ. ಪ್ರತಿ ನಯಾಪೈಸೆಯನ್ನು ತೆಗೆದುಕೊಂಡು ಬಂದು ಅದು ಯಾವ್ಯಾವ scheme ಗೆ ಹೋಗಬೇಕಾಗಿತ್ತು ಮತ್ತೆ ಯಾವ್ಯಾವ ಬಡವರಿಗೆ ಹೋಗಬೇಕಾಗಿತ್ತು, ಅದನ್ನು ನಮ್ಮ ಸರ್ಕಾರ ಖರ್ಚು ಮಾಡುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ನಾನು ಬಿ.ಜೆ.ಪಿ.ಯವರಿಗೆ ಒಂದು ಮನವಿ ಮಾಡಿಕೊಳ್ಳುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ತಾವು ಬಿ.ಜೆ.ಪಿ. ಎಂದು ಏಕೆ ಹೇಳುತ್ತೀರಿ?

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಅವರೇ ತಾನೆ ಮತ್ತೆ ಯಾರು? ಈಗ ಕೌರವರು ಪಾಂಡವರ ರೀತಿಯಲ್ಲ. ಈಗ ಅವರೆಲ್ಲರೂ ಸಹ ಕೌರವರು. ಕಡೆಗೆ ಅವರು ನಿರ್ನಾಮವಾಗಿ ಬಿಡುತ್ತಾರೆ. ಅಂದರೆ, ಅವರು finish ಆಗಿಬಿಡುತ್ತಾರೆ. ಒಬ್ಬರು ಸಹ ಇರುವುದಿಲ್ಲ. ವಿಧುರ ಹೇಳುತ್ತಾ ಇರುತ್ತಾರೆ. ಅಂದರೆ, ನಿಮ್ಮ ಆ ಮಗ ಸಾಯುತ್ತಿದ್ದಾನೆ, ಈ ಮಗ ಸಾಯುತ್ತಿದ್ದಾನೆ ಎಂದು. ಆ ರೀತಿ ಒಬ್ಬೊಬ್ಬರೆ ಹೋಗಿ ಬಿಡುತ್ತಾರೆ. ಆದರೆ, ಮಾನ್ಯ ಸಭಾಪತಿಯವರೆ, ತಾವು ಭೀಷ್ಮನ ರೀತಿಯಲ್ಲಿ ಇರುತ್ತೀರಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವರು ಅದಕ್ಕೆ I.N.D.I.A. alliance ಮಾಡಿಕೊಂಡಿರುವುದು. ಅವರು ಕೌರವರು.

**(ಗೊಂದಲ)**

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೆ, ಅವರು ಐವತ್ತು ಪಕ್ಷಗಳನ್ನು ಹಿಡಿದುಕೊಂಡಿರುವಂತಹವರು. ಅವರು ಕೌರವರು. ಅವರು ಐವತ್ತು ಪಕ್ಷಗಳನ್ನು ಇಟ್ಟುಕೊಂಡರೂ ಸಹ ನಮ್ಮನ್ನು ಸೋಲಿಸುವುದಕ್ಕೆ ಆಗಿಲ್ಲ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಈಗ ಎಸ್.ಸಿ.ಪಿ/ಟಿ.ಎಸ್.ಪಿ. ಬಗ್ಗೆ ಮಾತನಾಡುತ್ತಾರೆ. ಈ ರೀತಿ ಕರ್ನಾಟಕ ರಾಜ್ಯದಲ್ಲಿ ತಂದಿರುವಂಥದ್ದನ್ನು, ಇವರು ಯಾವುದಾದರೂ BJP ruled States ನಲ್ಲಿ ಜಾರಿಗೆ ತರಲಿ. ಅವರು 24% ಅನ್ನು ಅಲ್ಲಿ ರಿಸರ್ವ್ ಮಾಡಲಿ. ಅದು ಅವರಿಗೆ ಯೋಗ್ಯತೆ ಇಲ್ಲ. ಅವರು BJP ruled States ನಲ್ಲಿ ಈ scheme ತೆಗೆದುಕೊಂಡು ಬಂದು ಬಡವರಿಗೆ ಏನಾದರೂ ಕೊಡಿಸುವಂಥದ್ದನ್ನು ಮಾಡಿಸಲಿ. ಅದು ಅವರಿಗೆ ಆಗುವುದಿಲ್ಲ. ಅಲ್ಲಿ ಯಾರೂ ಸಹ ಹೋಗಿ ಮಾತನಾಡುವುದಕ್ಕೆ ಆಗುವುದಿಲ್ಲ. ಸರ್ವಪಕ್ಷ ಸಭೆಯೂ ಇಲ್ಲ. ನಮ್ಮ ರಾಜ್ಯಕ್ಕೆ ಬರಬೇಕಾಗಿರುವ ತೆರಿಗೆ ಮತ್ತೊಂದು ಇಲ್ಲ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರಲಿಲ್ಲ. ಈಗ ಅವರು ಪೆಟ್ರೋಲ್ ಬೆಲೆ ಮೂವತ್ತು ರೂಪಾಯಿ ಜಾಸ್ತಿ ಮಾಡಿ ಅವರು ದೇಶ ಕಟ್ಟುತ್ತೇವೆಂದು ಹೇಳುತ್ತಾರೆ. ಆದರೆ, ಇಲ್ಲಿ ಪೆಟ್ರೋಲ್ ಬೆಲೆ ಮೂರು ರೂಪಾಯಿ ಜಾಸ್ತಿಯಾದರೆ ಬಾಯಿ ಬಡಿದುಕೊಳ್ಳುತ್ತಾರೆ. ಅವರಿಗೆ ಸಂವಿಧಾನ ಇದೇನಾ ಹೇಳಿಕೊಟ್ಟಿರುವುದು? ಅವರು ಮೂವತ್ತು ರೂಪಾಯಿ ಜಾಸ್ತಿ ಮಾಡಿದಾಗ ಏಕೆ ಕೇಳಲಿಲ್ಲ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೆ, ಇಡೀ ಜಗತ್ತಿನಲ್ಲಿ dollars variation rate ಅದು. ಈಗ ಹಾಲಿನ ದರ ಏರಿಕೆಯಾಗಿದೆ. ಪೆಟ್ರೋಲ್ ರೇಟ್ ಜಾಸ್ತಿಯಾಯಿತು. ಯಾವ ಸರ್ಕಾರ ಇದ್ದರೂ....

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ನಾವು ಅರವತ್ತು ರೂಪಾಯಿಗೆ ಪೆಟ್ರೋಲ್ ಮತ್ತು ಡೀಸೆಲ್ ನೀಡಿದ್ದೇವೆ. ಆದರೆ, ಅವರು ನೂರು ರೂಪಾಯಿಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಮಾರಾಟ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಅವರು ಮಂಕುಬೂದಿ ಹಾಕಿ ಐವತ್ತು ರೂಪಾಯಿ ಇದ್ದಿದ್ದನ್ನು ನೂರ ಹತ್ತು ರೂಪಾಯಿ ಮಾಡಿದ್ದಾರೆ. ಅವರಿಗೆ ಏನಾದರೂ ಮರ್ಯಾದೆ ಇದೆಯೇ? ಕೇವಲ ಮೂರು ರೂಪಾಯಿ ಮಾಡಿರುವುದಕ್ಕೆ ಬಾಯಿ ಬಡಿದುಕೊಳ್ಳುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ, ಈಗ ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀ ಯು.ಬಿ.ವೆಂಕಟೇಶ್‌ರವರು ಹಣ ವಸೂಲು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅವರಿಗೆ ಶ್ರೀ ಚಂದ್ರಶೇಖರನ್‌ರವರ ಜೀವ ವಾಪಸ್ಸು ತೆಗೆದುಕೊಂಡು ಬರುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಅವರು ಇಲ್ಲಿ ಏನು ಮಾತನಾಡುತ್ತಾರೆ? ಅವರು ಏನು ಮಾತನಾಡಬೇಕೆಂದು ಕೇಳಿ. ನಾನು ಏನು ಮಾತನಾಡಬೇಕೆಂದು ಅವರನ್ನು ಹೇಳಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಯು.ಬಿ.ವೆಂಕಟೇಶ್‌ರವರು ಹಣ ವಸೂಲು ಮಾಡುತ್ತೇವೆಂದು ಎನ್ನುತ್ತಿದ್ದಾರೆ. ಹಾಗಾದರೆ, ಶ್ರೀ ಚಂದ್ರಶೇಖರನ್‌ರವರ ಜೀವ ವಾಪಸ್ಸು ತೆಗೆದುಕೊಂಡು ಬರುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಶ್ರೀ ಸಂತೋಷ ಎಂಬುವವರು ಶ್ರೀ ಕೆ.ಎಸ್. ಈಶ್ವರಪ್ಪನವರ ಹೆಸರನ್ನು ಹೇಳಿ ಸತ್ತಿದ್ದಾರಲ್ಲ. ಅವರ ಜೀವ ತೆಗೆದುಕೊಂಡು ಬರುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಆ ಪ್ರಕರಣದಲ್ಲಿ ಮಾನ್ಯ ಕೆ.ಎಸ್.ಈಶ್ವರಪ್ಪನವರದ್ದು ಏನೂ ಇಲ್ಲವೆಂದು ಹೇಳಿ ಆಗಿದೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಕೋರ್ಟ್‌ನವರೇ ಹೇಳಿ ಆಗಿದೆ. ಈಗ ಆ ಅಮಾಯಕನ ಜೀವ ವಾಪಸ್ಸು ತೆಗೆದುಕೊಂಡು ಬರುವಂತೆ ಹೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಅವರು ಕೇವಲ ಪಾಪದಲ್ಲಿ ದುಡ್ಡು ಮಾಡಿ, ಇವತ್ತಿನ ದಿವಸ ಅವರ ಪಾಪಕ್ಕೆ 66 ಸ್ಥಾನಗಳಿಗೆ ಬಂದಿದ್ದಾರೆ. ಅವರು ಮುಂದಿನ ಬಾರಿ 33 ಸ್ಥಾನಗಳಿಗೆ ಬರುತ್ತಾರೆ. ತಾವು ಇದಕ್ಕೆ ಸಾಕ್ಷಿಕರ್ತರಾಗಿ ಇರುತ್ತೀರಿ ಎಂದು ನಾನು ತಮಗೆ ಹೇಳುತ್ತೇನೆ. ಬಿ.ಜೆ.ಪಿ.ಯವರು ಕೌರವರ ರೀತಿ finish ಆಗಿಬಿಡುತ್ತಾರೆ. ಇವತ್ತಿನ ದಿವಸ ಇದನ್ನು ಹೇಳಿದ್ದೇನೆ. ತಾವು ಇದನ್ನು ತಿಳಿದುಕೊಳ್ಳಿ.

**(ಗೊಂದಲ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೆ, 240...

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಅವರು ಆಗಲೇ ರಾಮನ ವಿಗ್ರಹ ಎಂದು ಹೇಳಿದರು. ರಾಮನ ವಿಗ್ರಹ ಬೇಡ. ನಾನು ಉಡುಪಿ ಜಿಲ್ಲೆಯವನು. ಇದು ಶ್ರೀಮತಿ ಭಾರತಿ ಶೆಟ್ಟಿಯವರಿಗೆ ಗೊತ್ತು. ಅವರು ಪರಶುರಾಮನ ವಿಗ್ರಹದಲ್ಲಿ ಏನು ಮಾಡಿದ್ದಾರೆ? ಇದನ್ನು ಕಳೆದ ಬಾರಿ ಹೇಳಿದ್ದೆ. ಅದರಲ್ಲೂ ಲೂಟಿ ಮಾಡಿದರು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೆ ಸಾಕು ಬಿಡಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ತಮ್ಮ ಬಿ.ಪಿ.ಯನ್ನು ಏಕೆ ಹೆಚ್ಚಿಗೆ ಮಾಡಿಕೊಳ್ಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ’ಸೋಜಾ:-** ಮಾನ್ಯ ಸಭಾಪತಿಯವರೆ, ಅವರು ಪರಶುರಾಮನ ವಿಗ್ರಹದ ಬಗ್ಗೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**11. ಪ್ರಕಟಣೆ**

**“ದಿನಾಂಕ: 18.07.2024ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಕೈಗೊಂಡಿರುವ ತೀರ್ಮಾನಗಳ ಕುರಿತು.”**

**ಸಭಾಪತಿಯವರು:-** ದಿನಾಂಕ: 18.07.2024ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ:

ಪ್ರಶ್ನೆಗಳು, ಶೂನ್ಯವೇಳೆ ಪ್ರಸ್ತಾಪಗಳು, ಗಮನಸೆಳೆಯುವ ಸೂಚನೆಗಳು, ನಿಯಮ ೩೩೦ರ ಮೇರೆಗೆ ಚರ್ಚೆ, ೬೮ರ ಮೇಲೆ ಪ್ರಸ್ತಾವನೆ ಹಾಗೂ ಅರ್ಧಗಂಟೆ ಕಾಲಾವಧಿಯ ಚರ್ಚೆಗಳನ್ನು ತೆಗೆದುಕೊಳ್ಳುವುದು. ಸರ್ಕಾರದಿಂದ ಸ್ವೀಕರಿಸಲಾಗುವ ವಿಧೇಯಕಗಳನ್ನು ಮಂಡಿಸಿ, ಅಂಗೀಕರಿಸುವುದು.

ಎರಡು ದಿನಗಳ ಕಾಲ ಮಾನ್ಯ ಶಾಸಕರ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಂತೆ ಶಾಸಕರ ದಿನಾಚರಣೆ ನಡೆಸಲು ತೀರ್ಮಾನಿಸಿದ್ದು, ಮಾನ್ಯ ಸದಸ್ಯರೆಲ್ಲರೂ ತಾವು ಆಸಕ್ತಿ ಹೊಂದಿರುವ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ವಿವರಗಳನ್ನು ಒದಗಿಸುವುದು. ಕಾರ್ಯಕಲಾಪದ ಸಲಹಾ ಸಮಿತಿಯ ವರದಿಯನ್ನು ಈ ಸದನವು ಒಪ್ಪುತ್ತದೆಂದು ಸೂಚಿಸುತ್ತೇನೆ.

ಅಂತರರಾಷ್ಟ್ರೀಯ ಚೆಸ್ ದಿನಾಚರಣೆ ಹಾಗೂ ಫಿಡೆ (Federation Internationale des Eches) ಶತಮಾನೋತ್ಸವ ಅಂಗವಾಗಿ ಮಾನ್ಯ ಸಚಿವರು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಮಾನ್ಯ ವಿಧಾನ ಸಭಾ ಸದಸ್ಯರುಗಳಿಗಾಗಿ ಕರ್ನಾಟಕ ವಿಧಾನಮಂಡಲ ಮತ್ತು ಅಖಿಲ ಭಾರತ ಚೆಸ್ ಫೆಡರೇಷನ್ ಸಹಯೋಗದೊಂದಿಗೆ "ವಿಧಾನ ಸೌಧ ಚೆಸ್ ಹಬ್ಬ" ಶೀರ್ಷಿಕೆ ಅಡಿ ಲೆಜಿಸ್ಲೇಚರ್ ಕಪ್-2024 ವಿಧಾನ ಸೌಧ ಓಪನ್ ರ್ಯಾಪಿಡ್ ಚೆಸ್ ಪಂದ್ಯಾವಳಿಯನ್ನು ದಿನಾಂಕ: 20.07.2024ರ ಶನಿವಾರದಂದು ವಿಧಾನ ಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬೆಳಗ್ಗೆ 10.30 ರಿಂದ ಸಂಜೆ 5.30 ಗಂಟೆಯವರೆಗೆ ಆಯೋಜಿಸಲಾಗಿರುತ್ತದೆ.

ಆದುದರಿಂದ, ಸದರಿ ಚೆಸ್ ಪಂದ್ಯಾವಳಿಯಲ್ಲಿ ಎಲ್ಲಾ ಮಾನ್ಯ ಸಚಿವರುಗಳು ಹಾಗೂ ವಿಧಾನ ಪರಿಷತ್ತಿನ ಶಾಸಕರುಗಳು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ. ಇದನ್ನು ಸಭೆಯು ಒಪ್ಪುತ್ತದೆಂದು ಭಾವಿಸುತ್ತೇನೆ. ತಾವುಗಳು ಈಗ ಏನು ಮಾಡಬೇಕೆಂದು ಹೇಳಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಹತ್ತು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ಆಯಿತು, ಈಗ ಮಾನ್ಯ ಎಂ.ನಾಗರಾಜುರವರು ಮಾತನಾಡಿ. ಈಗ ಅವರೆ ಕೊನೆಯವರು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಆರೂವರೆಗೆ ಅಸೆಂಬ್ಲಿ ಬಂದ್ ಆಗಿದೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಎಲ್ಲರೂ wait ಮಾಡುತ್ತಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ದಯವಿಟ್ಟು ತಮಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಈಗ ಸದನವೂ ಸಹ ನಡೆಯಬೇಕು. ಮಾತನಾಡುವುದು ಸಹ ಆಗಬೇಕು. ಮತ್ತೆ ನಡುವೆ interfere ಆಗಬೇಕು. ಈ ರೀತಿಯಾದರೆ ನಾನು ಸದನವನ್ನು ಹೇಗೆ ನಡೆಸುವುದು?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇಬ್ಬರು ಮಾನ್ಯ ಸದಸ್ಯರುಗಳು ನಾಳೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ದಯವಿಟ್ಟು ಈಗಾಗಲೇ ಸಮಯವಾಗಿದೆ.

**ಸಭಾಪತಿಯವರು:-** ಈಗ ಸದನವನ್ನು ನಾಳೆ ಬೆಳಗ್ಗೆ 10.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 7 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 19ನೇ ಜುಲೈ ಮಾಹೆ 2024ರ ಶುಕ್ರವಾರದಂದು ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

><><><